ಕೆಲವು ತಿಂಗಳುಗಳ ಹಿಂದೆ ಕೋಟೇಶ್ವರದಲ್ಲಿ ಈ ಮಂಡ ಳಿಯು ಜನ್ಮವೆತ್ತಿರುವುದನ್ನು ಈ ಪತ್ರಿಕೆಯ ವಾಚಕರಿಲ್ಲರೂ ಓದಿರ ಬಹುದು ಮಂಡಳಿಯು ಒಳೇಜ್ಯಗಳಾಗಿ ಊರ್ಜಿತವಾಸ್ಥೆಗೆ ಬರ ಬೇಕೆಂದು ಅಲ್ಲಿಯ ಕೆಲವು ಪ್ರಮುಖರು ಪ್ರಯತ್ನಿಸುತ್ತಾರೆ, ಅಲ್ಲದೆ ಮಂಡಳಿಯ ಮೂಲಧನವಾಗಿ ರೂ ೧೮೦೦ಂದನ್ನು ಹಾಳಾವ ಯೋಜನೆ ಸಹಾ ಇರುವುದಂತೆ ಇದರಲ್ಲಿರುವ ತರುಣರಿಲ್ಲರೂ ಸ್ಥಳೀಕ ಕೋಟೀ ಶ್ವರದವರೇ ಆಗಿರುತ್ತಾರೆ. ಇವರು ಈಗ ನಾಲ್ಕು ನಾಟಕಗಳನ್ನು ಕಲಿತು ರಂಗದಲ್ಲಿ ಅಭಿನಯಿಸುತ್ತಾರೆ. ಆ ವೈಕಿ ಶ್ರೀ ಸದಾಶಿವ ಗುರುನಾಥ ಗರುಡರು ಬರೆದಿರುವ "ವಿಷಮ ವಿವಾಹ"ವೆಂಬ ನಾಟಕವನ್ನು ಸಾಧಾ ರಣವಾಗಿ ಅಭಿನಯಿಸುತ್ತಾರೆ. ಆದರೆ ಇದರ ಮುಖ್ಯ ಅಭಿನಯಗಾರ ರಾದ ಶ್ರೀ ಸುಬ್ಬಣ್ಣ ಉಡುಪರು ಆಕೋಕನ ಪಾತ್ರವನ್ನೂ, ಶ್ರೀ ರಾಮ ಚಂದ್ರ ಮಂಜರು ವಿದೂಷಕನ ಪಾತ್ರವನ್ನೂ, ಶ್ರೀ ಸೂರ್ಯನಾರಾಯಣ ಪ್ರಾಳರು ಶಂಕಾವತಿಯ ಭೂಮಿಕೆಯನ್ನೂ ಶ್ರೀ ಉಪೇಂದ್ರ ಹೆಬ್ಬಾರರು ಮಂತ್ರಿಯ ಪಾರ್ಟನ್ನೂ ವಹಿಸಿರುತ್ತಾರೆ. ಅಶೋಕನ ಪಾತ್ರವು ನಾಟ ಕದ ಕೊನೆಯ ಒಂದೆರಡು ಸೀನುಗಳಲ್ಲಿ ತಕ್ಕಮಟ್ಟಿಗೆ ಅಭಿನಯಿಸಿರು ತ್ತಾರೆ ಆದರೆ, ಸ್ವರವೂ ಮಾತಾಡುವ ಭಾವಗಳೂ ಇನ್ನು ಸುಧಾರಿಸಲಿ ಕ್ಕಿರುವುದು ವಿದೂಷಕನು ಇನ್ನೂ ಉತ್ತಮ ರೀತಿಯಲ್ಲಿ ಮಾತು ಗಳನ್ನೂ ಅಭಿನಯಗಳನ್ನೂ ತಿದ್ದಿಕೊಳ್ಳುವುದು ಉತ್ತಮ. ಶಂಕಾ ವತಿಯೂ ತಂಗಿನ ನಾಗೇಶನೆ ಸುಧಾರಣೆಯ ತಲುಚಿಯರಿಸಿರುವ ಯಾವ ಸುಧಾರಣೆಯೂಗಳಿಲ್ಲ ಅಭಿನಯವಾಗಲ್ಲ, ಯಾವುದೂ ಈ ಶಂಕಾವತಿಯ ಲಿಲ್ಲ. ಮಂತ್ರಿಯೂ ಅದೇ ಮಾದರಿಯೆಂದರೆ ಸಾಕು ಕಾಳಿದಾಸನ ಪಾತ್ರವನ್ನು ನೋಡುವ ಶ್ರೀ ಪಣಬಟ್ಟರ ಕಾಳಿದಾಸನ ಪಾರ್ಟು ಕೃತ್ರಿಕರ ವಾಗಿಲ್ಲ, ಶ್ರೀ ನರಸಿಂಹಯ್ಯನವರ ಹಾಸ್ಯವು ಅವರು ಹೇಳುವಷ್ಟು ಹಾಸ್ಯಪ್ರಿಯವಲ್ಲ. ಅಂದರೆ, ಇವರುಗಳ ದೋಷಗಳನ್ನೆ ಹುಡುಕು ವುದು ನಮ್ಮ ಕೆಲಸವಲ್ಲ. ಸುಸಂಸ್ಕೃತರಲ್ಲದ ಈ ನಟವರ್ಗವು ಇಷ್ಟು ಮಾಡಿದ್ದೆ ದೊಡ್ಡ ಸಾಹಸ ಮತ್ತು ಸ್ತುತ್ಯ ಆದರೆ ಹೇಳಬೇಕಾದ ಒಂದು ವಿಷಯವನ್ನು ಇಲ್ಲಿ ಹೇಳದಿರಲಾರೆವು ಈ ಮಂಡಳಿಯವರು ತಮ್ಮ ಕೋಟೇಶ್ವರ ಕಾತ್ಯಿಯ ಸಮಯದಲ್ಲಿ ಹೇಳಿದ ವಿಷಯ ವಿವಾಹವೆಂಬ ನಾಟಕವನ್ನು ಅಭಿನಯಿಸಿ ಆ ದಿನ ಇದರ ಆಮಂತ್ರಣ ದಂತೆ ಮಾಜಿ ಶುಂಠಾಪುರ ತಾಲೂಕುಬೋರ್ಡು ಪ್ರೆಸಿಡೆಂಟರಾದ ಶ್ರೀ ಪಿ. ನರಸಿಂಹ ಕಾರಂತರಿಂದ ಕೆಲವು ನಟವರ್ಗಕ್ಕೆ ಶ್ರಮವಾಗಿ ಈ ಕೆಳ ಗಿನ ಬಿರುದುಗಳು ಕಾರಂತರಿಂದ ಕೊಡಲ್ಪಟ್ಟುವು. ಶ್ರಮವಾಗಿ ಅಭಿನಯ ಕೇಸರಿ, ಹಾಸ್ಯಚಂದ್ರ, ಗಾನಕೋಗಿಲೆ, ಅಭಿನಯ ಮಾತಾಂಡ, ಅಭಿ ನಯ ಕಾಳಿದಾಸ, ಹಾಸ್ಯಪ್ರಿಯ ಎಂತ ಈ ಹೆಸರುಗಳನ್ನು ಅವರವರ ರೂಢಿವಾಗಿ ಕರೆಯಬೇಕೆಂದು ಸಹಾ ಹೇಳಿ ಬಿರುದಿನ ಕೋಲಾಹಲ ಮೆಬ್ಬಿಸಿರುವರು. ಇದು ಹೇಗಾಯಿತೆಂದರೆ "ಹೆಸರು ಧರ್ಮಪ್ರಕಾಶ ಕೇಳಿದರೆ ಕಾಸಿಲ್ಲ" ಎಂಬಂತಾಯಿತು. ಅಖಿಲ ಭಾರತಕ್ಕೆ ಸಮ್ಮಂದ ಪಟ್ಟ ರಂಗಭೂಮಿಯ ಪ್ರಮುಖ ನಟರ ಪದಪಗಳನ್ನು ಈ ಸ್ಥಳೀಯರು ಕೊಟ್ಟಿದ್ದು ನೋಡಿದರೆ ಪಶ್ಚಾತ್ತಾಪ ಪಡಬೇಕಾಗುತ್ತದೆ ಯಾಕೆಂದರೆ ಈ ಮುಂಡಳಿಯವರನ್ನು ಊರವರು ಪ್ರೋತ್ಸಾಹಪಡಿಸಬೇಕೆಂದಿದ್ದರೇ, ಬಿರುಪುಗಳ ಕೋಲಾಹಲಕ್ಕಿಂತಲೂ ಬೇರೆ ವಿಧದ ಸಹಾಯ ನೂಡುವುದು ಉತ್ತಮವಿತ್ತು ಇದರಿಂದ ಕಂಪೆನಿಯ ನಟರಲ್ಲಿ ವೈಪಮ್ಯ ವನ್ನೂ ಉನ್ನತಿನಿಂತಲೂ, ಅವನ್ನತಿಯನ್ನು ಜೆಟ್ಟಿಗೆ ಬಲಪಡಿಸಿದ ಹಾಗಾ ಯಿತೆಂದೂ ನಮ್ಮ ಭಾವನೆ ಒಂದೇ ಮಾತಿನಲ್ಲಿ ಹೇಳುವುದಾದರೆ ನಟ ವರ್ಗವು ಬಿರುಪುಗಳನ್ನು ಕೊಂಡುವಷ್ಟು ತಯಾರಾಗಲಿಲ್ಲವೆಂದು ಕಂಠೋಕ್ತವಾಗಿ ಹೇಳಬಹುದು. ವ್ಯವಹಾರಕುಶಲರೂ ಪ್ರಸಿದ್ಧಿಯರೂ ವಿದ್ಯಾವಿಭೂಷರೂ ಆದ ಮಾನ್ಯ ಕಾಂತರು ದಾಕ್ಷಿಣ್ಯಕ್ಕಾಗಲಿ ಪತ್ಯಾಯ ದಿಂದಲಾಗಲಿ ಈ ಬಿರುದುಗಳ ಬೆಲೆಯನ್ನರಿಯದೆ ಪದವಿದಾನ ಸಭಾ ರಂಭಕ್ಕೆ ಒಪ್ಪಿಕೊಂಡದ್ದು ನೋಡಿದರೆ ಆಶ್ಚರ್ಯವಾಗುತ್ತದೆ! ಇನ್ನಾ ದರೂ ಕಂಪೆನಿಯು ಉನ್ನತಿಯ ಕಡೆಗೆ ದೃಷ್ಟಿಯಿಟ್ಟು ಊರವರಿಂದ ಪುರಸ್ಕಾರವನ್ನು ಪಡೆಯಲು ಒಣ ಡಾಲಿಗೆ ಬಲಬೀಳದೆ ಏಕ್ಕಶಿಲೆಯಂದ ಕಲಿತು, ಮುಂದೆ ತಮ್ಮ ನಾಟಕಗಳನ್ನು ರಂಗಭೂಮಿಯಲ್ಲಿ ಪ್ರಯೋ ಗಿಸಿ ಅಖಿಲ ಕರ್ನಾಟಕಕ್ಕೆ ಕೀರ್ತಿ ಪದ ನಂತೆ ಊರ ಪ್ರಮುಖರೂ ಮುಂಡಳಿಯ ತರುಣರೂ ಪ್ರಯತ್ನಿಸಲಿಂದು ಆವರೊಡನೆ ನಮ್ಮ ವಿನಂತಿ (ಈ ಲೇಖನದಿಂದ ಯಾರ ಮನಸ್ಸಿಗಾದರೂ ನೋವಾಗುವುದಾದರೆ ಅದ ರಲ್ಲಿ ನಾವು ಕ್ಷಮೆ ಬೇಡಿದ್ದೇವೆ)

"ನಾಟ್ಯಕಲಾ ಪ್ರೇಮಿ"

ಆಯ್ಕಾ ಸ್ವದೇಶಾಭಿಮಾನಿಯೇ,

ನಮ್ಮ ಮಿತ್ತೂರು ಎಂಬಲ್ಲಿ ಒಂದು ಶಾಲೆಯು ಸ್ಥಾಪಿತವಾಗಿ ಸುಮಾರು ವರ್ಷಗಳಾದುವು ಆದು ಪ್ರಸ್ತುತ ತಾಲೂಕು ಬೋರ್ಡಿನ ಅಧಿಕಾರಕ್ಕೆ ಒಳಪಟ್ಟು ಕೆಲವು ವರ್ಷಗಳಾದುವಷ್ಟೆ ಈ ಶಾಲೆಯು ಅನ್ಯಸಂಸ್ಥಾಯಿಂದಿಗೆ ಅಷ್ಟಾತಿಯಾಗಿ ನಾಲ್ಕೈದು ವರ್ಷಗಳಾದುವು ಆಂದಿನಿಂದ ಇಂದಿನ ವರೆಗೆ ಬರೇ ಒಂದು ಉಪಾಧ್ಯಾಯರಿಯಲ್ಲಿ ಶಾಲೆ ನಡೆಯುತ್ತದೆ ಹೊಸ ಕಟ್ಟಡವನ್ನು ಕಟ್ಟುವರೆ ಕಳೆದ ಎಪ್ರಿಲ್ ವರೆಗೆ ಗ್ರಾಮಸ್ಥರು ಯಾರೂ ಮನಸ್ಸುಮಾಡದೆ ಇದ್ದದ್ದು ಬಹಳ ವೇಜಾರದ ಸಂಗತಿ. ತಾಲೂಕು ಬೋರ್ಡಿನವರು ಮುಂಚೆಯೇ ಆ ಇಂಥಿ ಯಲ್ಲಿ ಇಲ್ಲ ಕಾರಣ ಹಣ ಇಲ್ಲವೆಂಬುದೇ ಒಂದೇ

ಆಂತಾ ಕಳೆದ ಎಪ್ರಿಲ್ ತಿಂಗಳಲ್ಲಿ ಕಬಸ ಶಾಲೆಯ ಇಬ್ಬರು ಉಪಾಧ್ಯಾಯರನ್ನು ಇಲ್ಲಿಗೆ ರಾ ಹೊಳಕಲ್ಲಿ ಶಿವರಾಯರು ಪಾರ್ವ ಯಿಸಿದರು ದೇವರ ಅನುಗ್ರಹದಿಂದಲೂ ಉಪಾಧ್ಯಾಯರುಗಳ ಪ್ರಯತ್ನದಿಂದಲೂ ಗ್ರಾಮಸ್ಥರೆಲ್ಲರೂ ಕೂಡಿ ಒಂದು ಹೊಸ ಶಾಲೆ ಕಟ್ಟಿಸುವುದೆಂದು ಏಪ್ರಿಲ್‌ನಿ ಒಂದು ವಂತಿಗೆ ಪಟ್ಟಿ ಮಾಡಲಾ ಯಿತು ಆದರಲ್ಲಿ ಸಾಧಾರಣ ೩೦೦ ರೂಪಾಯಿಗಳಷ್ಟು ವಾಗ್ದತ್ತ ವಾಯಿತು ಸ್ವಯ ಶ್ರೀ ರಾ ವೆಂಕಪ್ಪಮಣ ಭಟ್ಟರು ಕಟ್ಟೋಣ ಕಟ್ಟುಸುವ ಜವಾಬ್ದಾರಿಯನ್ನು ಒಪ್ಪಿಕೊಂಡರು

ಆ ಪ್ರಕಾರ ಈ ಕೆಳಗೆ ಕೆಸರು ಕಾಣಿಸಿದ ಕೆಲವು ಮಹನೀಯ ರಿಂದ ಮೊಬಲಗು ರೂ ೬೪–೪–೦ ವಸೂಲಾದುವು ಆದರಿಂದ ಹೊಸ ಶಾಲಾ ಸ್ಥಳ, ಕಟ್ಟಿಕಗಳು ಮತ್ತು ಗೋಡೆಗೆ ಮಣ್ಣು ಕೆಲಸ ಶಾಕೆ ಆಯಿತು, ಇನ್ನು ಮುಂದರಿಸುವ ಬಗ್ಗೆ ಹಣ ವಸೂಲಾಗದೆ ಬಹಳ ಅಡಚಣೆಯಾಗಿದೆ

ವಸೂಲು ಕೊಟ್ಟ ಮಹನೀಯರುಗಳ ಹೆಸರುಗಳು—ಶ್ರೀಗಳಾದ ಕೊಡೆಹಿತ್ತಿಲು ನರಸಿಂಹ ಭಟ್ಟ ರೂ ೨೫, ಸೋ ದ ವೆಂಕಟರಮಣ ಭಟ್ಟ ರೂ. ೧೯, ಮಿತ್ತೂರು ಪದ್ಮನಾಭ ಭಟ್ಟ ರೂ ೫, ಪಡಿಲು ಪುಣ್ಣಾ ಭಟ್ಟ ರೂ ೪೫, ಬಡೆಕ್ಕಿಲ ಗೋವಿಂದ ಭಟ್ಟ ರೂ ೫, ಮಿ ಮಿತ್ತೂರು ರಾಂಭಟ್ಟ ರೂ ೫, ವೇ ಮಿತ್ತೂರು ಕೃಷ್ಣಭಟ್ಟ ರೂ. ೫೫ ಕೋಟ್ಯೆಗುತ್ತು ಐಕಸ್ಥ ಅಶ್ಮಂತಾಯ ರೂ. ೨೬ ನಾಜೆ ನಾರಾಯಣ ಭಟ್ಟ ರೂ. ೧೬ ವೇ ಕೂವೆಹಿತ್ತಿಲು ತಿಮ್ಮಣ್ಣ ಭಟ್ಟ ರೂ ೧೦, ಮರ್ಕನಾಡಿ ಈಶ್ವರ ಭಟ್ಟ ರೂ. ೧, ಕೊಪ್ಪಲ ಮುಕ್ಕ ಗೌಡ ರೂ. ೧, ಬಡಜೆ ನಾರಾಯಣ ಭಟ್ಟ ಆ ಳ, ಮುದ್ದಾ ರೂ. ೬೪–೪–೦

ಆಂತೂ ನಾನು ಈ ಮೂಲಕ ಸರ್ವರಲ್ಲಿಯೂ ವಿಜ್ಞಾಪಿಸಿ ಕೊಳ್ಳುವುದೇನಂದರೆ— ಗಾಮಸ್ಥರೆಲ್ಲರೂ ಒಮ್ಮನಸ್ಸಿನಿಂದ ಕೂಡಿ ಕೊಂಡು ಮುಂದಿನ ಜನವರಿಯಾದ ಹತ್ತು ದಾಲಳ ಬಾಕಿಯಿರೆ ನಿಲ್ಲಿ ಸುವಿಗಾಗಿ ಇರುವ ಈ ವಿದ್ಯಾನಿಯಯವನ್ನು ಜೀರ್ಣೋದ್ಧಾರ ಮಾಡಿ ಕೃತ ಕೃತ್ಯರಾಗಬೇಕಾಗಿ ಈ ಮೂಲಕ ಸರ್ವರಲ್ಲಿಯೂ ಅತೀ ದೈನ್ಯವ ನ್ನೆರಿಕು ಪ್ರಾರ್ಥಿಸಿ ಈ ನನ್ನೆ ವಿಜ್ಞಾಪನೆಗಳನ್ನು ಅಂತ್ಯಗೊಳಿಸುವೆನು

ಇತಿ ವಿಧೇಯ, ಕೆ. ವೆಂಕಟ್ರಮಣ ಭಟ್ಟ, ಕಾರ್ಯದರ್ಶಿ.

ಕನ್ನಡಿಗರಲ್ಲಿ ಒಂದು ವಿನ್ನಹ

ನನ್ನು ಮನೋಹರ ಗ್ರಂಥಮಾಲೆಯಲ್ಲಿ ವರುಷಕ್ಕೊಂದರಂತೆ ಮನೋರಂಜಕವಾದ ಜಾನಪದ ಕಥೆ (ಹಳ್ಳಿಯ ಕಥೆಗಳ ಸಂಗ್ರಹ ವನ್ನೂ ಕೊಡಬೇಕೆಂದಿದ್ದೇನೆ ಇದಕ್ಕಾಗಿ ಅಖಿಲ ಕರ್ನಾಟಕದಲ್ಲಿ ಪ್ರಚಾರದಲ್ಲಿರುವ ಹಳ್ಳಿಯ ಕಥೆಗಳು ನಮಗೆ ಬೇಕಾಗಿವೆ. ಈ ಕಥೆ ಗಳನ್ನೊದಗಿಸುವ ಕಾರ್ಯದಲ್ಲಿ ಕನ್ನಡಿಗರೆಲ್ಲರ ನೆರವೂ ನಮಗೆ ಅವಶ್ಯಕವಾಗಿದೆ ಕಮ್ಮ ಕಮ್ಮ ಕಡೆಗೆ ರೂಢಿಯಲ್ಲಿದ್ದ ಮನೋ ರಂಜಕವಾದ ಹಳ್ಳಿಯ ಕಥೆಗಳನ್ನು—ಹಳ್ಳಿಗರ ಭಾಷಾ ಮರ್ಯಾದೆ ಯನ್ನು ವಿಮರ್ಶಕರಂತೆ ಸಂಗ್ರಹಿಸಿ ಎಲ್ಲ ಕಥೆಯವರೂ ಬರೆದು ಕಳು ಹಿಸಬೇಕೆಂದು ಪ್ರಾರ್ಥನೆ ಬಂದವುಗಳಲ್ಲಿ ಆಂದವಾದುವುಗಳನ್ನು ಆಯ್ದು ಪ್ರಕಟಿಸಲಾಗುವುದು ಯಾರ ಯಾರ ಕಥೆಗಳನ್ನು ಸ್ವೀಕರಿಸ ಲಾಗುವುದೋ ಅವರೆಲ್ಲರಿಗೂ ಒಂದೊಂದು ನಮ್ಮ ಕಥೆಗಳ ಸಂಗ್ರಹ ವನ್ನು ಕಪ್ಪದೆ ಸಲ್ಲಿಸುವೆವು. ಹಳ್ಳಿಯಲ್ಲಿ ಕಲಿತ ಕನ್ನಡಿಗರು ಮನಸ್ಸು ಮಾಡಿದರೆ ಇದೇನೂ ದೊಡ್ಡ ಮಾತಲ್ಲ ಆವರಿಗೆ ದೊಡ್ಡ ಮಾತಲ್ಲವಾದರೂ ನಮಗೊಂದು ದೊಡ್ಡ ಉಪಕಾರ ಮಾಡಿದಂತಾಗು ವುದು ನಮ್ಮ ವಿನ್ನಪವನ್ನು ಕನ್ನಡಿಗರೆಲ್ಲರೂ ಮನ್ನಿಸಿ ನಮಗೆ ನೆರವಾಗಬೇಕೆಂದು ಬೇಡುತ್ತೇವೆ.

ಸಂಪಾದಕ್ಕ,ಮನೋಹರ ಗ್ರಂಥಮಾಲಾ ಸಾಧನಕೇರಿ, ಧಾರವಾಡ.

+ + + +

RAJULU & Co.,

Are pleased to announce that in view of the increasing popularity of Morris, Dodge and Crysler Cars in South Kanara and for the convenience of present and prospective clients, a Sales and Service Station has been opened at Cantonment Road, Maidan View Mangalore

RAJULU & Co.,

Authorized District Dealers for

West Coast for Addison & Co Ltd Madras

ಮೋರಿಸ್, ಡೋಜ್ ಮತ್ತು ಕ್ರೈಸ್ಲರ್–ಈ ಕಾರುಗಳ ಮೇಲಿನ ಜನತೆಯ ಅಭಿಮಾನವು ದಿನೇ ದಿನೇ ಹೆಚ್ಚುತ್ತಿರು ವುದರಿಂದಲೂ, ಈಗಿನ ಮತ್ತು ಮುಂದಿನ ಗಿರಾಕಿಗಳಿಗೆ ಸೌಕರ್ಯವನ್ನು ಒದಗಿಸಿಕೊಡಬೇಕೆಂಬುದರಿಂದಲೂ ಮಂಗ ಳೂರಿನ ವೈದಾನ ಒಳಿಯ ಕೆಂಟೊನ್ಮೆಂಟ್ ರಸ್ತೆಯಲ್ಲಿ, ಮಾರಾಟದ ಮತ್ತು 'ಸರ್ವೀಸಿನ ಒಂದು ಹೊಸದಾದ 'ಸ್ಟೇಶನನ್ನು' ಈಗ ತೆರೆದಿದೆ ಎಂದು ಪ್ರಕಟಿಸಲು ಸಂತೋಷ ಪಡುತ್ತೇವೆ

ರಾಜುಲು ಆಂಡ್ ಕೋ.

ಎಡಿಸನ್ ಮತ್ತು ಕಂಪೆನಿ, ಮದ್ರಾಸ್ (ಇದರ ಪರವಾಗಿ ಪಶ್ಚಿಮ ತಂಗಾವಳಿಗೆಲ್ಲ ಅಧಿಕಾರ ಹೊಂದಿದ ದೆಲ್ಲಾ ವಹಿನಾಟುಗಾರರು)

28/12

ಗುಣಬಾರದಿದ್ದರೆ! ಸುಪ್ರಸಿದ್ಧ ವೈದ್ಯರಾದ ಎಮ್ ಕೆ. ರಜಪೂತ ಇವರ [ಹಣ ವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಕಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ಮುಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬೆಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸರ್ಗಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ವಾಗುವುದು. ಶರೀರಕ್ಕೆ ಏನೂ ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟು ಡಾಕ್ಟರ ಬಿ. ಎ. ನೈದ್ಯ, ಎಲ್. ಸಿ. ಪಿ. ಎಸ್. ಕೆಳದಾಮೂಹಮ್ಮ ಶಾಣೇ ಈ ಚೂರ್ಣದಿಂದ ಯಾವ ತರದ ಅಪಾಯವಾಗದೆಯೂ ಗರ್ಭಧಾರಣವೂ ಆಗುವುದಿಲ್ಲ

ವಿಳಾಸ:—ಸಂಜೀವಿನೀ ಔಷಧಾಲಯ ಮು ಪೊ. ಮಿರಜ, S. M. C.

ಅಂಬಿಕಾತನಯದತ್ತ ಗಣಿಸಿರುವ ಶ್ರೀಮುಖ ಸಂವತ್ಸರದ
ಫಲ್ಗುಣ ಶು ೬ ಸೋಮವಾರದಿಂದ ಶ್ರೀಮುಖ ಸಂವತ್ಸರದ
ಫಲ್ಗುಣ ಶು ೧೩ ಗುರುವಾರದ ವರೆಗಿನ ಪಂಚಾಂಗ.
(ಗೌರವಾರ್ಥದ ಧನು—ಬೆಂಗಳೂರು).

ತಾರೀಖು	ವಾರ	ತಿಥಿ	ನಕ್ಷತ್ರ	ಯೋಗ	ಕರಣ	ಸೂರ್ಯೋದಯ ಗಂ	ಸೂರ್ಯೋದಯ ನಿ
23	ಶನಿ	೬	ಉತ್ತರಾ	ಪ್ರೀತಿ	ತೈತಿ	೬	6.43	6. 2
24	ರವಿ	೭	ಹಸ್ತ	ಆಯು	ಗರಿ	೬	6.43	6. 3
25	ಸೋಮ	೮	ಚಿತ್ತೆ	ಸೌಭಾ	ವಣಿ	೬	6.44	6. 3
26	ಮಂಗ	೧೦	ಸ್ವಾತಿ	ಅತಿಗಂ	ಭದ್ರೆ	೬	6.44	6. 3
27	ಬುಧ	೧೧	ವಿಶಾ	ಶೋಭನ	ಕಿಂ	೬	6.45	6. 4
28	ಗುರು	೧೨	ಅನು	ಸುಕರ್ಮ	ಬವ	೬	6.45	6. 4
29	ಶುಕ್ರ	೧೩	ಜ್ಯೇ	ಧೃತಿ	ಬಾಲ	೬	6 6	6 0

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಪರಮಾಧಿ	Minimum ಅಲ್ಪಾಧಿ	Rainfall. ಮಳೆ ದಿನದ ಮಳೆ	ಇಮಾಲಾ ಮಳೆ.
14	88— 2	66— 1	—	—
15	88— 7	68— 7	—	—
16	86— 9	72— 1	—	—
17	85 — 1	72— 9	—	—
18	81— 2	71— 6	6 09	—
19	82— 9	73— 1	0 08	—
20	85— 7	73 — 9	—	166-36

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ.	ಅ.	ವರೆಗೆ ರೂ.	ಅ.
ಹೊಸ ರಾಶಿ ಅಕ್ಕಿ ...	3—	6	3—	12
ಹೊಸ ಮಲ್ಲಿಗೆ ...	4—	8	4—	10
ಹೊಸ ಗುಡ್ಡು ...	3—	12	4—	2
...	—		—	
ಉಳ್ಳ ಅವ್ವಲ್ ದೆಕ್ಕಿಗೆ ...	4—	2	5—	4
ರಂಗೂನು ಬೆಲ್ಲಗೆ ಗೋಣಿ ೧ಕ್ಕೆ ...	5—	6	6—	0
ಎಲ್ಲೂರು ಬೆಲ್ಲಗೆ ಮುಡಿ ೧ಕ್ಕೆ ...	4—	0	4—	2
ಗೋದಿ ಗೋಣಿ ೧ಕ್ಕೆ ...	11—	8	12—	8
ತೊಗರಿ ಗೋಣಿ ೧ಕ್ಕೆ ...	9—	0	10—	8
ಹುರುಳಿ ಗೋಣಿ ೧ಕ್ಕೆ ...	5—10		5—15	
ಕಡಲೆ ಗೋಣಿ ೧ಕ್ಕೆ ...	9—	8	12—	8
ತೊಗರಬೇಳೆ ಗೋಣಿ ೧ಕ್ಕೆ ...	10—	8	18—	0
ಉದ್ದು ಗೋಣಿ ೧ಕ್ಕೆ ...	8—	0	9—	0
ಹೆಸರು ಗೋಣಿ ೧ಕ್ಕೆ ...	8—	0	9—	0
ಭೂರುಬೆಲ್ಲ ಖಂಡಿ ೧ಕ್ಕೆ ...	32—	5	35—	0
ಉಪ್ಪು ಗೋಣಿ ೧ಕ್ಕೆ ...	5—	0	5—	12
ಖೊಬ್ರಿ ಖಂಡಿ ೧ಕ್ಕೆ ...	45—	0	55—	0
ಖೊಬ್ರಿ ಹಂಡಿ ಖಂಡಿ ೧ಕ್ಕೆ ...	13—	0	18—	8
ಎಳ್ಳಂಡಿ ಖಂಡಿ ೧ಕ್ಕೆ ...	25—	0	26—	4
ಖೊಬ್ರಿ ಎಳ್ಳೆ ಮಣ ೧ಕ್ಕೆ ...	3—	3	4—	2
ಎಳ್ಳೆಣ್ಣೆ ಮಣ ೧ಕ್ಕೆ ...	5—	0	6—	0
ಚಿಮಣಿಎಣ್ಣೆ ಪಿಟ್ಟಿಗೆ ೧ಕ್ಕೆ ...	7—	4	8—12	
ಸೋರಿನ ಸಕ್ಕರೆ ಮಣ ೧ಕ್ಕೆ ...	3—11		4—	6
ಹೊಸ ಮೆಣಸು ...	7—	8	8—10	
ಸಾಮಿ ಮುಡಿ ೧ಕ್ಕೆ ...	5—	0	4—	8
ಕಾಳುಮೆಣಸು ಖಂಡಿ ೧ಕ್ಕೆ ...	120—	0	0—	0
ಯೇಲಕ್ಕಿ ಮಣ ೧ಕ್ಕೆ ...	20—	0	23—	0
ಗೇರುಬೀಜ ಮುಡಿ ೧ಕ್ಕೆ ...	2—	8	2—10	
ಕಚ್ಚಿನ ಖಂಡಿ ೧ಕ್ಕೆ ...	42—	0	44—	0
ತಾಂಮ್ರ ಕಗದು ಮಣ ೧ಕ್ಕೆ ...	9—	8	9—10	
ತಾಂಮ್ರ ಪಾತ್ರಗಳು ಮಣ ೧ಕ್ಕೆ ...	13—	8	14—	8
ಚಣಿಬೆಳ್ಳೆ ಸೇರು ೧ಕ್ಕೆ ...	14—12		15—	0
ಹತ್ತಿಳೆ ಕಗದು ಮಣ ೧ಕ್ಕೆ ...	9—	0	9—	8
ಪವನು ೧ಕ್ಕೆ ...	20—	0	20—	8
ಹುಣಸೆ ಹುಳಿ ಖಂಡಿ ೧ಕ್ಕೆ ...	45—	0	55—	0
ನೇಪಾಳ ಕಾಳು ಖಂಡಿ ೧ಕ್ಕೆ ...	200—	0	250—	0
ಫಿಟೇರಿ ಕಾಳು ಖಂಡಿ ೧ಕ್ಕೆ ...	250—	0	260—	0
ಹಳೆ ಅಡಿಕೆ ...	105—	0	125—	0
ಹೊಸ ಅಡಿಕೆ ...	70—	0	75—	0

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವಯನ್ಸ ಕಂಪನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವವರಾದರೆ ಪ್ರತಿದಿನವೂ ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ತೆರಳಿರಿ. ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ. ಒಂದೇ ತಿಳಿಗಲ್ಲಿನಿಂದ ರಚಿತವಾಗಿ, 37½ ಫೀಟು ಉದ್ದವಾಗಿ ಎತ್ತರವಾದ ಶಿಲ್ಪಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮ್ಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ½ ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತೆರಳಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಶಾತವೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಧೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ತಿರುಮಿ ಮಾರ್ಗವಾಗಿ ಸಾಯಂಕಾಲ ತಲುಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ತಿಮ್ಮಿಗ್ಗೆ 12 ಗಂಟೆ ತಲುಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Company Ltd., Mangalore

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು.

ಮುಂಬಾಯಿಯಿಂದ — ಮಂಗಳೂರಿಗೆ.
ಮಂಗಳೂರಿನಿಂದ — ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು — ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ತಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
—ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಸರ್ಮಸ್ಥಳಕ್ಕೆ, ನೇಣಾಲಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗಾಗಿ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಪತ್ರವ್ಯವಹಾರ

ಪತ್ರಿಕೆಯವರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ವಿಳಾಸಗಳನ್ನು ತಿಳಿಸಬೇಕು. ಪ್ರಕಟಿಸಲು ಎಷ್ಟೇ ಲೇಖನಗಳಿಗೆ ಎಷ್ಟು ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿದ್ದು ಯುಕ್ತ ಶೈಲಿಯಲ್ಲಿರಬೇಕು. (ಸಂ. ಸ್ವ.)

ೀ ಧರ್ಮಸ್ಥಳದಲ್ಲಿ ನಡೆದ ಪ್ರದರ್ಶನದಲ್ಲಿ—

ಪ್ರದರ್ಶನದ ಸ್ಟೋಲ್ ೯ನವರಲ್ಲಿ ಹೂಡಿ, ಅವರ ಮುಂಭಾಗ ಗಣ್ಯರಾದ ಶ್ರೀಯುತ ಲಕ್ಷ್ಮೀನಾರಾಯಣ ನ್ಯಾಳರು, ಶ್ರೀಯುತ ನಾಥನ್ ಬಾಮಿನರವರೂ ಫೋಟೋಗ್ರಾಫಿಕ್ ಮತ್ತು ಟೀಕಾರ್ಮಿಯ ಸಂಸ್ಥೆಗಳ ಬಗ್ಗೆ ರೂ. ೧—೪—೦ ರಂತೆ ಸ್ಟೋಲ್ ೯ನವರಿಂದ ಚಂದಾ ಎಳೆ ಟೀಕಾರ್ಮಿಯನ್ನು ಕೊಟ್ಟು ಫೋಟೋ ತೆಗೆಸಿರುತ್ತಾರೆ. ಫೋಟೋ ತಿನ ಒಂದೊಂದು ಕೋಟಿಗಳನ್ನು ವರ್ಗದಾರರಿಗೆ ತಲ್ಪಿಸುವುದಾಗಿಯೂ ಮುಖತಾ ಹೇಳಿರುತ್ತಾರೆ. ಫೋಟೋ ಗ್ರಾಫರ್ (ಶ್ರೀಯುತ ಪುತ್ತೂರು ಕೃಷ್ಣಪ್ಪರಿಷ್ಯಾಯರು ವರ್ಗಣಿದಾರರಿಗೆ ಫೋಟೋ ಒಂದಕ್ಕೆ ೦—೫೦—೦ ಚಾರ್ಜು ಮಾಡಿ ಫೋಟೋವನ್ನು ಕೊಡುತ್ತಾರೆ. ಸಾರ್ವಜನಿಕ ಕಾರ್ಯದಲ್ಲಿ ಇದು ಯಾವ ವಿಧದ ವ್ಯಾಪಾರ? ಯಾ ವೃತ್ತಿಯೇ? ಎಂದು ಸಂಬಂಧಪಟ್ಟವರು ದಯವಿಟ್ಟು ತಿಳಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಬೆಳ್ತಂಗಡಿ, ಕೆ. ವಿ. ವೆಂಕಪ್ಪ ಶೆಟ್ಟಿ
೧೫-೧೨-೩೬. ಕೆ. ಅನಂತ ಪೈ.

ನಿಖಿಲ ಕರ್ನಾಟಕ ಔದ್ಯೋಗಿಕ ಮತ್ತು ವ್ಯವಸಾಯಿಕ ಪ್ರದರ್ಶನ, ಧರ್ಮಸ್ಥಳ:—ಮುಖ್ಯಸ್ಥರ ಇದರ ಕಾರ್ಯದರ್ಶಿಯವರಿಗೂ, ಸ್ವಾಗತಕಮಿಟಿಯವರಿಗೂ ಪ್ರಾರ್ಥನೆ, ಈ ಕೆಳಗಿನ ವಿಷಯವನ್ನು ಕೇಳಿ ಕೊಳ್ಳಲು ಆತುರನಾಗಿರುತ್ತೇನೆ.—

ಈ ಪ್ರದರ್ಶನವು ತಾ. ೧೪—೧೧—೩೬ರಿಂದ ತಾ. ೧೬ರ ವರೆಗೆ ಯಶಸ್ವಿಯಾಗಿ ಆಗಿದೆ ಎಂತೆಲೂ, ವಿವಿಧ ವಸ್ತುಗಳು ಪ್ರದರ್ಶನಕ್ಕೆ ಬಂದಿದ್ದಾವಲ್ಲದೆ ವಿಶೇಷ ಬಹುಮಾನಗಳ ಸ್ಪರ್ಧೆಗಳು ಕೂಡಾ ಯೋಗ್ಯ ನ್ಯಾಯಾಧೀಶರ ನೇತೃತ್ವದಿಂದ ಜರಗಿದುತ್ತಾವಾಗಿ ಕೂಡ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದರೂ, ದೇಶೀಯ ಕಲಾಭಿವೃದ್ಧಿಯಲ್ಲಿ ಬಹಿರಂಗವಾಗಿ ಪ್ರಕಟಿಸೋಣದ ಬಹುಮಾನ ವ ಯೋಗ್ಯತಾ ಪತ್ರಿಕೆಗಳ ವಿವರವು (ಉಡುಪಿಯ ಶರಬತ್ ಮತ್ತು ಮೆಟಲ್ ವರ್ಕ್ಸ್) ಇವುಗಳಿಲ್ಲದೆ ಬೇರೆ ಯಾವ ಕಡೆಯ ಯಾವುದೊಂದು ವಿಷಯಗಳ ಬಹುಮಾನಗಳು ಬಹಿರಂಗವಾಗಿ ಪ್ರಕಟವಾಗದೆ, ವಿಕಾಂತವಾಗಿ ಈ ತನಕ ವಿಕಾಗಿ ಇರಿಸಲ್ಪಟ್ಟಿದೆ? ಪತ್ರಿಕೆಗಳಲ್ಲಿ ಸ್ಥಳವಿಲ್ಲದೆಯೇ? ಜನರಲ್ ಸೆಕ್ರೆಟೆರಿಗಳಿಗೆ ಸನುಮತಿಯಿಲ್ಲದೆಯೇ? ಹೀಗಿಲ್ಲವಾಗಿದ್ದರೆ ಅದಾವುದಕ್ಕಾಗಿಯೂ ಪ್ರಕಟವಾಗಲಿಲ್ಲ ಎಂಬುದರ ಕುರಿತು ಕಾಫಿ, ಟಾ, ಕೊಟಿಟ ಧರ್ಮ ಮಾನವನ್ನಾದರೂ ಪ್ರಕಟವಾಗಿ ತಿಳಿಯುವ ಪತ್ರಿಕಾ ವಾಚಕರು, ಇತ್ಯೊಂದು ಮತ್ತಷ್ಟರ ಬಹಿರಂಗವಾದ ಈ ವಿಷಯವನ್ನು ತಿಳಿಯಲಿಚ್ಛಿಸುವುದು ತಪ್ಪಾಗುವುದೇ? ದಯವಿಟ್ಟು ಇನ್ನಾದರೂ ತಿಳಿಸುವುದಾದರೆ ಓದಿ ತಿಳಿಯಲು ನಾವು ಸಂತೋಷಪಡುತ್ತೇವೆ.

ಬೆಳ್ತಂಗಡಿ,
ತಾ. ೧೮—೧೨—೩೬. } ಇತಿ ಪ್ರದರ್ಶನ ವಾರ್ತಾಪೇಕ್ಷಿ.

ಬೆಳುದಿನ ಕೋಲಾಹಲ.

ಕೋಟೀಶ್ವರ ಅಂಜಾ ಪ್ರಸಾದ ಸಂಗೀತ ನಾಟಕ ಮಂಡಳಿ—

ಕೆಲವು ತಿಂಗಳುಗಳ ಹಿಂದೆ ಕೋಟೀಶ್ವರದಲ್ಲಿ ಈ ಮಂಡಳಿಯು ಜನ್ಮತಿತ್ತಿರುವುದೆಂದು ಈ ಪತ್ರಿಕೆಯ ವಾಚಕರೆಲ್ಲರೂ ಓದಿರಬಹುದು. ಮಂಡಳಿಯು ಹಿತೈಷಿಗಳಾಗಿ ಊರ್ಜಿತಾವಸ್ಥೆಗೆ ಬರಬೇಕೆಂಬ ಅಲ್ಲಿಯ ಕೆಲವು ಪ್ರಮುಖರು ಪ್ರಯತ್ನಿಸುತ್ತಾರೆ, ಅಲ್ಲದೆ ಮಂಡಳಿಯ ಮೂಲಧನವಾಗಿ ರೂ. ೧೦೦೦ವನ್ನು ಪಾಲಿಸುವ ಯೋಜನೆ ಸಹಾ ಇರುವುದೆಂತೆ. ಇದರಲ್ಲಿರುವ ತರುಣರೆಲ್ಲರೂ ಸ್ಥಳೀಯ ಕೋಟೀಶ್ವರದವರೇ ಆಗಿರುತ್ತಾರೆ. ಇವರು ಈಗ ನಾಲ್ಕು ನಾಟಕಗಳನ್ನು ಕಲಿತು ರಂಗದಲ್ಲಿ ಅಭಿನಯಿಸುತ್ತಾರೆ. ೮ ವೈ ಶ್ರೀ ಸದಾಶಿವ ಗುರುನಾಥ ಗರುಡರು ಬರೆದಿರುವ "ವಿಜಯ ವಿವಾಹ"ವೆಂಬ ನಾಟಕವನ್ನು ಸಾಧಾರಣವಾಗಿ ಅಭಿನಯಿಸುತ್ತಾರೆ. ಆದರೆ ಇದರ ಮುಖ್ಯ ಅಭಿನಯಗಾರನಾದ ಶ್ರೀ ಸುಬ್ಬಣ್ಣ ಉಡುಪರು ಅತೀಕಷ್ಟ ಪಾತ್ರವನ್ನು ಶ್ರೀ ರಾಮ ಒಪ್ಪಿಸಿ ಮುಂಡರು ವಿದೂಷಕನ ಪಾತ್ರವನ್ನು ಶ್ರೀ ಸೂರ್ಯನಾರಾಯಣ ಬಿಕಾಳರು ಶರಾವತಿಯ ಭೂಮಿಕೆಯನ್ನು ಶ್ರೀ ಉಮೇಂದ್ರ ಹೆಬ್ಬಾರರು ಮುಂತ್ರಿಯ ಪಾರ್ಟನ್ನೂ ವಹಿಸಿರುತ್ತಾರೆ. ಅತೀಕಷ್ಟ ಪಾತ್ರವು ನಾಟಕದ ಕೊನೆಯ ಒಂದೆರಡು ಸೀನುಗಳಲ್ಲಿ ತತ್ಕಮಟ್ಟಿಗೆ ಅಭಿನಯಿಸಿರುತ್ತಾರೆ. ಆದರೆ, ಸ್ವರದೊಂ ಮಾತಾಡುವ ಭಾವಗಳೂ ಇನ್ನು ಸುಧಾರಿಸಲಿಕ್ಕಿರುವುದು ವಿದೂಷಿಕನು ಇವೆಲ್ಲ ಉತ್ತಮ ರೀತಿಯಲ್ಲಿ ಮಾತುಗಳನ್ನೂ ಅಭಿನಯವನ್ನೂ ತಿದ್ದಿಕೊಳ್ಳುವುದು ಉತ್ತಮ. ಶರಾವತಿಯ ಈಗಿನ ನಾಗರೀಕ ಸುಧಾರಣೆಯ ತರುಣಿಯಂತಿರುವ ಯಾವ ಸುಧಾರಣೆಯೂಗೆಲ್ಲ ಅಭಿನಯವಾಗಲೀ, ಯಾವುದೂ ಈ ಶರಾವತಿಯಲ್ಲಿ ಮುಂತ್ರಿಯೂ ಅದೇ ಪ್ರಮಥಿಯಂದರೆ ಸಾಕು. ಕಾಲವಾಸನ ಪಾತ್ರವನ್ನು ಮಾಡುವ ಶ್ರೀ ಪಣಿಬ್ಬರ ಕಾಲವಾಸನ ಪಾರ್ಟು ಕೃಷ್ಣರ ಪಾಗಿಲ್ಲ, ಶ್ರೀ ನರಸಿಂಹಯ್ಯನವರ ಪಾತ್ರವು. ಅವರು ಹೇಳುವುದು ಪಾತ್ರಪ್ರಯವಲ್ಲ. ಆದರೆ, ಇವರುಗಳ ದೋಷಗಳನ್ನು ಹುಡುಕುವುದು ನಮ್ಮ ಕೆಲಸವಲ್ಲ. ಸುಸಂಸ್ಕೃತರೆಲ್ಲರ ಈ ನಿರ್ದಾರವು ಇನ್ನು ಮಾಡಿಕೆ ದೊಡ್ಡ ಮಾತು ಮತ್ತು ಸ್ತುತಿ. ಆದರೆ ಹೇಳಲೇಬೇಕಾದ ಒಂದು ವಿಷಯವನ್ನು ಇಲ್ಲಿ ಹೇಳಿದೆರಬೇಕು. ಈ ಮುಂತಾಗಿಯವರು ಕಳೆದ ಕೋಟೇಶ್ವರ ಜಾತ್ರೆಯ ಸಮಯದಲ್ಲಿ ಮೇಲಿನ ವಿಷಯ ರೂ. ೫೦ ಕೊಟ್ಟುಗೆಂದು ಜಾಹೀರಾತು ಪತ್ರ ಅಧ್ಯಕ್ಷರಾಯ ರೂ. ೨, ನಗಿಕ ನಾರಾಯಣ ಭಟ್ಟ ರೂ. ೧೧, ವೇ. ಕೊಡೆಪಿಕ್ಕಿಲು ತಿಮ್ಮಪ್ಪ ಭಟ್ಟ ರೂ. ೧೧, ಮರ್ಕಾಡಿ ಈಶ್ವರ ಭಟ್ಟ ರೂ. ೦, ಕೊಪ್ಪಲ ಮುಳ್ಳ ಗೌಡ ರೂ. ೧, ಬಡಕಿ ನಾರಾಯಣ ಭಟ್ಟ ಆ. ಳ ಜಮ್ಮಾ ರೂ. ೬೮—೪—೦

ಅಂಕೂ ನಾನು ಈ ಮೂಲಕ ಸರ್ವರಲ್ಲಿಯೂ ವಿಜ್ಞಾಪಿಸಿಕೊಳ್ಳುವುದೇನಂದರೆ— ಗಾಮುಖ್ಯರೆಲ್ಲರೂ ಒಮ್ಮನಸ್ಸಿನಿಂದ ಕೂಡಿ ಕೊಂಡು ಮುಂದಿನ ಪ್ರಾಣಂಗವಾದ ಹತ್ತು ಬಾಲಕಿಯರ ವಿಳ್ಳೆಗಾಗಿ ಇರುವ ಈ ವಿದ್ಯಾಸಂಯಯವನ್ನು ಜೀರ್ಣೋದ್ಧಾರ ಮಾಡಿ ಶಕ್ತ ಶಕ್ತರಂಗದೇಶಾಗಿ ಈ ಮೂಲಕ ಸರ್ವರಲ್ಲಿಯೂ ಅತೀ ವೈನ್ಯನ ಸ್ವರಿಸಿ ಪ್ರಾರ್ಥಿಸಿ ಈ ನನ್ನ ವಿಜ್ಞಾಪನೆಗಳನ್ನು ಅಂಕ್ಯಗೊಳಿಸುವೆನು.

ಇತಿ ವಿಧೇಯ, ಕೆ. ವೆಂಕಟ್ರಮಣ ಭಟ್ಟ, ಕಾರ್ಯದರ್ಶಿ.

ಕನ್ನಡಿಗರಲ್ಲಿ ಒಂದು ವಿನ್ನಹ!

ನಮ್ಮ ಮನೋಹರ ಗ್ರಂಥಮಾಲೆಯಲ್ಲಿ ಪರುಷಕೊಂಡರಂತೆ ಮನೋರಂಜಕವಾದ ಜಾನಪದ ಕತೆ (ಹಳ್ಳಿಯ ಕಥೆಗಳ ಸಂಗ್ರಹ ವನ್ನೂ ಕೊಡಬೇಕೆಂದಿದ್ದೇವೆ. ಆದಕ್ಕಾಗಿ ಅಖಿಲ ಕರ್ನಾಟಕದಲ್ಲಿ ಪ್ರಚಾರದಲ್ಲಿರುವ ಹಳ್ಳಿಯ ಕಥೆಗಳು ನಮಗೆ ಬೇಕಾಗಿವೆ. ಈ ಕಥೆಗಳನ್ನೊಪ್ಪಿಸುವ ಕಾರ್ಯದಲ್ಲಿ ಕನ್ನಡಿಗರೆಲ್ಲರ ನೆರವೂ ನಮಗೆ ಅವಶ್ಯಕವಾಗಿದೆ. ತಮ್ಮ ತಮ್ಮ ಕಡೆಗೆ ರೂಢಿಯಲ್ಲಿರುವ ಮನೋರಂಜಕವಾದ ಹಳ್ಳಿಯ ಕಥೆಗಳನ್ನು—ಹಳ್ಳಿಗರ ಭಾಷಾ ಮರ್ಯಾದೆಯನ್ನು ಏಗಾದಂತೆ ಸಂಗ್ರಹಿಸಿ ಎಲ್ಲ ಕಡೆಯವರೂ ಬರೆದು ಕಳುಹಿಸಬೇಕೆಂದು ಪ್ರಾರ್ಥನೆ. ಬಂದವುಗಳಲ್ಲಿ ಆಂದವಾದುವುಗಳನ್ನು ಆಯ್ದು ಪ್ರಕಟಿಸಲಾಗುವುದು. ಯಾರ ಯಾರ ಕಥೆಗಳನ್ನು ಸ್ವೀಕರಿಸಲಾಗುವುದೋ ಅವಕ್ಕೆಲ್ಲರಿಗೂ ಒಂದೊಂದು ನಮ್ಮ ಕಥೆಗಳ ಸಂಗ್ರಹವನ್ನು ಕಪ್ಪದೆ ಸಲ್ಲಿಸುವೆವು. ಹಳ್ಳಿಯಲ್ಲಿ ಕಲಿತ ಕನ್ನಡಿಗರು ಮನಸ್ಸು ಮಾಡಿದರೆ ಇದೇನೂ ದೊಡ್ಡ ಮಾತಲ್ಲ. ಅವರಿಗೆ ದೊಡ್ಡ ಮಾತಲ್ಲವಾದರೂ ನನಗೊಂದು ದೊಡ್ಡ ಉಪಕಾರ ಮಾಡಿದಂತಾಗು ವದು. ನಮ್ಮ ವಿನ್ನಪವನ್ನು ಕನ್ನಡಿಗರೆಲ್ಲರೂ ಮನ್ನಿಸಿ ನಮಗೆ ನೆರವಾಗಬೇಕೆಂದು ಬೇಡುತ್ತೇನೆ.

ಸಂಪಾದಕ, ಮನೋಹರ ಗ್ರಂಥಮಾಲಾ ಸಾಧನಕೇರಿ, ಧಾರವಾಡ.

+—+—+—+

RAJULU & Co.,

Are pleased to announce that in view of the increasing popularity of Morris, Dodge and Crysler Cars in South Kanara and for the convenience of present and prospective clients, a Sales and Service Station has been opened at Cantonment Road, Maidan View, Mangalore.

RAJULU & Co.,
Authorized District Dealers for
West Coast for Addison & Co. Ltd., Madras.

ನೋರಿಸ್, ಡೋಜ್ ಮತ್ತು ಕ್ರೈಸ್ಲರ್—ಈ ಕಾರುಗಳ ಮೇಲಿನ ಜನತೆಯ ಅಭಿಮಾನವು ದಿನೇ ದಿನೇ ಹೆಚ್ಚುತ್ತಿರುವುದರಿಂದಲೂ, ಈಗಿನ ಮತ್ತು ಮುಂದಿನ ಗಿರಾಕಿಗಳಿಗೆ ಸೌಕರ್ಯವನ್ನು ಒದಗಿಸಿಕೊಡಬೇಕೆಂಬುದರಿಂದಲೂ ಮಂಗಳೂರಿನ ವೈದಾನು ಬಳಿಯ ಕೆಂಟೊನ್ಮೆಂಟ್ ರಸ್ತೆಯಲ್ಲಿ, ಮೈದಾನಿಟ್ಟ ಮತ್ತು 'ಸರ್ವೀಸಿನೆ' ಎಂದು ಹೊಸದಾದ 'ಸ್ವೀತನವನ್ನು' ಈಗ ತೆರೆದಿದೆ ಎಂದು ಪ್ರಕಟಿಸಲು ಸಂತೋಷ ಪಡುತ್ತೇವೆ.

ರಾಜುಲು ಅಂಡ್ ಕೋ.

ಎಡಿಸನ್ ಮತ್ತು-ಕಂಪೆನಿ, ಮದ್ರಾಸ್ (ಇದರ ಪರವಾಗಿ ಪಶ್ಚಿಮ ಕರಾವಳಿಗಳಲ್ಲಿ ಅಧಿಕಾರ ಹೊಂದಿದ ಬಿಲ್ಲಾ ವಹಿವಾಟುಗಾರರು)

23/12

ಗುಣಬಾರದಿದ್ದರೆ! ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ [ಹಣ ವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬೇಡವಾಗಿದ್ದರೆ ಇಷ್ಟು ಸಾರವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂತಾನಶಕ್ತಿಯು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ವಾಗುವುದು. ಪದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಹೊಸಲೇ ಪೂರಾ ವಿಚಾರ ಮಾಡಿ ಔಷಧ ಕೇಳಿರಿ. ಮುಖ್ಯ ಸರ್ಜನ್ ಡಾಕ್ಟರ ಪಿ. ಎ. ವೈದ್ಯ, ಎಲ್. ಸಿ. ಪಿ. ಎಸ್., ಕೆಲವರೂಪಿಯು ರಾಜ್ಯ: ಈ ಚೂರ್ಣದಿಂದ ಯಾವ ತರಹ ಅಪಾಯವಾಗದೆ ಗರ್ಭಧಾರಣವೂ ಆಗುವುದಿಲ್ಲ.

ವಿಳಾಸ:—ಸಂಜೀವಿನೀ ಔಷಧಾಲಯ ಮು. ಪೊ. ಮಿರಜ, S. M. C.

ಮೈಸೂರಿನಲ್ಲಿರುವ ಕಾರ್ಯಕರ್ತರು ಮಂಗಳೂರು ಜಿಲ್ಲೆಯ ಕೆಲವರಾಧುರು ಸೇರಿ ಕರ್ನಾಟಕ ಏಕೀಕರಣದ ಅಂದು ಪ್ರದೇಶವೆಂಬ ಹೆಸರಿನಿಂದ ಒಂದು ಲೇಖನವನ್ನು ಬರೆದಿರುವರು. ಅದರಲ್ಲಿ ಅವರು ಕರ್ನಾಟಕ ಏಕೀಕರಣಕ್ಕೆ ಇರುವ ಲೋಕಮತದ ದೌಬಲವನ್ನೂ, ಅದಕ್ಕೆ ಕರ್ನಾಟಕವು ತಕ್ಕುದೆಂಬುದನ್ನೂ ಅನೇಕ ಪ್ರಬಾವೆಗಳಿಂದ ನಿರೂಪಿಸಿ, ಕೊನೆಯಲ್ಲಿ "ಈ ಕೆಳಗಿನಂತೆ ಹೊಸ ಸೂತ್ರವನ್ನು ಮಾಡಿರುವರು.

ಸದ್ಯದಲ್ಲಿ ಮುಂಬಾಯಿ ಇಲಾಖೆಯಲ್ಲಿ ರೆವೆನ್ಯೂ ಖಾತೆಯ ಬಗ್ಗೆ ೬ ಜಿಲ್ಲೆಗಳ ದಕ್ಷಿಣ ಭಾಗವನ್ನು ಮಾಡಿರುವಾಗಿದೆ ಅದರಲ್ಲಿ ರತ್ನಾಗಿರಿ, ಕುಲಾಬಾ ಈ ಎರಡು ಮರಾಠಾ ಜಿಲ್ಲೆಗಳುಂಟು ಈ ಮರಾಠಾ ಜಿಲ್ಲೆಗಳನ್ನು ಮಹಾರಾಷ್ಟ್ರಕ್ಕೆ ಕೊಟ್ಟು ಬಿಟ್ಟು ಬಳ್ಳಾರಿ ಮಂಗಳೂರು ಜಿಲ್ಲೆಗಳನ್ನು ಜೋಡಿಸಬೇಕು. ಈ ಅರೂ ಜಿಲ್ಲೆಗಳನ್ನು ಸದ್ಯದ ಮಟ್ಟಿಗೆ ಶಿಕ್ಷಣ ಮತ್ತು ರೆವೆನ್ಯೂ ಖಾತೆಯ ಬಗ್ಗೆ ಒಂದೇ ವ್ಯವಸ್ಥೆಯಿರಬೇಕು. ಕಾರವಾರಾ ಜಿಲ್ಲೆಯನ್ನು ಬೆಳಗಾವಿ, ಧಾರವಾಡ, ಮಂಗಳೂರು ಜಿಲ್ಲೆಗೆ ಹಂಚಿಕೊಟ್ಟು ಏದೇ ಜಿಲ್ಲೆಗಳನ್ನು ಮಾಡಿದರೂ ಚಿಂತಿಲ್ಲ ಕೊಡಗನ್ನು ಕೂಡಿಸಿದರೂ ಒಳ್ಳೇದು ಆಗದಿದ್ದರೆ ಅದನ್ನು ಸ್ವತಂತ್ರವಾಗಿಯೇ ಇಡಬೇಕು

ಒಂದೇ ಕನ್ನಡ ಭಾಷೆಯನ್ನು ಮಾತಾಡುವವರ ಈ ಪ್ರಾಂತ್ಯವಾದರೆ, ಭಾವೀ ಮುಂಬಯಿ ಲೆಜಿಸ್ಲೇಟಿಗೆ ಈ ದಕ್ಷಿಣ ಭಾಗದಿಂದ ೩೦ ಸದಸ್ಯರಿದರು ಆರಿಸಲ್ಪಡುವರು ಈ ೩೦ ಸದಸ್ಯರ ಸಂಘಟನೆಯಿಂದ ಕರ್ನಾಟಕ ಏಕೀಕರಣವು ಉತ್ತಮವಾಗಿ ಸಾಧಿಸುವುದು ಕಾರ್ಯಕಾರಿ ಮಂಡಲ ಪಲ್ಲಿಯ ಸ್ಥಳವೂ ಒಂದು ಮಂತ್ರಿ ಪದವೂ ಖಿರವಾಗಿ ದೊರೆಯುವುದು ಮತ್ತು ಏಕ ಸಂಸ್ಕೃತಿ, ಏಕ ಪೌರ್ವೇತಿಹಾಸದ ಜನರು ಸಮುದಂತಾಗಿ, ಸರಕಾರ್ಯಕ್ಕೆ ಬರ್ಜಿನ ಧಾರವೆಸಿನ ದಂತೆಯೇ ತಮ್ಮ ಅಸ್ತಿತ್ವವನ್ನು ಕಾಯ್ದುಕೊಳ್ಳಬಲ್ಲರು

ಸದ್ಯದಲ್ಲಿ ಕರ್ನಾಟಕಸ್ಥರು ಈ ಯೋಜನೆಯ ವಿಚಾರ ಮಾಡಬೇಕು ಸಂಕಾರವು ಕರ್ನಾಟಕದ ಹಾಲಿನ ಬಯಕೆಯನ್ನು ಅಶ್ವಸ್ಥಾಮನ (ಹಿಟ್ಟು ನೀರಿನ) ಹಾಲಿನಿಂದಾದರೂ ನೀಗಿಸಬೇಕು. ಕರ್ನಾಟಕಸ್ಥರಾದರೂ ಮೊದಲು ಹಂಡು ಪ್ರಯತ್ನ ಮಾಡಿ ಬಳಿಕ ಚಳವಳಿ, ಸಂಘಟನೆ ಸಾಮರ್ಥ್ಯಗಳಿಂದ ವಿಶ್ವ ವಿದ್ಯಾಲಯ, ಹೈಕೋರ್ಟು, ಗವರ್ನರ ಮೊದಲಾದವರ ಸಹಿತವಾಗಿ ಪೂರ್ತಿಗೊಂಡು ಏಕೀಕೃತ ಕರ್ನಾಟಕ ಪ್ರಾಂತ್ಯವನ್ನು ನಿರ್ಮಿಸಿಕೊಳ್ಳುವ ಪೂರ್ಣ ಪೀಠಿಕೆಯನ್ನು ಇಂದು ಸಾಧಿಸಬೇಕು ಇಲ್ಲದಿದ್ದರೆ ಸ್ವತಂತ್ರ ಪ್ರಾಂತ್ಯದ ತುಸ್ಪವೂ ಇಲ್ಲ, ದಕ್ಷಿಣ ಭಾಗದ ಎಳ್ಳೆಯೂ ಇಲ್ಲ ಎಂಬಂತಾಗುವುದು

+ + → →

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

S C No 522/1933, S I A 112/1933

ಮುಖ್ಯಪ್ರಾಣಾಚಾರ್ಯ–ವಾದಿ, ಅರ್ಜದಾರ

ಮತ್ತು

ಲಕ್ಷ್ಮಿ ಅಮ್ಮ, ಸುಬ್ಬಣ್ಣ ಭಟ್ರು ವಿಧವೆ ಉಡುಪಿ ತಾಲೂಕು ಬೆಳ್ಳೆ ಗ್ರಾಮದಲ್ಲಿರುವವರು—ಪ್ರತಿವಾದಿಗಳು ಎದ್ರಿಗು

ಇವರೊಳಗೆ

ಸದ್ರಿ ವ್ಯಾಜ್ಯದಲ್ಲಿ ವಾದಿ ಕಡೆಯಿಂದ ಜ್ಯಾಹೀರು ಮಾಡಿಕೊಳ್ಳುವುದೇನೆಂದರೆ–ಮೇಲ್ಕಂಡ ವಾದಿಗೆ ಪ್ರತಿವಾದಿಗಳಾದ ಸುಬ್ಬಣ್ಣ ಭಟ್ಟನು ತಾ 24–5–32ರಲ್ಲು ರೂಪಾಯಿ 70/-ಕ್ಕೆ ಬರೆದುಕೊಟ್ಟ ಪೋಂಡ್ ಪ್ರಕಾರ ಬರತಕ್ಕ ಅಸಲು ಒಡ್ಡಿ ವಿವೇಚನೆಗೆ ಅತನ ಸ್ಥಿರಚರ ಸೊತ್ತುಗಳ ಮೇಲೆ ದಿಕ್ರಿ ಕೇಳಿ ಪ್ರತಿವಾದಿಗಳ ಮೇಲೆ ಮೇಲ್ಕಂಡ ದಾವೆಯನ್ನೂ, ಸದ್ರಿ ದಾವೆಯಲ್ಲಿ ಅತನ ಹಕ್ಕಿನ ಚಿಟ್ಟೆ ಫಂಡಿನ ವಿವೇಜು ವಸೂಲಿ ಹಕ್ಕನ್ನು ಜಜ್ಮೆಂಟ್ ಮುಂಡೆ ಜಪ್ತಿ ಕೇಳಿ ಮೇಲ್ಕಂಡ ದಾವೆಯಲ್ಲಿ S I A 112/33ನೇ ಅರ್ಜಿಯನ್ನೂ ವಾದಿಯು ದಾಖಲು ಮಾಡಿದ್ದಾನೆ. ಮೇಲ್ಕಂಡ S I A 112/33ನೇ ಅರ್ಜಿ ಮತ್ತು ವೆ ಲ್ಕಂಡ ದಾವೆ ಕೂಡಾ ತಾ 5–1–34ಕ್ಕೆ ತನ್ನಿಗೆ ಇತ್ಯರ್ಥವಾದ ಸದ್ರಿ ವ್ಯಾಜ್ಯ ವ ಅರ್ಜಿಯಲ್ಲಿ ನಿನಂದರೂ ಪ್ರತಿವಾದಿಗಳಿಗೆ ಅಕ್ಷೇಪಣೆ ಇದ್ದಲ್ಲಿ ಆ ದಿವಸ ಈ ರೋರ್ಟು ಮುಂದೆ ಹಾಜರಾಗಿ ಸ್ವತಹ ವ ವಕೀಲರ ಮುಖಾಂತರ ವ್ಯವಹರಿಸತಕ್ಕುದು ತಪ್ಪಿದರೆ ಪ್ರತಿವಾದಿಗಳ ಗೈರು ಹಾಜರಿಯಿಂದ ಸದ್ರಿ ವ್ಯಾಜ್ಯವನ್ನೂ ಅರ್ಜಿಯನ್ನೂ ತೀರ್ಮಾನಿಸಲಾದೀತು.

ಉಡುಪಿ, 17—12—'34

P. V. Adhar,
Vakil for Plaintiff

ಒಂದು ಸುಂದರ ಕೂಸು

ಸೆನಿಟರಿ ಇನ್ಸ್‌ಪೆಕ್ಟರರು

"ನಾನು ನಿಮ್ಮ ಹೆಸರುವಾಸಿ

ಲೋಧ್ರವನ್ನು

ನನ್ನ ಪತ್ನಿಗೆ ಉಪಯೋಗಿಸಿದೆನು. ಆದರಿಂದಾಗಿ ನನಗೆ ಸುಂದರವಾದ ಗಂಡು ಕೂಸು ಹುಟ್ಟಿತು. ನಿಮಗೆ ನನ್ನ ನಮಸ್ಕಾರಗಳು"

ಎಸ್. ನಟರಾಜ ಮುದಲಿಯಾರ್,
ಸೆನಿಟರಿ ಇನ್ಸ್‌ಪೆಕ್ಟರ್,
ಮಾಲೂರು, ಸುದರಾ

ನಿಮ್ಮ ಕೆಮಿಸ್ಟರರ ಹತ್ತರ ಕೇಳಿರಿ.

ಅಥವಾ

ಕೇಸರಿ ಕುಟೀರ,
ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,
Sole Agents for South Kanara
ಪೊಪ್ಯುಲರ್ ಸ್ಟೋರ್ಸ್,
ರಥಬೀದಿ ಮಂಗಳೂರು

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿ ಕೊಡುವಂತಹ
ಸುಮಧುರ
ಝಂಡು ದ್ರಾಕ್ಷಾಸವ
ಜರೂರು ಉಪಯೋಗಿಸಿರಿ.

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.
ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ
ಝಂಡು ಅಶೋಕಾರಿಷ್ಟ
ಬೇಗನೇ ಉಪಯೋಗಿಸಿರಿ

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿ: ಮುಂಬ್ಯಾಗಳ.

ಮದ್ರಾಸು ಸಂಸ್ಥಾನದ ಏಜಂಟ್ —ದಾಮೋದರ ಮತ್ತು ಕಂಪೆನಿ, 78 ಚೈನ ಬಜಾರ ರೋಡ್, ಮದ್ರಾಸು
ಮೈಸೂರು ಪ್ರೊವಿನ್ಸ್ ಏಜಂಟ್ —ಪಿ ಪೊಪಟ್‌ಲಾಲ ಕಂಪೆನಿ, ೨೪೧ ಅರ್ಕಟ್ ಶ್ರೀನಿವಾಸಾಚಾರ ಸ್ಟ್ರೀಟ್
ಮಂಗಳೂರು ಏಜಂಟ್—ತಾಹಾ ಕಂಪೆನಿ ಹಾಯ್ಮಂಡ್ ಬಿಲ್ಡಿಂಗ್, ಮಂಗಳೂರು
ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ, ಧಾರವಾಡ
ದೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡೆಕೊಳ್ಳಿರಿ

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಳ್ಳಿಕೋಟೆ ಆಯೋಗ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ ವಿ ಪ ರಾಮನ್, ಎಂ. ಆರ್, ಸಿ ಎಸ್ ಇವರು ಬರೆದಿರುವುದನ್ನು ಓದಿ ನೋಡಿ–"ನಾನು ನಿಮ್ಮ ಆಶ್ಚರ್ಯಕರವಾದ ಔಷಧಾಸ್ಯಂ ಟಾನಿಕ್‌ನ್ನು ಪರಗಳಲ್ಲಿ ಉಂಟಾ ಹಸುವ ಕಡಿಮೆಯಾಗಿರುವುದು, ಕೆಂಪು ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ ಅವರ ಫಲಿತಾಂಶಗಳು ಬಹು ಪ್ರಶಸ್ತಿಕರವಾಗಿದೆ. ಔಷಧಾಸ್ಯಂಗಳನ್ನು ಪೇಷಕತ್ತ ಕುನಿಗೆಯ ಎಲ್ಲಾ ಸಂದರ್ಭಗಳಲ್ಲೂ ಸರ್ವೇ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ತಿಳಿಸಲು ಬಯಸುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ ವೀರ್ಯ ವೃದ್ಧಿಮಾಡುತ್ತದೆ ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ

ಪಂಡಿತ ಡಿ. ಗೋಪಾಲಾಚಾರ್ಯರವರ ಜೀ ವಾ ಮೃ ತ ವು

ಎಲ್ಲಾ ಔಷಧ ವ್ಯಾಪಾರವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ ೩೦೭, ಮದ್ರಾಸು.

ಸೋಲ್ ಏಜಂಟರು– ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೧೩ ಚಿಕ್ಕಪೇಟೆ ಬೆಂಗಳೂರು (ಅಂಚೆ ಪೆಟ್ಟಿಗೆ ನಂ ೬೮೭)
ದಕ್ಷಿಣ ಕನ್ನಡದ ಏಜಂಟರು– ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

P No 104

ಕರ್ನಾಟಕ ವರ್ತಮಾನ

ನಿನ್ನೆಯಿಂದು ಫ್ರೆಸ್ಬೈಟೀರಿಯನ್ ಮಿಷನರಿಯವರಾದ ಶ್ರೀ ಸ್ಟೈನ್ ರವರು ಶ್ರೀ ಸೂಗಾಡಿಯವರಿಗೆ ೬ ಹಿಂಗ್ಲೀ ಸ್ಪೂನು ಬೆಳ್ಳಿ ಎಲೆ ದರು. ಶ್ರೀ ಪಣಾಯಿಯವರು ಇಗ ಎರಡು ಹಿಂಗ್ಲೀ ಹಿಂಡಿ ಹೊಸದಿಲ್ಲಿ ಕಾಂಗ್ರೆಸ್ ಧ್ವಜಕ್ಕೆ ಬಗ್ಗಡುವಂತೆ ಪ್ರಯತ್ನ ಮಾಡಿ ಸಿಕ್ಕಿಬಿದ್ದಿದ್ದರು.

ಶಾ. ಎನೇ ದಿಕ್ಕಿ ಗಡುಗಿನ "ಭಕ್ತಾಗಿಲ ಬಂಧು" ಶ್ರೀ ಶೆಯ ಸಮಾರಂಭವು ಶ್ರೀ ಹೀರೇಮುರಡಂ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ಜರಿಯಿತು. ಸಭೆಗೆ ಊರ ಪ್ರಮುಖರ ನೇಕರಿದ್ದರು. ಪರಮಾರುಗಳಿಂದಲೂ ತಂತಿಯ ಬಂದಿದ್ದರು. ತುದಲ ಭಾಷಣಗಳಾದ ಬಳಿಕ ಶ್ರೀ ಹೊಸಮನಿ ಸಿದ್ಧಪ್ಪ ನವರು ಅಧ್ಯಕ್ಷತೆಯಲ್ಲಿಯೂ ಶ್ರೀ ದೊಡ್ಡಕೋಟಿಯವರ ಕಾರ್ಯದರ್ಶಿತ್ವದಲ್ಲಿಯೂ ಧಾರವಾಡ ಜಿಲ್ಲಾ ಹರಿಜನ ಸೇವಾ ಸಂಘವು ಸ್ಥಾಪಿಸಲ್ಪಟ್ಟಿತು. ಕೊನೆಯಲ್ಲಿ ಸಕ್ಕರೆಪಣಾರ ನಡೆಯಿತು.

ಶ್ರೀ ತಿನ್ನೆಮಗುಂದ ವಾರಕಾಯಿಗಳೆಂಬ ಶೈಷ್ಣವ ತರು ಇಲ್ಲಿಯ ಕೊಳಕಣಸ್ಥರಾದ ಭಕ್ತಿಳ ಸಭೆ ಒಳ್ಳರ ಧಾರಾದೇವಿಯನ್ನು ಮದುವೆಯಾಗಿ ಬ್ರಾಹ್ಮಣರಲ್ಲಿಯ ಉಪ ಜಾತಿಗಳ ವಿಕೇಂದ್ರಣ ಮಾಡಲಿದ್ದಾರೆ. ವಧೂವರರಿಬ್ಬರೂ ಸುಶಿಕ್ಷಿತರಾಗಿರುವರು.

ಧಾರವಾಡದ ದಲಿತ ಸ್ಕೂಲು ಬೋರ್ಡಿಗೆ ಸರಕಾರದವರು ೧. ಸರದಾರ ಮಹಾಬೂಬ ಅಲ್ಲಿಖಾನ, ೨. ಶ್ರೀ। ಎಲ್ ವಿ. ತಿರೋಳ, ೩. ರಾ. ಸಾ. ಕುಂಭಕೋಣ, ೪. ಶ್ರೀ। ತಂಜಾಕರ, ಇವರನ್ನು ಆರಿಸಿದ್ದಾರೆ.

ದೇವರಹಿಪ್ಪರಿ ಮುನ್ಸೀಪಾಲಿಟಿಯ ಸದಸ್ಯತ್ವಕ್ಕಾಗಿ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆರಿಸಲ್ಪಟ್ಟಿದ್ದ ಸದಸ್ಯರು ಸಹಿ ಮಾಡಿ ಕೊಡಲಿರುವುದಿಲ್ಲವೆಂದು ಆರೋಪಿಸಿ ಅಲ್ಲಿಯ ಕಾಂಗ್ರೆಸ್ ಕಾರ್ಯಕರ್ತರು ಒಟ್ಟುಗೂಡಿ ಆ ಸದಸ್ಯರನ್ನು ಇಲ್ಲಿಯ ಉಪ ವಕೀಲರು ಕೋರ್ಟಿನಿಗೆ ಅಂದು ಸಳುಹಿಸಿದರು. ಪ್ರಕರಣವಿಗ ಕೃತ್ತವಿಂತೆ.

ಸವಣೂರ ಬಾಲಿಗೋಲು ತಂಡದ ಕೈಂಕರ್ಯದ ಕಂತ ಮೋಸಲೆ, ಅಕ್ಕಾದ ಗೋವಿಂದ ಎಂಬವರು ಶ್ರೀ ಅಡಣೂರ ದೀಕ್ಷಿತರಿಗೆ ದೂಡಿದ ಪತ್ರವ್ಯವಹಾರ ಇತಿಹಾಸವನ್ನು ಇಲ್ಲಿರುವ ಶಬಕೋರ್ಟ ದೇಶವಾಂತಿಯವರ ಮನೆಯಲ್ಲಿ ಕುಳಿತು.

ಶ್ರೀ ಕಾಜೆ ವಕೀಲರು ಸಾಹುಕಾರ ಕಾಲೂಕಿನ ಇನ್ನೂ ಮುರದ ಸಬ್ ಜಡ್ಜರಾಗಿ ನಿಯಮಿಸಲ್ಪಟ್ಟಿರುವರೆಂದು ಇಲ್ಲಿಯ ವಕೀಲರು ದೃಢ ತರ್ಕದಿಂದ ಹೇಳುತ್ತಿರುವರು.

ಮಿತ್ರೇಕೋಪೆಯಲ್ಲಿ ನಿರ್ಬಂಧಗಳನ್ನಿಲ್ಲಂಘಿಸಿದ್ದರಿಂದ ಹೊನಕಟ್ಟಿಯ ಶ್ರೀ ಹಳೆಕೇರಿ ಮಹಾದೇವಪ್ಪನವರಿಗೆ ಒಂದು

(೭ನೇ ಪುಟಕ್ಕೆ ತುಂಡುಮಂದುಟ್ಟು)

ಬಹು ಕಾಲದ ಆವಶ್ಯಕತೆಗೆ



ಸಣ್ಣ ಕಬ್ಬಿನ ತೋಟದವರು ಸಣ್ಣ ರೀತಿಯಿಂದ ಸಕ್ಕರೆ ತಯಾರಿಸಲು ಯೋಗ್ಯ ರೀತಿಯ ಯಂತ್ರವು ದೇಕೆಂದು ಬಹು ಕಾಲದ ಆವಶ್ಯಕತೆಯಲ್ಲಿ ದ್ದರು. ನಿಮಗೆ ದೇಕಾದುದು ಇಲ್ಲೇ ಇದೆ.

ಕಲೋಸ್ಕರ ಶುಗರ್ ಸೆಂಟ್ರಿಫ್ಯುಗಲ್

ಎಂಬುದು ಅಧುನಿಕ ಮತ್ತು ಅತ್ಯುತ್ಕೃಷ್ಟವಾದ ಸಾಧನಗಳಿಂದೊಡಗೂಡಿ ಸಕ್ಕರೆ ತಯಾರಿಸಲು ಸುಲಭ ಯಂತ್ರವಾಗಿದೆ. ಸಣ್ಣ ಭಂಡವಾಲದಲ್ಲಿ ಹೆಚ್ಚಿನ ಲಾಭವನ್ನು ಕೊಡುತ್ತದೆ. ವಿವರಗಳಿಗೆ:—ಕಲೋಸ್ಕರ್ ಬ್ರದರ್ಸ್ ಲಿಮಿಟೆಡ್ ಕಲೋಸ್ಕರ್‌ವಾಡಿ (ಸತಾರ ಜಿಲ್ಲಾ) ಇಲ್ಲಿಗೆ ಬರೆಯಿರಿ.

ಸ್ಪೆಷಲ್ಸ್:—ಟಾಪೆರ್ ಪಾನ್ ಬುಶ್ ಡಿಸ್ಕೊ ಎಂಡ್ ಟ್ರೇಲ್ಸ್ ಡಿವೆಲಪ್‌ಮೆಂಟರಿ ಕೊ., ಮಂಗಳೂರು.

ಅಸ್ವಸ್ಥದ ನಂತರ ನಿಮ್ಮ ಶಕ್ತಿಯನ್ನು ವೃದ್ಧಿಸುತ್ತದೆ.

ರೋಗದ ಪುನರ್ಬಾಧೆಯಿಂದ ರಕ್ಷಿತರಾಗಿರಿ.

ದೇಹಪುಷ್ಟಿಗೆ ಯೋಗ್ಯವಾದ ದನದ ಕೆನೆಹಾಲು, ಬೆಳೆದ ಬಾರ್ಲಿ, ಗೋದಿಗಳ ಸಾರದಿಂದ ಅದನ್ನು ತಯಾರಿಸಲಾಗಿರುವುದರಿಂದ ಹೊರ್ಲಿಕ್ಸ್ ಮೊಲ್ಟೆಡ್ ಹಾಲು ಅಸ್ವಸ್ಥದಿಂದೇಳುವರಿಗೆ ಅತ್ಯಮೋಘವಾದ ಟೋನಿಕ್ ಪಾನೀಯವಾಗಿರುತ್ತದೆ. ಕಳೆದು ಹೋದ ನರಗಳ ಅಣುಗಳನ್ನದು ಶೀಘ್ರವಾಗಿ ಬಲಪಡಿಸುತ್ತದೆ, ನವಚೇತನವನ್ನು ಕೊಡುತ್ತದೆ. ರೋಗದ ಪುನರ್ಬಾಧೆಯಿಂದ ರಕ್ಷಿಸುತ್ತದೆ.

ಹೊರ್ಲಿಕ್ಸನ್ನು ಬಿಸಿಯಿರುವಾಗ ಆಗಲಿ ತಣ್ಣಗೆ ಇರುವಾಗ ಆಗಲೀ ತೆಗೆದುಕೊಳ್ಳಬಹುದು. ಹೊರ್ಲಿಕ್ಸ್ ಮಿಕ್ಸರಿನಿಂದ ರುಚಿಕರ ಪಾನೀಯವಾಗುತ್ತದೆ. ಇದರಿಂದಾಗಿ ಕೆನೆಯ ಪರಿಮಳವು ತುಂಬಾ ದೊರೆಯುತ್ತದೆ

ಹೊರ್ಲಿಕ್ಸ್ ಮಿಕ್ಸರಿನಿಂದ ಒಳ್ಳೆಯ ಪಾನೀಯವನ್ನು ಮಾಡಬಹುದು. ಆದು ಸ್ಟೋರುಗಳಲ್ಲಾಗಲೀ ಅಥವಾ ಟಿ. ಪಿ. 2229 ಕಳ್ಳಕ್ಕೆ 14 ಆಣೆ ಆಂಚೆ ಚೀಟು ರವಾನಿಸಿದರೆ ಸಿಗುತ್ತೆ.

ಹೊರ್ಲಿಕ್ಸ್

ಮೂಲಭೂತ ಮೊಲ್ಟೆಡ್ ಹಾಲು

ಎಲ್ಲಾ ಕಡೆಗಳಲ್ಲೂ ದೊರೆಯುತ್ತೆ.

ಟಿ. ಪಿ. 2229. ಕಳ್ಳಕ್ಕೆ

ಹೊರ್ಲಿಕ್ಸ್, ಇಸ್ ಕಳ್ಳಕ್ಕೆಸ್ಸ್ ಎಂಬುವರ ಕುರಿತು ಧರ್ಮಾರ್ಥ ಸಹಿತರ ವಿಳಾಸವನ್ನು ನನಗೆ ಕಳುಹಿಸಿರಿ.

ಹೆಸರು .....

ವಿಳಾಸ .....No. S. D. 128.....

ಹೊರ್ಲಿಕ್ಸ್ ಮಿಕ್ಸರ್ ಬೇಕಾಗಿದ್ದರೆ 14 ಆಣೆ ಆಂಚೆ ಚೀಟು ರವಾನಿಸಿರಿ





ಕೃಷಿಕರೇ ಮತ್ತು ಸೋಷ್ಯಲಿಗಳಿಗೆ
ದೇಶದ ನಮ್ಮನೆಯ ಎಲ್ಲಾ ವಿಧದ
ಧಾರಣಗಳು, ರಬ್ಬಿಗಳು, ರಬ್ಬರ ಪೈಪ್ಗಳು,
ಮತ್ತು ಇತರ ಧಾರಣಗಳನ್ನು ಮಾರುತ್ತಿದ್ದೇವೆ.
ಶ್ರೀ ಮಂಗಳೂರು ಟ್ರೇಡಿಂಗ್ ಎಜೆನ್ಸೀಸ್.
ಬಳ್ಳಾರಿ, ಮಂಗಳೂರು

THE SOUTH INDIA
CO-OPERATIVE INSURANCE SOCIETY,
LIMITED, MADRAS

LOCAL BOARD:—
THE SOUTH CANARA CENTRAL
CO-OPERATIVE BANK LTD., MANGALORE

Applications are invited for Sub Agents from capable and energetic persons and Co operative Institutions to canvass business on behalf of the Local Board of the Society at Mangalore

FOR TERMS APPLY TO—

The Secretary,
South Canara Central Co operative
Bank, Ltd KODIALBAIL P O (Mangalore)
SOUTH CANARA

Hydrocele and Hernia
'ಹೈಡ್ರೊಸಿಲ್' ಮತ್ತು ಆಂಡವಾಯುವಿಗೆ
ಅತ್ಯುತ್ತಮ ಔಷಧಿ.

Aksir—A. Fota ಎಂಬುದು ಹೈಡ್ರೊಸಿಲ್ ಮತ್ತು ಆಂಡವಾಯುವನ್ನು ಗುಣಪಡಿಸುವುದು ನಿಶ್ಚಿತವಾದ ಔಷಧಿಯಾಗಿದೆ. ಒಬ್ಬರಿಗೆ ಎಷ್ಟು ಕಾಲದ ರೋಗವಿದ್ದರೂ ಅದರ ಎಷ್ಟು ದೊಡ್ಡ ರೋಗವಿದ್ದರೂ ಅದರ ಆಂಡದಲ್ಲಿ ನೀರು ಗಟ್ಟಿ ಕಲ್ಲಿರಲಿ, ಯಾವ ರೀತಿಯಿಂದಾದರೂ ಗುಣಪಡಿಸಿಕೊಂಡಿರಲಿ, ಈ ಔಷಧವನ್ನು ಸರಿಯಾಗಿ ಉಪಯೋಗಿಸಿದಲ್ಲಿ ಆಂಡದಿಂದ ನೀರು ಹೊರಬಂದು ಭೂರಾಯವನ್ನು ಅದರ ಮೊದಲಿನ ಸ್ಥಿತಿಯಲ್ಲಿ ತರುತ್ತದೆ. ಈ ಔಷಧಿಯನ್ನು ಒಮ್ಮೆ ಸೇವಿಸಿ ಉಪಯೋಗಿಸಿದಲ್ಲಿ ಈ ರೋಗವು ಪುನಃ ಬರುವುದಿಲ್ಲವೆಂದು ಪೂರ್ಣ ಭರವಸೆಯನ್ನು ಕೊಡುತ್ತೇವೆ. ಇನ್ನೊಂದು ಪಟ್ಟಿಯಲ್ಲಿ ಈ ರೋಗವು ಬಂದು ಬೇಗ ಹರಿ (ಕೆಂಪಗೆ) ಯಾಗಿದೆ. ಇದನ್ನು ಸೇವಿಸಿದರೆ ಕಲ್ಲು ಆಂಡಿನ ರೋಗವು ಬಲ ಬಲು ರಿಗಾಗಿರುವ ಹೈಡ್ರೊಸಿಲನ್ನು ಗುಣಪಡಿಸುವುದು. ಕ್ರಯ ಪಟ್ಟಿಗೆ ರೂ 3 ಕ್ಕೆ. 8 ಆಣೆ

ಪ್ರಾಪ್ತಿಸ್ಥಾನ ಈ ವಿಳಾಸ.
Hamdard Dawakhana,
Kushak, MUTTRA.

ಸಿದ್ಧೇಶ್ವರಿ ಪ್ರಿಂಟಿಂಗ್ ವರ್ಕ್ಸ್
ಮತ್ತು
ಪಬ್ಲಿಷಿಂಗ್ ಹೌಸ್
ಮಂಗಳೂರು.
ಇಲ್ಲಿ ಪುಸ್ತಕಗಳು, ಪತ್ರಿಕೆಗಳು ಮತ್ತು ಇತರ ಮುದ್ರಣಗಳನ್ನು ಬೇಗನೆ ಮತ್ತು ಸುಂದರವಾಗಿ ಮುದ್ರಿಸಿಕೊಡಲಾಗುವುದು.
ಮುದ್ರಣಕ್ಕೆ ಕೊಡುವ ಮೊದಲು ನಮ್ಮ ದರಗಳನ್ನು ತಿಳಿಯಿರಿ.
ಮ್ಯಾನೇಜರ್.

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

WANTED.

Four Organisers to organise the work of the South Indian General Assurance Society, Ltd, in the following places noted below. Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur. Shimoga, Chitaldroog and Tumkur (4) Mangalore, Kolar.

For terms and other particulars please apply to—

The Divisional Manager,
The South Indian General Assurance Co Ltd.
64, 3rd Cross Road, Srirampur Extn
Malleswaram Post, BANGALORE
OR
The Managing Agents,
The S. I. G. A. Co. Ltd.
55, Poonamallee High Road Kilpauk, MADRAS.

ಮಾರಾಟಕ್ಕಿವೆ! ಮಾರಾಟಕ್ಕಿವೆ!!
ಅತಿ ಕೈಲಿದರಗೂ, ಕೊಟ್ಟಿದವರಿಗೂ
ಪೇಟೆಗಿಂತ ಕಡಿಮೆ
ಚಪ್ಪರ್ ರೋಲ್‌ಗಳು
ಮೂರು ಸ್ಥಾನಗಳಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.
ರಫ್ತು ಕೆಗದುಕೊಳ್ಳುವವರಿಗೆ ವಿಯೋಷ ಧರವಿದೆ
ಕೂಡಲೆ, ಇವರ ಮಾತುಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಮೆನೇಜರ್,
ಕಾರ್ಕಳ ಬಾಯ್ಲರ್ಸ್,
ಕಾರ್ಕಳ, ಸೌತ್ ಕೆನರಾ.

ಕೃಷಿಕರಿಗೆ
ಚೈತನ್ಯಪ್ರಾಶಾನ ಲೇಹ.
ಕೃಷಿಕ ಕೆಲಸಗಳಿಗೆ
ದಣಿವು ಮೂರಾ ಠಿಕ್ಕಿ ಓಡಿ
(ಆಯುರ್ವೇದ ಸೂತ್ರ)
ಮುಖ್ಯ ಸಾಮಗ್ರಿಗಳಾಗಿ
ಮುದಾನಾ ಡಾಯಮಂ ಗಿ ಹೈಲ
ಈ ಲೇಹ್ಯವನ್ನು ಸೇವಿಸಿದಲ್ಲಿ ಸಂಪೂರ್ಣ ಆರೋಗ್ಯ
ಮತ್ತು ಬಲವು ಉಂಟಾಗುವುದು.

EDITED, PRINTED & PUBLISHED BY V. S. KUDVA AT THE SHARADA PRESS, MANGALORE.

ಸಾಹಿತ್ಯ

ಸ್ವದೇಶಾಭಿಮಾನಿ

ಸಂಚಿಕೆ.

ಸಂಪುಟ ೨ ಫೆಬ್ರವರಿ ೨೪—೨—೧೯೩೬. ಸಂಚಿಕೆ ೧

— ಅನುಕ್ರಮಣಿಕೆ —

ವಿಮರ್ಶೆ, ವಾದ
ಸಣ್ಣ ಕತೆಗಳು
ಪತ್ರಿಕಾ ಪ್ರಪಂಚ
ಹರಿಜನ ಬಂಧು
ಆಗದೆ?
ಶ್ರೀ ಟಿ. ಪಿ. ಕೈಲಾಸಂ
ಮಾರುತ
ವೈನಾಡುಗಳ ಕನ್ನಡಿಗರು

ಫೆಬ್ರವರಿ ತಾರೀಕು ೨೪ನೇ ಶುಕ್ರವಾರ ೧೯೩೬.

ವಿಮರ್ಶೆ, ವಾದ.

ಯಾವುದೊಂದು ಕಾರ್ಯ ಮಾಡುವುದರಲ್ಲಿ ಕಾರ್ಯವನ್ನು ಕೈಕೊಂಡವನಾಗಲಿ, ಸಂಗಾತಿಗಳಾಗಲಿ ಆಗಾಗ ತಮ್ಮ ಕೆಲಸವನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಪರೀಕ್ಷಿಸಬೇಕಾಗಿದೆ, ಸಾಹಿತ್ಯದ ಪ್ರಗತಿಯಲ್ಲಿಯೂ ಸಹ ವಿಮರ್ಶಕರು ಅತಿ ಸಮೀಪದಲ್ಲಿ ಇರಬೇಕು. ವಿಮರ್ಶೆಯು ಅಡಗಿ ಎಂದು ಅಂಧಶ್ರದ್ಧೆಯು ಆರಂಭವಾಗುತ್ತದೆ. ಅಂದೆ ಅಳಿಗಾಲದ ಪ್ರಾರಂಭವಾಯಿತೆಂದು ಹೇಳಬಹುದು. ಹೀಗಿರುವಾಗ ಸಾಹಿತಿಗಳು ತಮ್ಮ ಗ್ರಂಥಗಳನ್ನು ಇತರರು ನಿಂದಿಸಿದರೆಂದಾಗಲಿ, ಅವುಗಳಲ್ಲಿನ ಹುಳುಕುಗಳನ್ನೆ ಎತ್ತಿದರೆಂದಾಗಲಿ ರೇಗುವುದು ಸರಿಯಲ್ಲ. ನಮ್ಮ ಗ್ರಂಥಗಳು ಪ್ರಕಟವಾಗುವ ವರೆಗೆ ಅವು ನಮ್ಮವು, ಅನಂತರ ಅವು ಬಹುಜನರ ಕೈವಶವಾಗಿ ಸಮಾಜಕ್ಕೆ ಅದರ ಮೇಲೆ ಒಂದು ರೀತಿಯ ಅಧಿಕಾರವು ಹುಟ್ಟುತ್ತದೆ; ಅದನ್ನು ಹೊಗಳಬೇಕೆ, ತೆಗಳಬೇಕೆ, ಎಂದು ಹೇಳುವುದು ಗ್ರಂಥಕಾರರ ಕೆಲಸವಲ್ಲ. ವಿಮರ್ಶೆಯು ಅತಿ ಸಂಕುಚಿತವಾದರೂ, "ನಿಂದಕಾಜೆಂ ಫೆರ ಅಸಾವೆಂ ಶೇಜಾರ" ಎಂಬ ಮರಾಠಿ ಗಾದೆಯನ್ನನುಸರಿಸಿ, ನಿಂದೆಯೂ ಅಗತ್ಯವೆಂದು ಸುಮ್ಮನಿರಬೇಕು.

ಇಂಗ್ಲಿಷಿನಲ್ಲಿ ಫೌಲರ್ ಎಂಬವರು Modern English Usage ಎಂಬ ಪುಸ್ತಕ ಬರೆಯುವಾಗ, ಇಂಗ್ಲಿಷಿನಲ್ಲಿರುವ ರೂಢಿಯು ಎಂತು ಅದನ್ನು ವಿವರಿಸಿ ಉದಾಹರಣೆಗಳು ಯಾವುವೆಂದು ವಿವರಿಸುವಲ್ಲಿ ಟೈಮ್ಸು, ಡೈಲಿಮೈಲ್, ಮೊದಲಾದ ಪ್ರಸಿದ್ಧ ಪತ್ರಿಕೆಗಳ ಮತ್ತು ಹೆಸರುವಾಸಿಯಾದ ಗ್ರಂಥಕರ್ತರ ಪುಸ್ತಕಗಳಿಂದ ಅನೇಕ ಉದಾಹರಣೆಗಳನ್ನು ಎತ್ತಿ ಬರೆದಿದ್ದಾರೆ. ಹಾಗೆಂದು ಆ ಪತ್ರಿಕೆಗಳಾಗಲಿ, ಮಹನೀಯರಾಗಲಿ ಫೌಲರರ ಮೇಲೆ ಸಿಟ್ಟಾಗದೆ ಅವರ ಪುಸ್ತಕವನ್ನು ಪ್ರತಿಯೊಬ್ಬ ಸಾಹಿತಿಯು ಮನಗೊಟ್ಟು ಓದಬೇಕೆಂದು ಹೊಗಳಿದ್ದಾರೆ. ಈ ಪಂಥವನ್ನೇ ನಮ್ಮ ಸಾಹಿತಿಗಳು ಅನುಕರಿಸುವುದು ಬಹು ಲೇಸು.

ವಿಮರ್ಶಕರು ಸಹ ತಮ್ಮ ಕೆಲಸವನ್ನು ಯೋಗ್ಯ ರೀತಿಯಿಂದ ನಡೆಸಿದರೆ ಮಾತ್ರ ಜನರಿಗೆ ಅವರ ವಿಮರ್ಶೆಯ ಮೇಲೆ ಭರವಸೆಯುಂಟಾಗಿ ಅವರು ತೋರಿಸಿದ ಮಾರ್ಗವನ್ನು ಬಹುಜನರು ಅನುಸರಿಸುವರು. ಸಾಹಿತ್ಯ ಕ್ಷೇತ್ರದಲ್ಲಿ ವಿಮರ್ಶಕರಿಗೆ ನಿರಂಕುಶ ಪ್ರಭುತ್ವವುಳ್ಳವರು ಎಂದು ಎಣಿಸದೆ ತಮ್ಮ ಸ್ವಂತ ರುಚಿ, ಅರುಚಿಗಳನ್ನು ಬದಿಗೊತ್ತಿ ಗ್ರಂಥಕರ್ತನ ಉದ್ದೇಶವೇನು? ಅದನ್ನು ಅವನು ಹೇಗೆ ಪೂರೈಸಿದ್ದಾನೆ? ಎಂದು ನಿಷ್ಪಕ್ಷಪಾತ ದೃಷ್ಟಿಯಿಂದ ಪರೀಕ್ಷಿಸುವುದೆ ಅವರ ಕರ್ತವ್ಯ ದೋಷಗಳಿಲ್ಲದ ವಸ್ತುವು ಸಂಸಾರದಲ್ಲಿಲ್ಲ. ಅದಕ್ಕಾಗಿ ಪುಸ್ತಕದ ಗುಣದೋಷಗಳನ್ನು ತೂಲನಮಾಡಿ ನೋಡಿ ದೋಷಗಳು ಅತಿರೇಕವೆಂದು ಖಚಿತವಾದ ವಿನಹ ಪುಸ್ತಕಕ್ಕೆ ಬಹಿಷ್ಕಾರ ಕೊಡುವುದು ತಪ್ಪು.

ಜನಪದ ಸಾಹಿತ್ಯ.

ಸ್ವದೇಶಾಭಿಮಾನಿಯ ಸಾಹಿತ್ಯ ಸಂಚಿಕೆಯು ತನ್ನ ಹೊಸ ವರ್ಷದಲ್ಲಿಯೂ ಕನ್ನಡ ನುಡಿಯ ಸೇವೆಯನ್ನು ಮಾಡಬೇಕೆಂದು ಮುಂದುವರಿಯುತ್ತಿದೆ ಇದರಲ್ಲಿದ್ದ ನಾಲ್ಕು ಪುರಗಳಲ್ಲಿ ಸಾಮಾನ್ಯ ಜನರಿಗೆ, ಎಲ್ಲಾ ತರದ ಭಾವನೆಗಳಿದ್ದವರಿಗೆ, ಓದಲಾಗುವ ವಿಷಯಗಳನ್ನು ಕೊಡಬೇಕೆಂದು ನಾವು ಪ್ರಯತ್ನಿಸಲಿದ್ದೇವೆ; ವಿವಿಧ ರೀತಿಯ ವಿಷಯಗಳನ್ನೂ ಪ್ರಕಟಿಸಿದ್ದೇವೆ ನಮ್ಮ ಜಿಲ್ಲೆಯಲ್ಲಿಯ ಹಳೆ ತಿರುಕರು ಹಾಡುತ್ತ ಹೋಗುವ ಪದ್ಯಗಳನ್ನೂ, ಮತ್ತು ಹಳ್ಳಿಯ ಉತ್ಸವ, ಕೋಲು, ಮೊದಲಾದ ಸಮಯದಲ್ಲಿ ಜನರು ಹೇಳುವ ಪದ್ಯಗಳನ್ನೂ ಶೇಖರಿಸಿ ನಮ್ಮ ಜಿಲ್ಲೆಯ ಹಳೆ ಹಾಡುಗಳನ್ನು ಈ ಸಂಚಿಕೆಗಳಲ್ಲಿ ಶೇಖರಿಸಿ ಜನರ ಮುಂದೆ ಇಡಬೇಕೆಂದು ನಾವು ಎಣಿಸಿದ್ದೇವೆ. ಈ ಕಾರ್ಯಕ್ಕೆ ಹಳ್ಳಿಯ ಜನರು ನಮಗೆ ನೆರವಾಗಿ ತಮ್ಮ ಹಳ್ಳಿಗಳಲ್ಲಿರುವ ಇಂತಹ ಜನಪದ ಸಾಹಿತ್ಯದ ಗೀತೆಗಳನ್ನು ಶೇಖರಿಸಿ ತಮಗೆ ಕಳುಹಿಸಿ ನಮ್ಮೊಡನೆ ಸಹಕರಿಸುವರೆಂದು ಭಾವನೆ. ವರ್ಷಗಳು ದಾಟಿದಷ್ಟಕ್ಕೆ ಅವುಗಳು ಕ್ಷೀಣವಾಗಿ ಹೋಗುವ ಸಂದರ್ಭಗಳಿರುವುವು. ಹಾಗೆ ಅಳಿದು ಹೋದರೆ ಅದರಲ್ಲಿನ ನಮ್ಮ ಜನರ ಹಳೆ ಭಾವನೆಗಳೂ, ಉತ್ಸಾಹಗಳೂ ಮಾಯವಾಗುತ್ತದೆ. ಅದಕ್ಕಾಗಿಯೇ ನಾವು ಆ ಕಾರ್ಯವನ್ನು ಈಗಲೇ ಮಾಡಬೇಕು.

ಸಣ್ಣ ಕತೆಗಳು.

೧

ನಮ್ಮ ಪೂರ್ವಜರಿಂದ ಪರಂಪರಾಗತವಾಗಿ ನಮಗೆ ಅನೇಕ ಕತೆಗಳು ಬಂದಿವೆ. ಉಪನಿಷತ್ತುಗಳು, ಹಿತೋಪದೇಶ ಮತ್ತು ಪಂಚತಂತ್ರ ಇತ್ಯಾದಿ ಗ್ರಂಥಗಳು ಅನೇಕ ಚಿಕ್ಕ ಚಿಕ್ಕ ಕತೆಗಳ ಬೀಡಾಗಿವೆ. ಅವರು ಧಾರ್ಮಿಕ ಗ್ರಂಥಗಳ ಗಹನವಾದ ತತ್ವಗಳು ಜನಸಾಮಾನ್ಯರಿಗೆ ಸುಲಭವಾಗಿ ಗ್ರಾಹ್ಯವಾಗುವಂತೆ ಇವುಗಳನ್ನು ಬರೆದರು. ಇವುಗಳಿಂದ ಮನೋರಂಜಕತೆಯೂ, ತತ್ವಬೋಧೆಯೂ ಒಂದೇ ಸವನೆ ಆಗುತ್ತದೆ. ಆದರೆ ನಾವು ಈಗ ಕೇಳುತ್ತಿರುವ ಸಣ್ಣ ಕತೆಗಳೆಂಬುವು ಇವುಗಳಿಂದ ತೀರ ಭಿನ್ನವಾಗಿವೆ. ಸಣ್ಣ ಕತೆಗಳು (short stories) ಮೊದಲು ಇಂಗ್ಲೆಂಡ್ ಅಮೇರಿಕಾ ದೇಶಗಳಲ್ಲಿ ಜನ್ಮವೆತ್ತಿದವು. ಅಲ್ಲಿನ ಸಾಹಿತ್ಯದ ಪ್ರಭಾವದಿಂದ ಹಿಂದೂದೇಶದಲ್ಲಿ ಅವುಗಳ ಪ್ರಾದುರ್ಭಾವವಾಯಿತು.

'ಸಣ್ಣ ಕತೆ'ಯೆಂಬುದು ವಾರಿಭಾಷಿಕ ಶಬ್ದ. ಸಣ್ಣ ದೆಂದರೆ 'ಕತೆ'ಯ ವಿಸ್ತಾರವನ್ನು ಸೂಚಿಸುವುದಿಲ್ಲ, ಏಕಂದರೆ ಇಂಗ್ಲಿಷಿನಲ್ಲಿನ ಕೆಲವು 'ಕತೆ'ಗಳು ನೂರು ನೂರೈವತ್ತು ಪುಟಗಳಷ್ಟು ವಿಸ್ತೃತವಾಗಿವೆ. 'ಕತೆ'ಯೆಂದರೆ ನಾವು ತಿಳಿಯುವ ಕತೆಯಲ್ಲ. ಧ್ರುವನ ಕತೆ, ಅಥವಾ ಕುಚೇಲನ ಕತೆ, ಇವುಗಳು ಸಣ್ಣ ಕತೆಗಳಾಗಲಾರವು. ಏಕಂದರೆ ಕತೆಗಳಲ್ಲಿ ನಾವು ಯಾವನಾದರೂ ವ್ಯಕ್ತಿಯ ಜನ್ಮದಿಂದ ಮರಣ ಪರ್ಯಂತ ವೃತ್ತಾಂತವನ್ನು ಕೇಳುತ್ತೇವೆ ಆದರೆ ಸಣ್ಣ ಕತೆಯು ಯಾವನಾದರೂ ಒಬ್ಬ ವ್ಯಕ್ತಿಯ ಇಡೀ ಜೀವನವಲ್ಲ. ಆ ಜೀವನದಲ್ಲಿನ ಮಹತ್ವಪೂರ್ಣವಾದ ಘಟನೆಯೊಂದನ್ನು ಮಾತ್ರ ಆವರಿಸಿಕೊಂಡಿರುತ್ತದೆ. ಕತೆಯಲ್ಲಿ ಪರಸ್ಪರ ನೆಟ್ಟಗೆ ಸಂಬಂಧವಿಲ್ಲದ ಅನೇಕ ಭಾಗಗಳಿರಬಹುದು. ರಾಮನ ಕತೆಯಲ್ಲಿ ಅಹಲ್ಯೆಯ ವಿಸ್ತಾರವಾದ ವೃತ್ತಾಂತವು ಉಲ್ಲೇಖಿಸಲ್ಪಡಬಹುದು ಆದರೆ ಸಣ್ಣ ಕತೆಯು ಅಖಂಡವಾಗಿರಬೇಕು ಬೇರೆ ಬೇರೆ ಅಂಗಗಳು ಒಂದಕ್ಕೊಂದು ಚೆನ್ನಾಗಿ ಜೋಡಿಸಲ್ಪಟ್ಟು ಓದುಗರ ಮನಸ್ಸಿನ ಮೇಲೆ ಪೂರ್ಣತ್ವದ ಪರಿಣಾಮವನ್ನುಂಟು ಮಾಡಬೇಕು ಕೊನೆಗೆ, ನೈತಿಕ ಉದ್ದೇಶ ಸಾಧನೆಗೋಸ್ಕರ ಅಸ್ವಾಭಾವಿಕವಾದ ಸನ್ನಿವೇಶಗಳು ಅಥವಾ ಸಂಗತಿಗಳು ಕತೆಗಳಲ್ಲಿ ನಿಯೋಜಿಸಲ್ಪಡಬಹುದು. ಆದರೆ, ಸಣ್ಣ ಕತೆಯಲ್ಲಿ, ನೈತಿಕ ಉದ್ದೇಶವು ಮುಂದಿಡಬಹುದಾದರೂ ಮನುಷ್ಯ ಜೀವನದ ಒಂದಂಶವು ಸ್ವಾಭಾವಿಕವಾದ ರೀತಿಯಲ್ಲಿ ಪ್ರತಿಬಿಂಬಿಸಲ್ಪಡಬೇಕು. 'ಕತೆ'ಯು ಎಷ್ಟೇ ಮನೋರಂಜಕವಾಗಿರಲಿ, ಅಸ್ವಾಭಾವಿಕವಾದರೆ ಕಲಾದೃಷ್ಟಿಯಿಂದ ಅದರ ಬೆಲೆಯು ಕಡಿಮೆ

ಕೆಲವು ಲೇಖಕರು ಸಣ್ಣ ಕತೆಯು ಸೂಕ್ಷ್ಮರೂಪದ ಕಾದಂಬರಿಯೆಂದು ಅಭಿಪ್ರಾಯ ಪಡುತ್ತಾರೆ. ಆದರೆ ವಸ್ತುತಃ ಈ ಮತವು ಸರಿಯಲ್ಲ. ಏಕಂದರೆ ಕಾದಂಬರಿಯಲ್ಲಿ ಯಾವುದಾದರೂ ವಿಶೇಷ ಪಾತ್ರಗಳ ಜೀವನ ಮತ್ತು ಅವುಗಳ ವಿಶದವಾದ ವಿವೇಚನೆ ಮಾಡಲ್ಪಡುತ್ತದೆ. ಆದರೆ ಈ ರೀತಿಯ ಪಾತ್ರಗಳ ಜೀವನದ ಸಂಪೂರ್ಣ ಮತ್ತು ಸರ್ವಾಂಗ ಚಿತ್ರಣವನ್ನು ಸಣ್ಣ ಕತೆಯಲ್ಲಿ ನಾವು ಕಾಣಲಾರೆವು. ಅದಕ್ಕೆ ಯಾವನಾದರೂ ವ್ಯಕ್ತಿಯ ಜೀವನದ ವಿಶೇಷ ಘಟನೆಯೊಂದೇ ಮುಖ್ಯವಾದ ವಿಷಯವು. ಕಾದಂಬರಿಯಲ್ಲಿ ಅವಕಾಶವು ತುಂಬಾ ಇದ್ದುದರಿಂದ ಪಾತ್ರಗಳ ವಿಸ್ತಾರವಾದ ಪರಿಚಯಕ್ಕೆ ಬೇಕಾದಷ್ಟು ಎಡೆ ಇದೆ. ಜೀವನದ ಘಟನೆಗಳನ್ನೆಲ್ಲಾ ಒಡಗೂಡಿಸುವುದು ಸುಲಭ. 'ಕತೆ'ಗಾರನು ಈ ಘಟನೆಗಳಲ್ಲಿ ತನಗೆ ಬೇಕಾದುದನ್ನು ಅತ್ಯಂತ ವಿಚಕ್ಷಣತೆಯಿಂದ ಆರಿಸಿಕೊಳ್ಳಬೇಕು. ಅವನ ಕಾರ್ಯಕ್ಷೇತ್ರವು ಬಹಳ ಸಂಕುಚಿತವಾಗಿದೆ. ಒಬ್ಬ ವ್ಯಕ್ತಿಯ ಜೀವನದ 'ವಿಶೇಷವಾದ ಒಂದು ಘಟನೆಯನ್ನು ಪ್ರತಿಬಿಂಬಿಸುವುದು. ಕಾದಂಬರಿ ಜೀವನದ ಸಂಪೂರ್ಣ ಚಿತ್ರವಾಗಿದೆ, ಸಣ್ಣ ಕತೆ ಜೀವನದ ಒಂದು ಚಿಕ್ಕ ಅಂಶದ ಪೂರ್ಣ ಚಿತ್ರ. ಈ ಕಾರಣದಿಂದ 'ಕತೆ'ಗಳಲ್ಲಿ ಜಟಿಲವಾದ ಕಥಾನಕಗಳನ್ನು ತರಲು ಸಾಧ್ಯವಿಲ್ಲ. ಸರಳವಾದ ಕಥಾನಕಗಳ ಉಪಯೋಗವನ್ನೇ ಮಾಡಬೇಕಾಗುತ್ತದೆ ಚರಿತ್ರ ಚಿತ್ರಣದಲ್ಲಂತೂ ಕತೆಗಾರನು ತುಂಬಾ ಜಾಗರೂಕನಾಗಿರಬೇಕು. ಅತಿ ಮಾರ್ಮಿಕವಾದ ರೀತಿಯಲ್ಲಿ ಶಬ್ದಗಳನ್ನೂ, ವಿಷಯಗಳನ್ನೂ ಸಂಗ್ರಹಿಸಿ ತನ್ನ ಮನಸ್ಸಿನಲ್ಲಿದ್ದ ಉದ್ದೇಶವನ್ನು ಚೆನ್ನಾಗಿ ವ್ಯಕ್ತ ಪಡಿಸಬೇಕು

ಸಣ್ಣ ಕತೆಯು ಕತೆಯೂ ಅಲ್ಲ, ಕಾದಂಬರಿಯೂ ಅಲ್ಲವಾದರೆ ಅದು ಬೇರಾವುದಿರಬಹುದು? ಚಿಕಾಗೊ (Chicago) ವಿಶ್ವವಿದ್ಯಾಲಯದ ಜೇಮ್ಸ್ ಡಬ್ಲ್ಯು ವಿನ್‌ರನರು ಅದರ ಲಕ್ಷಣವನ್ನು ಈ ರೀತಿಯಲ್ಲಿ ಕೊಟ್ಟಿರುವರು –

Short story is a representation, in a brief, dramatic form of a turning point in the life of a single character'

ಸಣ್ಣ ಕತೆಯು ಸಂಕ್ಷೇಪವಾದ ರೀತಿಯಲ್ಲಿ ನಾಟಕೀಯವೂ ಆತ್ಯಾ ಅಭಿವ್ಯಕ್ತವಾದ ಯಾವನಾದರೂ ಒಬ್ಬ ವ್ಯಕ್ತಿಯ ಜೀವನದೊಳಗಣ ಮಹತ್ವಪೂರ್ಣವಾದ ಘಟನೆಯು

ಈ ಲಕ್ಷಣದ ಕುರಿತು ತುಸು ವಿಚಾರಿಸೋಣ ಸಣ್ಣ ಕತೆಯು ಒಬ್ಬ ವ್ಯಕ್ತಿಯ ಜೀವನಕ್ಕೆ ಸಂಬಂಧಪಟ್ಟಿದ್ದು ಆದುದರಿಂದ ಹಲವು ವ್ಯಕ್ತಿಗಳ ಜೀವನವು ಅದರಲ್ಲಿ ಒಡಗೂಡಿರಬಾರದು ಒಬ್ಬ ವ್ಯಕ್ತಿಯ ಜೀವನಕ್ಕೆ ಸಂಬಂಧ ಪಟ್ಟಿದಾದರೂ ಅವನ ಇಡೀ ಜೀವನಕ್ಕೆ—ಹುಟ್ಟಿನಿಂದ ಸಾವಿನ ತನಕ ಅಲ್ಲ ಆ ಜೀವನದಲ್ಲಿರುವ ಮಹತ್ವ ಪೂರ್ಣವಾದ ಘಟನೆಯೊಂದನ್ನು ಆರಿಸಿ ಕತೆಗಾರನು ಚಮತ್ಕಾರವಾಗಿ ನಿರ್ಮಿಸುತ್ತಾನೆ. ಈ ವ್ಯಕ್ತಿಯು ಯಾರೇ ಆಗಿರಬಹುದು. ಕಾದಂಬರಿಗಳಲ್ಲಿ ಮತ್ತು ನಾಟಕಗಳಲ್ಲಿ ಚಿತ್ರಿಸಲ್ಪಟ್ಟ ನಾಯಕ ನಾಯಿಕೆಯರನ್ನು ಸಾಮಾನ್ಯ ಜೀವನದಲ್ಲಿ ಎದುರ್ಗೊಳ್ಳುವುದು ದುರ್ಲಭವೇ ಸರಿ. ನಮ್ಮ ಜೀವನವು ಇವುಗಳ ಕಥಾನಕವಾಗುವಷ್ಟು ಯೋಗ್ಯವಿಲ್ಲದಿರಬಹುದು. ಆದರೆ ನಮ್ಮ ಜೀವನದಲ್ಲಿ, ಏಕೆ ಕೊಳಕುಗಲ್ಲಿಗಳಲ್ಲಿ ವಾಸಮಾಡುವ ಕೂಲಿಗಾರರ ಜೀವನದಲ್ಲಿ ಕೂಡ, ಅತ್ಯಂತ ಸುಖ ಅಥವಾ ಅತ್ಯಂತ ದುಃಖವನ್ನು ಅನುಭವಿಸಿದ ಕೆಲವು ಕ್ಷಣಗಳು ಇರಬಹುದು. ಇಂತಹ ಅಲ್ಪ ಕ್ಷಣಗಳೇ ಸಣ್ಣ ಕತೆಯ ಕಥಾನಕವಾಗಬಲ್ಲವು. ಇಂಥಾ ಸನ್ನಿವೇಶಗಳನ್ನು ಸಂಕ್ಷೇಪವಾಗಿ ನಾಟಕರೀತ್ಯಾ ಚಿತ್ರಿಸಬೇಕು. ಸಂಕ್ಷೇಪವಾಗಿರಬೇಕು; ಏಕಂದರೆ ಕ್ಷೇತ್ರವು ಸಂಕುಚಿತವಾಗಿದೆ. ನಾಟಕಕಾರನು ವಿವಿಧ ಸನ್ನಿವೇಶಗಳನ್ನು ಕಲ್ಪಿಸಿ

ಅವುಗಳಲ್ಲಿ ತನ್ನ ಪಾತ್ರಗಳನ್ನು ಚಲಿಸುವಂತೆ ರಚಿಸುತ್ತಾನೆ. ಅವನ ದೃಷ್ಟಿಯು ವಿಶೇಷತಃ ಚರಿತ್ರ ಚಿತ್ರಣದಲ್ಲಿರುವುದರಿಂದ ಮನುಷ್ಯ ಜೀವನದಿಂದ ಉಪಯುಕ್ತವಾದ ವಿಷಯಗಳನ್ನು ಹೆಕ್ಕಿ ತೆಗೆದು ಪಾತ್ರಗಳ ಸ್ವಭಾವವನ್ನು ಪರಿಪುಷ್ಟಿಗೊಳಿಸುತ್ತಾನೆ. ನಾಟಕದ ಕಾರ್ಯ (Action)ವು ಮುಂದುವರಿಯುತ್ತಾ ಪರಾಕಾಷ್ಠೆ (climax)ಯನ್ನು ಏರುತ್ತದೆ. ತದನಂತರ ಉಪಸಂಹಾರವಾಗುತ್ತದೆ. ಕತೆಗಾರನು ಇವೇ ತತ್ವಗಳನ್ನು ಅವಲಂಬಿಸುವುದು ವಿಹಿತವು, ಏಕಂದರೆ ನಾಟಕಕ್ಕೂ ಸಣ್ಣ ಕತೆಗೂ ತುಂಬಾ ಅಂತಸ್ಸಾಮ್ಯವಿದೆ. ನಾಟಕಕಾರನಂತೆ ಕತೆಗಾರನು ಬಹಳ ವಿಚಕ್ಷಣತೆಯಿಂದ ಸನ್ನಿವೇಶಗಳನ್ನು ಕಲ್ಪಿಸಿಕೊಳ್ಳಬೇಕು. ಅವನು 'ಕತೆ'ಯ ಉದ್ದೇಶಕ್ಕೆ ಸಂಬಂಧಿಸದ ಯಾವ ವಿಷಯವನ್ನಾದರೂ ಎತ್ತಿಕೊಂಡು ಪ್ರಯೋಗಿಸಕೂಡದು. ಪ್ರತಿಯೊಂದು ಶಬ್ದವೂ ಪ್ರತಿಯೊಂದು ವಿಷಯವು ಒಂದು ಪಾತ್ರದ ಒಂದು ಮಹತ್ವಪೂರ್ಣವಾದ ಘಟನೆಯನ್ನು' ವಿಕಸಿಸುವಂತೆ ನಿಯೋಜಿಸಲ್ಪಡಬೇಕು. ಇದರಿಂದಲೇ ಕಾರ್ಯದ ಏಕ್ಯವು (Unity of action) ಸಾಧ್ಯವಾಗುವುದು. ಇದರಲ್ಲಿ ಕತೆಗಾರನು ಎಷ್ಟು ಕಲ್ಪನಾಶಕ್ತಿಯನ್ನು ಉಪಯೋಗಿಸಿದರೂ ಸಾಲದು. ನಾಟಕದಂತೆ ಕತೆಯೂ ಪರಾಕಾಷ್ಠೆಯನ್ನು ಹೊಂದಿ ಕೊನೆಗೊಳ್ಳುತ್ತದೆ. ಇಲ್ಲಿ ಮುಖ್ಯವಾದ ವಿಷಯವೇನೆಂದರೆ, ಓದುಗರ ಮನಸ್ಸಿನ ಮೇಲೆ ಏಕತೆಯ ಪರಿಣಾಮ (singleness of impression)ವು ಉಂಟಾದರೆ ಲೇಖಕನು ಕಾರ್ಯಸಾಫಲ್ಯವನ್ನು ಹೊಂದಿದನೆಂದು ತಿಳಿಯಬಹುದು.

'ಪದ್ಮಾಕರ.'

←←→←←

ಪತ್ರಿಕಾ ಪ್ರಪಂಚ.

ಈ ತಿಂಗಳಲ್ಲಿ ಮುಲ್ಕಿಯಿಂದ ''ಭಾರತಿ'' ಎಂಬ ಹೊಸದೊಂದು ಮಾಸಪತ್ರಿಕೆಯು ಹೊರಟಿರುತ್ತದೆ. (ವಾರ್ಷಿಕ ಚಂದಾ ರೂ. ೨-೪-೦.) ನಮ್ಮ ಜಿಲ್ಲೆಯಲ್ಲಿ ಅದೆಷ್ಟೊ ಮಾಸಪತ್ರಿಕೆಗಳು ಹುಟ್ಟಿ ಬೆಳೆದು ಕ್ಷೀಣವಾದುದನ್ನು ಎಣಿಸಿದರೆ, 'ಭಾರತಿ'ಯ ಸಂವಾದಕರ ಧೈರ್ಯ, ಮತ್ತು ಉತ್ಸಾಹಗಳು ಸ್ತುತ್ಯವಾದ ಸಂಗತಿಯೆಂದು ತೋರುತ್ತದೆ. ಈ ಮಾಸಪತ್ರಿಕೆಗೆ ಚಂದಾದಾರರಲ್ಲವೆ, ೧೦ ರೂಪ್ಯಾಗಳನ್ನು ತೆತ್ತ ಅನೇಕ ಪೋಷಕರಿರುವುದರಿಂದ ಇದರ ಜೀವನಕ್ಕೆ ಕುಂದು ಬರಲಾರದು ಎಂದು ನಂಬಿಗೆ. ಶ್ರೀ। ಗೋವಿಂದ ಪೈಯವರ, ''ಕದ್ರಿಯಲ್ಲಿರುವ ಅಲೂಪರದೊಂದು ಲೇಖ''ದಿಂದ ಕದ್ರಿಯ ಲೋಕೇಶ್ವರ ಮೂರ್ತಿಯನ್ನು ಕ್ರಿ. ಶ. ೧೦೬೭ನೆ ನವೆಂಬರ ೨೩ನೇ ಶುಕ್ರವಾರ ಅಲೂಪ ಅರಸರು ಪ್ರತಿಷ್ಠಿಸಿದರೆಂದು ತಿಳಿದುಬರುತ್ತದೆ. ಗೋಪಾಲ ಕೃಷ್ಣನ ''ನಿರುಪಮಾ'' ಎಂಬ ಚಿಕ್ಕ ಕತೆಯೂ ಚೆಲುವಾಗಿದೆ. ಕನ್ನಡ ಭಾಷಾಭಿಮಾನದಿಂದ ಈ ಅಳಿಲುಸೇವೆಯನ್ನು ಕೈಕೊಂಡ ಭಾರತಿಯು ನಮ್ಮ ಜಿಲ್ಲೆಯ ಯುವಕರಲ್ಲಿ ಸಾಹಿತ್ಯ ಅಭಿರುಚಿಯನ್ನು ಹುಟ್ಟಿಸಿ ಅವರು ಬರೆದ ಲೇಖಗಳಿಗೆ ಆಸ್ಪದ ಕೊಟ್ಟು ಅವರಿಗೆ ಉತ್ತೇಜನ ಕೊಡಬಹುದೆಂದು ನಾವು ಅದಕ್ಕೆ ಯಶಸ್ಸನ್ನು ಬಗೆಯುವೆವು.

ಸ್ವದೇಶೀ ಪ್ರಚಾರಕದ ಫೆಬ್ರವರಿ ಸಂಚಿಕೆಯಲ್ಲಿ ಎಸ್. ಮುಕುಂದರಾಯರು ಪ್ರತಿ ಜಿಲ್ಲೆಯ ಅಭಿವೃದ್ಧಿಗೆ ಸೂತ್ರದಾರಿ ಮಂಡಲವನ್ನು ಸ್ಥಾಪಿಸಬೇಕೆಂದು ಬರೆದಿರುತ್ತಾರೆ. ನಮ್ಮ ಜಿಲ್ಲೆಗೊಂದಿದ್ದರೆ ಅದು ''ದಕ್ಷಿಣ ಕನ್ನಡದಲ್ಲಿರುವ ಮಾರ್ಗಗಳಲ್ಲಿ ಯಾವ್ಯಾವನ್ನು ಉತ್ತಮ ರೀತಿಗೆ ತರಬೇಕು. ಹೊಸ ರಸ್ತೆಗಳು ಜಿಲ್ಲೆಯ ಸಂದು ಗೊಂದುಗಳಲ್ಲಿ ಎಷ್ಟು ಬೇಕು, ಕಟ್ಟ ಬೇಕಾದ ಸಂಕಗಳೆಷ್ಟು, ತೆರೆಯ ಬೇಕಾದ ಶಾಲೆಗಳೆಷ್ಟು, ಚಿಕಿತ್ಸಾ ಗೃಹಗಳೆಷ್ಟು, ಯಾವ್ಯಾವ ಕೈಗಾರಿಕೆಗಳಿಗೆ ಇಲ್ಲಿ ಅನುಕೂಲ ವಾತಾವರಣವಿದೆ, ಇವುಗಳ ಉದ್ಭವಕ್ಕೆ ಪ್ರತಿಬಂಧಕಗಳ್ಯಾವುವು, ಎಂದು ಮೊದಲಾದ ಪ್ರಶ್ನೆಗಳನ್ನು ಕೂಲಂಕುಶವಾಗಿ ವಿಚಾರಿಸಿ ಅವುಗಳಲ್ಲಿ ಪ್ರತಿಯೊಂದಕ್ಕೆ ಬೇಕಾಗುವ ದ್ರವ್ಯಾನುಕೂಲ, ಜನಾನುಕೂಲಗಳನ್ನು ಕಂಡುಹಿಡಿದು ಎಲ್ಲವನ್ನೂ ಹತ್ತು ಯಾ ಇಪ್ಪತ್ತು ವರ್ಷಗಳೊಳಗೆ ಪೂರೈಸುವಂತೆ ಕಾರ್ಯಕ್ರಮವನ್ನು ತಯಾರಿಸಬೇಕು. ಅನಂತರ ಆ ಕಾರ್ಯಕ್ರಮವು ನಿರಾಂತಕವಾಗಿ ತಜ್ಞರ ಮೇಲ್ವಿಚಾರದಲ್ಲೆ ನಡೆಯುವಂತೆ ಏರ್ಪಾಡಾಗಬೇಕು.''

ಬಾಲಚಂದ್ರದ ೯ನೇ ಸಂಚಿಕೆಯಲ್ಲಿ (೧-೨-೧೯೩೩) ಶಾಂತಿನಿಕೇತನದ ವಿಷಯ ಚೆಲುವಾದೊಂದು ಲೇಖವಿದೆ. ಹುಡುಗರೂ ಉಪಾಧ್ಯಾಯರೂ ಒಂದೇ ಸ್ಥಳದಲ್ಲಿ ವಾಸಿಸಿ ತಮಗೆ ಬೇಕಾದ ಸಲಹೆಗಳನ್ನು ಒದಗಿಸಿಕೊಳ್ಳುವುದೇ ಅಲ್ಲಿಯ ವಿಚಿತ್ರವಾದ ಸಂಗತಿಯಾ-

ಹರಿಜನ ಬಂಧು.

['ಹರಿಜನ' ಪತ್ರಿಕೆಗೆ ಕವೀಂದ್ರ ಠಾಕೂರರು ದಿವಂಗತ ಸತ್ಯೇಂದ್ರನಾಥ ದತ್ತರ 'ತೋಟು' ಎಂಬ ಪದ್ಯದ ಗದ್ಯಾನುವಾದ ಬರೆದಿರುವರು. ಅದರ ಭಾಷಾನುವಾದವಿದು.]

೧. ಮುಟ್ಟಿದರೆ ಮುನಿವರೇತಕೆ, ಮುಟ್ಟಲೀಸದೆಯೆ
ಕೆಟ್ಟ ಹೆಸರಿಟ್ಟು ಬಲು ದೂರ ಕಟ್ಟುವರೇಕೆ?
ನೀನಿಡುವ ಹಜ್ಜೆಯಲೆ ಅಡಿಯಿಟ್ಟು ಬೆಂಬಳಿಸಿ
ತಾನೆ ಸರ್ಮಿಲತೆ ಸಹಚಾರಿಣಿಯು ಬರುತಿರಲು,
ಭೂಮಿಯಿದು ಸುಕ್ಷೇಮಧಾಮ ಮಾನವಗಾಗೆ
ನೀ ಮಾನವಂ ತೊರೆದು ಮಾನವರ ಬದುಕಿಸುವೆ!

೨. 'ಕರ್ತವ್ಯ ಕರ್ಮದಲಿ ಹೇಸುಗೆ ಹೊಲೆಗಳಿಲ್ಲ'
ಈ ಸತ್ಯ ತತ್ವ ಪ್ರಚಾರಕನು ನೀನಹುದು.
ಸನ್ನ ಸೇವೆಯ ಗಂಗೆಪಾವನ ತರಂಗಿಣಿಯು
ಹೀನ ಹೊಲೆಗಳ ತೊಯ್ದು ತಾನೆ ಸರ್ಮಿಲವಿಹುದು?
ಒಂದೊಮ್ಮೆ ವಿಶ್ವಾವಮೃತ್ಯು ಹಾಲಾಹಲವ
ಕಂಧರದಿ ಧರಿಸಿ, ಹರ ಜೀವಿಗಳ ಪೊರೆದರೇನ್?
ನಿತ್ಯವೂ ನೀನದೇ ದಿವ್ಯಾನುರಾಗದಿಂ
ಸುತ್ತಿರುವ ಹೇಯ ವಿಷಮೃತ್ಯು ಪರಿಹರಿಸುತಿಹೆ'

೩. ನಿಂದೆ ತುಚ್ಛೀಕಾರ ಪಂಚಾಗ್ನಿ ಬಳಸಿರಲು,
ಬೆಂದ ಸೇವಾಸಕ್ತನೆಂತದೇ ಮಾನವನ
ಪ್ರೇಮದಿಂದಾಜನ್ಮ ಸೇವೆಗೈವಾ ರೀತಿ–
ನೇಮ ಬೋಧಿಸೆ ಕರ್ಮವೀರ ಸಖ, ಬಾ! ಬಾ!

←←→←←

ಇದೆ. "ಶಾಲೆಯಲ್ಲಿ ಪ್ರತಿದಿನ ಬೆಳಿಗ್ಗೆ, ಸಾಯಂಕಾಲ, ಧ್ಯಾನ ಮತ್ತು ಪ್ರಾರ್ಥನೆಗೆ ನಿಯಮಿತ ಸಮಯವಿದೆ. ಶಾಲೆಯಲ್ಲಿಯೂ ವಿವಿಧ ಗ್ರಾಮಗಳಲ್ಲಿಯೂ ಆರೋಗ್ಯ ರಕ್ಷಣೆ, ಕೃಷಿಯ ಸುಧಾರಣೆ, ಬೆಂಕಿಯ ಹಾವಳಿಯ ತಡೆ, ಇವುಗಳೆಲ್ಲಾ ಆಧುನಿಕ ರೀತಿಯ ಸಮಾಜ ಸೇವೆಯ ಪ್ರಯತ್ನಗಳಾಗಿವೆ. ...ಈ ಶಾಲೆಯಲ್ಲಿ ಹಲವು ಹಸ್ತಪ್ರತಿಯ ಮಾಸಿಕ ಪತ್ರಿಕೆಗಳು ಇವೆ. ಮತ್ತು ಇವುಗಳಿಗೆ ಅಗತ್ಯವಿರುವ ಚಿತ್ರಗಳು ವಿದ್ಯಾರ್ಥಿಗಳಿಂದಲೇ ತಯಾರಾಗುತ್ತಿವೆ" ಹುಡುಗರು ಬೆಳಿಗ್ಗೆ ಎದ್ದು ದೇವಪ್ರಾರ್ಥನೆ ಮಾಡುವರು. "ಅನಂತರ ಬೆಳಿಗ್ಗೆ ೧೦-೩೦ ಗಂಟೆಯ ವರೆಗೆ ಶಿಕ್ಷಣ ಕಾರ್ಯವು ನಡೆಯುತ್ತದೆ. ಕ್ಲಾಸು ಕೋಣೆಗಳು ಪ್ರತ್ಯೇಕವಿಲ್ಲ ಮರಗಳ ನೆರಳಲ್ಲಿ ಉಪಾಧ್ಯಾಯರೊಂದಿಗೆ ಎಂಟು ಹತ್ತು ಮಕ್ಕಳು ಕುಳಿತುಕೊಳ್ಳುತ್ತಾರೆ ಸಾರ ಪ್ರವಚನಗಳು ಸಂಭಾಷಣೆಯ ಮೂಲಕವೆ ನಡೆಯುತ್ತವೆ ಮಧ್ಯಾಹ್ನದ ನಂತರ ಮಾನಸಿಕ ಶಿಕ್ಷಣವೇ ಇಲ್ಲ"—ರಾತ್ರಿಯಲ್ಲಿ ಬಗೆ ಬಗೆಯ ಕತೆಗಳು, ಚಿಕ್ಕ ನಾಟಕಗಳ ಅಭಿನಯ, ಟಾಗೂರರು ಮಾಡಿದ ಕೀರ್ತನೆಗಳನ್ನು ಹಾಡುವುದು ಇವೆ ಕೆಲಸಗಳು ದಾತ್ರಿಯರ ತನಕ ನಡೆಯುವುವು.

ಫೆಬ್ರವರಿಯ **ಜಯಕರ್ನಾಟಕದಲ್ಲಿ** ಲಂಡನಿನ "ಚಿತ್ರ ಗುಪ್ತರು." ಗಾಂಧಿಯವರು ಲಂಡನಿನಲ್ಲಿ ಉಳಿಕೊಂಡ ಕಿಂಗ್ಸ್ಲೆ ಹೋಲಿನ ವಿಷಯವಾಗಿ ಓದತಕ್ಕದಾದ ಲೇಖನವನ್ನು ಬರೆದಿರುತ್ತಾರೆ. ವಿಜ್ಞಾನ ಸೂರ್ಯನೆಂಬ ಕಾವ್ಯದಲ್ಲಿ ಬೇಂದ್ರೆಯವರು

"ಹೊಟ್ಟೆಯೇ ಪೊಟ್ಟ ಮೊದಲು ಚಿಂತೆಯು
ಹೊಟ್ಟೆಯಲ್ಲಿ ಬಂದವರ ಚಿಂತೆಯು,
ಬೆನ್ನು ಬಿದ್ದು ಬಂದವರ ಚಿಂತೆಯು
ಬೆನ್ನು ಹಿಡಿದ ವಿಧಿ ಬಿಡದ ಚಿಂತೆಯು,
ಕೈಯ ಹಿಡಿದು ಬಂದವಳ ಚಿಂತೆಯು
ಕೈಯ್ಯ ಹಿಡಿವರಾರೆಂಬ ಚಿಂತೆಯು,

ಎಂದು ಮೊದಲಾಗಿ ಜನರಿಗೆ ಚಿಂತೆ ಯಾವದಿರುವುದು ಎಂದು ತಿಳಿಸಿರುವರು ಅದೇ ಪತ್ರಿಕೆಯಲ್ಲಿ ಗಣಪತಿರಾವ್ ಐಗಳರವರ 'ಗೋವೆಯ ರಿಕಾರ್ಡು, ಕರ್ನಾಟಕ ಇತಿಹಾಸವೂ" ಎಂಬ ಲೇಖನವಿದೆ.

ಇದೇ ತಿಂಗಳ **ಸುಬೋಧದಲ್ಲಿ** ಕುಂದಾಪುರ ಕರ್ನಾಟಕ ಪಂಡಿತರಾದ ಐ. ಶಿವರಾಮಯ್ಯನವರ "ವಿದ್ಯಾರಣ್ಯರೂ ವಿದ್ಯಾಶಂಕರಾಲಯವೂ" ಎಂಬ ಲೇಖನವು ಬಂದಿರುತ್ತದೆ ಶ್ರೀ। ಪುರಂದರ ದಾಸರ ವಿಷಯ, "ಅವರ ಜೀವನಚರಿತ್ರೆಯಲ್ಲಿ ನಮಗೆ ಕಂಡು ಬರುವ ಮೊದಲನೆಯ ವಿಷಯದೆಂದರೆ ಅವರ ನಡೆನುಡಿಗಳಲ್ಲಿ ಭಿನ್ನತೆ ಎರಡನೆಯದು ಅವರ ಸಮಚಿತ್ತತೆ...ಮೂರನೆಯದು ಸರ್ವರಲ್ಲಿಯೂ ಸಹಾನುಭೂತಿ...ಆದರೂ ಅವರು ಡಾಂಭಿಕರನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸುತ್ತಿದ್ದರು. ಇದು ಅವರ ನಾಲ್ಕನೆಯ ಗುಣ." ಇಂತಹ ದಾಸರು ವ್ಯತನಾಮಗಳೆಂದು ನಾವು ಎಣಿಸಬಾರದು. "ಕರ್ನಾಟಕ ಸಾಹಿತ್ಯ ಪರಿಷತ್ತಿನವರು ದಾಸ ಸಾಹಿತ್ಯದ ಜೀರ್ಣೋದ್ಧಾರಕ್ಕಾಗಿ ಯಾವ ಪ್ರಯತ್ನವನ್ನು ಮಾಡದೆ ತಟಸ್ಥರಾಗಿರುವುದಕ್ಕಾಗಿ ಮರುಗಬೇಕಾಗಿದೆ" ಎಂದು "ಅಹೊಬಲ"ರು ದುಃಖಪಡುತ್ತಾರೆ.

ಆ ಗ ದೆ ? —

ಎದೆಯು ಮರಳು ಕಾಡಿನಂತೆ
ಕಾದು ಹೋಗಿದೆ!
ಮಳೆಯದೊಂದು ಹನಿಯು ಕೂಡ
ಇಲ್ಲದಾಗಿದೆ!

ನೀಲ ನಭದಿ ಬಂದು ನಿಂದು
ಕರುಣ ಜಲದ ವರ್ಷಗೊಂಡು
ಒಡಲ ಮರಳು ಕಾಡ ನಿನೆಯ'
ತಣಿಸಲಾಗದೆ?

ಒಡಲ ಕಡಲಿನೆಲ್ಲ ನೀರು
ಇಳಿದು ಹೋಗಿದ'
ತೆರೆಗಳೆಲ್ಲ ಘೋಷವಿಂದು
ಅಳಿದು ಹೋಗಿದ'

ನಿನ್ನ ಭಕುತಿ ಚಂದ್ರ ಮೂಡಿ,
ಕಡಲೆ ತನ್ನ ಸೊದೆಯನೂಡಿ
ಗಾನಲಹರಿಯೇಳುವಂತೆ
ಮಾಡಲಾಗದೆ?

ಹೃದಯವಿಂತೆಯಿಂದು, ದೇವ,
ಮೌನವಾಗಿದೆ'
ಗಾನದೊಂದು ತಾನ ಕೂಡ
ಕೇಳದಾಗಿದೆ

ನಿನ್ನ ಬೆರಳಿನಿಂದ, ದೇವ
ಒಂದೆ ಆಘಾತ ಗೈವ
ಕರುಣೆದೋರಿ ವೀಣೆಯನ್ನು
ನುಡಿಸಲಾಗದೆ?

ವೆಂಕಟರಮಣಾಚಾರ್ಯ,
(ಪುಷ್ಕರಮಂಡಲಿ ಉಡುಪಿ)

+—+—+—+—+

ಜನವರಿಯ "**ಸರಸ್ವತಿ**"ಯಲ್ಲಿ ಕಳೆದ ಜನಸಿಯ ವಿಷಯ ದುಃಖವನ್ನು ಅಂದವಾಗಿ ಹಾಡಿನಲ್ಲಿ ಕೆ ಈಶ್ವರರವರು ಹೊರಸೂಸಿದ್ದಾರೆ.

"ಓಡಿಯಾಡಿ ಬೀಳೆ ನಾನು
ಓಡಿ ಬಂದು ಎತ್ತಿ ನೀನು
"ಕಂದ ನಿನಗೆ ತಾಗಿತೆ?"
ಎಂದ ಮಾತು ಹೋಯಿತೆ?"

ಜಿ. ಆರ್. ಎಸ್.

ನಾಡಿನ ಪ್ರಸಿದ್ಧ ಪುರುಷರು. ೧.

ಶ್ರೀ. ಟಿ. ಪಿ. ಕೈಲಾಸಂ.

(ಲೇಖಕ: ಶ್ರೀ। ಕೊ. ಶಿ. ಕಾರಂತರು.)

ಲೇಖನ ಮಾಲೆಯನ್ನು ತೊಡಗುವಾಗ ಗೆಳೆಯರಾದ ಕೈಲಾಸಂರಿಂದ ತೊಡಗುತ್ತೇನೆ. ಅವರು ಕೇವಲ—ಒಂದನೇ ನಂಬರಿನ ಅಸಾಮಿಯೆಂದಲ್ಲ. ನಾನು ನಾಲ್ಕು ಬೈದರೂ ನಗುತ್ತ ಕೇಳಿ ಬಲ್ಲ ಸಹೃದಯರು; ಉದಾರಿಗಳು—ಎಂದು.

ಐದಾರು ವರುಷಗಳಾದುವು ನನಗೆ ಕೈಲಾಸನುರ ಪರಿಚಯವಾಗಿ. ಧಾರವಾಡಕ್ಕೆ ಹೋದಾಗ ಅಪರದ್ದೊಂದು ವಿನೋದಕೂಟ ಬಂದಿತ್ತು. ಅದರ ಮೊದಲೇ ಅವರ "ಪೊಲಿಕಿಟ್ಟಿ" ಓದಿದ್ದೆ. "ಟೊಳ್ಳು ಗಟ್ಟಿ"ಯೂ ಸಾಹಿತ್ಯ ಸಾಮ್ರಾಜ್ಯದಲ್ಲಿ ಆಗ ಇನ್‌ಫ್ಲೂಯೆಂಜಾ—ದಂತೆ ಹರಡಿತ್ತು. ಇದರಿಂದ ಅವರನ್ನು ಕಾಣುವ ತವುರ ನನಗೆ. ಅವರನ್ನು ನೋಡುವುದಕ್ಕೆಂದು ಅವರ ನಾಟಕಕ್ಕೆ ಹೋದೆ. ನಾಟಕದ ಹೆಸರಿನಲ್ಲಿ ಮೂರು ನಾಲ್ಕು ಪ್ರಹಸನಗಳಾಗಿದ್ದುವು. ಸರ್ವತ್ರ ಕೈಲಾಸನುರಿದ್ದರು ನರದೆಯೆಳೆಯುವಲ್ಲಿಂದ—ಬಣ್ಣ ಉಜ್ಜುವ ವರೆಗೆ. ಅವರ ನಟನೆ, ಹಾಸ್ಯ, ಗಾಯನ—ಎಲ್ಲಾ ಕೇಳಿದೆ, ಕಂಡೆ. ಹಾಸ್ಯ ಕೆಲವು ಸಾರಿ ಬಲು ದಪ್ಪವಾಗಿ ಕಂಡಿತು. ಮುಖದಲ್ಲಿ ಭಾವಗಳು ಕುಣಿಯುವಂತೆ ಕಂಡಿತು. ಮುಖಕ್ಕೆ ಅನುಕೂಲವಾದ ಮೈ ಬರಲಿಲ್ಲವೆಂದೂ ಅನಿಸಿತು.

ತಿರುಗಿ ಕಾಣುವ ಆಸೆಯಾಗಿ ಅವರ ಬಿಡಾರಕ್ಕೆ ಹೋದೆ. ಆಗ ಸುತ್ತಲಿನ ಕದ ಮುಚ್ಚಿ, ಕಂಬಳಿ ಹೊದ್ದು, ಚಾ ಕುಡಿಕೆಯೊಂದನ್ನು ಬಳಿಯಲ್ಲಿರಿಸಿಕೊಂಡು, ಊದುಬತ್ತಿಯೆಳೆಯುತ್ತ, ನುಲಗಿದಲ್ಲಿಂದಲೇ—ತನ್ನ ನಾಟಕ ಸ್ಫೂರ್ತಿಯನ್ನು, ಹೊರದಿಸಿ ಶಿಷ್ಯರಿಂದ ಬರೆಯಿಸುತ್ತಿದ್ದಂತೆ ಕಂಡ ನೆನವು. ಅವರೊಡನೆ ನನಗೆ ಹೆಚ್ಚಿನ ಮಾತು ಕಥೆ ಆಗಲಿಲ್ಲ. ಅವರ ಅವತಾರವನ್ನು ಕಂಡು, ಮಲೇರಿಯಾ ಅಂಟಿರಬೇಕೆಂದು ತಿಳಿದೆ. ಆದರೆ ಹೊರಗೆ ಬಂದ ಮೇಲೆ ನನ್ನನ್ನು ಕರೆದೊಯ್ದ ಗೆಳೆಯರೆಂದರು—'ಭೂವತಿಯ ರೀತಿಯೇ ಹಾಗೆ'—ಎಂದು. "ಇದು ಎಂಥಾ ಪ್ರಾಣಿ?"—ಎಂದಂದುಕೊಂಡು ಮನೆಗೆ ಬಂದೆ.

ವ್ಯಕ್ತಿಯೇಸೋ ವಿಚಿತ್ರವಾಗಿ ಕಾಣಿಸಿತು. ಆದರೆ ಬೇರೆ ಎಷ್ಟೋ ಮಂದಿ ಅವರನ್ನು ಕುರಿತಾಗಿ 'ವಿಲಾಯತಿಯಿಂದ ಮರಳಿ ಬಂದ ಸೀತೆಗೆಟ್ಟ ಸರಕು' ಎಂದಿದ್ದರು. ಅದೇ ದುರಭಿಮಾನದಿಂದ ನಾನೂ ದಿನ ಕಳೆದೆ.

ಇದಾದ ಎಷ್ಟೆಷ್ಟೋ ಸಮಯದ ನಂತರ ನನಗೆ ತಿರಿಗಿ ಅವರ ನಿಕಟ ಪರಿಚಯವಾಯಿತು. ಮಂಗಳೂರಿಗೇ ಬಂದು ಕೆಲವು ದಿನ ನಮ್ಮೊಡನಿದ್ದರು. ಅನುರೊಡನೆ, ಎಲ್ಲಾ ದಿನ, ಎಲ್ಲಾ ಸಮಯ ನಾನಿರಲಿಲ್ಲ. ಇದ್ದರೆ ಸಂತೋಷವಾಗುತ್ತಿತ್ತೋ ಏನೋ. ಆದರೆ ಅವರಂತೆ ನಾನು—ಸಿರುದ್ಯೋಗಿ—ಯಾಗಿರಲಿಲ್ಲ. ಅವರ ಜತೆಯಲ್ಲಿ ಇರುವುದು ಕಷ್ಟ. ಇರಬೇಕಾದರೆ ಸೂರ್ಯೋದಯ ಸಂಜೆಗೆಂದೂ, ಅಸ್ತಮಯ ಬೆಳಿಗ್ಗೆಂದೂ ತಿಳಿಯ ಬೇಕಾದೀತು. ಶಿಷ್ಟಾಚಾರ, ಶಿಸ್ತು ವ್ಯವಸ್ಥೆ—ಇವುಗಳು ಕೈಲಾಸನುರ ಕೈಲಾಸದಲ್ಲಿ ಕಾಣಿಸುವುದಿಲ್ಲ.

ಅವರ ಆಫೀಸುಖಾನೆ—ಉಡುಗೆ ತೊಡುಗೆ—ಇತ್ಯಾದಿಗಳನ್ನು ಕಂಡರೆ, ಅಲ್ಲಿ, ಅವರು, ಉಸಿರಾಟ ಮಾಡುವುದು ಹೇಗೆ ಎಂದು ಕಾಣಬೇಕು. ಆದರೆ ಕೈಲಾಸನುರಿಗೆ ಆ ಚಿಂತೆ ಭೀತಿಗಳಿಲ್ಲ. ನುಲಗಿದರೆ ಏಳುವ ಉದ್ದೇಶವನ್ನೂ ಅವರು ಇಟ್ಟುಕೊಳ್ಳುವವರಲ್ಲ. ಊಟದ ಚಿಂತೆಯೂ ಅವರಿಗೆ ಬಹಳವಿಲ್ಲ. ಮುಖ್ಯ, ನಿನ್ನೆ ಮೊನ್ನೆ ಮಾಡಿದ ಕಾಫಿಯನ್ನು, ಒಂದು ತುಂಡು ಐಸ್ ಹಾಕಿ—ಅವರ ಬಳಿ ಇರಿಸಿ, ಸಿಗರೆಟಿನ ಡಬ್ಬಿಗಳನ್ನು ಬಳಿಯಲ್ಲೇ ತಂದಿಟ್ಟ ಅವರು ತೃಪ್ತರು. ಸಾಧುಗಳಿಗೆ ಗಾಂಜಾ ಇದ್ದಂತೆ ಅವರ ವ್ಯಕ್ತಿಗೆ ಅವು ಅನ್ನ.

ಒಂದೊಂದು ಸಾರಿ, ಇಂಥ 'ಮೃಗ'ವನ್ನು ಕಂಡು ನನಗೂ ಅನಿಸುತಿತ್ತು—ಈ ವಿದುಳಿನಿಂದ ಕೊಳೆಯಲ್ಲದೆ ಬೇರೇನು ಬಂದೀತು—ಎಂದು. ಆದರೆ ತನ್ನ ವಿಚಿತ್ರ ರೀತಿಗೆ ಸರಿಯಾದ ಬುದ್ಧಿ ಶಕ್ತಿ ಅವರದು. ಮಾತನಾಡಲು ತೊಡಗಿದರೆ, ಆಡುತ್ತಲೇ ಇರುವುದು ಅವರ ರೂಢಿ. ಮಾತಿನಲ್ಲಿ ತುಂಬಾ ಹಾಸ್ಯ. ನಗದವರನ್ನು ನಗಿಸುವ ಶಕ್ತಿ ಆ ಮಾತುಗಳಲ್ಲಿದೆ. ಕೆಲವು ಸಾರಿ, ಮಾತಿನ ಮಳೆಯಲ್ಲಿ ಉಪನ್ಯಾಸ ತೊಡಗಲೂ ಬಹುದು. ಆದರೆ ಉಪನ್ಯಾಸ ಕೊಡಬೇಕೆಂದು ಕರೆದರೆ, ಹರಟೆ ಹೊಡೆದು ಹೊರಟೇ ಹೋಗಲೂ ಬಹುದು. ಅವರನ್ನು ನಂಬಿ ಇಂಥದೇ ಬೇಕೆಂದು ಹೇಳಿ ಅದನ್ನೇ ದೊರಕಿಸಿಕೊಳ್ಳುವುದು ಹಿರಿಯರ ಪುಣ್ಯ ಬಲದಿಂದಲೇ ಸರಿ.

ಒಮ್ಮೆ ಅವರಿಗೊಂದು ಆಮಂತ್ರಣ ಬಂದಿತು. ಒಬ್ಬರು ಗ್ರಹಸ್ಥರೊಡನೆ, ನೂರು ಘಂಟೆಗೆ ಬರಲು ಒಪ್ಪಿದರು; ಐದಕ್ಕೆ ಎದ್ದರು, ಆರಕ್ಕೆ ಹೊರಟರು—ಏಳಕ್ಕೆ ಮುಟ್ಟಿದರು. ಇಷ್ಟೆಲ್ಲಾ ಎಚ್ಚರಿಸಿ ಎಚ್ಚರಿಸಿ ದಣಿದ ಬಳಿಕ.

ಆದರೆ ಬುದ್ಧಿ ಹೊರಟರೆ ಅಪ್ರತಿಮವಾಗಿ ಮಾತನಾಡುವರು. ನಟನೆಗೆದ್ದರೂ ಹಾಗೆಯೇ. ವಿನುರ್ಶೆ ಮಾಡಲು ತೊಡಗಿದರೂ ಹಾಗೆಯೇ. ಅವರ ವಿಮರ್ಶೆಗಳಲ್ಲಿ ವಿಶೇಷವಾದ ಅಳವಿದೆ. ಕೆಲವು ಸಾರಿ, ಉದಾಸೀನತೆಯಿಂದೆಂದು ತೋರುವಂತೆ ಆಡಿದ ಒಂದು ಶಬ್ದ ನನ್ನು ಒಡೆದು ನೋಡಲು ನಮಗೆ ನಾಲ್ಕು ದಿನ ಬೇಕಾದೀತು. ಅವರ ಸೂಕ್ಷ್ಮ ಹಾಸ್ಯವನ್ನು ಇಂದು ಕೇಳಿ, ನಾಳೆ ನಗುವವರು ಎಷ್ಟೋ ಮಂದಿ.

ಅವರ ವಿಚಾರಶಕ್ತಿಯೂ ಅದ್ಭುತವಾದಂತೆ, ವಿಚಿತ್ರವೂ ಅಹುದು. ಎಲ್ಲರಂತೆ ನೇರಾಗಿ ನಿಂತು, ನೆಟ್ಟಗೆ ಕಣ್ಣನ್ನು ಬಿಡಿಸಿ ಕಾಣುವ ರೂಢಿ ಅವರದಲ್ಲ. ನಾವು ನಡು ರಸ್ತೆಯಿಂದ ನೋಡುವೆವಾದರೆ ಅವರು ಮರದ ತುದಿಯ ಮೇಲೆ, ತಲೆಕೆಳಗಾಗಿ ನಿಂತು ಅರೆಗಣ್ಣಿನಿಂದ ಕಾಣುವರು. ದನದ ಹಿಂದಿರುವ ಬಾಲದ ಚನರಿ, ಸೊಳ್ಳೆಗಳನ್ನೋಡಿಸಲು ಎಂದು ನಮ್ಮ ಕಣ್ಣಿಗೆ ಕಂಡರೆ, ಅದು ತನ್ನ ಹಾದಿ ಗುಡಿಸುವ ಕಸಬರಿಗೆ—ಎಂದು ಅವರು ಅಂದಾರು. ದನದ ಗಡ್ಡವೆನ್ನೆಲೂ ಅಂಜುವವರಲ್ಲ.

ಅವರ ಗ್ರಂಥಗಳು ಎಷ್ಟೋ ಬಂದಿವೆ. ಕೆಲವು ಅಚ್ಚಾಗಿಯೂ, ಕೆಲವು ಅಚ್ಚಿನಲ್ಲೂ ಕೆಲವು ಕೇವಲ ಅವರ ಮಿದುಳಿನಲ್ಲೂ ಇವೆ. ನನ್ನದೊಂದು "ಕರ್ಣ ನಾಟಕ"ವಿದೆಯೆಂದರೆ 'ಎಲ್ಲಿದೆ ಅದರ ಪ್ರತಿ'—ಎಂದು ನಾವು ಅವರನ್ನು ಕೇಳಬಹುದು. ಅವರು ನಾಟಕವನ್ನು ಅಲ್ಲೇ ತಾಸೆರಡು ತಾಸಿನ ವರೆಗೆ ನಾಲಿಗೆಯಿಂದಲೇ ಸುರುವಿಬಿಡಲೂ ಬಹುದು. ಅವರ ಬರಹಗಳೆಲ್ಲ ತುಂಬಿರುವುದು ಅವರ ಹಣೆಯಲ್ಲಿ. ಅವರ ಈ ವಿಚಿತ್ರ ರೀತಿಯಿಂದಾಗಿ, ಅವರ ಉತ್ತಮ ಗ್ರಂಥಗಳು ಇನ್ನೂ ಮುದ್ರಣಕ್ಕೆ (ಬರಹಕ್ಕೂ) ಬಂದಿಲ್ಲ. ಅವರ ಇಂಗ್ಲಿಷ್ ನಾಟಕಗಳು ತೀರ ಮೇಲ್ತರದುವು. ಪ್ರೌಢವಾದುವು. ಕನ್ನಡ ನಾಟಕಗಳು ಅವುಗಳಷ್ಟು ಪ್ರತಿಭಾ ಸಂಪನ್ನವೆನಿಸುವುದಿಲ್ಲ. ಅಲ್ಲದೆ, ಬರೆದದ್ದು ಬೇರೆಯವರಿಗೆ ಗೊತ್ತಾಗದಂತೆ, ಅಕ್ಷರ ಒಂದಕ್ಕೆ ಎಂಟು ಒತ್ತಕ್ಷರ ಕೊಟ್ಟು ಬರೆಯುವ ಅವರ ವಿಧಾನದಿಂದ, ಆಡುವ, ಶೈಲಿಯಿಂದಾಗಿ, ಅವರ ಕೆಲವು ಕನ್ನಡ ನಾಟಕಗಳು, ಅವರು ಹುಟ್ಟಿದೂರಿನ ನುಟ್ಟಿಗೆ, ಅವರಿರುವ ಕಾಲದ ವರೆಗೆ ಮಾತ್ರ ಉಳಿದುಕೊಂಡಾವು. ಏಕೆ ಅವರು ಹೀಗೆ ಮಾಡುತ್ತಾರೆ ಎಂದರೆ—'ನಾವು ಹಾಗೆ ಮಾಡುತ್ತಲಿಲ್ಲ ಎಂಬುದರಿಂದ' ಎಂದು ಅನ್ನಬೇಕಷ್ಟೆ.

ನಾಟಕ ಭಾಗದಲ್ಲಿ ಅವರ ಪರಿಶ್ರಮ ಬಹಳ ಸ್ವತಃ ಉತ್ತಮ ನಟರು. ಆದರೆ, ಅವರ ತುಸು ಗೂನು ಬೆನ್ನು, ಮುಂದೆ ಬಗ್ಗಿ ನಿಲ್ಲುವ ರೀತಿಗಳು, ಎಷ್ಟೋ ಭೂಮಿಕೆಗಳ ಗಾಂಭೀರ್ಯವನ್ನು ಕೆಡಿಸುತ್ತವೆ. ಆದರೆ, ನಾಟಕ ವಿಮರ್ಶೆಯಲ್ಲಿ ಅವರಿಗೆ ಅಸಾಧಾರಣ ಪರಿಚಯವಿದೆ. ನಾಟಕದ ಟೀಕೆಯನ್ನು, ನಾಟಕ ರೂಪವಾಗಿ—"ಪೆರಡಿ"ಯ ಮಾದರಿಯಲ್ಲಿ ತಕ್ಷಣವೇ ರಚಿಸಿಬಿಡುವುದು ಅವರ ಒಂದು ಅಸಾಧ್ಯವಾದ ಶಕ್ತಿ. ಅವರನ್ನು ಕೆರಳಿಸಿದರೆ ಬರುವ ಸ್ವಾರಸ್ಯವು ಅಧಿಕ. ಅವರ ಜೀವನವೂ ಕೇವಲ ಕಲಾ ಉಪಾಸನೆಯೇ. ನಾತಾನರಣದ ದಾಸರು-ಅವರು ಎಂದೆಷ್ಟೋ ಬಾರಿ ಅನಿಸುತ್ತದೆ. ಅವರ ಸಂಗಾತಿಗಳಂತೆ ಅವರ ಚಟುವಟಿಕೆಗಳ ರೂಪು ಆದುದರಿಂದ, ಅಪೂರ್ವವಾದ ಅವರ ಶಕ್ತಿಯನ್ನು ನಾವು ಅಳೆಯಬೇಕಾದರೆ, ಅವರನ್ನು ಪಳಗಿಸಬಲ್ಲ ಮಾಹುತನೊಬ್ಬನನ್ನು ಕಾಣಬೇಕು. ಮನೆಗೆ ಬಾ ಎಂದರೆ ಬರುವವರಲ್ಲ; ಬಂದರೆ ಹೋಗೆಂದರೂ ಹೋಗುವವರಲ್ಲ. ಬಂದಾಗ ಬಂದರು. ಹೋದಾಗ ಹೋದರು. "ಸ್ವಾಮಿ, ಮನೆಯಲ್ಲಿ ಅಕ್ಕಿ ಇಲ್ಲ" ಎಂದರೆ "ಪರವಾ ಇಲ್ಲ, ತಿಳಿ ಕೊಟ್ಟರೆ ಸಾಕು"—ಎನ್ನುವ ಗ್ರಹಸ್ಥರು. ತನ್ನ ಗೆಳೆಯರ ಮನೆಯಿಂದ ಅವರನ್ನು ಹೊರಡಿಸಲು ಅರ್ಧಚಂದ್ರ ಪ್ರಯೋಗವೇ ಬೇಕು. ಅವರಲ್ಲಿ ಇಷ್ಟೆಲ್ಲ, ಹದಗೆಟ್ಟ ರೀತಿಗಳನ್ನು ಕಂಡರೆ ಸಾಮಾನ್ಯರಿಗೆ ತಲೆಬೇನೆ ಹಿಡಿದೀತು. ಆದರೆ ಅವರ ಪರಿಚಯ ಆಯಿತೆಂದರೆ, ಅವರ ಎಷ್ಟೋ ಹಿಂಸೆಗಳನ್ನೂ ಹವ್ಯಾಸಗಳನ್ನೂ ಸಂತೋಷದಿಂದ ಸಹಿಸುವ ಮನಸ್ಸು ಬರುವುದು.

ಅವರ ವಿಚಾರವಾಗಿ ಉಪಸಂಹಾರದಿಂದ ಇಷ್ಟೆನ್ನಬಹುದು. ಅವರಿಗೆ ನ್ಯಾಯವೂ ಇಲ್ಲ, ನೀತಿಯೂ ಇಲ್ಲ. ಸುಳ್ಳು ಇಲ್ಲ. ಸತ್ಯವೂ ಇಲ್ಲ. ಎಲ್ಲಾ ಇದೆ, ಯಾವುದೂ ಇಲ್ಲ. ಅವರ ಹಿರಿಯರು ಅವರಿಗೆ ಬೇರೆಲ್ಲ ಶಿಕ್ಷಣಗಳನ್ನು ಕೊಡುವ ಬದಲು, ಶಿಷ್ಟನ ಶಿಕ್ಷಣವನ್ನು ಬಲವಾಗಿ ಕೊಟ್ಟಿದ್ದರೆ, (ಆಗ ಉಳಿದೆಲ್ಲಾ ಸಂಗತಿಗಳು ಹೀಗೆಯೇ ಉಳಿದಾವೋ ಎಂದು ನನಗೆ ತಿಳಿಯದು), ಕರ್ಣಾಟಕವು ಅವರಿಂದ ಮುಗಿಸಲಾರದಷ್ಟು ಋಣಕ್ಕೆ ಗುರಿಯಾಗುತ್ತಿತ್ತು.

ಇಷ್ಟೆಲ್ಲ ಬರೆಯುತ್ತಿರುವ ಕಾಲದಲ್ಲಿ, ಅವರು ಕರ್ಣಾಟಕದಲ್ಲಿ ಇರಲಿಕ್ಕಿಲ್ಲ ಎಂಬುದರಿಂದ ತುಂಬಾ ಧೈರ್ಯ. ಇಲ್ಲವಾದರೆ ಏನೆನ್ನುತ್ತಿದ್ದರೋ? ಕಾರಣ—ನಾವು ಬೈದದ್ದು ಅವರಿಗೆ ಬಿರುದಾಗಿ ತೋರುವದು. ಹೊಗಳಿದರೆ "ಡಿಸ್ಕೌಂಟಿನ ಧಾರಣೆ ಹೇಗೆ?" ಎಂದು ಅಲ್ಲೇ ಕೇಳುವ ಚುರುಕುತನವೂ ಇದೆ. ಇಂಥದೊಂದು ವ್ಯಕ್ತಿಯು ಶುದ್ಧ ವಿಚಿತ್ರ ವ್ಯಕ್ತಿಯೆನ್ನಲು ಸಂಶಯವಿದೆಯೇ?

ಮೊದಲಿನ ಮಾತು.

ಈ ಮೇಲಿನ ಶಿರೋನಾನುದಿಂದ ಹೊಸತೊಂದು ಲೇಖನ ಮಾಲೆ ತೊಡಗುವ ಸಾಹಸಕ್ಕೆ ಕೈ ಹಾಕಿರುವೆ. ಮೊದಲಿನ ಬರಹಗಳಾದ "ದೇಹಜ್ಯೋತಿಗಳನ್ನು ಬರೆಯುವಾಗ ನನಗೆ ಅಷ್ಟು ಅಂಜಿಕೆಯಿಲ್ಲವಿತ್ತು. ಆ ಲೇಖನಗಳೆಲ್ಲ ನಮ್ಮಲ್ಲಿನ ಧುರೀಣರ ವ್ಯಂಗ್ಯ ಟೀಕೆಗಳಾಗಿದ್ದುವು. ಆದರೆ ಅವು ಒಬ್ಬೊಬ್ಬನ ಟೀಕೆಯೇ ಆಗಿರದೆ ಒಂದೊಂದು ಪಂಥದಲ್ಲಿ ಪರಿಶ್ರಮಪಡುತ್ತಿರುವ ಸಾಧು, ಅಸಾಧು ವರ್ಗದವರ ಟೀಕೆಯಾಗಿತ್ತು. ಆದರೆ ಇಂಥವರನ್ನು ಎಂದು ಕೈ ತೋರಿಸುವ ಉದ್ದೇಶದಿಂದ ಬರೆದ ಸಂಗತಿಯಲ್ಲ. ವ್ಯಕ್ತಿಗಳನ್ನು ಮರೆತು ವಿಷಯಗಳನ್ನೇ ಕುರಿತು ಬರೆದ ಬರಹಗಳವು. ಆ ಲೇಖನದಲ್ಲಿ ಟೀಕೆಗೆ ಬಲಿಯಾದವರಲ್ಲಿ ನಾನೂ—ಒಬ್ಬನು ಎಂಬುದನ್ನು ಹೇಳುವೆನ

ಈಗ ಮಾತ್ರ "ನಾಡಿನ ಪ್ರಸಿದ್ಧ ಪುರುಷರು" ಎಂಬ ಬರಹಗಳನ್ನು ಬರೆಯುವಾಗ ಅಂಜಿಕೆ ನನಗೆ. ಕಾರಣ, ನಮ್ಮಲ್ಲಿ ಪ್ರಸಿದ್ಧಿಯಿರುವ ವ್ಯಕ್ತಿಗಳನ್ನು ಹೆಸರಿಟ್ಟು ತೋರಿಸಿ ಬರೆಯುವ ಬರಹಗಳವು. ಹೀಗೆ ಬರೆಯುವ ರೂಢಿ, ಕನ್ನಡದಲ್ಲಿ ಕಡಿಮೆ. ಬರೆದೊಡನೆ ಅದನ್ನು ವ್ಯಕ್ತಿದ್ವೇಷವೆಂದು ತಿಳಿಯುವವರು ಬಹಳ. ಹೊಗಳಿದರೆ ನಮಗೆ ಸದಾ ತೃಪ್ತಿ. ತೆಗಳಿದರೆ ಸೈರಣೆ ತಪ್ಪುವುದು. ಆದರೆ ನಿಮರ್ಶೆಯು ಎರಡನ್ನೂ ಕೂಡಿದ ಸಾಹಿತ್ಯ ಅದು ಕನ್ನಡಕ್ಕೆ ಬೇಕು. ಈ ಹಾದಿಯಲ್ಲಿ ಎ ಜಿ ಗಾರ್ಡಿನರ್, ಪೌ ಹೆರಾಲ್ಡ್ ಲಾಸ್ಕಿ ಮೊದಲಾದವರ ಬರಹಗಳನ್ನು ನೋಡಿದರೆ ಅಲ್ಲಿನ ನಿಮರ್ಶಕರ ಧೈರ್ಯ, ನಿಮರ್ಶೆಗೆ ಗುರಿಯಾದವರ ತಾಳ್ಮೆ ಮೊದಲಾದವುಗಳ ಘನತೆಯು ನಮಗೆ ತಿಳಿಯುವುದು.

ಸ್ವದೇಶಾಭಿಮಾನಿಯ ಸಂಪಾದಕರು ನನ್ನನ್ನು ಈ ಕಾರ್ಯಕ್ಕೆ ಪ್ರೇರಿಸುತ್ತಿದ್ದಾರೆ ನಾನೂ ಒಪ್ಪಿಕೊಂಡಿರುವೆ. ಆದರೆ ಹೆಜ್ಜೆ ಹೆಜ್ಜೆಗೂ ಛೀಕಿ ಬಹಳ ಹೆಸರೆತ್ತಿ ಬರೆಯ ಬೇಕಾದೀತೆ? ಸರಸವಾದ ವ್ಯಕ್ತಿಗಳನ್ನು ಕುರಿತು ಅವರನ್ನು "ತಾರೆ"ಗಳೆಂದು ಕರೆಯಬೇಕೆನ್ನುತ್ತಿರುವ "ಸಿನೆಮಾ ಸ್ಟಾರ್ಸ್"—ಎಂಬ ಮಾದರಿಯಲ್ಲಿ ಈ ಚಲಚ್ಚಿತ್ರ ತಾರೆಗಳಲ್ಲಿ ಎಷ್ಟೋ ಜನರು ಹುಟ್ಟು ತಾರೆಗಳು, ಎಷ್ಟೋ ಬೆಟ್ಟು ತಾರೆಗಳು, ಅಂತು ತಾರೆಗಳು ತಾರೆಗಳೇ ಅಂತೆಯೇ ನಾನು ಬರೆಯುವ ವ್ಯಕ್ತಿಗಳನ್ನು ಕುರಿತೂ ಇದೆ. ಯಾರಾರು ಹೇಗೆಂದು ತೂಗಿ ತೂಕ ಹೇಳುವ ಕೆಲಸ ನನ್ನದಲ್ಲ ನನಗಾದ ಪರಿಚಯ, ಸಂಪರ್ಕ, ಸ್ನೇಹ ಸಂಧಾನಗಳಲ್ಲಿ ನನಗುಂಟಾದ ಅಭಿಪ್ರಾಯವನ್ನು ಬರೆಯುವೆನಿಷ್ಟೆ. ಅದು ಕೇವಲ ನನ್ನೊಬ್ಬನ ಅಭಿಪ್ರಾಯ ಈ ಅಭಿಪ್ರಾಯದಲ್ಲಿ ವ್ಯಕ್ತಿದ್ವೇಷ ಲೇಶವೂ ಇಲ್ಲ ಆದುದರಿಂದ ಧೈರ್ಯವಾಗಿ ಬರೆಯುವೆ. ನನ್ನ ತಪ್ಪುಗಳನ್ನು ತೋರಿಸಿದರೆ ತಿದ್ದಿಕೊಳ್ಳಲು ಸದಾ ಸಿದ್ಧನೆ ಈ ನನ್ನ ಸಾಹಸಕ್ಕಾಗಿ ಸಂಬಂಧಪಟ್ಟ ಮಹನೀಯರು ನನ್ನನ್ನು ಕ್ಷಮಿಸಲಿ

ವಿ. ಸೂ. ಓದುಗರ ಸಲುವಾಗಿ, ಈ ಪತ್ರಿಕೆಯ ಸಂಪಾದಕರು, ಪ್ರತಿ ಬಾರಿಯೂ ನನ್ನ ಮುನ್ನುಡಿಯನ್ನು ಹಾಕಿದರೆ ಲೇಸು. ಇಲ್ಲವಾದರೆ ಈ ಲೇಖನ ಮಾಲೆ ಓದುವವರು ಮುನ್ನುಡಿಯನ್ನು ಓದಿದ ಬಳಿಕವೇ ಆ ಕೆಲಸಕ್ಕೆ ಕೈ ಹಚ್ಚುವುದು—ಎಂದು ತಿಳಿಸಿದರೂ ಆಗಬಹುದು.

(ಮಾತು ಮೊದಲಿನದಾದರೂ, ವಾಚಕರು ಮೊದಲಿನ ಮಾತಿನಲ್ಲಿಯೇ ಕಡೆಗಾಣಿಸಬಹುದೆಂಬ ಹೆದರಿಕೆಯಿಂದ ಮೊದಲಿನ ಮಾತನ್ನು ಕಡೆಗೆ ಹಾಕಿಯಿದೆ.)

(ಸಂ. ಸ್ವ.)

ಮಾರುತ.

ನಲಿನಲಿದಾಡುತ,
ಸುಳಿಸುಳಿದೋಡುತ,
ಕಿಲಕಿಲ ನಗುತಲಿ ಬರುತಿಹನು,
ದೇಹಕೆ ತಂಪನು ಕೊಡುತಿಹನು ॥ ೧ ॥

ಹಣ್ಣುಗಳನು ತಾ
ತಿನ್ನದೆ ಉದುರಿಸಿ,
ಕಣ್ಣಿಗೆ ಕಾಣದೆ ಓಡುವನು,
ಸುಯ್ ಸುಯ್ ಎನ್ನುತ ಪಾಡುವನು ॥ ೨ ॥

ಮುಟ್ಟಲಯೋಗ್ಯರ
ಮುಟ್ಟುತ ತಾ ಬಲು
ದಿಟ್ಟತನದಿ ಹಾರಾಡುವನು.
ದೇವಸ್ಥಾನವ ಹೊಗ್ಗುವನು ॥ ೩ ॥

ಹೊಲೆಯನು, ಬ್ರಾಹ್ಮಣ,
ಮಲಿನವು, ಶುಚಿತನ,
ಕಳ ಮೇಲೆನುವಾ ಭೇದವನು
ಖಂಡಿಸಿ ಧರೆಯಲಿ ಮೆರೆಯುವನು ॥ ೪ ॥

ಕೊಂಬೆಯ ಕುಲುಕಿಸಿ
ರೆಂಬೆಯನಲುಕಿಸಿ
ಚುಂಬಿಸಿ ಪುಷ್ಪದ ಅಧರವನು
ಅಂಬರದಲಿ ತಾನೋಡುವನು ॥ ೫ ॥

ಬಿ. ನರಸಪ್ಪ, ಮಂಗಳೂರು.

ವೈನಾಡುಗಳ ಕನ್ನಡಿಗರು

(ಕರ್ನಾಟಕದ ಪ್ರತಿನಿಧಿಗಳಾದ ಶ್ರೀ ಪ್ರಹ್ಲಾದರು ಬರೆದುದು)

ಇಲ್ಲಿ ನಾನು ಕಂಡ ಕೆಲವು ಮಾತುಗಳನ್ನಿಷ್ಟೆ ಬರೆಯಬೇಕೆಂದು ಮಾಡಿರುವೆ. ಕೊಡಗನ್ನು ಕನ್ನಡಿಗರೆಲ್ಲರೂ ಕೇಳಿಬಲ್ಲರು. 'ವೈನಾಡು' ಎಂದರೆಲ್ಲಿ ಎಂದು ಅನೇಕರು—ವಿಶೇಷವಾಗಿ ನಮ್ಮ ಧಾರವಾಡ ಪ್ರಾಂತ್ಯದ ಕನ್ನಡಿಗರು—ಕುತೂಹಲದಿಂದ ಕೇಳಬಹುದಾಗಿದೆ. ಅವರ ಪ್ರಶ್ನೆಗೆ ಮೊದಲೇ ಉತ್ತರ ಕೊಟ್ಟುಬಿಡುವದು ಒಳ್ಳೆಯದು. ಆದ್ದರಿಂದ ಮೊದಲಿಗೆ ವೈನಾಡಿನ ಬಗ್ಗೆ ಬರೆವೆ.

ಮೈಸೂರು ಕೊಡಗುಗಳ ನೈಋತ್ಯಕ್ಕೂ ನೀಲಗಿರಿಯ ಪಶ್ಚಿಮಕ್ಕೂ ಹೊಂದಿಕೊಂಡಿರುವ ಭೂಪ್ರದೇಶವೇ ವೈನಾಡು—ವಯನಾಡು ಎಂದು ಕರೆಯಲ್ಪಡುತ್ತದೆ. ಕೊಡಗಿನ ಕೆಳಗೆ ಬಯ(ಲು) ನಾಡು ಇಲ್ಲಿಂದ ಆರಂಭವಾಗುವದೆಂದು ವಯನಾಡೆಂದು ಹೆಸರುಂಟಾದಂತೆ ತೋರುತ್ತದೆ. ಸಹ್ಯಾದ್ರಿಯೂ ನೀಲಗಿರಿಯೂ ಹೊಂದಿಕೊಳ್ಳುವದು ಇಲ್ಲಿಯೇ. ಮೈಸೂರು ಕೊಡಗು-ನೀಲಗಿರಿ ಜಿಲ್ಲೆಗಳ ಗಡಿಗೂ ವೈನಾಡಿನ ಮುಖ್ಯ ಪಟ್ಟಣಗಳಾದ ಮಾನಂತ್‌ವಾಡಿ—ಕಲ್ಪಟ್ಟಾ ಪಟ್ಟಣಗಳಿಗೂ ೨೦ ಮೈಲಿನ ಅಂತರ ಮಾತ್ರವಿದೆ. ಈ ಪಟ್ಟಣಗಳಿಗೆ ಮೈಸೂರು ಗುಂಡ್ಲು ಪೇಟೆಯ ವರ್ತಕರು ಸಂತೇಗಾಡಿಗಳೊಂದಿಗೆ ಪ್ರತಿವಾರವೂ ಬಂದು ಸರಕುಗಳನ್ನು ಮಾರಿ ಹೋಗುತ್ತಾರೆ. ವೈನಾಡು ಮದರಾಸು ಆಧಿಪತ್ಯಕ್ಕೆ ಸೇರಿದ ಮಲಬಾರ ಎಂಬ ಕೇರಳ ಜಿಲ್ಲೆಯ ಒಂದು ತಾಲೂಕು ಪ್ರದೇಶವಾಗಿದೆ. ಮಲಬಾರದ ಉಳಿದ ಎಲ್ಲ ತಾಲೂಕುಗಳೂ ಘಟ್ಟದ ಕೆಳಗಿದ್ದು ಇದೊಂದೇ ಒಂಟಿಯ ಕಂಠದಂತೆ ಘಟ್ಟದ ಮೇಲಿರುವುದು. ನ್ಯಾಯ್ಯವಾಗಿ ಇದು ಕರ್ನಾಟಕದ ನೈಋತ್ಯದ ಕೊನೆಯ ಗಡಿಯೆಂದು ಹೇಳಬಹುದು. ಬಯ(ಲು)ನಾಡು ಕನ್ನಡ ಶಬ್ದವೇ ಆಗಿದೆ. ಭೌಗೋಲಿಕ ರೀತಿಯಿಂದಲೂ ಚರಿತ್ರೆಯ ದೃಷ್ಟಿಯಿಂದಲೂ ಸಾಂಸ್ಕೃತಿಕ ದೃಷ್ಟಿಯಿಂದಲೂ ಮೈಸೂರು ಕರ್ನಾಟಕಕ್ಕಾಗಲಿ ಕೊಡಗಿಗಾಗಲಿ ಇದು ಸೇರಬೇಕಾದುದು. ಕನ್ನಡಿಗರ ಅಜಾಗರೂಕತೆಯಿಂದಲೂ ದುರ್ದೈವದಿಂದಲೂ ಕೇರಳಕ್ಕೆ ಸೇರಿ ಕರ್ನಾಟಕಕ್ಕೆ ಎರವಾಗಿದೆಯೆಂದು ಹೇಳಬೇಕಾಗುತ್ತದೆ. ಈಗ ಅಲ್ಲಿ ಕನ್ನಡ ಮಾತನಾಡುವವರು ನಾಲ್ಕರಲ್ಲಿ ಒಂದು ಪಾಲೂ ಇಲ್ಲವೋ ಎಂದು ಸಂಶಯ ಬರುತ್ತಿದೆ. ೧೪ನೆಯ ಶತಮಾನದ ಕೊನೆಯಿಂದಲೂ ಕಲ್ಲಿಕೋಟೆಯ ಕೇರಳ ರಾಜನಿಗೂ ಕೊಡುಗು ಮೈಸೂರು ರಾಜರಿಗೂ ವೈನಾಡಿಗಳ ವಿಷಯವಾಗಿ ಕಲಹಗಳಾದ ಸಂಗತಿಗಳು ಚರಿತ್ರೆಯಲ್ಲಿವೆ. ಇತಿಹಾಸ ಕಾಲದ ಮಧ್ಯದಲ್ಲಿ ಕೊಡಗು ಮೈಸೂರನ್ನಾಳಿದ ಕನ್ನಡ ಜೈನ ಅರಸರೇ ಇಲ್ಲಿಯೂ ಆಳಿದರೆಂದು ಕಂಡು ಬರುತ್ತಿದೆ. ಜೈನ ಬಸದಿಗಳ ಕುರುಹುಗಳೂ ಅಲ್ಲಲ್ಲಿ ಇವೆ. ವೈನಾಡಿನಲ್ಲಿ ಈಗ್ಗೆ ಅಚ್ಚ ಗನ್ನಡಿಗರೆಂದರೆ ಅಲ್ಲಿ ಗೌಡರೆಂದು ಕರೆಯಲ್ಪಡುವ ಕ್ಷತ್ರಿಯ ಜಾತಿಯವರೇ ಸರಿ. ಅವರಲ್ಲಿ ಕೆಲವರು ಜೈನ ಸಂಪ್ರದಾಯವನ್ನೂ ಕೆಲವರು ಶ್ರೀಕೃಷ್ಣನ ಸಂಪ್ರದಾಯವನ್ನೂ ಸ್ವೀಕರಿಸಿದ್ದು ಅವರಲ್ಲಿ ಪರಸ್ಪರ ರಕ್ತ ಸಂಬಂಧಾದಿಗಳು ನಡೆಯುತ್ತಿವೆ. ಇವರನ್ನುಳಿದರೆ ದಕ್ಷಿಣ ಕನ್ನಡದಿಂದಲೂ ಕೊಡಗು ಮೈಸೂರುಗಳಿಂದಲೂ ಬಂದ ಕೆಲವು ಬ್ರಾಹ್ಮಣರು—ಕ್ಷತ್ರಿಯರು—ವೈಶ್ಯರು ಹಾಗೂ ಇಲ್ಲಿಯ ಕಾಫಿ ಮತ್ತು ಚಾಯ ತೋಟಗಳಲ್ಲಿ ಕೆಲಸ ಮಾಡುವ ದಕ್ಷಿಣ ಕನ್ನಡದ ಕೂಲಿಕಾರರು ಇವರೆಲ್ಲರು ಕರ್ನಾಟಕದವರು ಇವರೆಲ್ಲರಲ್ಲಿ ಅನುಕೂಲಸ್ಥರೆಂದರೆ ಗೌಡ ಜಾತಿಯವರೇ ಸರಿ. ಮುಂಬಯಿ ಮದರಾಸು ಆಧಿಪತ್ಯಕ್ಕೆ ಸೇರಿದ ಕರ್ನಾಟಕ ಜಿಲ್ಲೆಗಳು ರಾಜಧಾನಿಯಿಂದ ಒಂದು ತುತ್ತತುದಿಗಿದ್ದು ಹಿಂದುಳಿದ ಜಿಲ್ಲೆಗಳೆಂದೆನಿಸಿಕೊಳ್ಳುವಂತೆ ಮಲಬಾರ ಜಿಲ್ಲೆಯಲ್ಲಿ ವೈನಾಡು ತಾಲೂಕಿನ ಸ್ಥಿತಿಯಾಗಿದೆ. ಇಡೀ ತಾಲೂಕಿಗೆ ಒಂದು ಹೈಸ್ಕೂಲಿಲ್ಲ; ಒಳ್ಳೇ ಆಸ್ಪತ್ರೆಯಿಲ್ಲ ಇತ್ಯಾದಿ ಇತ್ಯಾದಿ. ಕನ್ನಡವನ್ನು ಕಲಿಸುವ ಒಂದು ಶಾಲೆಯೂ ಇದ್ದು ವರೆಗೆ ಇರಲಿಲ್ಲ. ಆದರೆ ಅಲ್ಲಿಯ ಗೌಡ ಬಾಂಧವರಿಂದ ಈ ಎರಡು ವರ್ಷಗಳಿಂದ ಎರಡು ಶಾಲೆಗಳಲ್ಲಿ ಕನ್ನಡ ವಾರಂಭವಾದುದು ಕನ್ನಡಿಗರ ಶುಭೋದಯವೇ ಸರಿ. ಇದಕ್ಕೆಲ್ಲಾ ಕಾರಣ ಪುರುಷರೆಂದರೆ ನಮ್ಮ ವೈನಾಡಿನ ಕನ್ನಡ ಗೌಡರಲ್ಲಿ ಮುಖಂಡರೂ ದಾನಿಗಳೂ ಶ್ರೀಮಂತರೂ ದೇಶಾಭಿಮಾನಿಗಳೂ ಧರ್ಮಾಭಿಮಾನಿಗಳು. ಆದ ಶ್ರೀ. ಮರ್ಚಿಯಂಗೂಡಿನ ಕೃಷ್ಣಯ್ಯ ಗೌಡರು. ಇವರು ಅಲ್ಲಿಯ ಕಾಫಿ.ಮೆಣಸುಗಳ ತೋಟಗಳನ್ನುಳ್ಳವರು, ಇವರ ಮನೆತನದವರೇ ಸುಮಾರು ಅರ್ಧ ಲಕ್ಷ ಕಂದಾಯವನ್ನು ಕಟ್ಟುತ್ತಿರು

ತರಂತೆ. ಶ್ರೀ. ಕೃಷ್ಣಯ್ಯಗೌಡರು ಬಾಲ್ಯದಿಂದಲೂ ಸ್ವಾವಲಂಬನ ವೇರ್ಪ ಪರಿಶ್ರಮಗಳಿಂದ ಸಿತ್ರಾರ್ಜಿತವಾದ ಅಲ್ಪ ಆಸ್ತಿಯನ್ನೇ ಇಷ್ಟು ಪ್ರಕಾರವಾಗಿ ಮಾಡಿದ್ದಾರೆ. ಅವರು ನೆರವಾಗದ ಸಾರ್ವ ಜನಿಕ ಕಾರ್ಯಗಳೇ ಇಲ್ಲ ಆ ಭಾಗದಲ್ಲಿ. ಅವರಿಗೀಗ ಅಐ ವರ್ಷಗಳ ವಯಸ್ಸು. (ದೇವರು ಅವರಿಗೆ ಸಂಪೂರ್ಣ ನೂರು ವರ್ಷ ಗಳನ್ನು ಕೊಡಲಿ)--ಅವರು ಜೈನ ಸಂಪ್ರದಾಯದವರಾದ್ದರಿಂದ ತಾವು ವಾಸವಾಗಿರುವ ಪುಲಿಯರ ಬೆಟ್ಟದಲ್ಲಿ ಪೂರ್ವದ ಬಸ್ತಿಯೊಂದು ಇದ್ದ ಸ್ಥಳದಲ್ಲೇ ನೂತನವಾದ ಅನಂತ ತೀರ್ಥಂಕರರ ಬಿಂಬ ಪ್ರತಿಷ್ಠೆ ಯನ್ನು ಮೊನ್ನೆ ಮೊನ್ನೆ ಮಾಡಿಸಿದರು. ಜನವರಿ ೨೮ರಿಂದ ೧೫ ದಿನ ಗಳ ವರೆಗೂ ಈ ಸಂಬಂಧವಾದ ಪಂಚ ಕಲ್ಯಾಣ ಮಹೋತ್ಸವವು ಬಹು ವಿಜೃಂಭಣೆಯಿಂದ ಸಾಂಗವಾಯಿತು.

ಜೈನಧರ್ಮ ಬಂಧುಗಳಲ್ಲಿ ನವ ಚೈತನ್ಯವನ್ನೂ ಈಗ ೨೫ ವರ್ಷ ಗಳಿಂದಲೂ ತುಂಬುತ್ತ ಬಂದಂಥವರೂ ಮೂಲತಃ ದಕ್ಷಿಣ ಕನ್ನಡಿಗರೂ ಆದ ಸದ್ಯದ ಶ್ರವಣ ಬೆಳ್ಗೊಳದ ಸೃಷ್ಟಿ ಶ್ರೀ ಚಾರು ಕೀರ್ತಿ ಮಹಾ ಸ್ವಾಮಿಗಳವರು ವೈನಾಡಿಗೆ ಬಂದದ್ದರಿಂದಂತೂ ಅದೊಂದು ವಿಶಿಷ್ಟ ಶೋಭೆಯುಂಟಾಗಿತ್ತು. ಸಕಲ ಧರ್ಮೀಯರೂ ಆದುಸಿಕರೂ ತಲೆ ದೂಗುವಂತಹ ವಾಗ್ಮಿತೆಯುಳ್ಳ ಸ್ವಾಮಿಜಿಯವರು ತಮ್ಮ ಶುದ್ಧ ಕನ್ನ ಡದ ನಿರರ್ಗಳ ವಾಣಿಯಿಂದ ೧೫ ದಿನಗಳ ವರೆಗೆ ದಿನಾಲು ಧರ್ಮ ಪ್ರವಚನಗಳನ್ನು ಮಾಡಿದರು. ಮೈಸೂರು ಸೀಮೆಯಿಂದಲೂ ದಕ್ಷಿಣ ಕನ್ನಡ ಜಿಲ್ಲೆಯಿಂದಲೂ ಸುಮಾರು ೧೫೦೦ ಮೇಲೆ ಜೈನರ ಮಹಾ ಜನರು ಬಂದಿದ್ದು ೨೦೦೦ ದ ವರೆಗೂ ಜನಸಮುದಾಯವು ಇವರೆಲ್ಲ ರಿಗೂ ೧೫ ದಿನಗಳ ವರೆಗೂ ಊಟ ಉಪಚಾರ ವಸತಿಗಳ ಏರ್ಪಾಡು ಮಾಡಿ ಕಾಡಿನಲ್ಲೇ ಒಂದು ನಾಡನ್ನು ಕೃಷ್ಣಯ್ಯಗೌಡರ ಪರಿವಾರದ ವರು ರಚಿಸಿದ್ದರು. ದೇವಾಲಯದ ಜೊತೆಗೆ ಕನ್ನಡ ವಿದ್ಯಾರ್ಥಿಗಳ ಪಾಠಶಾಲೆಯೂ ವಸತಿ ಗೃಹವು ಸ್ಥಾಪನೆಯಾದ ಸಂಗತಿಯೇ ಜಯ. ಕರ್ನಾಟಕದ ಪ್ರತಿನಿಧಿಯಾದ ನನ್ನನ್ನು ಅಲ್ಲಿಗೆ ಎಳದೊಯ್ದಿತು ದಕ್ಷಿಣ ಕನ್ನಡಿಗರೂ ವೈನಾಡಿನ ರಾಷ್ಟ್ರೀಯ ಕಾರ್ಯಕರ್ತರೂ ಮೊನ್ನಿನ ಗುರುವಾಯೂರು ಪ್ರಜಾಭಿಪ್ರಾಯ ಸಂಕಲನ ಕಾರ್ಯ (ರೆಫರೆಂಡಂ-ವರ್ಕ್)ದಲ್ಲಿ ವಿಶೇಷವಾಗಿ ದುಡಿದ ಕನ್ನಡಿಗರಲ್ಲೊಬ್ಬರೂ ಆಗಿದ್ದು ಕೃಷ್ಣಯ್ಯಗೌಡರ ಆಪ್ತಾಲೋಚಕರಲ್ಲೊಬ್ಬರಾದ ಶ್ರೀ ಕೆ. ಕೃಷ್ಣ ಭಟ್ಟರ ಸ್ನೇಹವು ಕೊಡಗಿನೆಲ್ಲಂಟಾದುದೂ ವೈನಾಡಿನ ಕನ್ನಡಿ ಗರನ್ನು ಕಂಡು ಬರಲಿಕ್ಕೆ ನನಗೆ ಒತ್ತಾಸೆಯನ್ನು ಕೊಟ್ಟಿತು ಶ್ರೀ ಕೃಷ್ಣ ಭಟ್ಟರು ಈ ಪಂಚಕಲ್ಯಾಣದುತ್ಸವದಲ್ಲಿ ಕೂಡಗು ವೈನಾಡು ಕಲ್ಲಿಕೋಟೆಗಳಿಂದ ಬಂದ ತಮ್ಮ ಸ್ವಯಂಸೇವಕರೊಡನೆ ಬಂದವರ ಆದರಾತಿಥ್ಯವನ್ನು ಮಾಡಿದುದು ಅವರ ಸಮಾಜ ಸೇವಾ ತತ್ಪರತೆಗೆ ಸ್ಫಾಧಾವಿಕವಾದುದು.

ಈ ಕಾಲಕ್ಕೆ ಮೈಸೂರು ಜೈನಸಂಘದವರು ಜೈನಪರಿಷತ್ತನ್ನೊಂ ದನ್ನು ಕೂಡಿಸಿದುದು ಕಾಲೋಚಿತವಾಗಿತ್ತು. ನಮ್ಮ ಬೆಳಗಾಂವಿಯ ದಕ್ಷಿಣ ಮಹಾರಾಷ್ಟ್ರ ಜೈನ ಸಭೆಯರೊಡನೆ ಹೆಚ್ಚು ತೀರ್ವವಾಗಿ ಇವರು ಸಹಕರಿಸಿ ಅವರ ಆ ಅಸಡ್ಡೆ ಹೆಸರನ್ನು ತಲೆದೊಗಿಸಿ ಅಖಿಲ ಕರ್ನಾಟಕಕ್ಕೆ ಒಂದು ಸಾಮಾನ್ಯವಾದ ಜೈನ ಮಹಾಸಭೆಯನ್ನು ಏರ್ಪ ಡಿಸಿದರೆ ಬಹಳ ಚೆನ್ನಾಗುವುದು. ಮೈಸೂರು ಜೈನ ಸಂಘದವರು ದ. ಕನ್ನಡದ ಜೈನರೊಂದಿಗೆ ಆಸ್ಥೆಯಿಂದ ಸಹಕರಿಸುವಂತೆ ಉತ್ತರ ಕರ್ನಾ ಟಕದವರನ್ನೂ ತಮ್ಮೊಟ್ಟಿಗೆ ಕೂಡಿಸಿಕೊಳ್ಳುವದು ಕ್ರಮಪ್ರಾಪ್ತವಾಗಿರು ವದು. ಕರ್ನಾಟಕಕ್ಕೆ ಜೈನ ಮಹಾಜನಗಳು ಹಿಂದೆ ಮಾಡಿದ ಉಪ ಕಾರದಂತೆ ಈಗಿನ ಏಕೀಕರಣದ ಕಾರ್ಯದಲ್ಲಿ ಅವರಿಂದಲೂ ಬಹಳ ಕೆಲಸವಾಗಬೇಕಾಗಿದೆ. ಅದಿರಲಿ ತಮ್ಮ ಉತ್ಸವದಲ್ಲಿ ತಮ್ಮ ಧರ್ಮ ಬಂಧುವಿನಂತೆ ನನಗೂ ಭಾಗವಹಿಸಲು ಎಲ್ಲ ಅನುಕೂಲತೆಗಳನ್ನೊ ದಗಿಸಿ ಕೊಟ್ಟು ಕನ್ನಡ ಸಾಹಿತ್ಯ-ಕರ್ನಾಟಕ ಏಕೀಕರಣಗಳ ವಿಷಯ ವಾಗಿ ನನಗೆ ಮಾತನಾಡಲು ಅವಕಾಶಕೊಟ್ಟ ಕೃಷ್ಣಯ್ಯಗೌಡರ ಮಕ್ಕ ಳಾದ ಶ್ರೀ ಸುಬ್ಬಯ್ಯಗೌಡರೇ ಮೊದಲಾದವರಿಗೆ ನಾನು ಬಹು ಉಪ ಕೃತನಾಗಿದ್ದೇನೆ.

ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯದ ದೃಷ್ಟಿಯಿಂದ ಶ್ರೀ. ಕೃಷ್ಣ ಯ್ಯ ಗೌಡರು ಮಾಡಿದ ಮಹಾದಾನದ ಸಂಗತಿಯೊಂದನ್ನು ಉಲ್ಲೇಖಿ ಸಬೇಕಾಗಿದೆ. ಸಂಸ್ಕೃತದಲ್ಲಿದ್ದ ಪೂರ್ವ ಪುರಾಣ ಮಹಾಗ್ರಂಥ ವನ್ನು ಆಮೂಲಾಗ್ರವಾಗಿ ಶ್ರೀ ಎ. ಶಾಂತಿರಾಜ ಶಾಸ್ತ್ರಿಗಳ. (ಮೈಸೂರ ಅರಮನೆಯ ವಿದ್ವಾಂಸರು) ಇವರಿಂದ ಕನ್ನಡಿಸಿಸಿ ರೊಯಲ್ ಆಕಾರದ ೧೫೦೦ ಪುಟಗಳು ನಿಕ್ಕಿರುವ ಕನ್ನಡ ಗ್ರಂಥವೊಂದು ೬-೭ ಸಾವಿರ ರೂಪಾಯಿ ವೆಚ್ಚಮಾಡಿ ಮುದ್ರಿಸಿ ಪ್ರಕಾಶ ಮಾಡಿದ ಸಂಕಲೆಯು ಮಹತ್ತದ್ದಾಗಿದೆ ಸಂಸ್ಕೃತ ಗ್ರಂಥಕರ್ತಗಳಾದ ಭಗ ವಜ್ಜಿನ ಸೇನಾಚಾರ್ಯರೂ ಕರ್ನಾಟಕ ಸಾಮ್ರಾಟನಾದ ರಾಷ್ಟ್ರಕೂಟ ರಾಜನ ಆಸ್ಥಾನಕ್ಕೆ ಸೇರಿದವರೆಂದ ಮೇಲೆ ಈ ಗ್ರಂಥವು ಕನ್ನಡದಲ್ಲಿ ಸಂಪೂರ್ಣವಾಗಿ ಪ್ರಕಟವಾದುದನ್ನು ನೋಡಿ ಸಕಲ ಕರ್ನಾಟಕ ಸಾಹಿತಿಗಳೂ ಶ್ರೀ ಕೃಷ್ಣಯ್ಯ ಗೌಡರನ್ನು ಅಭಿನಂದಿಸಬೇಕಾಗಿದೆ ಉತ್ತರ ಪುರಾಣವನ್ನೂ ಅವರು ಅಚ್ಚುಗೊಳಿಸುವವರಿರುವರೆಂಬುದೂ ಸಂತೋಷದ ವಿಷಯವು ಅಷ್ಟರಲ್ಲಿ ಕನ್ನಡಿಗರು ೧೨ ರೂ ಬಲ ಮಾತ್ರವಿದ್ದರೂ ಬೆಲೆ ಮಿರಿದ ಈ ಪುಸ್ತಕವನ್ನು ಬೇಗನ ತರಿಸಿ ಓದಲಿ ಕೃಷ್ಣಯ್ಯ ಗೌಡರು ಸುಮಾರು ೧ ಲಕ್ಷ ರೂ ವೆಚ್ಚನುಮಾಡಿ ಕಟ್ಟಿಸಿದ ಚೈತ್ಯಾಲಯವೂ ಸಕಲರಲ್ಲಿ ಚೈತನ್ಯವನ್ನುಂಟುಮಾಡಲಿ ಜನರು ಸ್ಥಾಪಿಸಿದ ಕರ್ನಾಟಕ ಜೈನ ವಾರಶಾಲೆಯು ಒದಿಗೆಯ ವಿದ್ಯಾ ಕೇಂದ್ರವಾಗಿ ಬೆಳೆದು ವೈನಾಡಿನಲ್ಲಿ ಜೈನ ಧರ್ಮಾಭಿಮಾನದೊಂದಿಗೆ ಕರ್ನಾಟಕ ಸಂಸ್ಕೃತಿಯ ಅಭಿಮಾನವೂ ಹೆಚ್ಚುಹೆಚ್ಚಾಗಿಲೆಂದು ನಾವೆಲ್ಲರೂ ಹಾರೈಸೋಣ ಕರ್ನಾಟಕದ ಉಳಿದ ಭಾಗದವರೂ ತಮ್ಮ ಕೈ ನೈಮುತ್ಯ ದಿಗ್ಬಾಂಧವರನ್ನು ದೂರೀಕರಿಸದೆ ಅವರ ಯೋಗಕ್ಷೇಮ ವನ್ನು ವಹಿಸುತ್ತಾ ಅವರ ಕಾರ್ಯಗಳಲ್ಲಿ ನೆರವಾಗುವುದು ಕನ್ನಡಿಗರೆ ಲ್ಲರ ಕರ್ತವ್ಯವಾಗಿದೆ ಕನ್ನಡ ನಾಡಿನ ನೈಮುತ್ಯ ವಿದ್ಯಾವಾಲಯ ದಲ್ಲಿ ಬೆಳಗುತ್ತಿದ್ದ ಒಂದು ಕನ್ನಡ ನಂದಾದೀಪವನ್ನಾದರೂ ಕನ್ನಡಿ ಗರು ಜಾಗರೂಕತೆಯಿಂದ ಬೆಳಗಿಸುತ್ತ ಅದನ್ನು ಉಳಿಸಿಕೊಳ್ಳಬೇಕೆಂ ಬುದೇ ಈ ಚಿಕ್ಕ ಲೇಖನದ ಮಹತ್ತ ಕಾಂಕ್ಷೆಯಾಗಿದೆ.

ಹೀಗೆ ವೈನಾಡುಗಳ ನೈಮುತ್ಯದ ಪ್ರವಾಸ ಮುಗಿಸಿ ಕರ್ನಾಟಕದ ಪಡುವಲ ಕಡಲನಾಡಾದ ದಕ್ಷಿಣ ಕನ್ನಡಕ್ಕೆ ಬಂದಿರುವೆ. ಕನ್ನಡ ಕಡಲನ್ನು ಕಂಡು ಚಿತ್ತದಲ್ಲಿ ನವೀನ ಭಾವನಾತರಂಗಗಳೇಳುತ್ತಿರು ವವು.

"ಶಾಶ್ವತ ಕನ್ನಡ ಕಡಲಿನ ನಾವಿಕರೇ ಓಂ ನಮೋ ನಮೋ
ವಿಶ್ವಪ್ರೇಮದ ಹೊಸ ಹೊಸ ಹಾಡಿನ ಭಾವಿಕರೇ ಓಂ ನಮೋ ನಮೋ"

ಎಂದು ಇಲ್ಲಿಯ ಕನ್ನಡಿಗರೆಲ್ಲರಿಗೂ ಪ್ರಾರಂಭದ ವಂದನೆಗಳ ನ್ನರ್ಪಿಸುತ್ತಿರುವೆನು.

ಸಾಹಿತ್ಯ

ಸ್ವದೇಶಾಭಿಮಾನಿ

ಸಂಚಿಕೆ.

ಸಂಪುಟ ೩ ಎಪ್ರಿಲ್ ೨೭—೪—೧೯೩೪. ಸಂಚಿಕೆ ೨

— ಅನುಕ್ರಮಣಿಕೆ —

	ಪುಟ
ನಮ್ಮ ಜೀವನದಲ್ಲಿ ಕಥೆಗಳ ಸ್ಥಾನ	1
ಪ್ರಾಣಿಬಲಿ	3
ಶ್ರೀ. ಪ್ರೊ. ಕೆ. ವಿ. ಐಯ್ಯರ್	5
ದಿವಂಗತ ಆಸ್ಥಾನ ಮಹಾ ವಿದ್ವಾನ್ ವೇ॥ ಬ್ರ॥ ಶ್ರೀ॥ ನೋಟಿಗಾನ ಹಳ್ಳಿ ರಾಮ ಶಾಸ್ತ್ರಿಗಳವರು	6
ಯತಿ	7

ಎಪ್ರಿಲ್, ತಾರೀಕು ೨೭ನೇ ಶುಕ್ರವಾರ ೧೯೩೪.

ನಮ್ಮ ಜೀವನದಲ್ಲಿ ಕಥೆಗಳ ಸ್ಥಾನ.

ಉತ್ತರ ಧ್ರುವದಿಂದ ದಕ್ಷಿಣ ಧ್ರುವದ ವರೆಗೆ ಪೃಥ್ವಿಯ ಸಮಸ್ತ ದೇಶಗಳಲ್ಲಿ, ದೊಡ್ಡ ದೊಡ್ಡ ಮಹಾ ದೇಶಗಳಲ್ಲಿ, ಸಣ್ಣ ಸಣ್ಣ ದ್ವೀಪ ಗಳಲ್ಲಿ, ಸಭ್ಯ ಸಮಾಜ ಮತ್ತು ಕಾಡುಜನರಲ್ಲಿ, ಮುದುಕರು ಮತ್ತು ಮಕ್ಕಳಲ್ಲಿ, ಗೃಹಸ್ಥರಲ್ಲಿ ಮತ್ತು ಸನ್ಯಾಸಿಗಳಲ್ಲಿರುವ ಸರ್ವ ಸಾಮಾನ್ಯ ವ್ಯಸನವೆಂದರೆ ಕಥೆಯ ವ್ಯಸನವಾಗಿವೆ. ಪ್ರಪಂಚದಲ್ಲಿ ಸಂಜೆಗೆ ಕುಳಿತುಕೊಂಡು ಕಥೆ ಹೇಳದಿರುವ ಒಂದೇ ಒಂದು ಗ್ರಾಮ ವಿರಲಾರದು.

ಇತ್ತೀಚೆಗೆ ರೈಲು, ಮೋಟರು, ತಂತಿ, ಹಡಗು, ವಿಮಾನ, ವರ್ತಮಾನ ಪತ್ರ, ಛಾಪಖಾನೆಗಳು ಹಗಲು ರಾತ್ರಿ ಅಭಿವೃದ್ಧಿ ಯಾಗುತ್ತಿರುವ ಕಾರಣ ಪ್ರಪಂಚದ ಪ್ರತಿಯೊಂದು ವಸ್ತುವೂ ವಿಷ ಯವೂ ಬಹು ಬೇಗನೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ತಲವುತ್ತದೆ. ಆದರೆ ಈ ಸಾಧನಗಳಾವುವೂ ಇಲ್ಲದ ಕಾಲದಲ್ಲಿ ಕೆಲವು ಕಥೆಗಳು ಮಾತ್ರ ವಾಯುವೇಗದಿಂದ ಮೂರು ಲೋಕದ ಲ್ಲಿಯೂ ಸಂಚರಿಸುತ್ತಿದ್ದುವು. ಈ ವಿಷಯವು ಅನೇಕ ಪ್ರಮಾಣ ಗಳಿಂದ ಸಿದ್ಧವಾಗಿದೆ. ನಾವು ಸಣ್ಣವೂ ಸುಂದರವೂ ಆದ ಕಥೆ ಗಳನ್ನು ನಮ್ಮ ತಾತಂದಿರ ತೊಡೆಯಲ್ಲಿ ಕುಳಿತುಕೊಂಡು ಕೇಳುವಾಗ ಈ ಕಥೆಗಳು ನಮ್ಮೂರಲ್ಲಿ ಮಾತ್ರ ಪ್ರಚಾರದಲ್ಲಿವೆ ಎಂದು ತಿಳಿಯ ಬಹುದು. ಆದರೆ ವಿಚಾರಿಸಿ ನೋಡಿದರೆ, ದೇಶ ಕಾಲಗಳನ್ನನುಸರಿಸಿ ಸ್ವಲ್ಪ ಪರಿವರ್ತನೆ ಹೊಂದಿದ ಇದೇ ಕಥೆಗಳನ್ನು ನಾವು ಕೇಳುತ್ತಿರುವ ಕಾಲದಲ್ಲೇ ನಮ್ಮಂತಹ ಮಕ್ಕಳು ತಂತಮ್ಮ ತಾತಂದಿರ ಮಡಿಲಲ್ಲಿ ಕುಳಿತುಕೊಂಡು ಅರಬಸ್ಥಾನದ ಡೇರೆಗಳಲ್ಲಿಯೂ, ಸಹಾರಾ ಮರು ಭೂಮಿಯಲ್ಲಿಯೂ, ಮಧ್ಯಪ್ರಾಂತ್ಯದ ಅತೀ ಪ್ರಾಚೀನ ನಗರಗಳ ಲ್ಲಿಯೂ, ರಷ್ಯದ ಜೋಂಪಡಿಗಳಲ್ಲಿಯೂ ಕೇಳುತ್ತಾ ಸಂತೋಷಿಸು ತ್ತಾರೆ.

ಆಧುನಿಕ ಸಾಧನಗಳಿಂದಾಗಿ ಸಮಗ್ರ ಜಗತ್ತು ಒಂದೇ ನಗರ ದಂತಾಗಿದೆ. ಈ ಜಗತ್ತಿನ ಪ್ರತಿಯೊಂದು ದೇಶವು ಈ ನಗರದ ಬೀದಿ ಯಾಗಿದೆ ಮತ್ತು ಪ್ರತಿಯೊಂದು ಪಟ್ಟಣವು ಈ ನಗರದ ಮನೆಯಾ ಗಿದೆ. ಹೀಗಿದ್ದರೂ ಹಿಂದಿನ ಕಾಲದಲ್ಲಿ ಪ್ರತಿಯೊಂದು ದೇಶದ ಜನರು ಎರಡನೇ ದೇಶದವರ ಲೋಕ ಜೀವನವನ್ನು ಈಗಿನ ನಮ್ಮಿಂದಲೂ ಅಧಿಕವಾಗಿ ತಿಳಿದಿದ್ದರೆಂದರೆ ತಪ್ಪಾಗದು.

ಈ ಮಾತನ್ನು ಕೇಳುವಾಗ ನಮಗೆ ಎಷ್ಟು ಅಸಂಭವವಾಗಿ ತೋರುತ್ತದೋ ಇದು ಅಷ್ಟೇ ಸಂಭವವೂ ಆಗಿದೆ. ದೇಶ ದೇಶಾಂತರಗಳ ಪರಿಚಯ ಹೊಂದಲಿಕ್ಕಾಗಿ ನೂರಿತ್ತು ಮೂರಿತ್ತು, ನಲ್ವತ್ತು ನಲ್ವತ್ತು ವರ್ಷಗಳನ್ನು ಕಳೆದಂತಹ ಮಾರ್ಕೋಪೋಲೋ ಇಬ್ನಬಟೂತ, ಹುಯೆನ್‌ತಾಸಿಂಗರಂತಹವರು ಇಂದು ಎಲ್ಲಿದ್ದಾರೆ? ಪ್ರಾಚೀನ ಕಾಲದಲ್ಲಿ ವ್ಯಾಪಾರಿಗಳೂ ಪರಿವ್ರಾಜಕರೂ ಸಂಸಾರ ಭ್ರಮಣ ಮಾಡುತ್ತಿದ್ದರು. ಮತ್ತು ದೇಶ ದೇಶಗಳ ಅಪೂರ್ವ ವಸ್ತುಗಳನ್ನೂ, ಹೊಸ ಹೊಸ ವಿಚಾರಗಳನ್ನೂ, ಚಂದ ಚಂದ ಕಥೆಗಳನ್ನೂ ವಿನಿಮಯ ಮಾಡುತ್ತಿದ್ದರು. ಸ್ಪೆನ್ಸರಿನ "ಫೇಅರೀಕ್ವೀನ್", ಬಾಕೇಶಿಯನ "ಡೆಕೆಮೇರಾನ್" "ಅರೇಬಿಯನ್ ನೈಟ್ಸ್" ಮೊದಲಾದ ಗ್ರಂಥ ಗಳಲ್ಲಿ ಈ ಪ್ರಾಚೀನ ಪ್ರಥೆಯ ಚಿಹ್ನೆಯು ಕಂಡು ಬರುತ್ತದೆ.

ಭಾರತವರ್ಷದಲ್ಲಿ ಕೂಡ ಯಾತ್ರಾರ್ಥಿಗಳಾದ ಮುನಿಗಳು ಅಲ್ಲಲ್ಲಿ ಯಜ್ಞಯಾಗಾದಿಗಳು ನಡೆಯುವಲ್ಲಿ ಕೆಲದಿನಗಳ ವರೆಗೆ ನಿಂತು ಅತ್ಯಂತ ಉತ್ಸಾಹದಿಂದ ಧಾರ್ಮಿಕ ಕಥೆಗಳನ್ನು ವಿನಿಮಯ ಮಾಡುತ್ತಿದ್ದರು. ಭಗವಾನ್ ಬುದ್ಧದೇವನು ಕೂಡ ಪ್ರತಿ ದಿನ ಸಂಜೆಗೆ ಭಿಕ್ಷುಗಳನ್ನು ಕೂಡಿಸಿ ಕಥೆಗಳನ್ನು ಹೇಳುತ್ತಿದ್ದನು. ಮಹಾತ್ಮಾ ಯೇಸುವು ತನ್ನ ಧರ್ಮೋಪದೇಶಗಳನ್ನು ಕಥೆಗಳ ಮೂಲಕ ಮಾಡುತ್ತಿದ್ದನು. ಇತಿಹಾಸವನ್ನು ನೋಡುವಾಗ ಕಥೆ ಕೇಳುವುದರಲ್ಲೇ ಹುಚ್ಚರಾದ ಅನೇಕ ಮಂದಿಯನ್ನು ನಾವು ನೋಡ

ಬಹುದು. ಒಬ್ಬ ಅಪರಾಧಿಯು ರಾಜನ ಹತ್ತಿರ ಹೋಗಿ ಅತ್ಯಂತ ಸುಂದರ ಕಥೆಯನ್ನು ಹೇಳಿದನೆಂದರೆ, ಆತನ ಅಪರಾಧವನ್ನು ರಾಜನು ಕ್ಷಮಿಸುತ್ತಿದ್ದನು. ಇಷ್ಟರ ಮಟ್ಟಿಗೂ ಕಥೆಯು ಹುಚ್ಚು ಹಿಡಿಸಿತ್ತು.

ಹಿಂದಿನ ಕಾಲದಲ್ಲಿ ಎಲ್ಲೆಲ್ಲಿ ವ್ಯಾಪಾರದ ಮಂಡಿಗಳಿತ್ತೊ ಅಲ್ಲಲ್ಲಿ ವ್ಯಾಪಾರಿಗಳು ಸೇರಿ ವಿಶ್ರಾಮ ಕಾಲದಲ್ಲಿ ಸುಂದರ ಸುಂದರ ಕಥೆಗಳನ್ನು ವಿನಿಮಯ ಮಾಡುತ್ತಿದ್ದರು. ಈಗಲೂ ಕೂಡ ನಾಲ್ಕು ಜನರು ಕೂಡಿದಾರಿ ನಡೆಯುವಾಗ ಒಂದಲ್ಲ ಒಂದು ಅದ್ಭುತವೋ ಚಮತ್ಕಾರ ಯುಕ್ತವೋ ಆದ ಭೂತ ಪಿಶಾಚಿಗಳ, ಪಶು ಪಕ್ಷಿಗಳ, ನಾಯಿ ನರಿಗಳ, ರಾಜ ರಾಣಿಯರ ಕಥೆಗಳನ್ನು ಹೇಳುತ್ತಾ ಯಾತ್ರಿಕರು ಸಾರಿ ಕಳೆಯುವುದನ್ನು ನಾವು ಎಲ್ಲೆಲ್ಲಿಯೂ ನೋಡಬಹುದು.

ಇಂತಹ ಕಥೆಗಳು ಯಾತ್ರಿಕರಿಗೆ ಒಳ್ಳೆಯ ಶಿಕ್ಷಣವನ್ನು ಕೊಡುತ್ತವೆ. ಜಗತ್ತಿನಲ್ಲಿ ಸರ್ವತ್ರ ಮನುಷ್ಯಸ್ವಭಾವವು ಸುಖದುಃಖದಿಂದಾಗಿ ಸಮಾನವಾಗಿದೆ. ಸುಖಮಯವಾದ ವಸ್ತುವಿನಿಂದ ಎಲ್ಲರ ಹೃದಯಗಳೂ ಅರಳುತ್ತವೆ. ದುಃಖಮಯವಾದ ವಸ್ತುವಿನಿಂದ ಬಾಡುತ್ತವೆ. ಕಥೆಗಳಲ್ಲಿ ನಮಗೆ ಇದರ ಪ್ರತ್ಯಕ್ಷ ಪ್ರಮಾಣವು ದೊರಕುತ್ತದೆ ನಮಗೆ ಧಾರ್ಮಿಕ ಪುಸ್ತಕಗಳಾದ ವೇದ ಪುರಾಣ ಶಾಸ್ತ್ರ, ಕುರಾನ್, ಬೈಬಲ್, ಅವೆಸ್ತಾಗಳಿಂದ ಯಾವ ಆಶ್ವಾಸನೆಯು ದೊರಕುತ್ತದೋ ಅದೇ ಆಶ್ವಾಸನೆಯು ಅಮೇರಿಕದ ಹಬ್ಬೀ ಗುಲಾಮರಿಗೆ ಅವರ ಪೂರ್ವಜರು ಆಫ್ರಿಕದಿಂದ ಬರುವಾಗ ತಂದ ಗೀತಗಳಿಂದ ದೊರಕುತ್ತದೆ.

ಕಥೆ ಕೇಳುವುದರಲ್ಲಿ ಹಿಂದುಗಳಿಗೆ ಎಷ್ಟು ಆಸಕ್ತಿಯಿದೆಯೋ ಅದಕ್ಕಿಂತಲೂ ಒಂದು ವಾಲು ಹೆಚ್ಚು ಆಸಕ್ತಿಯು ಮುಸಲ್ಮಾನರಿಗಿದೆ. ಇತ್ತೀಚಿನ ಪಶ್ಚಿಮಿಯ ಸಾಹಿತ್ಯಗಳಲ್ಲಿ ನಮ್ಮ ಮುಗ್ಧ ಹೃದಯಕ್ಕೆ ಅನುಕೂಲವಾದ ವಸ್ತುವು ದೊರಕದಿದ್ದರೂ ದಕ್ಷಿಣ ಮತ್ತು ಪೂರ್ವ ಯುರೋಪುಗಳ ಪೂರ್ವಕಾಲದ ಲೋಕ ಕಥೆಗಳಲ್ಲಿ ನಮ್ಮ ಹೃದಯದ ಪ್ರತಿಬಿಂಬವು ಕಾಣುತ್ತದೆ. ಯುರೇಶಿಯನ ಸಂಸ್ಕೃತಿಯಿಂದ ಬೇರಾದ ಆಯಿಸ್‌ಲೆಂಡ್ ವಾಸಿಗಳ "ಸಾಗಾ" (ಪೌರಾಣಿಕ ಕಥೆ) ಗಳಲ್ಲಿ ನಮಗೆ ಸಾರ್ವಭೌಮ ಮಾನವೀಯ ಸ್ವಭಾವದ ದರ್ಶನವಾಗುತ್ತದೆ.

ಬೌದ್ಧಕಾಲೀನ ಜಾತಕ ಕಥೆಗಳನ್ನು ನೋಡಿರಿ. ಜೈನಕಾಲೀನ ಪಂಚತಂತ್ರವನ್ನು ನೋಡಿರಿ. ವಿಷ್ಣುಶರ್ಮನ ಹಿತೋಪದೇಶವನ್ನೋದಿರಿ. ಅಥವಾ ಈಜಿಪ್ಶಿನ ಇಸೋಪ್ ನೀತಿ ಕಥೆಗಳನ್ನು ಓದಿರಿ. ಎಲ್ಲಿ ನೋಡಿದರೂ ಸರ್ವತ್ರ ಮನುಷ್ಯ ಪರಿಸ್ಥಿತಿಯೊಂದಿಗೆ, ತಿರ್ಯಗ್ಯೋನಿಗಳೊಂದಿಗೆ, ಮತ್ತು ಸಜೀವ ಸೃಷ್ಟಿಯೊಂದಿಗೆ ಒಂದೇ ರೂಪವಿತ್ತೆಂದು ನಿಮಗೆ ಗೊತ್ತಾಗಬಹುದು. ರಾಮಾಯಣದಲ್ಲಿ ವಾಲ್ಮೀಕಿ, ಪಶುಪಕ್ಷಿ, ಮತ್ಸ್ಯ, ವಾನರ, ಆದಿಯಾದ ಸರ್ವ ಪ್ರಾಣಿಗಳೊಂದಿಗೆ ಏಕರೂಪದ ವ್ಯವಹಾರವು ಕಂಡುಬರುತ್ತದೆ. ಈ ಸಮಭಾವದಿಂದಾಗಿ ನಾವು ಸಮಸ್ತ ಪ್ರಾಣಿಗಳನ್ನು ಪ್ರೇಮದಿಂದ ನೋಡುವುದಕ್ಕಾಗುತ್ತದೆ. ಮತ್ತು ಆತ್ಮನು ಸರ್ವತ್ರ ಒಬ್ಬನೇ ಎಂಬುದನ್ನು ತಿಳಿಯಲಿಕ್ಕಾಗುತ್ತದೆ. ಕಥೆಯು ಮನುಷ್ಯನ ಅತಿ ಪ್ರಾಚೀನವಾದ ಅತಿಶಯ ವ್ಯಾಪಕವಾದ ಜೀವನರಹಸ್ಯವಾಗಿದೆ.

ಮನುಷ್ಯನ ಮನಸ್ಸು ಮತ್ತು ಹೃದಯವು ಧಾರ್ಮಿಕ ಆಚಾರ ವಿಚಾರ, ಸ್ಮೃತಿಗಳ ನಿಯಮ, ರಾಜಿ ಮತ್ತು ಧರ್ಮ ಗುರುಗಳ ಆಜ್ಞೆ, ಸಾಮಾಜಿಕ ರೀತಿ ರಿವಾಜು ಮೊದಲಾದ ಅನೇಕ ಬಂಧನಗಳಿಂದ ಬಂಧಿತವಾಗಿದೆ. ಇದೇ ಕಾರಣದಿಂದಾಗಿ ಮನುಷ್ಯನು ಕೃತ್ರಿಮತೆಯನ್ನು ರಕ್ಷಿಸಬೇಕಾಗುತ್ತದೆ. ಅಂದರೆ ಕಥೆಗಳಲ್ಲಿ ಮನುಷ್ಯ ಹೃದಯಕ್ಕೂ ಮಾನವೀಯ ಕಲ್ಪನೆಗಳಿಗೂ ಸ್ವತಂತ್ರತೆಯು ಕಂಡು ಬರುತ್ತದೆ. ಕಥೆಗಳಲ್ಲಿ ಹೃದಯದ ಅನುಭೂತಿ ಮತ್ತು ಸಹಜಸ್ಫೂರ್ತಿಯಿಂದ ಉತ್ಪನ್ನವಾದ ವಿಚಾರಗಳು ಒಳ್ಳೇ ರೀತಿಯಿಂದ ಪ್ರಕಟವಾಗುತ್ತವೆ. ಯಾವುದಾದರೊಂದು ಸಮಾಜದ ಉನ್ನತಿಯನ್ನು ಅಳೆಯಬೇಕಾದರೆ ಆ ಸಮಾಜದ ಧರ್ಮಶಾಸ್ತ್ರದಿಂದಾಗಲೀ ಸ್ಮೃತಿಗಳಿಂದಾಗಲೀ ಶಿಷ್ಟ ಗ್ರಂಥಗಳಿಂದಾಗಲೀ ಇತಿಹಾಸದಿಂದಾಗಲೀ ತಿಳಿಯಬಹುದು. ಆದರೆ, ನಾವು ಯಾವುದಾದರೊಂದು ಸಮಾಜದ ವ್ಯವಹಾರ ಸಂಸ್ಕೃತಿಯನ್ನು ತಿಳಿಯಬೇಕಾದರೆ ಆ ಸಮಾಜದ ಮೌಲಿಕ ಲೋಕಕಥೆಗಳನ್ನು ಶೋಧಿಸಬೇಕು. ಅವು ಎಂದಿಗೂ ನಮ್ಮನ್ನು ಮೋಸಗೊಳಿಸಲಾರವು ಧರ್ಮ ಗ್ರಂಥಗಳಲ್ಲಿ ನಮಗೆ ಸಮಾಜದ ಅತಿ ಉಚ್ಚವಾದ ಆದರ್ಶಗಳ ಪರಿಚಯವು ದೊರಕುತ್ತದೆ. ಇತಿಹಾಸಗಳಿಂದ ಆ ಕಾಲದ ಶಾಸಕರ ಅದವಾ ಆ ಸಮಯದ ಜಾತಿಗಳ ಜೀವನದ ಕಲ್ಪನೆಯನ್ನು ಮಾಡಬಹುದು. ಶಿಷ್ಟ ಗ್ರಂಥಗಳಲ್ಲಿ ಆ ಕಾಲದ ವಿದ್ಯೆಯ ಪ್ರವಾಹ ಮತ್ತು ವೇಗವನ್ನು ಕಾಣಬಹುದು ಆದರೆ, ಲೋಕ ಜೀವನದ ಮಧ್ಯಾರ್ಧ ಚಿತ್ರವು ಆ ಕಾಲದ ಲೋಕ ಕಥೆಗಳಲ್ಲಿ ಮಾತ್ರ ದೊರಕಬಹುದು.

ಆದುದರಿಂದ ಯಾವುದಾದರೊಂದು ಸಂಸ್ಕೃತಿಯ ಸರ್ವಾಂಗ ಸುಂದರ ಅಭ್ಯಾಸ ಮಾಡಬೇಕಾದರೆ ಆ ದೇಶದ ಧಾರ್ಮಿಕ ಕಥೆಗಳನ್ನೂ ಐತಿಹಾಸಿಕ ಘಟನೆಗಳನ್ನೂ ಮತ್ತು ಲೋಕ ಕಥೆಗಳನ್ನೂ ಅವಶ್ಯಕವಾಗಿ ತಿಳಿಯಬೇಕು. ಕಥೆಯಲ್ಲಿ ಮನುಷ್ಯ ಜೀವನದ ಸಂಪೂರ್ಣ ಚಿತ್ರವಿರುವ ಕಾರಣ ಕಥೆಯು ಶಿಕ್ಷಣದ ಸ್ವಾಭಾವಿಕ ಚಿತ್ರವಾಗಿದೆ ಇದರಿಂದಾಗಿಯೇ ಮನುಷ್ಯ ಮಾತ್ರನಾದವನಿಗೆ ಕಥೆಯಿಂದ ಒಳ್ಳೆಯ ಸಂತೋಷ ಉಂಟಾಗುತ್ತದೆ ಧರ್ಮಗ್ರಂಥವು ಪ್ರಭುವಿನಂತ ಆಜ್ಞಾಪಿಸುತ್ತದೆ, ಇತಿಹಾಸವು ಮಿತ್ರನಂತೆ ಕಿವಿಯನ್ನು ತೆರೆಸುತ್ತದೆ ಆದರೆ, ಲೋಕಕಥೆಯು ಸ್ನೇಹದಿಂದ ಕೂಡಿದ ಸಹಧರ್ಮಿಣಿಯಂತೆ ಮನಸ್ಸನ್ನು ಸ್ವಾಧೀನಗೊಳಿಸಿ ಮಾನವೀಯ ಸ್ವಭಾವದ ಮತ್ತು ಮನುಷ್ಯ ಜೀವನದ ಬೋಧನೆಯನ್ನು ಕೊಡುತ್ತದೆ. ಇವು ಮೂರೂ ಅವಶ್ಯಕವೇ ಆಗಿವೆ. ನೀತಿಪಾಠವು ತನ್ನ ಉಪದೇಶದಿಂದ ಮನುಷ್ಯನ ಹೃದಯವನ್ನು ತಿರುಗಿಸದಿದ್ದರೂ, ಕಥೆಯು ಮನುಷ್ಯ ಹೃದಯವನ್ನು ತಿರುಗಿಸಬಲ್ಲದು. "ಪ್ರಾಣಿ ಮಾತ್ರದ ಮೇಲೆ ದಯೆಯಿಡು" ಎನ್ನುವುದರ ಬದಲಾಗಿ, ಪ್ರಾಣಿಗಳ ಮೇಲೆ ಪ್ರೀತಿಯುತ್ಪನ್ನವಾಗುವಂತಹ, ಅವುಗಳ ದೀನಾವಸ್ಥೆಯನ್ನು ತಿಳಿಸಿ ದಯೆಯುತ್ಪನ್ನವಾಗುವಂತಹ ಕಥೆಯನ್ನು ಹೇಳಿದರೆ ಅದರ ಪ್ರಭಾವವು ಸ್ಥಾಯಿಯಾಗಿ ನಿಲ್ಲುತ್ತದೆ.

ಜೀವನದಲ್ಲಿ ಎಷ್ಟು ಆನಂದವಿದೆಯೋ ಅದರ ನಿಜವಾದ ಪರಿಚಯವು ನಮಗೆ ಕಥೆಗಳ ಮೂಲಕ ಗೊತ್ತಾಗುತ್ತದೆ ನಾವು ಯಾವುದನ್ನು ಆದರ್ಶವಾಗಿ ಜನರಿಗುಪದೇಶಿಸಬೇಕೋ ಅದನ್ನು

ಥೆಯ ಮೂಲಕ ಉಪಯೋಗಿಸುವಷ್ಟು ಸುಲಭವಾದುದು ಯಾವುದೂ ಇಲ್ಲ. ವಾಲ್ಮೀಕಿ ರಾಮಾಯಣವು ಇಂತಹದೊಂದು ಥೆಯಾಗಿದೆಯೆಂದು ಅನೇಕರ ಮತವಿದೆ. ಬ್ರಹ್ಮನಿಗೆದುರಾಗಿ ಹೇಗೆ ವಿಶ್ವಾಮಿತ್ರನು ಸೃಷ್ಟಿ ಮಾಡಿದನೋ, ಹಾಗೆಯೇ, ಕವಿಯು ಕೂಡ ಕಥೆಗಳ ಮೂಲಕ ಪ್ರತಿ ಸೃಷ್ಟಿಯ ಕಾರ್ಯವನ್ನು ಮಾಡುತ್ತಾನೆ. ಮತ್ತು ಜನರನ್ನು ಅಲ್ಲಿಗೊಯ್ದು ಅಲ್ಲಿ ವಾಸಮಾಡುವಂತೆ ಮಾಡುತ್ತಾನೆ.

ಕವಿಯು ತನ್ನ ರಾಜ್ಯದಲ್ಲಿ ತನ್ನ ಮನಸ್ಸಿಗೆ ಬಂದ ಧಾರ್ಮಿಕ ಸಿದ್ಧಾಂತಗಳನ್ನು ಪ್ರಚಾರ ಮಾಡುತ್ತಾನೆ. ತನ್ನ ರುಚಿಗನುಸರಿಸಿ ರಂಪಾಟನೆ ಮಾಡುತ್ತಾನೆ. ಮತ್ತು ತನ್ನ ಇಚ್ಛಾನುಕೂಲ ವಿಧಿ ನಿಷೇಧಗಳ ನಿರ್ಣಯ ಮಾಡುತ್ತಾನೆ. ಮತ್ತು ಅದನ್ನು ಪಾರಕರಿಂದ ಸ್ವೇಚ್ಛಾಪೂರ್ವಕ ಸ್ವೀಕರಿಸುವಂತೆ ಮಾಡುತ್ತಾನೆ ಇದರಿಂದಾಗಿ ಕಥಾ ಲೇಖಕರು ಸಮಾಜದ ಮುಖಂಡರೂ ಮಿತ್ರರೂ ಆಗಿದ್ದಾರೆ. ಪಾಶ್ಚಾತ್ಯ ವಿದ್ವಾಂಸರೂ ಕೂಡ ಶಿಕ್ಷಣದ ದೃಷ್ಟಿಯಿಂದ ಕಥೆಯ ಸ್ಥಾನವು ಉಚ್ಚವಾದುದೆಂಬುದನ್ನು ಸ್ವೀಕರಿಸ ತೊಡಗಿದ್ದಾರೆ.

ನಮ್ಮಲ್ಲಿ ರಾಜಕುಮಾರರಿಗೆ ಧಾರ್ಮಿಕ ಕಥೆಗಳ ಮೂಲಕ ಸಮಗ್ರ ಜ್ಞಾನವನ್ನುಪದೇಶಿಸುತ್ತಿದ್ದರು. ಪಂಚತಂತ್ರವು ಇದಕ್ಕಾಗಿಯೇ ಹುಟ್ಟಿದ್ದು. ಮಂದಬುದ್ಧಿಗಳಾದ ರಾಜಕುಮಾರರನ್ನು ವಿಷ್ಣು ಶರ್ಮನು ಪಂಚತಂತ್ರ ಕಥೆಗಳ ಮೂಲಕ ಆರೇ ತಿಂಗಳಲ್ಲಿ ಜ್ಞಾನವಂತರನ್ನಾಗಿ ಮಾಡಿದನು. ಉಪನಿಷತ್ತುಗಳಲ್ಲಿ ಕೂಡ ಮಹಾತ್ಮರಾದ ಋಷಿಗಳು ವಿಶ್ವರಹಸ್ಯವನ್ನು ತಿಳಿಸುವಂತಹ ಮಹಾನ್ ಸಿದ್ಧಾಂತಗಳನ್ನು ಕಥೆಗಳ ಮೂಲಕ ತಮ್ಮ ಶಿಷ್ಯರಿಗೆ ಸುಲಭವಾಗಿ ಉಪದೇಶಿಸಿದರು.

ಬಿ. ಶಂಕರ ಭಟ್, ವಿದ್ವಾನ್.

(ಹಂಸದಿಂದ)

ಪ್ರಾಣಿಬಲಿ.

(ಲೇಖಕರು -V. S.—ಮಿತ್ರಮಂಡಳಿ.)

ಸಿದ್ದಯ್ಯನು ಕಂಗಲಾಗಿದ್ದನು. ಊರಲ್ಲೆಲ್ಲ ಸಿಡುಬು! ಕೋಣನನ್ನು ಬಲಿಗಾಗಿ ಹುಡುಕುತ್ತಿದ್ದರು! ಕಲ್ಯಾಣಪುರದಲ್ಲಿ ಕೋಣಗಳಿದ್ದುವೆಂದರೆ ಅವನಲ್ಲಿ ಮಾತ್ರ! ಮೇಲ್ಮನೆ ತುಕ್ರ ಶೆಟ್ಟಿ, ಕೆಳಮನೆ ಪೋಂಕ್ರ, ನಡುಗದ್ದೆ ಸೀತಕ್ಕ, ಬಡಗು ಪಡ್ಪಿನ ಲೋಕಯ್ಯ ಇವರಿಲ್ಲರೂ ಏಕಕಂಠವಾಗಿ ನುಡಿದಿದ್ದರು—"ಕಾಪಿಯ ಮಾರಮ್ಮನಿಗೆ ಕೋಣದ ಬಲಿಯಾಗಬೇಕು!" ಎಂದು.

"ಮೂವತ್ತು ಕೋಳಿಗಳನ್ನು ಕಳೆದ ಒಂದೇ ವಾರದಲ್ಲಿ ಬಲಿ ಕೊಟ್ಟಿರಲ್ಲ! ಇನ್ನೇಕೆ ಕೋಣ?" ಎಂದಿದ್ದನು ಸಿದ್ದಯ್ಯ. ಅವನಿಗೆ ಒಂದೇ ಹೆದರಿಕೆ,—ಊರಿನವರ ದೃಷ್ಟಿಯೆಲ್ಲ ತನ್ನ ಕೋಣದ ಮೇಲೆಯೇ ಇದೆಯೆಂದು. ತುಕ್ರ ಸೆಟ್ಟಿಯ ಹತ್ತಿರ ಕೋಣವಿಲ್ಲ; ಪೋಂಕ್ರನ ಕೋಣಗಳನ್ನು ಬಿದರೆಯ ಮುಂಡಪ್ಪನು ಕ್ರಯಕ್ಕೆ ಪಡೆವೆನೆಂದು ಕೊಂಡುಹೋಗಿದ್ದನು. ಲೋಕಯ್ಯನೊಡನೆ ಇರುವುದೆಂದರೆ ಎರಡು ಎತ್ತುಗಳು ಮಾತ್ರ. ಉಳಿದವರು ಬೇಸಾಯದ ಕಾಲದಲ್ಲಿ ನೆರೆಕರೆಯ ಗ್ರಾಮಗಳಿಂದ ಬಾಡಿಗೆಗೆ ಕೋಣಗಳನ್ನೋ ಎತ್ತುಗಳನ್ನೋ ತರುತ್ತಿದ್ದರು. ಪ್ರಕೃತಕ್ಕೆ ಕೋಣವಿದ್ದುದು ಸಿದ್ದಯ್ಯನೊಡನೆ ಮಾತ್ರ: ಊರಿನವರೆಲ್ಲ ಅಂದಿದ್ದರು—ಸಿದ್ದಯ್ಯನ ಕೋಣವನ್ನು, ಕ್ರಯಕ್ಕೆ ಪಡೆದು, ಕಾಸಿಗೆ ಕೊಂಡುಹೋಗಿ ಬಲಿಕೊಡಬಹುದೆಂದು. ಪಟೇಲರೂ ಇದನ್ನು ಅನುಮೋದಿಸಿದ್ದರು. ದುಡ್ಡು ಸಿಕ್ಕಿದರೆ ಕೋಣ ಕೊಡುವರೆ ಅತಂಕವಿಲ್ಲವೆಂದು ಸಿದ್ದಯ್ಯನ ಹೆಂಡತಿಯ ಮತ. ಸಿದ್ದಯ್ಯನೊಬ್ಬನು ಮಾತ್ರ ಅದಕ್ಕೆ ವಿರೋಧಿ. ಒಂದು ಕೋಣವನ್ನು ಕೊಟ್ಟರೆ ಜತೆಯೇ ಕೆಟ್ಟಿತಲ್ಲ ಎಂದು ಅತನ ಅಕ್ಷೇಪ. ಆದರೆ, ಒಳಗಿಂದೊಳಗೆ ಅವನ ಕಳವಳದ ಕಾರಣವೇ ಬೇರೆಯಿತ್ತು;—ಅವನಿಗೆ, ತಾನು ಸಾಕಿ ಸಲಹಿದ ಆ ಕೋಣದ ಮೇಲೆ ತುಂಬಾ ಮಮತೆ. ದೇವಿಗೆ ಬಲಿ ಕೊಡುವುದರಲ್ಲಿ ಅತನ ಅಕ್ಷೇಪವಿಲ್ಲ, ಆದರೆ, ಕಲ್ಯಾಣಪುರದಿಂದ ತನ್ನ ಕೋಣವನ್ನೇ ದೇವಿಗೆ ಕೊಡಬೇಕೆಂಬುದನ್ನಾತನು ಒಪ್ಪನು.

ಲೋಕಯ್ಯನು ಗದರಿಸಿದನು:—"ನೋಡು ಸಿದ್ದಯ್ಯ, ಮೊನ್ನೆ ಸೀತಕ್ಕನು, ದೇವಿಗೆ ಹರಕೆ ಸಲ್ಲಿಸಲು ನಿನ್ನೊಡನೆ ಎರಡು ಕೋಳಿಗಳನ್ನು ಕ್ರಯಕ್ಕೆ ಕೇಳಿದಾಗ ನೀನು ಕೊಡಲಿಲ್ಲ. ಆದರೆ, ಏನಾಯಿತು? ಅದೇ ರಾತ್ರೆ ನರಿಗಳು ಬಂದು ಮೂರು ಕೋಳಿಗಳನ್ನೊಯ್ದವು—ದೇವಿಯ ಮುನಿಸು! ಈ ದಿನ ನಿನ್ನ ಕೋಣವನ್ನು ಒಬ್ಬ ಸೀತಕ್ಕನಲ್ಲ—ಎಲ್ಲ ಗ್ರಾಮಸ್ಥರೂ ಕೇಳುವರು. ನೀನು ಕೊಡಲೊಲ್ಲೆಯೆನ್ನುವೆ. ನೋಡಿಕೊ—ಮಾರಿ ಎಂದರೆ ಎಂತಹವಳೆಂದು ನೀನು ತಿಳಿದಿರುವೆ!"

"ಹಾಗಲ್ಲ ಲೋಕೂ, ಒಂದು ರೂಪಾಯಿ ಅಪರಾಧವಾಗಿ ಬೇಕಾದರೂ ಕೊಡುವೆನು; ಕೋಣವನ್ನು ಕೊಟ್ಟರೆ . . . . !"

ಲೋಕಯ್ಯನು ಸಿದ್ದಯ್ಯನನ್ನು ಅಲ್ಲೇ ತಡೆದು ಹೇಳಿದನು. "ಸಿದಯ್ಯಾ, ಹೀಗೇಕೆ ಹೇಳುವೆ? ನಿನ್ನ ಬುದ್ಧಿಯನ್ನು ಯಾರು ಕೊಂಡೊಯ್ದರು? ಪ್ರಪಂಚದಲ್ಲಿರುವುದೇನು?—ದೇವಿ, ಮತ್ತು ನಾವು; ಮತ್ತು ನಮ್ಮ ಭಕ್ತಿ, ಮತ್ತು . . . ಕೋಣ' ಮತ್ತು ಬಲಿ; ಮತ್ತು . . . ಈಗ ನೋಡು, ಈ ಊರಲ್ಲಿ . . ."

ಸಿದ್ದಯ್ಯನಿಗೆ, ಅಲ್ಲೇ ಕಳವಳವು ಪರಮಾವಧಿಗೆ ಮುಟ್ಟಿತು. ಯಾರೋ ತನ್ನ ಕತ್ತನ್ನು ಹಿಸುಕುವರೆಂಬಂತಾಗಿ, ಫಕ್ಕನೆ ಅವೇಶಗೊಂಡು—"ಗೊತ್ತಿದೆಯಯ್ಯಾ, ನಡೆ! ನಡೆ!! ಸುಖವಾಗಿ ಎರಡು ಕೋಣಗಳನ್ನು ಕಟ್ಟಿಕೊಂಡು ಇದ್ದೇನೆ; ಅವುಗಳನ್ನೊಯ್ಯಬೇಕೆಂದು ಈ ಸಕಾಲತ್ತಿನ್ನದು, ಅಲ್ಲವೇ? ಕಾಪಿಯ ಮಾರಮ್ಮನಿಗೆ ಕೋಣ ಬೇಕಾದರೆ ನಮ್ಮೂರಿನ ಪೂಜಾರಿಯನ್ನೊಯ್ಯಿರಿ!" ಎಂದು ಬಿರುಸಾಗಿ ನುಡಿದುಬಿಟ್ಟನು

ಲೋಕಯ್ಯನು ಮೊದಲು ಅವಾಕ್ಕಾದನು. ಆ ಮೇಲೆ ಸಿದ್ದಯ್ಯನನ್ನು ತಿರಸ್ಕಾರದಿಂದ ನೋಡಿ, "ಧರ್ಮಕ್ಕೆ ಹೆದರದವರನ್ನು ಕಾಪಾಡುವವರಾರೂ ಇಲ್ಲ!" ಎನ್ನುತ್ತ, ಹೋದನು. ಸಿದ್ದಯ್ಯನು ಸಪ್ಪಗೆ ಮೋರೆಮಾಡಿ, ದೈನ್ಯ ತಳೆದು, ಆಲೋಚನೆಗಳಿಗೊಳಗಾದನು. ಕೋಣವನ್ನು ಕೊಡದ ತನ್ನ ಅಧರ್ಮವು ಎಷ್ಟಿರಬಹುದೋ ಎಂದು ಅವನಿಗೆ ಅಂಜಿಕೆ. ಹಾಗೂ ಕೊಡುವುದು ಧರ್ಮವೆನಿಸೀತೇ ಎಂದೊಂದು ಸಂದೇಹ.

ಲಕ್ಷ್ಮಿಯು (ಸಿದ್ದಯ್ಯನ ಹೆಂಡತಿ) ಹೊರಗೆ ಬಂದು ತನ್ನ ಗಂಡನನ್ನು ಕುರಿತು ಹೇಳಿದಳು:–"ನನಗೇಕೋ, ನೀವು ಆ ಕೋಣವನ್ನು ಬಿಡಿಸೆನ್ನುದು ಅತುಭದ ಮಾತಾಗಿ ಧ್ವನಿಸಿತು. ನೀವಾಡುತ್ತಿದ್ದ ರೀತಿಯೊಂದು ಮಾತೂ ಅವಚಾರಸೂಚಕವಾಗಿ ಕಂಡು ಬಂತು. ಈಗ ಹೋಗಿ ಲೋಕಯ್ಯನಿಗೆ ಹೇಳಿಬಾರದೇ,–ಕೋಣವನ್ನು ಕೊಡ ಎಹುದೆಂದು? ನಮಗೇನು, ರೂಪಾಯಿ ಕೊಡುವರು; ಹೊಸ ಕೋಣವನ್ನು ಕೊಂಡುಕೊಳ್ಳಬಹುದಲ್ಲ!"

ಹೆಂಡತಿಯ ಮಾತುಗಳನ್ನು ಕೇಳಿ, ಆ ತನಕ ಕಟ್ಟಿಕೊಂಡು ಬಂದಿದ್ದ ಸಿದ್ದಯ್ಯನ ದುಃಖದ ಆಣೆಕಟ್ಟು ಆಗ ಒಡೆಯಿತು. ಗದ್ಗದ ಕಂಠದಿಂದ–"ಲಕ್ಷ್ಮಿ, ಊರಿಗೆ ಊರೇ ನನಗೆ ಎದುರಾಡುತ್ತಿದೆ. ನೀನೊಬ್ಬಳಾದರೂ ಸಹಾನುಭೂತಿಯ ಒಂದು ಮಾತನ್ನಾಡಬಹುದೆಂಬ ಭರವಸೆಯಿದ್ದರೆ ಅದನ್ನೂ ಈಗ ಮಣ್ಣುಪಾಲು ಮಾಡಿದೆ" ಎಂದು ಬಿಕ್ಕಲುಬಿಕ್ಕಲಾಗಿ ನುಡಿದನು. ಗಂಡನ ಆ ಕಂಠದಿಂದ ಲಕ್ಷ್ಮಿಗೆ ಎಂದಿಷ್ಟು ಮರುಕ ತೋರಿತು.

ಒಂದು ಕ್ಷಣದ ತನಕ ಇಬ್ಬರೂ ಮೌನ. ಸಿದ್ದಯ್ಯನು ಗುರಿಯಿಲ್ಲದೆ ಎಲ್ಲಿನೋ ನೋಡುತ್ತ ಕುಳಿತನು. ಲಕ್ಷ್ಮಿಯು ಗಂಡನ ಮುಖವನ್ನೇ ನೋಡುತ್ತ ನಿಂತು, ಯಾವ ಮಾತುಗಳಿಂದ, ಯಾವ ಶೈಲಿಯಲ್ಲಿ ತನ್ನ ಗಂಡನನ್ನು ಕೋಣದ ವಿಕ್ರಯಕ್ಕೊಲಿಸಬಹುದು ಎಂದೇ ಆಲೋಚಿಸುತ್ತಿದ್ದಳು.

ಫಕ್ಕನೆ ಸಿದ್ದಯ್ಯನ ಕಣ್ಣುಗಳು ಒಂದು ಬಗೆಯ ಪ್ರಕಾಶದಿಂದ ಉಜ್ವಲವಾಗಿ ಹೊಳೆದು, ನಲಿದಂತೆ ತೋರಿದುವು. ಮುಖದ ಮೇಲೆ ಒಂದು ವಿಲಕ್ಷಣ ತೇಜವು ಕಂಡಿತು. ಮೈಯೆಲ್ಲ ಸಣ್ಣನೆ ಕಂಪಿಸಿದಂತೆ ಕಾಣಿಸಿತು. ಲಕ್ಷ್ಮಿಗೆ ಎದೆಯು ಕಂಪಿಸಿತು–ಇದು ದೇವಿಯ ಆವೇಶ ಅಥವಾ ತನ್ನ ಗಂಡನನ್ನು ಕೊಲ್ಲಲು ದೇವಿಯ ಮುನಿಸು, ಇವೆರಡರಲ್ಲಿ ಏನಾದರೊಂದು ಬಗೆ ಇರಬಹುದೇ?

ಸಿದ್ದಯ್ಯನ ಕಂಪಿಸುವ ತುಟಿಗಳಿಂದ, ನಡುಗುವ ದನಿಯಲ್ಲಿ ಈ ಶಬ್ದಗಳು ಹೊರಗೆ ಬಂದುವು:–"ಇಲ್ಲ, ಇಲ್ಲ; ನೂರು ದೇವಿಯರು ಸ್ವತಹ ಬಂದು ಕೇಳಿದರೂ ನನ್ನ ಕೈಯಿಂದ ನಾನು ಸಾಕಿದ ಈ ಕೋಣವನ್ನು ಕೊಡುವನನಲ್ಲ. ದೇವಿಗೆ ನಿಜವಾಗಿ ನೆತ್ತರು ಬೇಕಾಗಿದ್ದರೆ, ತನ್ನ ಗುಡಿಯಲ್ಲಿ ಕುಳಿತು ದುರಾಲೋಚನೆಗಳನ್ನು ಮಾಡುತ್ತಿರುವ ಪ್ರಾಣಿಗಳನ್ನೆ ಹಿಚಿಕಿ, ಕೊಂದು, ಕುಡಿಯಲಿ ಅಕೆ!"

ಹೀಗೆ ಹೇಳುತ್ತಿದ್ದಂತೆ ಸಿದ್ದಯ್ಯನ ಮೈಯೆಲ್ಲ ಕಂಪಿಸುತ್ತಿತ್ತು; ಕಣ್ಣುಗಳಿಂದ ನೀರು ಬೊಟ್ಟಿಕ್ಕುತ್ತಿತ್ತು. "ಹಹಹಹಹ!" ಎಂದು ನಕ್ಕನು; ಆ ನಗುವಿನಲ್ಲೊಂದು ಅಳುವೂ ಧ್ವನಿಸಿತು. ನಗುತ್ತ ದೊಪ್ಪನೆ ಬಿದ್ದನು. ಲಕ್ಷ್ಮಿಯು ಚೀರುತ್ತ ಓಡಿಹೋಗಿ, ತನ್ನ ಪತಿಯ ತಲೆಯನ್ನೆತ್ತಿ ತನ್ನ ತೊಡೆಯ ಮೇಲಿರಿಸಿ, ತನ್ನ ಸೀರೆಯ ಸೆರಗಿನಿಂದ ಗಾಳಿಹಾಕುತ್ತ ಉಪಚರಿಸಿದಳು. ಕೆಲವು ಕ್ಷಣಗಳ ನಂತರ, ಕಣ್ಣುಗಳನ್ನು ತೆರೆದು ಸಿದ್ದಯ್ಯನು ಹೆಂಡತಿಯೊಡನೆ ಒಂದಿಷ್ಟು ನೀರು ಕೇಳಿ, ತರಿಸಿ, ಕುಡಿದು, ಆಯಾಸದಿಂದ ನಿದ್ದೆಹೋದನು.

* * * *

ನಡು ರಾತ್ರೆ. ಸಿದ್ದಯ್ಯನು ಅದೇ ನಿದ್ದೆಯಲ್ಲಿ ಪರವಶನಾಗಿ ಇದ್ದನು. ಅವನ ಪತ್ನಿಯೂ ಮೈಮರೆತು ನಿದ್ದೆ ಹೋಗಿದ್ದಳು. ಹಟ್ಟಿಯಲ್ಲಿ ಫಟ್‌ಫಟ್‌ಫಟ್‌ಫಾಲ್ ಎಂದೊಂದು ಶಬ್ದವಾಯಿತು. ನಿದ್ದೆಯಲ್ಲಿದ್ದ ದಂಪತಿಗಳಿಗದು ಮಹಾಭೂಕಂಪದ ಶಬ್ದದಂತೆ ಕೇಳಿಸಿತು. ಇಬ್ಬರೂ ಕಟ್ಟನೆ ಎದ್ದು, ಒಬ್ಬರ ಮುಖವನ್ನೊಬ್ಬರು ನೋಡುತ್ತ ಕುಳಿತರು.

"ಸ್ವಪ್ನವಲ್ಲ; ನಿಜವಾಗಿಯೂ ದೊಡ್ಡ ಶಬ್ದವೊಂದು! ಸಿಡಿಲು ಗುಡುಗಿದಂತೆ; ಪರ್ವತವು ಒಡೆದು ಕುಸಿದು ಬಿದ್ದಂತೆ!" ಎಂದನು ಸಿದ್ದಯ್ಯ.

"ಅಹುದು; ಬಾಗಿಲು ತೆರೆದು ಹೊರಗೆ ಹೋಗಿ ನೋಡುವ ಅವಶ್ಯಕತೆ ಇದೆಯೇ?" ಎಂದು ಕೇಳಿದಳು ಲಕ್ಷ್ಮಿ.

ಇಬ್ಬರೂ ನಡುಗುತ್ತಿದ್ದರು.

ಸಿದ್ದಯ್ಯನು ಬಾಯಿಯೆತ್ತಿ ಮಾತಾಡಲಿಲ್ಲ. ಎದ್ದು, ದೀಪ ಉರಿಸಿ, ಹೋಗಿ ಬಾಗಿಲು ತೆರೆದು, ಹೊರಗೆ ಕಾಲಿಟ್ಟನು. ಲಕ್ಷ್ಮಿಯೂ ಮಾತಿಲ್ಲದೆ ಆತನನ್ನು ಹಿಂಬಾಲಿಸಿದಳು.

ಇಬ್ಬರೂ ಹಟ್ಟಿಯ ಕಡೆಗೆ ಹೋದರು. ನೋಡುವುದೇನು? ಹಟ್ಟಿಯ ಮಾಡು ಜರಿದು, ಚೂರಾಗಿ ಬಿದ್ದಿತ್ತು. ಅದರ ಕೆಳಗೆ ಸಿದ್ದಯ್ಯನ ಎರಡು ಕೋಣಗಳೂ ಚಡಪಡಿಸುತಿದ್ದುವು. ಗಾಬರಿಯಾಗಿ ಸಿದ್ದಯ್ಯನು ಹಾ ಹಾ ಎನ್ನುತ್ತ ಕಂದಿಲವನ್ನು ಹೆಂಡತಿಯ ಕೈಗೆ ಕೊಟ್ಟು, ಮುಂದೆ ಹಾರಿ, ಕೋಣಗಳ ಮೈಮೇಲಿನ ಹಂಚುಗಳನ್ನೂ ಬಿದಿರುತುಂಡುಗಳನ್ನೂ ತೆಗೆದನು. ಕೋಣಗಳು ದಡಮ್ಮನೆ ಎದ್ದು ನಿಂತುವು. ಆದರೆ–

ಅದೇನು, ಕೋಣಗಳ ಕಾಲುಗಳ ಕೆಳಗೆ, ಅಂಗಾತ ಬಿದ್ದಿರುವ ಬಿಳಿಯ ಆ ವಸ್ತು?

ಸಿದ್ದಯ್ಯನು ದೀಪವನ್ನು ಆ ವಸ್ತುವಿನ ಬಳಿಗೆ ತಂದು, ಬಾಗಿ ನೋಡಿದನು. ನೋಡಿನವನೇ ಚಿರ್ರೆಂದು ಚೀರಿ ಬಿಟ್ಟನು:–"ಹಾ, ಇದಾರು?–ಲೋಕಯ್ಯ! ಅಯ್ಯೋ ದೇವರೇ!!"

ತಲೆಬುರುಡೆಯೊಡೆದಿತ್ತು; ಕೈಯೊಂದು ತಿರುಪಿ ಹೋಗಿ, ಬೆನ್ನ ಹಿಂದೆ, ಮುರಿದು ಸಿಕ್ಕಿಕೊಂಡಿತ್ತು; ದೋತರದ ಮೇಲೆ ಕೋಣದ ಎರಡು ಗೊರಸುಗಳು ಕಾಣುತ್ತಿದ್ದವು. ಎರಡಡಿ ವ್ಯಾಸಕ್ಕೆ ನೆತ್ತರು ಚೆಲ್ಲಿ ಹರಿಯುತ್ತಿತ್ತು.

ಸಿದ್ದಯ್ಯನು ಲೋಕಯ್ಯನನ್ನೆತ್ತಿದನು. ಎಲ್ಲವೂ ತಣ್ಣಗಾಗಿತ್ತು. ಗಂಡನೂ ಹೆಂಡತಿಯೂ ಕೂಡಿ ಆ ಕಳೇಬರವನ್ನು ಹೊತ್ತುಕೊಂಡು ಹೋಗಿ, ಮುಖದ ಮೇಲೆ ತಣ್ಣೀರೆರಚಿದರು; ಕೈಕಾಲುಗಳನ್ನು ಒತ್ತಿ ನೋಡಿದರು; ಮೈಯನ್ನು ಅಲುಗಾಡಿಸಿದರು. ಏನು ಮಾಡಿದರೇನು? ಜೀವವಿರುವ ಚಿಹ್ನೆಗಳೇ ಕಂಡುಬರಲಿಲ್ಲ.

* * * *

ಮರುದಿನ ಊರಲ್ಲೆಲ್ಲ ಭಯಭೀತಿಯ ಮುಖಗಳು, ಪಿಸು ಮಾತಿನಿಂದ ನುಡಿಯುತ್ತಿದ್ದುವು–"ಸಿದ್ದಯ್ಯನ ಕೋಣವನ್ನು ಕದಿಯಲು ಹೋದ ಲೋಕಯ್ಯನ ಮೇಲೆ ದೇವಿಯು ಮುನಿದು, ಹಟ್ಟಿಯ ಮಾಡನ್ನು ಬೀಳಿಸಿ ಕೊಂದಳು!" ಎಂದು.

ಸಿದ್ದಯ್ಯನು ತನ್ನ ಹೆಂಡತಿಯೊಡನೆ ಹೇಳಿದನು:–"ತಿಳಿದೆಯಲ್ಲನೇ? ದೇವಿಗೆ ಬೇಕಾದುದು ನನ್ನ ಕೋಣದ ನೆತ್ತರಲ್ಲ; ದುರಾಲೋಚನೆ ಮಾಡುವವರ ತಲೆಯ ನೆತ್ತರು!"

(All Rights reserved).

ನಾಡಿನ ಪ್ರಸಿದ್ಧ ಪುರುಷರು. ೧೧.

ಶ್ರೀ. ಪ್ರೊ. ಕೆ. ವಿ. ಐಯ್ಯರ್.

(ಲೇಖಕರು:—ಶ್ರೀ. ಶಿವರಾಮ ಕಾರಂತರು.)

ಪ್ರೊಫೆಸರರಾಗುವಷ್ಟು ಸುಲಭದ ಕೆಲಸ ಇನ್ನೊಂದಿಲ್ಲ. ಎದೆಯ ಮೇಲೆ 500 ತೊಲೆ ಭಾರವಾದ ಕಲ್ಲನ್ನೊ, ತಲೆಯ ಮೇಲೆ 700 ತೊಲೆ ಭಾರವಾದ ಟೋಪಿಯನ್ನೋ ಇರಿಸಿಕೊಂಡರೆ—ತನಗೆ ತಾನೇ ಪ್ರೊಫೆಸರನೆಂಬುವ ಬಿರುದು ಅಂಟುವುದು. ಅದಿಲ್ಲವಾದರೆ—ಎರಡು ಜಾದು ಆಟಗಳಿಂದ ಒಂದು ಇಸ್ತ್ರೀಟು ಗುಲಾಮನನ್ನು ಸುಟ್ಟು-ಒಂದು ಕೋಳಿಯ ತತ್ತಿಯನ್ನು ಹೊರಡಿಸಿದರೆ—ಆ ಬಿರುದು ದೊರೆಯುವುದು. ಕಾಲೇಜುಗಳು ಅಧ್ಯಾಪಕರಂತೆ ಎಮ್. ಎ. ಗಿಮ್. ಎ ಆಗಿ ಪರರಿಂದ ಬೇಡಿ ಪ್ರೊಫೆಸರ್‌ಗಿರಿಯನ್ನು ಎರವಾಗಿ ತರಲೇಕೆ? ಶ್ರೀಯುತ ಕೆ. ವಿ. ಐಯ್ಯರರೂ ಪ್ರೊಫೆಸರರು—ಎಂದು ಕೇಳಿದ್ದೆ. ಹೀಗಿರಲು ಅದೊಂದು ದಿನ ಅವರನ್ನೂ ಈ '—ಸರರ' ಮಾಲಿಕೆಯಲ್ಲೂ ತೂಗಹಾಕಿ ಬಿಟ್ಟೆ. ಹೆಚ್ಚಿನ ಬೆಲೆ ಅವರಿಗೆ ಕೊಡುವ ಪ್ರಸಂಗ ನನಗೆ ಸಿಗಲಿಲ್ಲ.

ಅವರ ಚಿತ್ರದ ಪರಿಚಯವಿಲ್ಲದವರಿಲ್ಲ. ಅಖಿಲಭಾರತದ ಯಾವತ್ತು ಆಂಗ್ಲಾಭಾಷಾ ಪತ್ರಿಕೆಗಳಲ್ಲಿ ಅವರ ರುಂಡಮುಂಡಗಳ ಭಾವಚಿತ್ರವು ಕಾಣುವುದು. ಅವರಂತೆಯೇ ಬೇರೆ ಒಂದೆರಡು ಪ್ರಕಟಣೆಗಳೂ ಇವೆ. ಅವರಿಗಿಂತ ದಪ್ಪದ ಜನರು. ವ್ಯಾಯಶಃ ಅವರಿಗಿಂತ ದುಬಾರಿ—ಪ್ರೊಫೆಸರರಿರಬಹುದು. ಇದೆಲ್ಲ ಪರಸ್ಪರ ಪರಿಚಯಕ್ಕೂ ಮೊದಲಿನ ಅಭಿವ್ಯಾಯಗಳು. ಅವರ ಮುಖತಃ ಪರಿಚಯವಾದುದು ಬಾಗಿಲಕೋಟೆಯಲ್ಲಿ. ಹಿಂದುಸ್ಥಾನಿ ಸೇವಾದಲದ "ಅಕೇಡಮಿ" ಸ್ಥಾಪನೆಯ ಕಾಲದಲ್ಲಿ ಅವರು ವ್ಯಾಯಾಮ ಪರಿಷತ್ತಿಗೆ ಅಧ್ಯಕ್ಷರಾಗಿ ಬಂದಿದ್ದರು. ನಾನೂ ಈ ಪರಿಷತ್ತಿಗೆ ಹೋಗಿದ್ದೆ. ಆಗವರು ಶಿಷ್ಯಭರಿತರಾಗಿದ್ದರು ಅಲ್ಲಿ ಯಾರೋ ಪರಸ್ಪರ ಪರಿಚಯವನ್ನು ಮಾಡಿಕೊಟ್ಟರು. ಇಬ್ಬರೂ ಶರೀರ ವ್ಯಾಯಾಮಪ್ರಿಯರಾಗಿದ್ದರೂ ಮಾತುಕತೆ ನಡೆಯಿಸಿದ್ದಿಲ್ಲ. ಮಾತಿನ ಪ್ರಸಂಗ ವಿಚಿತ್ರರೀತಿಯಿಂದ ದೊರೆಯಿತು. ಬಾಗಿಲಕೋಟೆಯ ಭೋಜನ ಶಾಲೆಯಲ್ಲಿ ಬಡಿಸಿದ ಆ ದಿವ್ಯವಾದ ತುಪ್ಪದ ವಿಮರ್ಶೆಮಾಡುತ್ತ-ನಮ್ಮ ಮಾತಿನ ಪ್ರಸಂಗ ಬೆಳೆಯಿತು. ಮೂರುದಿನ ಜತೆಯಲ್ಲಿ ಕುಳಿತು ಊಟಮಾಡುವಾಗಲೂ, ಮೊದಲಿನ ದಿನ ಬಡಿಸಿದ ತುಪ್ಪದ ನೆನಪನ್ನೂ ವರಿಮಳವನ್ನೂ ಕಾಣುತ್ತ—ಮಾತಾಡುತ್ತಿದ್ದೆವು.

ಬಾಗಿಲಕೋಟೆಯಲ್ಲಿ ಶ್ರೀ. ಕೆ. ವಿ. ಐಯ್ಯರರು ಚಿಲ್ಲರೆ ಪ್ರೊಫೆಸರರೆಂದು ಮನಗಂಡೆನು. ಅವರ ಮುಂದೆಯೇ ಒಣಗಿದ ವಿಾನಿನಂತಿರುವ ಭೂಪತಿಯೊಬ್ಬನು ಸಾವಿರವೂ ಚಿಲ್ಲರೆ ಸೂರ್ಯನಮಸ್ಕಾರಗಳನ್ನು ಮಾಡಿ—ಸೂರ್ಯದೇವನನ್ನು ಮಾತ್ರವಲ್ಲ—ವ್ಯಾ"ಯಮ"ನನ್ನೂ ತೃಪ್ತಿಪಡಿಸಿದನು. ಅಲ್ಲೊಂದು ರಾತ್ರಿ—ಶ್ರೀ. ಐಯ್ಯರರು ಒಂದು ಕಬ್ಬಿಣದ ಸರಳಿನ ಕೆಳಗೆ ನಿಂತು ಕತ್ತನ್ನು ಅದಕ್ಕೆ ತಾಗಿಸಿ ಕೈಗಳ ಕೆಳಗಿನ ಸರಳೊಂದು ಬಗ್ಗುವಂತೆ ಒದ್ದಾಟದಿಂದ ತೋರಿಸಿದರು! ಈ ಮತ್ತಿತರ ಕಸರತ್ತುಗಳಿಂದಾಗಿ ನಮ್ಮ ಸೂರ್ಯಭಕ್ತನಷ್ಟಿಲ್ಲದಿದ್ದರೂ ಚಿಲ್ಲರೆ ರೀತಿಯಲ್ಲಿ ಇನರೊಂದು ಪ್ರೊಫೆಸರರೆಂದು ಒಪ್ಪಿದೆ. ಈ ಒಪ್ಪಿಗೆಯೊಡನೆ ಇನ್ನೊಂದು ನೆನಪು ಇಂದಿಗೂ ಚೆನ್ನಾಗಿ ಉಳಿದಿದೆ—ಅದು ಅವರಿಗೆ "ತಲೆಯಿಲ್ಲವೆಂದು" ಅವರು ಶರೀರವನ್ನೆಲ್ಲ ಉಬ್ಬಿಸಿ ನಿಂತಾಗ, ಅವರ ತಲೆಯು—ಬೆಟ್ಟದ ಮೇಲೆರಗಿದ ಗಿಡುಗನಂತೆ ·0008 ಕ್ಕಿಂತಲೂ ಕಡಿಮೆಯಾಗಿ ಬಿಟ್ಟಿತು. ಎಷ್ಟು ವ್ಯಾಯಾಮ ಮಾಡಿದರೇನು—ತಲೆಯುಬ್ಬದ ಬಳಿಕ ಕೇಳುವವರಾರು?

ಆ ಬಳಿಕ ಅವರು ನಮ್ಮೂ ಮಂಗಳೂರಿಗೆ ಬಂದಿದ್ದರು. ನಾನೂ ಅವರ ಹರಿಕುಲೇಶನ ವ್ಯಾಯಾಮ ಶಾಲೆಯಿರುವ—ಬೆಂಗಳೂರಿಗೆ ಹೋಗಿದ್ದೆ. ಒಂದೆರಡು ಬಾರಿ ವ್ಯಾಯಾಮ ಶಾಲೆಯನ್ನು ಕೆಂಡು ಬೆದರಿದ್ದೂ ಉಂಟು. ನಾನು ಹೋದಾಗ ಅಲ್ಲಾರೂ ವ್ಯಾಯಾಮ ಮಾಡುತ್ತಿರಲಿಲ್ಲ. ಬದಲು, ಐಯ್ಯರರು ಪಂಜೆಯಿಳಿಕೊಂಡು ಅತ್ತಿತ್ತ ಅಲೆಯುತ್ತಿದ್ದರು. ಅವರ ಸುತ್ತುಮುತ್ತು, ಭೀಮನ ಮರಿಗಳನ್ನು ಕಾಣುವ ಮೊದಲು—ವಸ್ತುಪ್ರದರ್ಶನಾಲಯದಲ್ಲಿ ಅರ್ಹತೆಯನ್ನು ಪಡೆಯುವ ಹಲವು ಮನುಷ್ಯ ಶರೀರಗಳು ಅಲೆಯುತ್ತಿದ್ದವು. ಅವೆಲ್ಲ—ಐಯ್ಯರರ ಸೋಂಕಿನಿಂದ ದಪ್ಪವಾಗಲು ಬಂದವುಗಳಂತೆ! ಅವರ ಮೈಯ ವಿಷಯ ನಾನು ಹೇಳಲಾರೆ; ತಲೆಯ ವಿಷಯ—ಐಯ್ಯರರಿಂದೇನೂ ಆಗದೆಂದು ನನಗೆ ತಿಳಿದೇ ಇದೆ.

ಪ್ರೋ. ಐಯ್ಯರು ಒಳ್ಳೆಯವರು. ಮೊದಲಿನ ಬಾರಿ ನನ್ನನ್ನು ಊಟಕ್ಕೆ ಆಮಂತ್ರಿಸಿದಾಗ 'ಕ್ಷೀರಾ'-'ಹಲ್ವಾ'-ವರ್ಗದ ತಿಂಡಿತಿನಸುಗಳನ್ನೂ, ಆಯುರ್ವೇದದ ದಿವ್ಯ ಲೇಹ್ಯ, ರಸಾಯನಗಳನ್ನು-ನಾಟಿಸುನ—ವಾಯಸಗೀಯನಗಳನ್ನು ಬಡಿಸಿದ್ದರು! ಮೇಲೆ ಊಟದ ಬಳಿಕ 'ಬಾಯಾ'ಇತ್ತು. ಆಗಲೇ ಅಂದುಕೊಂಡೆ—ಅನುದಿನ ಇಂಥ ಊಟ ದೊರತರೆ, ಸಿಪ್ಪೆಸುಲಿದ ಒಂದು ಓತಿಕಾಟವೂ—ಇಮ್ಮಡಿ ಪ್ರೊಫೆಸರರಾಬೀತೆಂದು. ಹೀಗಾಗಿ—ಅವರು "ನಮ್ಮಲ್ಲೇ ಬಂದಿಳಿದು ಬಿಡಿ"—ಎಂದು ನನ್ನನ್ನು ತಮ್ಮ ಮನೆಗೆ ಆಮಂತ್ರಿಸಲು—ನಾನು ಎರಡು ಸೀಸೆ ಕಾಸ್ಟೋಫೀನನ್ನು ಕೊಂಡೇ ಅವರ ಮನೆಗೆ ಹೋದೆ. ಆದರೆ ಎದೆಯೊಡೆಯುವ ದೃಶ್ಯ. ಆ ಪರಮಾನ್ನ, 'ಕ್ಷೀರ' ಹಲ್ವಾಗಳೆಲ್ಲಿ—ಈ ಅರ್ಧಾರ್ಥ ಸಂಬಂಧವಿಲ್ಲದ, ಕೆಂಪಕ್ಕಿ ಬೋನ, ತರಕಾರಿ, ಪುಳಿಚಾರುಗಳೆಲ್ಲಿ! ಮೂರ್ಛೆಹೋಗುವುದರಲ್ಲಿದ್ದೆ. ಅವರು ನನ್ನನ್ನು ಆದರಿಸಿ ಈ ಅಕ್ಕಿಯಲ್ಲಿ ಪ್ರೋಟೀನು ಜಾಸ್ತಿ, ಈ ಪಲ್ಯ ಪೂರಾ ವಿಟಮಿನ್ C, ಇದು D ಈ ಉಪ್ಪಿನಕಾಯಿ ವಿಟಮಿನ್ Z. ಈ ಮಜ್ಜಿಗೆ ಕಾರ್ಬೋಹ್ಯಾಡ್ರೇಟ್—X—ಎಂದೆಲ್ಲಾ ಹೇಳಿದರು. ಈ ಸಾಮಾನುಗಳು ದೇಹದ ಬೆಳವಣಿಗೆಗೆ ಬೇಕೆಬೇಕೆಂದರು. ಅಂತು ಧರ್ಮದ ಊಟವನ್ನು ವಿಮರ್ಶಿಸುವ ಅಧಿಕಾರ ಬಡ ಬ್ರಾಹ್ಮಣನಿಗಿದೆಯೇ ಎಂದು ಸುಮ್ಮನಾದೆ. ಬೆಳಗಿನ ಕಾಫಿಗೆ ಕುಳಿತರೆ—ಪ್ರೊಟೀನು ವಿರಹಿತ ಕಾಫಿ ಕೊಟ್ಟರೂ, ಪ್ರೋಟೀನು ಸಹಿತ—ಕೆಂಪು ಬ್ರೆಡ್ಡನ್ನೂ ಕೊಡುತ್ತಾರೆ! ಪಾಪ ಅವರ ಚಿಕಿತ್ಸಾಲಯದ ಅಸಾಮಿಗಳೆಷ್ಟು ಮಂದಿಗೆ, ಬಳಿಪೇಟೆಯ ತುಪ್ಪದ ದೋಸೆಯ ಮೇಲೆ ಮನಸ್ಸು ಹರಿಯುವುದರಲ್ಲಿ ಆಶ್ಚರ್ಯವಿದೆಯೆ!

ಅವರ ವ್ಯಾಯಾಮ ಶಾಲೆಯಲ್ಲಿ—ಡಂಬೆಲ್ಲುಗಳು 10,000, ಬಾರ್‌ಬೆಲ್ಲು ಕೆಲವು—ಇತ್ಯಾದಿಗಳು ಇವೆ. ಇದೇ ವ್ಯಾಯಾಮ ಶಾಲೆಯು ನಗ್ನ ಚಿತ್ರಗಳ ಶಾಲೆ. ಸ್ವತಃ ಐಯ್ಯರರೇ ವಿಸೆ ಬೋಳಿಸಿಕೊಂಡು, ಮಗುವೆಂಬ ಭ್ರಾಂತನ್ನು ಹಿಡಿದುಕೊಂಡು ನಗ್ನ ಚಿತ್ರಗಳನ್ನು—ನಾನಾ ಶಿಲಾವಿಗ್ರಹಗಳ ಭಂಗದಲ್ಲಿ ತೆಗೆಯಿಸಿಕೊಂಡಿರುವರು.

ಈ ಆಸ್ಪತ್ರೆಲ ಕಾರ್ಯಕ್ಕೆ ಆಧಾರವುರುಷರೆಂಬಂತೆ–ನಿಗ್ ಮಂಡ್ ಟನ್, ಸ್ಯಾಂಡೊ, ಟೊನಿಸೌನ್ಸನ್–ರಂತಹ ಅಸಾಮಿಗಳ ಚಿತ್ರಗಳೂ ಇವೆ.

ಅವರ ಆಫೀಸು ರೂಮಿಗೆ ಬಂದರೆ ಅಲ್ಲೂ ಸುಖವಿಲ್ಲ. ಎಲ್ಲವೂ ಕಲೆಯಲ್ಲದವರಿಗೆ ಅನವಶ್ಯಕವಾದ ವಸ್ತುಗಳೇ! ಶರೀರ ವ್ಯಾಯಾಮ ಸಂಸ್ಕೃತಿ–ಇತ್ಯಾದಿಗಳ ವಿಚಾರವಾದ ಕಿತಾಬುಗಳ ರಾಶಿ. ಬರೇ ಮೈಯವಲ್ಲ, ಡಾಯಟಿಕ್ಸ, ಚರಿತ್ರೆ, ಸಾಹಿತ್ಯ–ಇವುಗಳ ಮೇಲೆ ಪುಸ್ತಕಗಳೂ ಬಿದ್ದಿವೆ! ಇನ್ನೊಂದು ಕೊರಡಿಗೆ ಹೋದರೆ–ಅಲ್ಲಿ–ಮಾಲಿಸು (Massage) ಮಾಡಲು ತರತರದ ವಿದ್ಯುತ್ ಯಂತ್ರಗಳು! ಇದಕ್ಕೆಲ್ಲ ಮರುಳಾಗಿ ಯಾವಾಗಲೂ, ರೋಗಗಳನ್ನು ಕಟ್ಟಿಕೊಂಡು ಅವರಲ್ಲಿಗೆ ಓಡಿಬರುವ ರೋಗಿಗಳು ಹಲವರನ್ನು ನಾನು ಕಣ್ಣಾರೆ ನೋಡಿ ಬೆರಗಾದೆ. ಈ ಪ್ರೊಫೆಸರರು ಡಾಕ್ಟಾರ ಮರಿಯೂ ಅಹುದು.

ಐಯ್ಯರರ ಪ್ರದರ್ಶನಾಲಯದ ಜನರ ವಿಚಾರ ಹೇಳಿದೆ. ಸಂಜೆ, ಬೆಳಿಗ್ಗೆ ಅವರ ಆಲಯಕ್ಕೆ ಕೂಬ್ಬು ಕರೆಗಿಸಲು, ಮಾಂಸಖಂಡ ಬೆಳೆಯಿಸಲು ಬರುವ ತರುಣರನ್ನೂ, ಮುದುಕರನ್ನೂ ಕಂಡಿದ್ದೇನೆ! ಇವರಿಂದಾಗಿ ನಿನ್ನೆ ಮಾಡಿಸಿದ ಅಂಗಿ ನಾಳೆಗೆ ಉಪಯೋಗಕ್ಕೆ ಬರಲಾರದು! ಐಯ್ಯರರ ಶಿಷ್ಯರಂತಿದ್ದಾರೆ. ಅವರ ಪಶುಶಾಲೆಯ ಒಂದು ದನ, ಒಂದು ದೇಹಲಿ ಎಮ್ಮೆ–ಇವು ಸಹ ಗಾಮನಂತೆ ಬೆಳೆದಿದ್ದಾವೆ!

ಅವರ ಶರೀರವು ತೀರ ಕರ್ರಗಾಗಿದೆ. ದೀಪದ ಬಲದಿಂದ ಅಲ್ಲಲ್ಲಿನ ಮಾಂಸದ ಗುಡ್ಡೆಗಳನ್ನು ವಿಂಗಡಿಸಿ ನೋಡಬಹುದು ಅವರು ಅದನ್ನು ಬೇರೆ ಬೇರೆಯಾಗಿ ಕುಣಿಸಿ ತೋರಿಸುತ್ತಾರೆ. ಇದು ಆಶ್ಚರ್ಯವಲ್ಲ. ನಿರ್ಜೀವವಾದ ವಿಾಸೆಯ ಕೂದಲನ್ನು ಕುಣಿಸಲು ಬರುವುದಿಲ್ಲವೇನು? ಆದರೆ ಈ ಶರೀರವನ್ನು ಮೆಚ್ಚಿ 'ಇವರ ಸುಂದರ ಕಾಯ'ಕ್ಕೆ ಮುಗ್ಧರಾಗಿ ಪ್ರಪಂಚದ ಪ್ರಥಮ ಬಹುಮಾನವು ಇವರಿಗೆ ಕಳಿದ ವರುಷ ದೊರಕಿದೆ. ಈಗಿನ ಸುಂದರ ಶರೀರಗಳಲ್ಲಿ 'ಟೋನಿ ಸಾನ್ಸನ್' 'ಐಯ್ಯರ'ರಿಬ್ಬರೇ ಮೇಲಾಳುಗಳಂತೆ. ಅಮೆರಿಕದ ಪ್ರಸಿದ್ಧ ವ್ಯಾಯಾಮಿ ಮೆಕ್‌ಫೆಡನನು "Mr. Iyer is a class by himself" . . ಎಂದಿರುತ್ತಾನೆ! ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ ನಾವು ಸಹ ನಮ್ಮ ತರಗತಿಯ ಜನಗಳೇ ಅಲ್ಲವೇನು?

ನಾನು ಈ ತನಕ ವಿವರಿಸಿದ ವಿಷಯ ತಿಳಿಯದವರಿಗೆ. ಈ ಉಪ ಸಂಹಾರದ ಮಾತುಗಳು. ಶ್ರೀ. ಐಯ್ಯರರು ಪ್ರೊಫೆಸರರು ಮಾತ್ರವಲ್ಲ, ವಿದೇಶದ ಶರೀರ ವ್ಯಾಯಾಮಗಳಿಂದಲೇ 'D. Phe' ಬಿರುದನ್ನು ಪಡೆದ ವಿದ್ವಾಂಸರು. ಅವರ ಶರೀರದ ಈ ಸೊಕ್ಕು ಮಾಂಸಹೀನ ಹುಳಿಸಾರು, ತರಕಾರಿಗಳಿಂದಲೇ–ಉಂಟಾದುದು. ಹಲ್ವಾದ ಮಣಗಳ ಸಂಖ್ಯೆಯನ್ನು ಹೊಂದಿ ಮಾಂಸಬೆಳೆಯುತ್ತದೆ ಎಂಬ ಮಲ್ಲರ ವ್ಯಾಯಾಮ ಪದ್ಧತಿಗೆ ಅವರು ಪ್ರತಿದ್ವಂದ್ವಿಗಳು. ಅವರ ರುಂಡವು ಮುಂಡಕ್ಕಿಂತ ಕಿರಿದಾದರೂ, ಅವರ ವ್ಯಾಯಾಮ ಪದ್ಧತಿಯು–ಮಿದುಳಿಲ್ಲದೆ ನಡೆಯುವ ಕೆಲಸವಲ್ಲ. ಅವರ ಶರೀರ ಸಂಸ್ಕಾರ ಪದ್ಧತಿಯು ಪರಿಪೂರ್ಣವಾದುದು. ಬರೇ ವ್ಯಾಯಾಮ ಒಂಕರಿಂದ ಮುಗಿಯುವಂಥದಲ್ಲ. ಅವರಿಗೆ ಶರೀರ ಶಾಸ್ತ್ರ, ಮನಃ ಶಾಸ್ತ್ರ, ವ್ಯಾಯಾಮ ಶಾಸ್ತ್ರ, ಚಿಕಿತ್ಸಾ ಧರ್ಮ—ಇವುಗಳ ಅಸಾಧಾರಣ ಪರಿಣಯವಿದೆ!

ಅವರ ತಿಳಿವು ಈ ಒಂದು ವಿಷಯದಲ್ಲಿ ಮಾತ್ರವಲ್ಲ–ಕಲೆ, ಸಾಹಿತ್ಯವಿಚಾರಗಳಲ್ಲೂ ಇದೆ. ಹಳೆ ಹೊಸಗನ್ನಡದ ಸಾಹಿತ್ಯವೆರಡನ್ನೂ ಈ ನಮ್ಮ ಬಲಭೀಮರು ವ್ಯಾಸಂಗಮಾಡಿದವರು. ಸೊಗಸಾದ ಅಭಿರುಚಿಗಳು ಅವರವು. ಅವರ ಶಿಷ್ಯಕೂಟವು ದಿಗ್ದೇಶಗಳಲ್ಲೆಲ್ಲ ಇದ್ದಾರೆ. ಇದರಿಂದಾಗಿ ಅವರಿಗೆ ಸಾಕಷ್ಟು ವರಮಾನವೂ ಇದೆ. ಆದರೆ ಅವರ ಪ್ರೇಮವು ವರಮಾನಕ್ಕಿಂತ ಮಾನದಲ್ಲೇ ಹೆಚ್ಚಾಗಿದೆ. ಉತ್ತಮ ಗೆಳೆಯರಾಗಲು ಬೇಕಾಗುವ ಸೌಹಾರ್ದ್ರತೆ, ನಿಷ್ಕಾಪಟ್ಯಗಳು ಅವರಲ್ಲಿವೆ! ವ್ಯಾಪಾರಿಗೆ ಬೇಕಾಗುವ–"ಜಾಹೀರಾತು" ಬುದ್ಧಿಯೂ ಇದೆ.

ನಾನು ಆಕಸ್ಮಿತವಾಗಿ ಸಾಯುವುದಿದ್ದರೆ, ನನ್ನ ಶರೀರವನ್ನು ಸುಡದೆನೆ ಐಯ್ಯರಲ್ಲಿಗೆ ಕಳುಹಿಸತಕ್ಕದೆಂದೂ—ಅವರು ಅದನ್ನು ಯೋಗ್ಯ ವ್ಯಾಯಾಮದಿಂದ ತಿದ್ದಿ, ನಾನು ಸಂಚಾರ ಮುಗಿಸಿ ಮರಳಿ ಬರುವಾಗ "ಅಪ್‌ಟುಡೇಟ್"—ಆಗಿ ಇರಿಸಬೇಕೆಂದು ಹೇಳಿ—ಹೋಗಲು ಇಷ್ಟಪಡುತ್ತೇನೆ. ಇದಕ್ಕೆ ಅವರ ಒಪ್ಪಿಗೆಯನ್ನು ಕೇಳಿಲ್ಲ. ಅಂತು–ಅವರಲ್ಲಿ ಶರೀರ ಭದ್ರತೆಗೆ ಎಂದೂ ಕುಂದು ಬರಲಾರದು.

ದಿವಂಗತ ಆಸ್ಥಾನ ಮಹಾ ವಿದ್ವಾನ್

ವೇ॥ ಬ್ರ॥ ಶ್ರೀ॥ ಮೋಟಗಾನಹಳ್ಳಿ ರಾಮಶೇಷ ಶಾಸ್ತ್ರಿಗಳವರು:–

ವೇ॥ ಶಾಸ್ತ್ರಿಗಳವರು 1867ನೇ ಇಸವಿ ಸಪ್ಟಂಬರ ಮಾಹೆಗೆ ಸರಿಯಾದ ಅಕ್ಷಯ ಸಂವತ್ಸರ ಭಾದ್ರಪದ ಶುದ್ಧ ಚತುರ್ದಶಿ ರವಿವಾರದಲ್ಲಿ ಬೆಂಗಳೂರಿಗೆ ಸಮೀಪದಲ್ಲಿರುವ ಮೋಟಗಾನ ಹಳ್ಳಿಯೆಂಬ ಗ್ರಾಮದಲ್ಲಿ ಜನ್ಮವನ್ನೆತ್ತಿದರು ಇವರು ಆಂಧ್ರ ಮೂಲಕ ನಾಡಿಗೆ ಸೇರಿದ ವೆಲ್ಲಾಲ ವಂಶಸ್ಥರು. ಬಾಲ್ಯದಲ್ಲಿಯೇ ಮಾತೃ ವಿಯೋಗವಾದುದರಿಂದ ಮನೆಯಲ್ಲಿ ಸರಿಯಾಗಿ ಪೋಷಣೆ ಮಾಡುವ ವರಾರೂ ಇಲ್ಲದೇ ಇದ್ದುದರಿಂದಲೂ ಇವರು ತಮ್ಮ 15–16ನೆಯ ವಯಸ್ಸಿನ ವರೆಗೂ ಗೃಹಕೃತ್ಯಗಳಲ್ಲಿಯೇ ನಿರತರಾಗಿದ್ದುಕೊಂಡು ಯಾವ ವಿಧವಾದ ವಿದ್ಯಾಭ್ಯಾಸದ ಕಡೆಗೂ ಗಮನಕೊಡಲಾಗಲಿಲ್ಲ. ಈ ಸಮಯದಲ್ಲಿ ಆ ಗ್ರಾಮದ ಕೆಲವು ಪ್ರಮುಖರು ಬಂದು "ನಿಮಗೆ ವಯಸ್ಸು ಅಧಿಕವಾಯಿತು. ನೀವು 'ಸರಸಕುಲಾನಂದ ಬಾಣ' 'ಭಾಗವತ ಚಂಪು' 'ನೀಲಕಂಠ ವಿಜಯ ವ್ಯಾಖ್ಯಾನ'ವೇ ಮೊದಲಾದ ಉದ್ದಾನು ಗ್ರಂಥಗಳನ್ನು ರಚಿಸಿ ಸುಪ್ರಸಿದ್ಧರಾಗಿರುವ ಅಭಿನವ ಕಾಳಿದಾಸರ ವಂಶಸ್ಥರಾದ್ದಾಗ್ಯೂ ವಿದ್ಯಾಭ್ಯಾಸದ ಕಡೆಗೆ ಗಮನ ಕೊಡದಿರುವುದು ಬಹಳ ಶೋಚನೀಯವಾಗಿದೆ" ಎಂದು ಪಶ್ಚಾತ್ತಾಪ ಪಡಲು, ಅದನ್ನು ಕೇಳಿ ಇವರು ಹಟಗೊಂಡವರಾಗಿ ಕೆಲವು ದಿವಸಗಳಲ್ಲಿಯೇ ಸಮೀಪದಲ್ಲಿರುವ ಮಾಗಡಿಗೆ ಹೋಗಿ ಅಲ್ಲಿ ವಿದ್ಯಾಭ್ಯಾಸವನ್ನು ಪ್ರಾರಂಭಿಸಿದರು. ಬಹಳ ಸ್ವಲ್ಪ ಕಾಲದಲ್ಲಿಯೇ ಇವರು ಅತಿ ಮುಖ್ಯವಾದ ಕಾವ್ಯಗಳೆಲ್ಲವನ್ನು ಓದಿ ಸಂಸ್ಕೃತ ಸಾಹಿತ್ಯದಲ್ಲಿ ತಮಗಿದ್ದ ಪ್ರತಿಭೆಯನ್ನು ವ್ಯಕ್ತಗೊಳಿಸಿದರು. ಅನಂತರ ಸುಮಾರು 20ನೆಯ ವಯಸ್ಸಿನಲ್ಲಿ ಇವರು ಬೆಂಗಳೂರನ್ನು ಸೇರಿ ಆಗ್ಗೆ ಉದ್ದಾಮ ಪಂಡಿತರೆನಿಸಿದ್ದ ವೇ॥ ಬ॥ ಶ್ರೀ॥ ವಿದ್ಯಾನಿಧಿ ವಾಸುದೇವ ಶಾಸ್ತ್ರಿಗಳಲ್ಲಿಯೂ ವೇ॥ ಬ್ರ॥ ಶ್ರೀ॥ ಪಂಡಿತರತ್ನಂ ಸೀತಾರಾಮ ಶಾಸ್ತ್ರಿಗಳಲ್ಲಿಯೂ ಮತ್ತು ವೇ॥ ಬ್ರ॥ ಶ್ರೀ॥ ಚಪ್ಪಲ್ಲಿ ವಿಶ್ವೇಶ್ವರ

ಶಾಸ್ತ್ರಿಗಳಲ್ಲಿಯೂ ಸಾಹಿತ್ಯ ವ್ಯಾಸಂಗವನ್ನು ಮಾಡಿ ಸಾಂಗವಾಗಿ ವಿದ್ಯಾಭ್ಯಾಸವನ್ನು ಪೂರ್ತಿಗೊಳಿಸಿದರು.

ಅನ್ನದಿನಿಂದಲೇ ಇವರು ಸಾಹಿತ್ಯ ಸೇವೆಯನ್ನು ಮಾಡಲುಪ ಕ್ರಮಿಸಿ ಸಂಸ್ಕೃತದಲ್ಲಿ ಅತಿ ಗಹನವಾಗಿರುವ ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಿ ಸಂಸ್ಕೃತ ಭಾಷಾ ಪರಿಚಯವಿಲ್ಲದವರಿಗೆ ಸಂಸ್ಕೃತದಲ್ಲಿರುವ ಸ್ವಾರಸ್ಯವಾದ ಮತ್ತು ಕಠಿಣವಾದ ವಿಷಯಗಳನ್ನು ತಿಳಿಸಲು ಬದ್ಧಕಂಕಣರಾದರು. ಪ್ರಾರಂಭದಲ್ಲಿ, ಹಿತೋಪದೇಶ ಮಿತ್ರಲಾಭದ ಮತ್ತು ವಿಶಾಖದತ್ತ ರಚಿತವಾದ ಮುದ್ರಾ ರಾಕ್ಷಸ ನಾಟಕದ ಕನ್ನಡ ಅನುವಾದವನ್ನು ರಚಿಸಿ ಕ್ರಮೇಣ ಕನ್ನಡ ಟೀಕಾತಾತ್ಪರ್ಯಗಳಿಂದೊಡಗೂಡಿದ ಶ್ರೀ ಭಾಗವತ ಮಹಾ ಪುರಾಣವನ್ನೂ ಪ್ರಕಟಿಸಿರುವ ವಿಷಯವು ಸಕಲರಿಗೂ ವಿದಿತವಾಗಿಯೇ ಇದೆ. ಇವರು ಶ್ರೀ ಭಾಗವತ ಪುರಾಣವನ್ನು 1911ನೆಯ ಇಸವಿಯಲ್ಲಿ ಮಾಸಪತ್ರಿಕೆಯ ರೂಪದಲ್ಲಿ ಪ್ರಾರಂಭಿಸಿ, ಅನೇಕ ವಿಘ್ನಗಳು ಬಂದೊದಗಿದಾಗ್ಯೂ ಎದೆಗುಂದದೆ, 1932ನೇ ಇಸವಿಯಲ್ಲಿ ಸಂಪೂರ್ಣವಾಗಿ ಪ್ರಕಟಗೊಳಿಸಿ ಕನ್ನಡಿಗರಿಗೆ ಶ್ರೀ ಭಾಗವತ ಮಹಾ ಪುರಾಣದ ಪ್ರತಿಪದಾರ್ಥ ತಾತ್ಪರ್ಯಗಳನ್ನು ಲಭಿಸುವಂತೆ ಮಾಡಿರುವ ಕಾರ್ಯ ಸಾಧನೆಯು ಸ್ತೋತ್ರಾರ್ಹವಾಗಿದೆ. ಇದಲ್ಲದೆ ಇವರು ಪ್ರತಿ ಅಧ್ಯಾಯದ ಪ್ರಾರಂಭದಲ್ಲಿಯೂ ಆಯಾ ಅಧ್ಯಾಯದ ವಿಷಯವನ್ನು ಸೂಚಿಸುವ ಸುಲಭ ಶೈಲಿಯ ಒಂದೊಂದು ಕಂದ ಪದ್ಯವನ್ನು ರಚಿಸಿ ಸೇರಿಸಿರುತ್ತಾರೆ. ಇವರ ಕವಿತಾ ಶಕ್ತಿಯು ಬಹಳ ಉಚ್ಚತರವಾದದ್ದು; ಮತ್ತು ಇವರ ಶೈಲಿಯು ಸ್ತ್ರೀ ಬಾಲರಾದಿಯಾಗಿ ಸರ್ವರಿಗೂ ಸುಲಭವಾಗಿ ಅರ್ಥವಾಗುವಂತೆ ಸರಳವಾದದ್ದು. ಇವರು ಮಾಡಿರುವ ಈ ತೆರನಾದ ಕರ್ನಾಟಕ ಸಾಹಿತ್ಯ ಸೇವೆಗೆ ಕನ್ನಡಿಗರೆಲ್ಲರೂ ಚಿರ ಋಣಿಗಳಾಗಿರಬೇಕಾಗಿದೆ.

ಇದಲ್ಲದೆ, ಇವರು ಮುಕುಂದಾನಂದ ಬಾಣದ ಕನ್ನಡ ಅನುವಾದವನ್ನು, ವಾಮನವಿಜಯವೆಂಬ ನಾಟಕವನ್ನು ಮತ್ತು ವಿಚಾರ ಸಾಗರವೆಂಬ ವೇದಾಂತ ಗ್ರಂಥವನ್ನೂ ಕನ್ನಡದಲ್ಲಿ ಬರೆದಿಟ್ಟಿರುತ್ತಾರೆ. ಈ ಗ್ರಂಥಗಳನ್ನು ಪ್ರಕಟಿಸಿ ಇನ್ನೂ ಅನೇಕ ಗ್ರಂಥಗಳನ್ನೂ ಬರೆದು ಪ್ರಚುರಗೊಳಿಸಿ ಕನ್ನಡಿಗರ ಹಸ್ತಗತವಾಗುವಂತೆ ಮಾಡಲು ಸಾಕಾದಷ್ಟು ಅವಕಾಶವಿಲ್ಲವಲ್ಲ ಎಂಬ ಕೊರತೆಯೇ ಇವರನ್ನು ಸದಾಕಾಲದಲ್ಲಿಯೂ ಆವರಿಸಿದ್ದಿತು. ಇವರಿಗೆ ಉಭಯ ಭಾಷೆಗಳಲ್ಲಿಯೂ ಇದ್ದ ಉದ್ದಾಮ ಪಾಂಡಿತ್ಯವನ್ನು ಪರಾಂಬರಿಸಿ ಗುಣೈಕ ಪಕ್ಷಪಾತಿಗಳಾದ ನಮ್ಮ ಶ್ರೀಮನ್ಮಹಾರಾಜರವರು ಇವರನ್ನು ಮಹಾ ವಿದ್ವತ್ಪದದಿಂದ ಗೌರವಿಸಿದರು. ಅಲ್ಲದೇ ಶ್ರೀಮನ್ಮಹಾಮಾತೃಶ್ರೀ ವಾಣೀ ವಿಲಾಸ ಮಹಾ ಸನ್ನಿಧಾನದವರು ಇವರಿಗೆ ಸಂಗೀತ ಸಾಹಿತ್ಯಗಳಲ್ಲಿದ್ದ ವ್ಯಾಧಿಮೆಯನ್ನರಿತು, 8–10 ವರ್ಷಗಳ ಕಾಲ ಅವಿಚ್ಛಿನ್ನವಾಗಿ ಇವರಿಂದ ಪುರಾಣವನ್ನು ಹೇಳಿಸಿ, ಶ್ರವಣ ಮಾಡಿದರು.

ವೇ॥ ಶಾಸ್ತ್ರಿಗಳವರು ಉಪಾಧ್ಯಾಯ ವೃತ್ತಿಯನ್ನವಲಂಬಿಸಿ ಪ್ರಾರಂಭದಲ್ಲಿ ಆರ್ಯ ಬಾಲಿಕಾ ಪಾಠಶಾಲೆಯಲ್ಲಿಯೂ, ಕ್ರಮೇಣ ನಾರ್ಮಲ್ ಸ್ಕೂಲ್ ಮುಂತಾದುವುಗಳಲ್ಲಿಯೂ ಅಂತ್ಯದಲ್ಲಿ ಮೈಸೂರಿನಲ್ಲಿರುವ ಶ್ರೀಮನ್ಮಹಾರಾಣಿಯವರ ಕಾಲೇಜಿನಲ್ಲಿಯೂ ಕನ್ನಡ ಮತ್ತು ಸಂಸ್ಕೃತ ಅಧ್ಯಾಪಕರಾಗಿದ್ದು ತಮಗೆ ಬಾಲಪಾಠ ಮತ್ತು ಪ್ರೌಢ ಪಾಠಗಳನ್ನು ಹೇಳುವುದರಲ್ಲಿದ್ದ ಸಾಮರ್ಥ್ಯವನ್ನು ತೋರ್ಪಡಿಸಿದರು. ಇದನ್ನರಿತೇ ಶ್ರೀಮನ್ಮಹಾರಾಜರು ಇವರನ್ನು ಸರಕಾರದ ಕೆಲಸದಿಂದ ನಿವೃತ್ತರಾದ ಮೇಲೂ ಶ್ರೀಮದ್ಯುವರಾಜಕುಮಾರರು ಶ್ರೀ ಜಯ ಚಾಮರಾಜ ಒಡೆಯರವರಿಗೆ ಸಂಸ್ಕೃತ ಮತ್ತು ಕನ್ನಡ ಅಧ್ಯಾಪಕರನ್ನಾಗಿ ನಿಯಮಿಸಿದರು.

ಇಂತಹ ಅಸಾಧಾರಣ ಪಾಂಡಿತ್ಯವುಳ್ಳ ವೇ॥ ಶಾಸ್ತ್ರಿಗಳವರು 1934ನೇ ಇಸವಿ ಫೆಬ್ರವರಿ 16ರಲ್ಲಿ ತಮ್ಮ 67ನೆಯ ವಯಸ್ಸಿನಲ್ಲಿ ವಿಧಿವಶರಾದರೆಂದು ತಿಳಿಸಲು ಶೋಚನೀಯವಾಗಿದೆ. ಇವರು ಮಾಡಿರತಕ್ಕ ಸಾಹಿತ್ಯ ಸೇವೆಯು ಅಸದೃಶವಾದದ್ದು. ಇಂತಹ ಮಹನೀಯರ ವಿಷಯದಲ್ಲಿ ಅಲ್ಪಜ್ಞನಾದ ನನಗೆ ವಿಶೇಷವಾಗಿ ಬರೆಯಲು ಶಕ್ತಿ ಇಲ್ಲ. ಆದರೂ ಇವರ ಮರಣದಿಂದ ಸಾಹಿತ್ಯ ಪ್ರಪಂಚಕ್ಕೆ ಉಂಟಾಗಿರುವ ನಷ್ಟವು ವರ್ಣನಾತೀತವಾದುದೆಂದು ಧಾರಾಳವಾಗಿ ಹೇಳಬಹುದು. ಇವರು ಮಾಡಿರತಕ್ಕ ಸಾಹಿತ್ಯ ಸೇವೆಗೆ ಮೆಚ್ಚಿ ಜಗದೀಶ್ವರನು ದಿವಂಗತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥನೆ.

ಶಿಷ್ಯ.

ಯತಿ.

(ಪಾರ್ನೆಲನ 'ಹರ್ಮಿಟ್'' ಎಂಬ ಕಾವ್ಯದ ಸಂವಿಧಾನ.)

(ಧಾಟಿ ಲಾವಣಿ: ಪದಪ್ರಸ್ತಾರ ೮-೮-೧೦.)

I

ಧರಾಧರಧರಂ—ನುರಾಸುರಪರಂ—ಚರಾಚರವರಂ—ಪರಾತ್ಪರಪರಂ. ॥ ಪಲ್ಲ ॥

1. ವಯೋನ್ಯದ್ಧ ಚಿ-ನ್ಮಯಾಖ್ಯಕಂ ಯೋ-ಗಿಋಷಿರ್ದನತಿಕಾಲಂ । ಯೋ-ಗಿಯಿರ್ದ ।
ಭಯಂಕರ ವಿಪಿನ-ದೆ ಯೇಕನಾಗಿರೆ,—ಸ್ವಯಂಶಾಂತಿತೃಪ್ತಂ ॥ ಧರಾ ॥

2. ಹಣ್ಣುಹಂಪಲ—ನ್ನುಣ್ಣುತ, ಕೆಲದಿಹ-ದಿಣ್ಣೆಯ ಜರಿಯಿಂದಾ । ಇಹ-ದಿಣ್ಣೆ . ।
ತಣ್ಣೀರ್ಕುಡಿವನು;—ನುಣ್ಣೆಲೆ ಹಾಸುಗೆ,—ಸಣ್ಣ ಗವಿಯೆ ಭವನಂ. ॥ ಧರಾ ॥

3. ಪರಬ್ರಹ್ಮ ಸು-ಸ್ವರೂಪಿತ ಶ್ರೀ-ಹರಿಧ್ಯಾನವನ್ನೂ । ಶ್ರೀ-ಹರಿ.
ಸರಾಗದಿಂದ ದಿ-ನ ರಾತ್ರಿ ನೂಡುವ-ನರೋತ್ತಮನೆ ತಾನೂ. ॥ ಧರಾ ॥

4 ಒಂದು ಸಂಶಯಂ-ಬಂದು ಮುಸುಕಿತಾ-ನಂದಚಿತ್ತಕವನಾ, । ಆ-ನಂದ ।
ಚಂದಿರಬಿಂಬಕೆ-ಮುಂದೆ ಕಾರ್ಮುಗಿಲ-ಸಂದಣಿ ಬರುವಂತೆ. ॥ ಧರಾ ॥

5. ತಿಳಿಯ ಕೊಳದೊಳಗೆ-ಬಳಿಯ ದಡವು-ಮರ-ಗಳು ನೀಸರು ಜಾನೂ । ಮರ-ಗಳು ।
ಹೊಳೆಯೆ, ಕಿರಿಯ ಕ-ಲ್ಬುಳಿಯೆ ನೆಳಲ್ಗಳು- ಚಳವಳಿಗೊಳುವಂತೇ ॥ ಧರಾ. ॥

6. ಇಷ್ಟು ನಡೆಸುತಿಹೆ-ಸೃಷ್ಟಿಪಾಲ ನೀ-ವಿಷ್ಣುವೆ ಪರಮಾತ್ಮಾ । ಈ-ವಿಷ್ಣು. ।
ದುಷ್ಟನಿಗಿಷ್ಟವ,-ಶಿಷ್ಟಿಗೆ ಕಷ್ಟವ,-ನೇಕ್ಷಿಪುದೇಂ ಚೇಷ್ಟೇ? ॥ ಧರಾ ॥

7. ಅಹೋ ರಾತ್ರಿಯೊ-ರಹಸ್ಯವಿದೆ; ನಿ-ಸ್ಸಹಾಯಮಾಗಿರ್ದೂ, । ನಿ-ಸ್ಸಹಾ. ।
ಗುಹಾಚಿಂತನದಿ-ಮಹಾಪವಾದಾ-ಪಹಾರವೆಲ್ಲಿಹುದೂ? ॥ ಧರಾ. ॥

8. ಇಂತು ಸಂಶಯದ-ಚಿಂತೆಯನುಂ ತಾ-ಮಂಥನಗೊಳಿಸಲ್ಕೇ । ತಾ-ಮಂ. ।
ಸಂತನು ಪೊರಟನು,-ಸ್ವಂತದ ದಂಡವ-ಕಂಥೆಯನೊಡಗೂಡೀ. ॥ ಧರಾ. ॥

II

1. ಮುಂದೆ ಕಂಡನನ-ನಂದಿನ ದಿನಪತಿ-ಸುಂದರ ತರುಣನನೂ । ಅತಿ... ।
ಸಂದುದು ಮಾತುಗ-ಳಿಂದರೆ ದಾರಿಯು-ಸಂಧ್ಯೆಯಾಯ್ತು ಕೊನೆಗೇ. ॥ ಧರಾ.. ॥

2. ಆಗಳ್ಕಂಡರು-ಬಾಗಿಲ ತೆರೆದಿಹ-ಸೋಗಿನ ಮಂದಿರವಾ । ಇಹ-ಸೋ. ।
ಬೇಗನೆ ಧನಿಯಿದಿ-ರಾಗಿ ಬಂದವರ-ಸ್ವಾಗತಕರಿಸಿದನೂ. ॥ ಧರಾ. ॥

3. ಅಲಂಕಾರದು-ಜ್ವಲಾನ್ವಿತಂ ವಿಧು-ಶಿಲಾಶಾಲೆಯಲ್ಲೀ । ವಿಧು-ಶಿಲಾ. ।
ಬಲಾತ್ಕಾರದಿಂ-ದಲಾಯ್ತು ಭೋಜನ-ಫಲಾಹಾರ ಮೊದಲೂ. ॥ ಧರಾ.. ॥

4. ಸುರಭಿ ಸುರತರುಗ-ಳಿರುವುವಿಲ್ಲಿಯಿಂ-ಬರುಹು ಜಿನಿಸುತಿರಲೂ, । ಎಂ-ಬರು. ।
ಪರಿಪರಿ ಭಕ್ಷ್ಯ-ವರಭೋಜ್ಯಾನ್ನವ-ನಿರದೆ ಭುಂಜಿಸಿದರೂ. ॥ ಧರಾ.. ॥

5. ಮೃದುಲ ಹಂಸತೂ-ಲದ ತಲ್ಪದೊಳತಿ-ಮುದದಿ ನಿದ್ರೆಗೆಯ್ದೂ, । ಅತಿ-ಮುದ. ।
ಉದಯದೊಳೇಳ-ಲ್ಕೊದವಿನ ದೌತಣ-ವದು ಭಂಗಿಯೊಳಾಯ್ತೂ. ॥ ಧರಾ.. ॥

ಜೊಪ್ಪ ಪಾಣಿಯಾ-ಪಣ್ಣೀರಿಂದಮ್-ರನ್ನಾ ಶ್ರೀಮಂತಂ । ಅನ್-ರನ್ನಾ.. ।
ಚಿಕ್ಕನೆ ನೆನೆಯಿನಿ,-ತಿನ್ನೆಯ ನಿನಗಿರ್-ಲೆಸ್ಸುತ ಬೀಳ್ಕೊಟ್ಟಂ. ॥ ಧರಾ.. ॥
ಮೂರು ನೂರರ್ತಾ-ದೂರದಾಂಗಿ-ನ್ನಾರು ಕಾಣಜ್ಜಂತೇ, । ಇ-ನ್ನಾರು.. ।
ಹಾರಿಸಿರ್ದ ಪ-ನ್ನೀರದಾನಿಯಂ-ತೋರಿಸಿದಂ ಶರುಣಂ. ॥ ಧರಾ.. ॥
ತಣ್ಣಗಾಗಿ ಮೈ,-ಕಣ್ಣಾ-ಮೋರೆ ಕೆಂ-ಬಣ್ಣಬೇರೆ ಯತಿಗೇ, । ಕೆಂ-ಬಣ್ಣ.. ।
ಉಣ್ಣೆಯೆಮ್ಮ ನಲೆ,-ತರ್ಣ ಸಿಡಿಯಿತಾ-ರಣ್ಯವಾಯ್ತು ಮನವೂ! ॥ ಧರಾ.. ॥

III

ಸುಮ್ಮನಿರ್ದ ಬಲು-ದುಮ್ಮಾನದ ಮುನಿ-ಸಂಮನದೊಳಗಿರಿಸೀ । ಮುನಿ-ಸಂ... ।
ಹಿಮ್ಮೆಟ್ಟದೆ ನಡೆ-ದಂ ಮುನಿ ತರುಣನ-ಸಮ್ಮೋಳನದಿಂದಾ॥ ಧರಾ..॥ [×ಕಿಡೆ... ।
ಸಿಡಿಲು ಜಡಿಗಳೆಡೆ-ಬಿಡದೆ ಹೊಡೆಯೆ ತುಡು-ಕಿಡೆ ತೊಡಗಿತು ನಭವೂ; । ತುಡು-×
ಪಡುಗಡಲಲಿ ರವಿ-ಯಡಗೆಯೊಡನೆ ತಲೆ-ಯಿಡಲೆಡೆ ಪ್ರಡುಕಿದರೂ. ॥ ಧರಾ... ॥
ಕಂಡರಾಗಳು-ದ್ದಂಡ ಸೌಧವಾ-ಖಂಡಲ ದಿಙ್ಮುಖದೇ; । ಅ-ಖಂ... ।
ತಂಡದಿ ಬಂಜರು-ಗೊಂಡಿದೆ ಸುತ್ತಲ-ಖಂಡ ಲೋಭಿಯಲ್ತೇ? ॥ ಧರಾ... ॥
ಕಟಕಟ ಕದವಾ-ರ್ಭಟಿಸಿ ತಟ್ಟೆ, ಮೇಲ್ಕಿಟಕಿಯಿಂದ ಹಣಿಕೇ, । ಮೇ-ಲ್ಕಿಟಕಿ... ।
ಕಟು ಮುಖದಾ ಕ-ರ್ಪಟಕನು ಕರೆದನು-ಪಟಳವಿದೆಂಬಂತೇ. ॥ ಧರಾ.. ॥
ಪರೋಪಕಾರದೆ-ನಿರಸ್ತನಹ ಧನ-ಪರಾಯಣಂ ಕೃಪಣಂ; । ಧನ-ಪರಾ... ।
ದುರುಸ್ತಿಲ್ಲ ಮಂ-ದಿರಂ; ಭೋಜನಂ-ಪರಿಷ್ಕಾರಮಲ್ಲಾ. ॥ ಧರಾ.. ॥
ಕೆಲ್ಲ ನೇಲೆ ಬರಿ-ತುಲ್ಲು ಹಾಸಿಯದ-ರಲ್ಲಿ ಮಲಗಿಸಿದನೂ; । ಅದ-ರಲ್ಲಿ... ।
ಅಲ್ಲನನುದಯಸ-ಲಿಲ್ಲಿಪ ಮುನ್ನಮೆ-ಮೆಲ್ಲ ನೆಚ್ಚರಿಸಿದಂ. ॥ ಧರಾ.. ॥
ತರುಣನು ಪರಮಾ-ದರದಿಂದಲಿ ಕ-ರ್ಬುರದಾನಿಯನಾಗಾ । ಕ-ರ್ಬುರ... ।
ಕರುಣಾರಹಿತಂ-ಗಿರದೊಪ್ಪಿಸಿ ತಾ-ಹರಸಿಯಪ್ಪಿಕೊಂಡಂ. ॥ ಧರಾ.. ॥
ದಿಟ್ಟಿಸಿ ಬಿಟ್ಟನು-ನಿಟ್ಟುಸುರಂ, ಯತಿ-ಪಟ್ಟನು ವಿಸ್ಮಯಮಂ—। ಯತಿ-ಪಟ್ಟನು.. ।
"ನೆಟ್ಟನೆ ಸುಜನನ-ಬಟ್ಟಲ ಕದ್ದೀ-ದಿಟ್ಟಗೆ ಕೊಟ್ಟನಲಾ!" ॥ ಧರಾ.. ॥

IV

ದಾರಿ ನಡೆಯೆ ಹರ-ದಾರಿಯಾರು ಕುಮು-ದಾರಿಯಡಗುತಿರ್ದಂ,।ಕುಮು-ದಾರಿ. ।
ದಾರಿದ್ರ್ಯತಪಮು-ದಾರಿಮುಖೇನ ಸು-ದಾರಿಸಿ ಮಸುಳ್ವಂತೇ ॥ ಧರಾ. ॥
ಇದಿರಿಗೆ ಕಂಡರು-ಸದನವ, ಸುಖಸಂ-ಪದವಿದಿತಪ್ರದವಾ, । ಸಂ-ಪದ. ।
ಸುಧೆಯುದಧಿಯ ಮ-ಧ್ಯದೊಳಿಹ ಪೈಕುಂ-ರದ ಸಿರಿಪದದ ವೊಲೂ. ॥ ಧರಾ. ॥
ಬನ್ನಿರಿತ್ತ ಸಂ-ವನ್ನರೆ! ಶ್ರೀ ಹರಿ-ಯೆನ್ನ ಪೂಲಿಗಿತ್ತಾ । ಹರಿ-ಯೆನ್ನ. ।
ಹೊನ್ನೆಲ್ಲಕೆ ನೀ-ವಿನ್ನು ಭಾಗಿಗಳು,-ಮನ್ನಿಸಿರೆನುತೊಡೆಯಂ, ॥ ದರಾ. ॥
ಹರಿಭಜನೆಯ ಗೆ-ಯ್ದೊರಡು ಗಳಿಗೆ, ಸ-ತ್ಕರಿಸಿದನತಿಥಿಗಳಾ; । ಸ-ತ್ಕರಿಸಿ.. ।
ಸರಿಯಿಲ್ಲೆಂಬಾ-ದರದಲಿ ರುಚಿಹಿತ-ಕರ ಭೋಜನದಿಂದಾ ॥ ಧರಾ. ॥
ತಾಂಬೂಲಂ ಮೆ-ದ್ದುಂ ಬ್ರುಹ್ಮಜ್ಞಾ-ನಂ ಭಕ್ತಿಯಿನರಿದೂ । ಜ್ಞಾ-ನಂ. ।
ಇಂಬಿನ ಶಯ್ಯೆಯೊ-ಳುಂ ಬಿಟ್ಟನದಾ-ಡಂಬರಮಿನಿತಿಲ್ಲಾ! ॥ ಧಂರಾ. ॥
ಪ್ರಾತಃಕಾಲದೊ-ಳಾ ಶರುಣನು ತಾ-ಮಾತಾಡದಲಿದ್ದೂ, । ತಾ-ಮಾತಾ.. ।
ಆ ತೊಟ್ಟಲೊಳಿಹ-ನೂತನ ಶಿಶುವಿನ-ಚೇತನ ಳಿಕಿತಿಸಿದಂ. ॥ ಧರಾ. ॥
ಕೃಪಾವಿಷ್ಟನಹ-ತಪೋನಿಷ್ಠನೀ-ಪ್ರಪಂಚವನು ಕಂಡೂ, । ಈ-ಪ್ರಪಂಚ. ।
ವಿಪತ್ತು ಬಂತು ಮ-ಧ್ಯಪಾತಕದೆನುತ-ಕಪಾಲನಂ ಬಡಿದಂ. ॥ ಧರಾ ॥
ವಿನರಿಯುದ ಯಜ-ಮಾನನವರ ಸ-ನ್ಮಾನದಿಂದಲುಣಿಸೀ । ಸ-ನ್ಮಾನ. ।
ಕಾನನ ದಾಟಿಸಿ-ನೀನು ಮರಳೆನೆನುತ-ದೀನ ಭೃತ್ಯಗೊರೆದಂ. ॥ ಧರಾ. ॥

V

ಒಡೆಯನ ಜೀಳ್ಕೊಂಡೊಡನೆ ನಡೆಯೆ,ನುಂ-ಡಡವಿಯ ನಡುವಿನಲೀ।ಮುಂ-ಡ ।
ತಡೆಯದೆ ಯುವಕನು-ಬಡಸೇವಕನನು-ಮಡುವೊಳು ಕೆಡಹಿದನೂ. ॥ ಧರಾ ॥
ಸಿಟ್ಟಿಡರಲು, ಕಂ-ಗೆಟ್ಟು ಕೊರಳೊಳ್-ಕ್ಕಟ್ಟು ಕಟ್ಟಿ ಯತಿಗೇ, । ಇ-ಕ್ಕಟ್ಟು.. ।
ಪುಟ್ಟಿ ಬೆವರು ಹಿ-ಮ್ಮೆಟ್ಟಿತು ತಾಕ್ಕೈಯು-ಜುಟ್ಟ ಪಿಡಿವುತೆಂದಂ. ॥ ಧರಾ. ॥
"ಚಂಡಾಲನೆ! ಮುಂ-ಕೊಂಡು ಸುಲಿದೆಯಾ-ಮಂಡಲೇಶನನ್ನೂ! । ಅ-ಮಂಡ.. ।
ಉಂಡ ಮನೆಗೆರಡ,-ಭಂಡನೆ ಬಗೆದಿಯೆ!-ಗಂಡುವುಂಟೆ ನಿನಗೇ? ॥ ಧರಾ.. ॥
"ಉಸಾಂಶುಹೃತ ಜೀ-ಮಸಾತ್ಮವಂ ನೀ-ನಪಾತ್ರ ಕೃಪಣನಿಗೇ । ನೀ-ನಪಾ.. ।
ಅಪಾರಮಪ್ಪ ದು-ರುಪೇಕ್ಷೆಯಿಂದಲಿ-ಯುಪಪ್ರದಿಸಿದೆಯಲಾ! ॥ ಧರಾ. ॥
"ಅರ್ಭಕಳಂತಮ-ನಿರ್ಬದಿಯಲಿ ನೀ-ನಿರ್ಭರದಿಂದೊತ್ತೀ, । ನೀ-ನಿರ್ಭರ.. ।
ದುರ್ಭರ ಮೃತಿಯೂ-ವರ್ಭವಿಸಿದೆಯೆಂ-ದಾರ್ಭಟವೆತ್ತಿದನೂ. ॥ ಧರಾ ॥
"ಬಂಟನ ನೂಂಕಿದೆ-ಕುಂಬಿ ನೀರೊಳಿಂ-ತುಂಬಿ ಮಹಾ ಪಾಪಂ? । ಇಂ-ತುಂಬಿ.. ।
ಶುಂಠನೆ ನಿನ್ನಯ-ಗಂಟಲ ಮುರಿವೆನ-ಕಂಟಕನಾಗಿಪೆನೂ". ॥ ಧರಾ.. ॥
ಇಂತು ಗರ್ಜಿಸು-ತ್ತಂ ತವಕಿಸಲ-ತ್ಕಂತ ರೋಷದಿಂದಾ, । ಅ-ತ್ಯಂತ.. ।
ಸಂತನ ಕೈ ಕೇ-ಶಾಂತದಿಲ್ಲ; ಯುವ-ನಂತರ್ಧಾನನನಹೋ! ॥ ಧರಾ.. ॥
ಗದಾಶಂಖಾಬ್ಜ-ಕ್ರಧಾರಿ, ಶ್ರೀ ಸ-ಚ್ಚಿದಾನಂದ ಮೂರ್ತೀ । ಸ-ಚ್ಚಿದಾ.. ।
ತದಾ ತೋರ್ದನ-ಲ್ಲಿ, ದಾಮೋದರಂ,-ಸದಾನಂತಕೀರ್ತೀ! ॥ ಧರಾ.. ॥

VI

ಝಗಝಗುಗ ಮೊಗೆವುಗೆ-ಗಗನದಿ ನಗೆಸೊಗ-ದಗಣಿತ ಭುಗಿಲಿಂದಾ,। ಮೊಗ-ದಗ.. ।
ಸುಗುಣಗಣಗೃಹಗೆ-ಬಗೆ ಮಿಗೆ ದಿಗಿಲಿಡೆ-ಚಿಗುರಿತು ಸಂದೆಗವೂ ॥ ಧರಾ.. ॥
ಝಳಕ್ಕನೆ ತಾ ಪಾ-ದಕ್ಕೆರಗುತ ಬಲು-ಕಕ್ಕಸದಿಂ ನುಡಿದಂ. । ಬಲು-ಕಕ್ಕ.. ।
"ಲೆಕ್ಕಿಸದಿರ್ಪುದು-ಚಿಕ್ಕ ಮನಸಿನಿಂ-ಕುಕ್ಕಿದ ವಚನಗಳಂ. ॥ ಧರಾ.. ॥
"ಆಮಾನುಷನೆ, ಖಗ-ವಿಮಾನನಿಗೆ ಸರಿ-ಸಮಾನ ಮೂರುತಿಯೇ! । ಸರಿ-ಸ.. ।
ಕ್ಷಮಾಪಣೆಯ ಗೈ-ಪ್ರಮಾದ ವಾಕ್ಯವ,-ನಮೋನಮಃ" ಎಂದಂ. ॥ ಧರಾ.. ।
ಅಕ್ಕರೆಯಲಿ ಕೈ-ಯಿಕ್ಕಿತ್ತು ತಲುರೆ-ತಕ್ಕೈಸಿದನವನಾ । ಉರೆ-ತ.. ।
ಉಕ್ಕುವ ವೀಣೆಯ-ಮಿಕ್ಕಿತು ದನಿ,-ನಸು-ನಕ್ಕು ದಿವ್ಯನುಸಿರ್ದಂ. ॥ ಧರಾ.. ॥
ಅಪ್ಪಂತಿರೆ ಸಾ-ರೂಪ್ಯ ಪದವಿಯೆನೆ-ಗೊಪ್ಪಿತುಃ ಶ್ರೀಧರನಾ । ಎನ-ಗೊ.. ।
ಅಪ್ಪಣೆ ನಡೆಸುತ,-ತಪ್ಪದಲರಸುತ-ಲಿಪ್ಪೆನು ಸಾಯುಜ್ಯಂ.॥ ॥ ಧರಾ.. ॥
ನಿನ್ನಯ ಗುಣಗಳು-ಸನ್ನುತನಹ ವೆಂ-ಬುನ್ನತ ಕೀರ್ತಿಯಿದೇಃ । ಎಂಬು-ನ್ನತ.. ।
ಎನ್ನಲು, ಸಂಶಯ-ದಿಂ ನೆರೆ ಮೋಕ್ಷವು-ಕನ್ನಡಿಪಣವಹುದೂ. ॥ ಧರಾ. ॥
ಪರಮಾತ್ಮನ ಪರ-ಚರಿತದ ಪರಿಯದ-ಪರಿಕಿಸಲೆಂತಹುದೂ? । ಅದ-ಪರಿ.. ।
ನರನ ವಿಮರ್ಶೆಗೆ-ದೊರಕುವುದೇ ವಿ-ಸ್ತರದ ಸಂಗತಿಗಳೂ? ॥ ಧರಾ . . ॥
ಪಾಪಪುಣ್ಯದಾ-ಟೋಪದಿಂದಲಾ,-ಕೂಪಕಕ್ಷಪನೊಲೂ, । ಆ-ಕೂಪ.. ।
ಆಪಾದಿಸಲೇನಾಪೆಯನೀತಿಯ?-ಶ್ರೀಪತಿ ಸರ್ವಜ್ಞಂ! ॥ ಧರಾ . . ।

VII

ಇದೇ ಕಂಡದಿ-ನ್ನುದಾಹರಣಮೆಂದದನ್ನು ಭಾವಿಸು ನೀ । ಎಂ-ದದ... ।
ಉದಾತ್ತನಡಸುವ-ನುದಾಸೀನ ಗುಣ-ದಿ ದಾನ-ಧರ್ಮಗಳಂ. ॥ ಧರಾ... ॥
ಕೀರ್ತಿ ಕೀರ್ತನೆಯೆ-ಸ್ವಾರ್ಥದಿಂದ ಸ-ತ್ಪಾತ್ರವನರಿಯದಲೇ । ಸ-ತ್ಪಾತ್ರ... ।
ವರ್ತಿಪನು ಕನಕ-ಪಾತ್ರನಷ್ಟದಿ ನಿ-ವರ್ತಕನಾಗಿರ್ಪಂ. ॥ ಧರಾ.. ॥
ಕೃಪಣನರಿಯನೊಂ-ದುಪಕಾರವ, ಕಂ-ಡಪರಿಮಿತದ ಜಡಿಯಾ । ಕಂ-ಡಪ... ।
ಕೃಪೆ ಪುಟ್ಟಿದುದರ-ಸಫಲತೆಯರಿತಿಪ-ನೆ ಪರಿಗ್ರಪದಿಂದಾ. ॥ ಧರಾ.. ॥
ಮೂರನೆ ರಾತ್ರಿಯೊ-ಳಾರ್ಸಿದ ವರ-ಪೂರುಷನತಿಯೋಗ್ಯಂ, । ವರ-ಪೂ... ।
ಮಾರಮಣನ ಪಾ-ದಾರವಿಂದದ-ಲ್ಲಾರಡಿಯಾಗಿರ್ಪಂ ॥ ಧರಾ.. ॥
ವಾರ್ಧಿಕದಲಿ ಜನಿಸಿರ್ದ ಪಸುಳೆ ಭವ-ವಾರ್ಧಿಕೆಳೆಯಿತವನಾ; । ಭವ-ವಾ. ।
ದುರ್ಧರ್ಷೈಹಿಕ-ಸ್ಪರ್ಧೆಯ ಕಳೆದೆನು,-ಮರ್ದಿಸಿದೆನು ಕೂಸಂ. ॥ ಧರಾ.. ॥
ಚರನು ಮನೆಯೊಳೀ-ಯಿರುಳು ಧನವನಷ-ಹರಿಸಲ್ಕೆಳಸಿರ್ದಂ; । ಆಷ-ಹರಿ... ।
ನೀರವೇರಲ್ಕದು,-ಪರಹಿತಸಂಚಯ-ಕುರೆ ಬರ್ಪುದು ನ್ಯೂನಂ ॥ ಧರಾ.. ॥
ಶ್ರುತಿಶತಿನುತಮಿತಿ-ರತಿಜತಿಪಿತಕೃತಿ-ಹಿತವೆನೆ ಸಮ್ಮತಿಸೀ । ಕೃತಿ-ಹಿತ... ।
ಪ್ರತಿಹತಮತಿಜಿತ-ನತಿಗತಿಸುತ ಸಂ-ತತದಿ ತುತಿಸಲಪಹುದೂ. ॥ ಧರಾ . ॥
ಹಸ್ತವಿರಿಸಿ ಯತಿ-ಮಸ್ತಕದಲಿ 'ತೇ-ಸ್ವಸ್ತಿ'ಯೆಂದು ದಿವ್ಯಂ । ತೇ-ಸ್ವಸ್ತಿ... ।
ಅಸ್ತಮಿಸಿದನೀ-ಪ್ರಸ್ತುತಮರ್ಷಣ-ಮಸ್ತು ಮುಕುಂದನಿಗೇ! ॥ ಧರಾ.. ॥

M. Narasing Rao, B. A., M. L.

ಸ್ವದೇಶಾಭಿಮಾನಿ

ಸಾಹಿತ್ಯ ಸಂಚಿಕೆ.

ಸಂಪುಟ ೨ ಎಪ್ರಿಲ್ ೨೮—೪—೧೯೩೩. ಸಂಚಿಕೆ ೩

— ಅನುಕ್ರಮಣಿಕೆ —

	ಪುಟ
ಪ್ರಾಚೀನ ಕವಿಗಳು	೧೩
ಶ್ರೀ ವಿ ಬಿ. ಅಲೂರರು	೧೪
ಕಡಲ ತೆರೆ .	೧೯
ಇಲ್ಲವಿನಿಸು ಬೆಳಕು	,,
ಸನಾತನ ಧರ್ಮ ಸಭೆ . .	೨೦
ವ್ಯಾಸಿಸಿರಲು ಅಸ್ಪೃಶ್ಯವೆಲ್ಲಿ?	೨೪
ವಿಮರ್ಶೆ . .	,,

ಎಪ್ರಿಲ್ ತಾರೀಕು ೨೪ನೇ ಶುಕ್ರವಾರ ೧೯೩೩.

ಪ್ರಾಚೀನ ಕವಿಗಳು.

ಕನ್ನಡ ನಾಡಿನ ಪ್ರಾಚೀನ ಕವಿಗಳ ವಿಷಯ ಈಗೀಗ ಹೆಚ್ಚಿನ ಸಂಶೋಧನೆಯು ನಡೆಯುತ್ತಲಿದೆ. ಅವರ ಜೀವಮಾನದ ವಿಷಯ ಅವರ ಪದ್ಯಗಳಿಂದ ತಿಳಿದು ಬಂದುದೆಲ್ಲ ಪುಸ್ತಕ ರೂಪದಲ್ಲಿಯೂ ಲೇಖನ ರೂಪದಲ್ಲಿಯೂ ಪ್ರಸಿದ್ಧವಾಗಿದೆ. ಈ ಕೆಲಸವು ನಿಜವಾಗಿಯೂ ಬಹಳ ಕಠಿಣವಾದುದಾದರೂ ಉಪಯೋಗಕ್ಕೆ ಬೀಳುವಂಥಾದ್ದು ಎಂದು ನಿಸ್ಸಂದೇಹವಾಗಿ ಹೇಳಬಹುದು. ಕುಮಾರವ್ಯಾಸನ ಕಾಲದ ವಿಷಯವೂ ಅವನ ಹುಟ್ಟೂರಿನ ವಿಷಯವೂ ಚರ್ಚೆಯಾಗಿ, ಇನ್ನೂ ನಡೆಯುತ್ತಲೆ ಇದೆ. ಇನ್ನು ಮುಂದೆ ಸಂಶೋಧನೆ ಮಾಡುತ್ತಾ ಹೋದರೆ ಇನ್ನೂ ಅನೇಕ ಕವಿಗಳ ವಿಷಯ ಹೆಚ್ಚಿನ ಮಾಹಿತಿಯು ಸಿಗುವುದು ದುರ್ಲಭವಲ್ಲ. ಕವಿಗಳ ವಿಷಯ ಹೆಚ್ಚಿಗೆ ತಿಳಿದರೆ, ಅವರ ಕವಿತ್ವದ ಅಭ್ಯಾಸ ಮಾಡುವವರಿಗೆ ಸಹಾಯವಾಗುತ್ತದೆ. ಇಂಗ್ಲಿಷಿನಲ್ಲಿ ಶೇಕ್ಸಪಿಯರ ಅಥವಾ ಮಿಲ್ಟನ ಇವರ ನಾಟಕ ಕಾವ್ಯಗಳನ್ನು ಅಭ್ಯಾಸಿಸುವವರು ಮೊದಲು ಆ ಶ್ರೇಷ್ಠ ಕವಿಗಳ ಜೀವನ ಚರಿತ್ರೆಗಳನ್ನು ಓದುತ್ತಾರೆ. ಅದಲ್ಲದೆ ಅವರ ಜೀವನದ ಕಾಲವನ್ನೂ ಅಭ್ಯಾಸಿಸುತ್ತಾರೆ. ಕಾಲದ ಮಹಿಮೆಯು ಕವಿತೆಯಲ್ಲಿ ಕಾಣುವುದು. ಕವಿತೆಯು ಕಾಲದ ಮಹಿಮೆಯನ್ನು ಅನುಸರಿಸಿಯೆ ಇರುತ್ತದೆ. ಅದನ್ನೆಲ್ಲವನ್ನು ಅರಿತು ಅಭ್ಯಾಸಿಸಿದನನಿಗೆ ಕವಿತೆಯಲ್ಲಿಯ ಅಲಂಕಾರಗಳೂ, ಗೂಢವಾದ ಉಪಮೆಗಳೂ ತಿಳಿಯುವುವು.

ನಮ್ಮ ಪ್ರಾಚೀನ ಕವಿಗಳ ವಿಷಯ ಬರೆಯಲ್ಪಡುವ ಟೀಕೆಗಳು ಹೆಚ್ಚಾಗಿ ಅವರನ್ನು ಹೊಗಳಿಕೆಯ ಶಿಖರಕ್ಕೆ ನುಟ್ಟಿಸುವುವಲ್ಲದೆ, ಅವರ ನಿಜಸ್ಥಿತಿಯನ್ನು ತೋರಿಸುವಂಥವುಗಳಲ್ಲ. "ಅವನ ಛಂದಸ್ಸು ಒಳ್ಳೆಯದಿದೆ; ಭಾಷೆಯು ಶುದ್ಧವಾಗಿದೆ. ಶೈಲಿಯು ಸರಳ, ತಕ್ಕದಾದ ಉಪಮೆಗಳಿವೆ; ಕವಿತ್ವವು ಶ್ರೇಷ್ಠತರದ್ದಾಗಿದೆ." ಎಂಬುದನ್ನು ಪ್ರತಿಯೊಬ್ಬ ಕವಿಯ ವಿಷಯ ನಾವು ಓದುವೆವು. ಈ ತರದ ಟೀಕೆಗಳು ಕವಿಯ ನಿಜಸ್ವರೂಪವನ್ನು ವ್ಯಕ್ತಗೊಳಿಸಿ ಅವನಿಗೆ ಸಲ್ಲತಕ್ಕ ಸ್ಥಾನವನ್ನು ಸಲ್ಲಿಸದೆ, ಜನರಿಗೆ ಮಾರ್ಗದರ್ಶಿಗಳಾಗಲು ಅನರ್ಹವಾಗಿವೆ.

ಟೀಕೆ ಮಾಡುವವರು ಹೆದರದೆ, ತಮ್ಮ ಮನಸ್ಸಿಗೆ ತೋರಿದುದನ್ನು ಬರೆಯಬೇಕು; ಅದರೊಡನೆ ಜ್ಞಾನವನ್ನೂ ಅಭ್ಯಾಸವನ್ನೂ ತೋರ್ಪಡಿಸಬೇಕು. ಕವಿಯ ಹೊಗಳಿಕೆಯೊಂದಿಗೆ ಅವನ ಕುಂದುಗಳನ್ನೂ ತೋರ್ಪಡಿಸಿದರೆ, ಅವನ ಕೀರ್ತಿಗೆ ಪ್ರತಿಭೆಯನ್ನು ಕೊಟ್ಟಂತಾಗುವುದು.

ಕಾವ್ಯಗಳನ್ನು ಇನ್ನೊಂದು ರೀತಿಯಲ್ಲಿ ಅಭ್ಯಾಸಿಸ ಬಹುದು. ಒಬ್ಬ ಕವಿಯ ಗ್ರಂಥಗಳಿಂದ ನಮಗೆ ದೊರಕುವ ರಾಜಕೀಯ ಜ್ಞಾನವೆಷ್ಟು? ಅವುಗಳಿಂದ ಎಂತಹ ಸಾಮಾಜಿಕ, ನೈತಿಕ, ಧಾರ್ಮಿಕ ಸ್ಥಿತಿಗತಿಯು ತೋರುವುದು? ಎಂದು ಮೊದಲಾದ ರೀತಿಯಲ್ಲಿ ಅನೇಕ ವಿಷಯಗಳನ್ನು ಶೋಧಿಸಬಹುದು. ಕುಮಾರ ವಾಲ್ಮೀಕಿಯ ಪದ್ಯಗಳಿಂದ ಆ ಕಾಲದ ಸ್ಥಿತಿಯು ತಿಳಿದುಬರುತ್ತದೆ. ಹೀಗೆ ಆಲೋಚಿಸುತ್ತಾ ಹೋದರೆ ಎಷ್ಟೋ ವಿಷಯಗಳು ನಮಗೆ ದೊರಕ ಬಹುದು. ಕವಿಯು ಉಪಯೋಗ ಮಾಡಿದ ಶಬ್ದಗಳನ್ನು ಅಭ್ಯಾಸಮಾಡುವುದು; ಅದರಂತೆಯೆ ಅವನ ಛಂದಸ್ಸು, ಅವನ ಶೈಲಿ, ಹೇಗಿತ್ತೆಂದು ಅವನ ಮೇಲೆ ಇತರ ಕವಿಗಳ ವರ್ಚಸ್ಸು, ಇವೆಲ್ಲವನ್ನೂ ತಿಳಿದುಕೊಂಡರೆ ಸಾಹಿತ್ಯವಿಚಾರಗಳು ಹೆಚ್ಚಾಗುವುವೆಂಬುದಕ್ಕೆ ಸಂದೇಹವಿಲ್ಲ.

ನಾಡಿನ ಪ್ರಸಿದ್ಧ ಪುರುಷರು. ೩

ಶ್ರೀ. ವಿ. ಬಿ. ಆಲೂರರು.

(ಲೇಖಕ:—ಶ್ರೀ. ಕೂ. ಚಿ. ಕಾರಂತರು.)

ಶ್ರೀ ಆಲೂರರು ಕರ್ನಾಟಕದ ಜನರಿಗೆ ತುಂಬಾ ಪರಿಚಿತರು. ಅವರ ಹೆಸರು ಈ ನನಯುಗದಲ್ಲೇ ಅಷ್ಟು ಕೇಳಿಸುತ್ತಿಲ್ಲವೆಂಬುದು ನಿಜವಾದರೂ, ಕೆಲವೊಂದು ವರುಷಗಳ ಹಿಂದೆ ಅವರ ಹೆಸರೂ ಚಟುವಟಿಕೆಗಳು ತುಂಬಾ ಇದ್ದುವು. ನಾನು ಆಲೂರರರ ಹೆಸರನ್ನು ಮೊದಲಿನ ಬಾರಿಗೆ ಕೇಳಿದುದು ಅವರನ್ನು ಕಂಡ ಮೇಲೆ. ಆಗ ನಾನು ವಿದ್ಯಾರ್ಥಿಯಾಗಿದ್ದೆ. ಕರ್ನಾಟಕದಲ್ಲಿ ಜಾಗ್ರತೆಯನ್ನು ತುಂಬಿಸುವ ಸಲುವಾಗಿ, ಅವರೂ ಮುದವೀಡು ಕೃಷ್ಣರಾಯರೂ ಅಖಿಲ ಕರ್ನಾಟಕವನ್ನು ಜತೆಯಿಂದ ಸಂಚರಿಸುತ್ತಿದ್ದರು. ಆ ಸಮುಯದಲ್ಲಿ ಅವರು ತಮ್ಮ ಗೆಳೆಯರಂತೆ ವಕೀಲ ಉದ್ಯೋಗವನ್ನು ಮಾಡುತ್ತಿದ್ದಿರಬೇಕು. ಸಾಧಾರಣ ೧೫ ವರುಷಗಳ ಹಿಂದಿನ ಕಥೆಯಿದು.

ಕುಂದಾಪುರದ ನಗರ ಮಂದಿರದಲ್ಲಿ ಅವರ ಉಪನ್ಯಾಸವೊಂದಿತ್ತು. ವಿಷಯವೇನೆಂದು ನನಗೆ ನೆನಪಿಗೆ ಬಾರದು. ಪ್ರಾಯಶಃ ಕರ್ನಾಟಕದ ವೈಭವವಿರಬೇಕು. (ಗತ). ಅವರ ಉಪನ್ಯಾಸವು ನಮ್ಮೆಲ್ಲರ ರೋಮರಂಧ್ರಗಳನ್ನೂ ಹೊತ್ತು ನಮ್ಮನ್ನು ಹುರುಪಿನಲ್ಲಿ ಹೊರಳಾಡಿಸಿ ಬಿಟ್ಟಿತು. ಆಗಲೋ ತುಸು ಸಮುಯದ ಬಳಿಕವೋ ಅವರ ''ಕರ್ನಾಟಕ ಗತವೈಭವ''ವೆಂಬ ಅವರ ಗ್ರಂಥವು ಹೊರಬಿತ್ತು. ಅದನ್ನು ಓದಿದ್ದೆ. ತಿರುಗಿ ಎರಡನೆಯ ಬಾರಿಗೆ ೬೦೦ ವೋಲ್ಟೆಜೀನಷ್ಟು ಭಯಂಕರವಾದ ವಿದ್ಯುತ್ ಪ್ರವಾಹವು ನನ್ನನ್ನು ನಾಟಿತು. ಕರ್ನಾಟಕದ ಅಭಿಮಾನವನ್ನು ತುಂಬಿಸುವ ಶಕ್ತಿ ಅವರ ಗ್ರಂಥದಲ್ಲಿ ಬಲುವಾಗಿದೆ.

ಆಲೂರವರ ನಿಜವಾದ ಪರಿಚಯವು ಅಂದರೆ ಮುಖಮುಖ ಪರಿಚಯವೂ, ಮಿತ್ರತ್ವವೂ ನನಗೆ ದೊರೆತದ್ದು ಇನ್ನೂ ಸ್ವಲ್ಪ ಸಮುಯದ ತರುವಾಯ—ಅವರು ೮-೧೦ ವರುಷಗಳ ಹಿಂದೆ ''ಗೆಳೆಯರ ಗುಂಪಿನ'' ಹಿರಿಯರಾಗಿ, ''ಜಯಕರ್ನಾಟಕ'' ವೆಂಬ ಕನ್ನಡದ ಹಿರಿ ಪತ್ರಿಕೆಯನ್ನು ಹೊರಡಿಸಿದಾಗ. ಆಗ ನನ್ನದೂ ಒಂದು ಪತ್ರಿಕೆಯಿದ್ದುದರಿಂದ ನಾನೂ ಒಬ್ಬ ಸಂಪಾದಕನಾಗಿ, ಸಾಕಷ್ಟು ರೀತಿಯಿಂದಲೇ ಅವರ ಅತಿಥಿಯಾಗಿ ಉಳಿದೆ.

ಆಲೂರರ ಕೇವಲ ಮುಖಾವಲೋಕನದಿಂದ ಅವರ ಗುಹಿಮೆಯು ಯಾರಿಗೂ ತಿಳಿಯುವಂತಿಲ್ಲ. ಸಾದಾ ಮನುಷ್ಯರವರು. ದಕ್ಷಿಣ ಕನ್ನಡದವರಿಗೆ ಅವರು ತಮ್ಮ ಉಡುಗೆಯಿಂದ ಒಬ್ಬರು ವ್ಯಾಪಾರಿಗಳಾಗಿ ಕಾಣಿಸಲೂ ಬಹುದು; ಉತ್ತರ ಕನ್ನಡದವರಿಗೆ ಅವರು ಪೌರಾಣಿಕರಾಗಿ ಕಾಣಿಸುವರು. ಸೌಮ್ಯಶಕ್ತಿ ಮಾತಿನಲ್ಲಿಯು ಮನಸ್ಸನ್ನು ಮೋಹಿಸುವ ಹೆಚ್ಚಿನ ಸೊಬಗಿಲ್ಲ, ತುಸು ಉಗ್ಗು ಬೇರೆ. ಆಗ ನನಗೇ ಅನಿಸಿತು—ಇಂಥವರೊಬ್ಬರು ಅಂದು ನನ್ನನ್ನು ಹುರುಪನ್ನು ಹೇಗೆ ಹೊರಳಾಡಿಸಿದರೆಂದು. ಅವರು ಮೊದಲು ವಕೀಲರಾಗಿದ್ದೆಯೆಂದೆನಪ್ಪೆ. ಆಗ ಸಾಕಷ್ಟು ಹೆಸರೂ ಅನುಕೂಲತೆಗಳೂ ಅವರಿಗೆ ತಮ್ಮ ವ್ಯವಸಾಯದಿಂದ ಉಂಟಾಗುದರಿಂದ ಅವರು ಅತಿಯಾಸೆಗೆ ಹೋಗದೆ, ರಾಷ್ಟ್ರೀಯ ಚಳವಳಿದಲ್ಲಿ ಕೈ ಹಾಕಿದರು. ಅಸಹಕಾರ ಮಾಡಿ ವಕೀಲಿಯನ್ನು ಬಿಟ್ಟರು. ಇತ್ತ ಪತ್ರಿಕೋದ್ಯೋಗವನ್ನೂ ಕೈಕೊಂಡರು.

ಅಂದಿನ 'ಜಯಕರ್ನಾಟಕ'ವು—ಇಂದಿನ 'ಜಯಕರ್ನಾಟಕ ಪಲ್ಲ'—ಆಗ ಅದು ಇದೇ ಗೆಳೆಯರ ಗುಂಪಿನಿಂದ ಹೊರಟಿತ್ತಾದರೂ, ಅಲ್ಲಿರುವ—ಆಲೂರರೊಬ್ಬರ ಹಿರಿತನವನ್ನು ಬಿಟ್ಟರೆ, ಉಳಿದವರೆಲ್ಲ ಇನ್ನೂ ಹಾರಲು ಕಲಿಯುವ ಹಕ್ಕಿಗಳು. ಒಂದು ವರುಷದೊಳಗಾಗಿ ಆಲೂರರ ಪತ್ರಿಕೆಯು ಬಲು ಹೆಸರನ್ನು ಹೊಂದಿ, ಮಾಸಪತ್ರಿಕೆಗಳು ವ್ಯಾಪಾರಿ ಸಮಸ್ಯೆಗಳಿಲ್ಲ ಎಂಬುದನ್ನು ಖಚಿತ ಮಾಡಿದಂತೆ ಕಂಡಿತು. ಇಂಥ ದೊಡ್ಡ ಸಂಸ್ಥೆಯನ್ನು, ಚಿಕ್ಕ ಮಕ್ಕಳನ್ನು ಕೂಡಿ ನಡೆಯಿಸಲು ಸಾಧ್ಯನಿಲ್ಲೆಂಬುದರಿಂದ ಆಲೂರರು ತಾವಾಗಿ ತಮ್ಮ ಕೈಯಿಂದ ನಡೆಯಿಸಲು ತೊಡಗಿದರು. ಅನಂತರವೂ, ಜಯಕರ್ನಾಟಕವೂ ತನ್ನ ಕಾಲಮೇಲೆ ತಾನು ನಿಂತು, ಅನ್ನ ಕೊಡುವವರಿಗೆ ಅನ್ನ ತೋರಿಸುತ್ತಿತ್ತು.

ಇದೇ ಸಮುಯದಲ್ಲೋ ತುಸು ಮೊದಲೋ, ಅವರು ಐತಿಹಾಸಿಕ ಸಂಶೋಧನ ಮಂಡಲದಲ್ಲಿ ಕಾರ್ಯಭಾಗವನ್ನು ವಹಿಸಿ, ಹಲವು ತಾಳೆಗರಿ ಪುಸ್ತಕಗಳನ್ನು ಮಾಡಿದರು. ಇದೇ ಸಮುಯದಲ್ಲೆಲ್ಲೊ, ಅವರ ಹೆಸರಿನಲ್ಲಿ ತಿಲಕರ ಗೀತಾ ಟೀಕೆಯ ಕನ್ನಡ ಅನುವಾದವೂ ಒಂದು ಹೊರಟಿತು. ಆಲೂರರ ಕಾರ್ಯ ಕ್ಷೇತ್ರವು ಜಯಕರ್ನಾಟಕದಿಂದಾಗಿ ಅಖಿಲಕರ್ನಾಟಕಕ್ಕೆ ಆಗರಿಸಿತು. ಆ ಪತ್ರಿಕೆಯಿಂದಾಗಿ, ಕರ್ನಾಟಕವು ಕಸಿಷ್ಯ ನಾಲ್ಕಾರು ಅಡಿಗಳಷ್ಟಾದರೂ, ಮೇಲಕ್ಕೆದ್ದು, ಮುಲಗಿ ಸದ್ದೆ ಹೋಗುವ ತರುಣನ್ಯಂದವೂ, ಜುಮ್ಮನೆ ಎಚ್ಚೆತ್ತೀತು ಎಂದು ಅವರು ತಿಳಿದರು. ಆದರೆ ಅವರ ಆಶೆಯು ಕೊನೆಗೊಂಡಂತೆ ಕಾಣುವುದಿಲ್ಲ. ಕಾರಣ, ಜಯಕರ್ನಾಟವು ತುಸು ಇಳಿಹಾದಿಯನು ಕೊಂಡು, ನಿಜವಾದ ವ್ಯಾಪಾರೀ ಸಮಸ್ಯೆಯಾಗಿ ಬಂದಿತು. ತಾನು ಸಾಕಿದ ಕೂಸು, ತನ್ನನ್ನೆ ಈ ರೀತಿ ನಂಜಿಸೀತೆಂದು ಅವರು ತಿಳಿಯಲಿಲ್ಲ. ಹೀಗಾಗಿ, ಆ ಮುಗುವನ್ನು ತಿರುಗಿ, ಅದರ ಜನನಕ್ಕೆ ಕಾರಣವಾದ ಗೆಳೆಯ ಕೂಟದವರ ಕೈಗೊಪ್ಪಿಸಲು ಅವರು ನಿರ್ಧರಿಸಿದರು. ಅವರು ಅದನ್ನು ಯೋಗ್ಯವಾಗಿ ನಡಿಸುವರೆಂಬ, ನಾನಾ ವಿಧದ ಭದ್ರತೆಗಳನ್ನು ಪಡೆದು ಆ ಪತ್ರಿಕೆಯನ್ನು ಒಪ್ಪಿಸಿದರು. ಈಗ ಗೆಳೆಯರ ಗುಂಪಿನ ಹಕ್ಕಿ ಹಾರುತ್ತಿದೆ.

ಇರಲಿ, ಆಲೂರರ ಕರ್ನಾಟಕ ಸೇವಾಕಾರ್ಯವು ಅಲ್ಲಿಯೇ ನಿಲ್ಲಲಾರದು. ಅವರು ಒಮ್ಮೆಗೇ ದೇಶಮಾತೆಯ ಕೈ ಬಿಡುವವರಲ್ಲ. ಅದರಿಂದಾಗಿ ಅಖಿಲ ಕರ್ನಾಟಕದ ಋಣವನ್ನು ತೀರಿಸಲು, ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆಯನ್ನು ವಹಿಸಿದರು. ಅವರ ಮೈಸೂರಿನ, ಅಧ್ಯಕ್ಷ ಭಾಷಣವು, ಆಲೂರರ ವಿದ್ವತ್ತಿನ ಸ್ಮಾರಕವಾಗಿ ಉಳಿದೀತೆನ್ನಲು ಸಂಶಯವಿಲ್ಲ! ಅಂಥ ಘೋರವಾದ ವೇದಾಂತಮಯವಾದ ಭಾಷಣವನ್ನು, ಇದು ವರೆಗೆ ಸಾಹಿತ್ಯ ಪರಿಷತ್ತಿನಲ್ಲಿ ಯಾರೂ ಕೇಳಿದವರಿಲ್ಲ. ಪ್ರಾಚೀನ ಉದ್ಗ್ರಂಥಗಳಂತೆ ಅದರ ಅರ್ಥ ಮಾಡಿಕೊಳ್ಳುವುದು ಕಠಿಣ. ಮಾಡಿದರೆ ಅರ್ಥವಾಗುವುದೂ ಕಠಿಣ.

ನಿಜವಾಗಿಯೂ ವೇದಾಂತಿಗಳ ಪರಿಷತ್ತಿಗೆ ಯೋಗ್ಯವಾದ ಭಾಷಣವದು.

ಈ ಸಾರ್ವಜನಿಕ ಸೇವೆಯ ನಂತರ ಆಲೂರರ ಸೇವೆಯು, ಈಗ ನವಜೀವನ ಗ್ರಂಥಮಾಲೆಯಲ್ಲಿದೆ. ಕನ್ನಡಕ್ಕೊಂದು 'ಹೋಮು ಯುನಿವರ್ಸಿಟಿ ಲ್ಯಾಬ್ರೆರಿ'ಯನ್ನು ಕಲ್ಪಿಸಿ ಕೊಡುವ ಉದ್ದೇಶದಿಂದ ಅವರು ಅದನ್ನು ತೊಡಗಿದ್ದಾರೆ. ಈಗಾಗಲೇ ಆ ಮಾಲೆಯಲ್ಲಿ ನಾಲ್ಕಾರು ಗ್ರಂಥಗಳು ಹೊರಬಿದ್ದಿವೆ ಆ ಮಾಲೆಗೆ ಅವರೇ ಸಂಪಾದಕರೆಂಬ ಹೆಸರೂ ಅಲ್ಲಿ ಕಾಣುತ್ತದೆ. ಶ್ರೀ ಆಲೂರರ ಇಂದಿನ ಚಳವಳವು—ಸರಕಾರದವರು ಅವರನ್ನು ಕಲ್ಕುಟಗಿಯಲ್ಲಿ ನಿರ್ಬಂಧದಲ್ಲಿರಿಸಿರುವ ನಿಮಿತ್ತ ನಮಗೆ ಕಾಣಿಸುವುದಿಲ್ಲ. ರಾಜಕೀಯ ವಿಚಾರದಲ್ಲಿ ಅವರಿಂದ ತಮಗೆ ಅಪಾಯ ಬಂದೀತೆಂದು ಸರಕಾರದವರು ತಿಳಿದುದು ಹೆಚ್ಚಿನ ಮೌಢ್ಯವೆಂದೇ ಅನಿಸುತ್ತದೆ ಈ ವಿಷಯದಲ್ಲಿ ಅವರನ್ನು ನಿರ್ಬಂಧದಲ್ಲಿರಿಸಿದುದು ಅನ್ಯಾಯವೇ ಸರಿ!

ಶ್ರೀ ಆಲೂರರು—ಒಟ್ಟಿಂದ ಹೇಳುವುದಾದರೆ, ಕನ್ನಡದ ಹಿರಿಯ ಮನುಷ್ಯರು. ಎಷ್ಟೋ ವಿಷಯಗಳಲ್ಲಿ ಮುಂದಾಳುಗಳೂ ಮಾರ್ಗದರ್ಶಕರಾಗಿಯೂ ಇದ್ದರು. ಅದಕ್ಕಾಗಿ ನಾವೆಲ್ಲ ಅವರಿಗೆ ಋಣಿಗಳಾಗಲೇ ಬೇಕು. ಆದರೆ, ಮಾರ್ಗದರ್ಶನ ಮಾಡಿಸುವುದಕ್ಕಿಂತ ಹೆಚ್ಚಿನ ಕೆಲಸವನ್ನು ಅವರು ಮಾಡದಿರುವುದು ಒಳಿತು. ಕಾರಣ, ಮುಂದಿನ ಉಧಾಳತನಕ್ಕೆ ಸಾಕಷ್ಟು ಕಸುವು ಅವರಲಿಲ್ಲ ಅವರು ಈಗಿನ ತರುಣ ವಿೂಸೆಗಳಿಗೆ ಹಳಬರಾಗಿ ಕಂಡರೂ, ಒಂದು ಭಾಗದಲ್ಲಿ ಅವರು, ಎಷ್ಟೊ ಜನರಿಗೆ ಇನ್ನೂ ಗುರುಗಳಾಗಿಯೇ ಉಳಿದಿದ್ದಾರೆ. ಮಾಧ್ವರಲ್ಲಿನ ಸಾಂಪ್ರದಾಯ ವಾದಿಗಳು ಅವರನ್ನು ಆರಾಧಿಸಲೇ ಬೇಕು. ಅವರ ಸಾಂಪ್ರದಾಯಿಕ ಅಭಿಪ್ರಾಯಗಳು ಎಂಥ ಕ್ರಾಂತಿ ಯುಗವನ್ನೂ ತಡೆದು ನಿಂತಾವು. ಈಗೀಗಿನ ಸಾಮಾಜಿಕ ಸುಧಾರಣೆಗಳು ಅವರ ಮನಸ್ಸಿಗೆ ಬರಲಾರವು; ಅಲ್ಲದೆ ಅವರಿಗೆ, ಪ್ರಪಂಚದ ವಿಚಾರಗಳು ಬೆಳೆದು ಬಂದಿವೆ ಎಂಬುದು ಗೊತ್ತಿದ್ದರೂ ಇನ್ನೂ ಬೆಳೆಯುತ್ತವೆ ಎಂಬುದನ್ನು ಅವರು ಒಪ್ಪುವ ಸಾಹಸಿಗರಲ್ಲ ಇಂಥಾ ವಿಚಾರಗಳಲ್ಲಿ ಅವರ ದೃಷ್ಟಿಕೋನವು, ತೀರ ಸಂಕೋಚವೆಂದರೂ ಅನ್ನಬಹುದು. ಅವರ ವ್ಯಾವ್ಹಾರೀ ದೃಷ್ಟಿಗೂ ಈಗಿನ ತರುಣರ ದುಡುಕುವ ದೃಷ್ಟಿಗೂ ಮೇಳೈಸುವುದು ಒಂದು ದೊಡ್ಡ ಸಮಸ್ಯೆ. ಅಂತೂ ಆಲೂರರು ಕರ್ನಾಟಕಕ್ಕೆ ಮಾಡಿದ ಉಪಕಾರವು, ಅವರ ಹಿಂದಿನ ಜಯಕರ್ನಾಟಕದ ಹೊರಗಿನ ಮುಚ್ಚಳದಿಂದಲಾದರೂ, ಸ್ಮರಣೆಯಲ್ಲಿ ಉಳಿದೀತೆಂಬುದರಲ್ಲಿ ಸಂಶಯವಿಲ್ಲ.

'ಕಡಲ ತೆರೆ'

ಏನು ರಭಸವೋ? ತೆರೆಗದೆಷ್ಟು ರಭಸವೋ??
ಬಾಳುವೆಯ ಸಮುದ್ರದಲ್ಲಿ,
ಕಾಲವಾತ ಘಾತದಲ್ಲಿ;
ಪಾಪಪುಣ್ಯ ಕೂಡುತಲ್ಲಿ,
ಏಳುತಿರುವ ತೆರೆಗಳಲ್ಲಿ,
ಏನು ರಭಸವೋ? ತೆರೆಗದೆಷ್ಟು ರಭಸವೋ??
ಭಾವಿಕನ ಪ್ರಶಾಂತಭಾವ
ಲಹರಿಯದನು ಗಹಿಸಿಕಾವ;
ದೇವನಿಯಮವೆನುವ ಠಾವ,
ಸೇರ್ವಕಡಲ ತೆರೆಯಬರುವ
ದೇನು ರಭಸವೋ? ತೆರೆಗದೆಷ್ಟು ರಭಸವೋ??
ಇಳಿತ ಭರತವಾಗುವಲ್ಲಿ,
ಏಳು ಬೀಳು ನೂಲೆಯಲ್ಲಿ;
ಸುಳಿದು ಬರುವ ಸುಳಿಗಳಲ್ಲಿ,
ನೊರೆಯಹೊತ್ತ ತೆರೆಗಳಲ್ಲಿ,
ಏನು ರಭಸವೋ? ತೆರೆಗದೆಷ್ಟು ರಭಸವೋ??

ಕಾಪು ಮಂಜುನಾಥ ಶೇಣೈ.

ಇಲ್ಲವಿನಿಸು ಬೆಳಕು.

ನಿನ್ನಯ ಪೂಜಾ ಮಂದಿರವಿದರಲಿ
ಇಲ್ಲವಿನಿಸು ಬೆಳಕು.
ನಿನ್ನಯ ಪದ—ಪೀಠದಲೆಲ್ಲಲ್ಲಿಯು
ತುಂಬಿಹುದೈ ಕೊಳಕು
ಬೆಳಕು ಹೊತ್ತಿಸಲು ಪೂಜಾಗಾರಕೆ
ತೆರಳುವೆ ದೀವಿಗೆ ಹಿಡಿಯುತೆ, ದ್ವಾರಕೆ
ಪೋಪನಿತರೊಳೇ ಇಚ್ಛೆಯ ಸುಯ್ಲಲಿ
ನಂದುವುದಾ ಬೆಳಕು
ಒಮ್ಮೆಯ ಕನಸನು ಗುಡಿಸಿ ಬಿಸುಡುತಿರೆ
ಪೊಸ—ಕಸ ಬಂದಾ ಸ್ಥಳವ ನತಸಿದರೆ,
ಕೆಲಸವ ಪೂರಯಿಸುವೆನೆಂತೋ, ಪ್ರಭು,
ಪೋವುದೆಂತೊ ಕೊಳಕು.
ನೀಸಿಹ ಭವನದಿ ಬೆಳಕಿರಬೇಕು
ನಿನ್ನಯ ಮಂದಿರ ಶುಚಿಯಿರಬೇಕು.
ತಿಳಿದಿಹೆನಿದನೂ, ಆದರಭೇದ್ಯವು
ಅತಿಇಚ್ಛೆಯ ತೊಡಕು
ನಿನ್ನನು ಪೂಜಾಗಾರಕೆ ಕರೆದು
ಪೂಜಿಸಲಿಚ್ಛೆಯಿಹುದು ಬಲು ನಿರಿದು;
ಕತ್ತಲು ಮುತ್ತಿದ ದೇಹದ ಕೊಳಕಿಗೆ
ಕರೆಯಲು ಬಲು ಅಳುಕು.
ಅಂಧಕಾರದಲಿ ಬಂದಿರಲಾರೆಯ?
ಕೊಳಕಿನ ಪೀಠದಿ ಕುಳ್ಳಿರಲಾರೆಯ?
ನೀನು ಬಂದ ಕೂಡಲೆ ಕೊಳಕೋಡುತ
ತುಂಬುವುದೈ ಬೆಳಕು!

೨೦ಪೌಷ ೧೯೭೬. **ವೆಂಕಟರಮಣಾಚಾರ್ಯ,**
(ಮಿತ್ರಮಂಡಲಿ, ಉಡುಪಿ).

ಸನಾತನ ಧರ್ಮ ಸಭೆ.

(ಒಂದು ಪ್ರಹಸನ)

ಪಾತ್ರಗಳು:—
1. ಕೋದಂಡ ಶಾಸ್ತ್ರಿಗಳು.
2. ತುಪ್ಪದಂಗಡಿ ಲಂಬೋದರ ಭಟ್ಟರು.
3. ಗಾಂಜಾ ಅಂಗಡಿ ಧರ್ಮರಾಜ ಉಪಾಧ್ಯರು.
4. ಕಾಫಿಹೊಟೇಲು ತಿಮ್ಮಸ್ಯ ಹೆಗ್ಡೆಯವರು.
5. ಸುಬ್ಬಾ ಜೋಯಿಸರು.
6. ಮೊಕ್ತೇಸರ ಪುಟ್ಟಣ್ಣಯ್ಯನವರು.
7. ರಾಮಚಂದ್ರ ರಾಯರು. } ಸುಧಾರಕರು
8. ಗೋವಾಲ ರಾಯರು. }
9. ಇಬ್ಬರು ಪೋಲೀಸರು, ಸಭಿಕರು.

ಲೇಖಕರು:—ಶ್ರೀ. ರಂಗರಾವ ತಲಚೇರಿಕರ, ಬಿ ಎ. ಎಲ್. ಎಲ್. ಬಿ. ಮಂಗಳೂರು

[ಇದರಲ್ಲಿಪ್ಪ ಪಾತ್ರಗಳೆಲ್ಲವೂ ಕಾಲ್ಪನಿಕವಾದುವುಗಳೇ, ಅಲ್ಲದೆ, ಇದೊಂದು ಪುರಾಣಮತವಾದಿಗಳ ಮೇಲೆ ಟೀಕೆಯೆಂದು ಯಾರೂ ತಿಳಿಯ್ದುಬಾರದು ಪುರಾಣ ಮತವಾದಿಗಳಲ್ಲಿ ಎಷ್ಟೋ ಸದಾಚಾರಿಗಳಿದ್ದಾರೆಂಬುದನ್ನು ನಾವು ಅಲ್ಲಗಳೆಯುವುದಿಲ್ಲ. ಆದರೆ, ಕೋದಂಡ ಶಾಸ್ತ್ರಿ, ಲಂಬೋದರ ಭಟ್ಟರಂಥವರೂ ಈಗ ಧರ್ಮಮಾರ್ತಾಂಡರಾಗಿ ಮೆರೆಯುತ್ತಿರುವರೆಂಬುದನ್ನು ವಾಚಕರು ಸುರೆಯಬಾರದು. ಅಂಥವರನ್ನೇ ಈ ಪ್ರಹಸನದಲ್ಲಿ ಖಂಡಿಸಿರುತ್ತದೆ ಹಾಗೂ ಅಸ್ಪೃಶ್ಯರು ಏಕೆ ದೇವಸ್ಥಾನಗಳಿಗೆ ಬರಬಾರದೆಂಬುದಕ್ಕೆ ಸಾಮಾನ್ಯನಾಗಿ ಕೊಡಲ್ಪಡುವ ಕಾರಣಗಳನ್ನು ವಿಮರ್ಶಾತ್ಮಕ ರೀತಿಯಿಂದ ಟೀಕಿಸಿರುತ್ತದೆ ಸನಾತನ ಧರ್ಮದ ಅನುಯಾಯಿಗಳು ಇದರಿಂದ ಕೋಪಿಸಿಕೊಳ್ಳಬೇಕಾದುದಿಲ್ಲ.—ಲೇಖಕ.]

(ಪೀತಾಂಬರಗಳನ್ನುಟ್ಟು ಭಸ್ಮಧಾರಿಗಳೂ, ನಾಮಧಾರಿಗಳೂ ಆದ ಬ್ರಾಹ್ಮಣರು ಸಭೆಯಲ್ಲಿ ಕುಳಿತಿರುವರು. ಇಬ್ಬರು ಸುಧಾರಕರೂ ಇದೇ ಉಡುಪಿನಲ್ಲಿರುವರು.)

ಮೊಕ್ತೇಸರ ಪುಟ್ಟಣ್ಣಯ್ಯನವರು:—(ಎದ್ದು ನಿಂತು) ಸನಾತನ ಧರ್ಮಾಭಿಮಾನಿಗಳೇ, ಈ ಹೊತ್ತಿನ ಸಭೆಗೆ ವಯೋವೃದ್ಧರೂ, ಜ್ಞಾನವೃದ್ಧರೂ ಆದ ಕೋದಂಡ ಶಾಸ್ತ್ರಿಗಳನ್ನು ಅಧ್ಯಕ್ಷಸ್ಥಾನಕ್ಕೆ ಸೂಚಿಸುತ್ತೇನೆ. ಈ ಸ್ಥಾನವನ್ನಲಂಕರಿಸಲು ಅವರೇ ಯೋಗ್ಯರೆಂಬುದನ್ನು ನಾನು ಪ್ರತ್ಯೇಕ ಹೇಳಬೇಕಾಗಿಲ್ಲ. ಅವರ ಕಾರ್ಯಗಳೇ, ಅವರ ಧರ್ಮಾಚರಣೆಯನ್ನು ಜಗತ್ತಿಗೆ ಸಾರುತ್ತಿವೆ. ಅವರಿಗೆ ಎಪ್ಪತ್ತು ವರ್ಷ ತುಂಬಿದರೂ 'ಅಷ್ಟ ವರ್ಷಾ ಭವೇತ್ ಕನ್ಯಾ' ಎಂಬ ಸ್ಮೃತಿವಾಕ್ಯವನ್ನನುಸರಿಸಿ ಅವರು ಎಂಟೇ ವರ್ಷದ ಹುಡುಗಿಯನ್ನು ಮದ್ದುವೆಯಾದರು. ಜನರ ಪ್ರಚಂಡ ವಿರೋಧವನ್ನು ಧಿಕ್ಕರಿಸಿ 'ಅಪುತ್ರಸ್ಯ ಗತಿರ್ನಾಸ್ತಿ' ಎಂಬ ಶಾಸ್ತ್ರವಾಕ್ಯದಲ್ಲಿ ಪೂರ್ಣ ನಂಬಿಕೆಯುಳ್ಳವರಾಗಿ ಐದನೆಯ ಹೆಂಡತಿ ಸತ್ತ ಹದಿನಾಲ್ಕನೇಯ ದಿವಸವೇ ಲಗ್ನಮಂಟಪವನ್ನು ಧೈರ್ಯದಿಂದ ಪ್ರವೇಶಿಸಿದರು. ಸತ್ಕಾರ್ಯಕ್ಕೆ ವಿಳಂಬವೇಕೆ? ಈ ಪುಣ್ಯಕಾರ್ಯದ ಸಮಯದಲ್ಲಿ ತನ್ನ ಮನೆಯಲ್ಲಿ ಧರ್ಮಕ್ಕೆ ವಿರೋಧವಾದ ಯಾವ ಆಚರಣೆಯೂ ಇರಬಾರದೆಂದು ಅವರು ತನ್ನ ಗತಿಸಿದ ಮೊಗನ ಹೆಂಡತಿಯ ಕೇಶವಪನವನ್ನು ಅವಳು ಒಪ್ಪದುದರಿಂದ ಬಲಾತ್ಕಾರದಿಂದ ಮಾಡಿಸಿದರು. ಎಂತಹ ಧರ್ಮಾಭಿಮಾನ!

ರಾಮಚಂದ್ರ:—ಪುಟ್ಟಣ್ಣಯ್ಯನವರೇ, ಇವರು ಚುಡ್ಡಿಗಲ್ಲಿಯಲ್ಲಿ ಆ ವೇಶ್ಯೆಯನ್ನು ಇಟ್ಟುಕೊಂಡಿರುವರಲ್ಲ. ಅದನ್ನೂ ಹೇಳಿಬಿಡಿರಿ.

ಮೊಕ್ತೇಸರ ಪುಟ್ಟಣ್ಣಯ್ಯ:—ಆ ಸುಧಾರಕರ ಹಾಗೆ, ಗಾಂಧಿ ಕಡೆಯವರ ಹಾಗೆ ನೂತಾಡಬೇಡಿರಿ. ಅವರು ವೇಶ್ಯೆಯನ್ನು ಇಟ್ಟುಕೊಂಡರೆ ನಿಮಗೇನು? ಅವರು ಅವಳಲ್ಲಿ ಏನು ಊಟಮಾಡುತ್ತಾರೆಯೇ?

ತುಪ್ಪದ ಅಂಗಡಿ ಲಂಬೋದರ ಭಟ್ಟ:—ಅವಳೊಡನೆ ಊಟಮಾಡುವುದು ಇರಲಿ. ಅವಳ ಅಣ್ಣ ಕಂಪೌಂಡರು ಒಬ್ಬರಲ್ಲ ಇದ್ದಾರಲ್ಲ, ಅವರೊಡನೆ ಊಟ ಮಾಡಿದ್ದಕ್ಕೆ ಮಾಸ್ತರ ಶಾಮರಾಯರಿಗೆ ಜಾತಿಬಹಿಷ್ಕಾರ ಹಾಕಲು ಮುಖ್ಯ ಕಾರಣ ಈ ನಮ್ಮ ಕೋದಂಡ ಶಾಸ್ತ್ರಿಗಳೇ.

ಪುಟ್ಟಣ್ಣಯ್ಯ:—ಅಷ್ಟೇ ಅಲ್ಲ, ಇವರ ಜನಿವಾರಕ್ಕೆ ಅವಳ ಸ್ಪರ್ಶವಾಯಿತೆಂದು ಇವರು ಪಂಚಗವ್ಯ ಕುಡಿದು ದೊಡ್ಡ ಬ್ರಾಹ್ಮಣ ಸಂತರ್ಪಣೆ ಮಾಡಿಸಲಿಲ್ಲವೇ?

ಗಾಂಜಾ ಅಂಗಡಿ ಧರ್ಮರಾಜ ಉಪಾಧ್ಯರು:—ಆ ಸಂತರ್ಪಣೆಗೆ ಸಾವಿರಕ್ಕಿಂತ ಮೇಲೆ ಬಂದಿದ್ದರು ಬ್ರಾಹ್ಮಣರು. ನಾನಿದ್ದೆ ಸ್ವಾಮಿ. ಆ ಜನಿವಾರವೆಂದರೆ ನೀರು ಸೇದುವ ಹಗ್ಗದಷ್ಟು ತೋರ ಇತ್ತು. ಈಗಿನ ಸುಧಾರಕರು ಒಂದು ಮಿನಿಟು ಹಾಕಿಕೊಳ್ಳಲಿಕ್ಕಿಲ್ಲ. ಅಂತಹ ಜನಿವಾರನನ್ನು ಕೋದಂಡ ಶಾಸ್ತ್ರಿಗಳ ಧರ್ಮಾಭಿಮಾನವನ್ನು ಟೀಕಿಸುವುದೆಂದರೆ ಚಂದ್ರನನ್ನು ನೋಡಿ ನಾಯಿ ಬೊಗಳಿದ ಹಾಗೆ!

(ಸಭಿಕರೆಲ್ಲರೂ ಧರ್ಮಾಭಿಮಾನದಿಂದ ಕೈಚಪ್ಪಾಳೆ ಹೊಡೆಯುವರು)

ರಾಮಚಂದ್ರ:—ವೇಶ್ಯೆಯರ ಕೈಯ ನೀರು ಕುಡಿಯುವುದು ಧರ್ಮಕ್ಕೆ ವಿರೋಧ. ವ್ಯಭಿಚಾರ ವಿರೋಧವಲ್ಲವೇ?

ಲಂಬೋದರ:—ಇವನ್ಯಾರೋ ಸುಧಾರಕನು! ದಬ್ಬಿರೊ ಇವನನ್ನು ಹೊರಕ್ಕೆ! ಇಂಗ್ಲಿಷ್ ಕಲಿತು ಕಿರಿಸ್ತಾನರ ರೊಟ್ಟಿ ತಿನ್ನುವ ಈ ಹುಡುಗರಿಗೆ ಧರ್ಮ ಅಂದರೆ ಏನು ಗೊತ್ತು?

ಗೋಪಾಲ:—ಹಾಗಾದರೆ, ನಿಮ್ಮ ಮಕ್ಕಳನ್ನು ಏಕೆ ಇಂಗ್ಲಿಷ್ ಶಾಲೆಗೆ ಹಾಕಿದ್ದೀರಿ?

ರಾಮಚಂದ್ರ:—ದಿನಾಲೂ ರುಜಾರಿ ಪರ್ಬು ಬ್ರೆಡ್ ತರುವುದಿಲ್ಲವೇ, ನಿಮ್ಮ ಮನೆಗೆ?

ಲಂಬೋದರ:—ಮುಚ್ಚು ಬಾಯಿ! ಹಿರಿಯರ ಮುಂದೆ ಎಷ್ಟು ಮಾತಾಡುತ್ತೀರಿ? ಏನು ನೋಡುತ್ತೀರೋ, ದಬ್ಬಿರಿ ಇವರನ್ನು ಹೊರಕ್ಕೆ!!!

(ಸಭಿಕರಲ್ಲಿ ಕೆಲವರು ಗೋಪಾಲ, ರಾಮಚಂದ್ರರ ಬಳಿ ಹೋಗುವರು.)

ಗೋಪಾಲ:—ನಿಮ್ಮ ಒಣ ಧರ್ಮದ ಟೊಳ್ಳು ಧೈರ್ಯ ನನಗೆ ಗೊತ್ತಿದೆ. ಯಾರು ನಮ್ಮನ್ನು ಹೊರಗೆ ಹಾಕುವವರು? ಬನ್ನಿರಿ! ಗಂಡುಸುತನವಿದ್ದರೆ!!

(ಧರ್ಮರಾಜ ಉಪಾಧ್ಯರು ಮುಂದಾಗಿದ್ದವರು ಈ ಮಾತು ಕೇಳಿ ಹಿಂದೆ ಸರಿದು).

ಈ ಸುಧಾರಕರು ಯಾವುದಕ್ಕೂ ಹಿಂಜರಿಯುವವರಲ್ಲ. ಉಪಾಯವಿಲ್ಲ, ಸಭೆಯಾಗಲೇ ಬೇಕು. ಕೋದಂಡ ಶಾಸ್ತ್ರಿಗಳೇ, ಅಧ್ಯಕ್ಷಸ್ಥಾನವನ್ನು ಅಲಂಕರಿಸೋಣಾಗಲಿ.

(ಕೋದಂಡ ಶಾಸ್ತ್ರಿಗಳು ಅಧ್ಯಕ್ಷಸ್ಥಾನದಲ್ಲಿ ಕುಳಿತು ಕಿಸೆಗೆ ಮೂರು ಸಾಲ್ಕು ಸಾರಿ ಕೈಹಾಕಿ ಒಂದು ಕಾಗದವನ್ನು ತೆಗೆದು ಓದುವರು.)

ಸನಾತನ ಧರ್ಮರಕ್ಷಕರೇ,

ನಮ್ಮ ಅನಾದಿ, ಅನಂತವಾದ ಈ ಸನಾತನ ಧರ್ಮಕ್ಕೆ ಒದ ಗುವಂಥಾ ಆಪತ್ಕಾಲದಲ್ಲಿ ನಾವೆಲ್ಲರೂ ಏಕತ್ರ ಸೇರಿ ಧರ್ಮ ರಕ್ಷಣೆಯ ಮಾರ್ಗಗಳನ್ನು ಶೋಧಿಸಬೇಕು. ದಿವ್ಯಜ್ಞಾನ ಸಂಪನ್ನ ರಾದ ಸ್ಮೃತಿಕಾರರ ವಚನಗಳು ಈಗಿನ ಧರ್ಮಗ್ಲಾನಿಯ ಅಂಧಕಾರ ದಲ್ಲಿ ದೀಪಸ್ತಂಭಗಳಂತೆ ದಾರಿ ತೋರಿಸುತ್ತಿವೆ. ಕಂಸದಲ್ಲಿ (bracket) ಕೈಚಪ್ಪಾಳೆಗಳ ಕಡಕಡಾಟ. (ಕೈಚಪ್ಪಾಳೆ ಇಲ್ಲದುದನ್ನು ನೋಡಿ) ವಿಸ್ಮಯಗೊಳ್ಳುವರು).

(ಗೋಪಾಲ, ರಾಮಚಂದ್ರರು ಕಂಸದಲ್ಲಿದ್ದುದನ್ನು ಓದಿದ ಶಾಸ್ತ್ರಿಗಳ ಮೂರ್ಖತನಕ್ಕೆ ನಗುವರು)

ಗೋಪಾಲಃ—ಕೋದಂಡ ಶಾಸ್ತ್ರಿಗಳೇ, ಐದು ಜನ ಹೆಂಡಿರ ಸ್ಮಶಾನಯಾತ್ರೆಯ ಜ್ವಾಲೆಯು ದೂರ ನೂಡದಿದ್ದ ನಿಮ್ಮ ಮನಸ್ಸಿನ ಅಂಧಕಾರವು ಸ್ಮೃತಿವಚನಗಳಿಂದ ಹೋದೀತೇ?

ರಾಮಚಂದ್ರಃ—ಏನು ಹೇಳುತ್ತೀರಿ, ಗೋಪಾಲ ರಾಯರೇ? ದಯೆ, ನೀತಿ, ಇವುಗಳಿಗೂ ಕೋದಂಡ ಶಾಸ್ತ್ರಿ, ತುಪ್ಪದ ಅಂಗಡಿ ಲಂಬೋದರ ಭಟ್ಟ, ಗಾಂಜಾ ಧರ್ಮರಾಜ ಉಪಾಧ್ಯ, ಕಾಫಿ ಹೊಟೇಲು ತಿಮ್ಮಸ್ಯ ಹೆಗ್ಡೆ ಇವರ ಸನಾತನ ಧರ್ಮಕ್ಕೂ ಏನೂ ಸಂಬಂಧವಿಲ್ಲ.

ಕೋದಂಡ ಶಾಸ್ತ್ರಿಃ—(ಇಷ್ಟರ ತನಕ ಗಡಿಬಿಡಿಯಿಂದ ಕಿಶೆ ಗಳನ್ನು ನೋಡುತ್ತಾ ನಿರಾಶೆಯಿಂದ ಕಾಗದ ಮಡಚುತ್ತಾ) (ಸ್ವಗತಂ) ಓಹೋ, ಭಾಷಣದ ಬಾಕಿ ಕಾಗದಗಳನ್ನು ಮನೆಯಲ್ಲೇ ಬಿಟ್ಟೆನು. ನೋಸವಾಯಿತು, ಆಗಲಿ, ಹೇಗಾದರೂ ಸುಧಾರಿಸಬೇಕು.

(ಪ್ರತ್ಯಕ್ಷ) ಸಭಿಕರೇ, ನೀವೆಲ್ಲವರೂ ಧರ್ಮಜಿಜ್ಞಾಸಿಗಳೇ ಇರು ವಿರಿ. ಗಾಂಧಿಯವರು ಅಸ್ಪೃಶ್ಯರನ್ನು ದೇವಸ್ಥಾನದೊಳಗೆ ಬಿಡಲು ಉಪವಾಸ ಮಾಡುವುದಾದರೆ, ಬಿಡಬಾರದೆಂಬುದಕ್ಕಾಗಿ ನೀವೂ ನನ್ನಂತೆಯೇ ದಿನಕ್ಕೆ ಇನ್ನು ಎರಡು ಊಟ ಹೆಚ್ಚು ಮಾಡಲು ಸಿದ್ಧ ರಿರುವಿರೆಂದು ನಾನು ತಿಳಿಯುತ್ತೇನೆ.

ಲಂಬೋದರ ಭಟ್ಟಃ—ಇದು ಬಹಳ ಯೋಗ್ಯ ಸೂಚನೆ. ಗಾಂಧಿಯವರು ಮಾಡುವುದೆಲ್ಲಾ ಧರ್ಮವಿರುದ್ಧ, ಅವರು ಉಪವಾಸ ಮಾಡಿದರೆ, ಧರ್ಮಾಭಿಮಾನಿಗಳಾದ ನಾವು ಎರಡು ಊಟ ಜಾಸ್ತಿ ಮಾಡಲೇ ಬೇಕು. ಇದಕ್ಕೆ ಎಲ್ಲರ ಒಪ್ಪಿಗೆ.

(ಸಭಿಕರೆಲ್ಲರೂ ಕೈಚಪ್ಪಾಳೆಗಳಿಂದ ಸಮ್ಮತಿಯನ್ನು ಸೂಚಿಸುವರು.)

ಕೋದಂಡ ಶಾಸ್ತ್ರಿಃ—ನಿಮ್ಮ ನಿರ್ಧಾರವನ್ನು ಕೇಳಿದರೆ, ಸುಧಾ ರಕರ ಚಳವಳಿಂದ ಧರ್ಮವು ನಾಶವಾಗುವುದೆಂಬ ಭೀತಿಯೇ ತೊಲಗಿ ಹೋಗುವುದು. ಇನ್ನು ಮುಂದಿನ ಠರಾವನ್ನು ಲಂಬೋದರ ಭಟ್ಟ್ರು ತರುವರು.

ಲಂಬೋದರ ಭಟ್ಟರುಃ—(ಎದ್ದು ನಿಂತು ಮುಂಡಾಸನ್ನು ಸರಿಪಡಿಸಿ) ಅಸ್ಪೃಶ್ಯತೆಯೇ, ಹಿಂದೂಧರ್ಮದ ಮೂಲಾಧಾರವೆಂದೂ ಅಸ್ಪೃಶ್ಯತೆ ಇಲ್ಲದಿದ್ದರೆ ಹಿಂದೂಧರ್ಮವು ಉಳಿಯಲಾರದೆಂದೂ ಈ ಸಭೆಯ ಅಭಿಪ್ರಾಯವಾಗಿದೆ. ಈ ಠರಾವನ್ನು ನಿಮ್ಮ ಮುಂದೆ ಇಡಲು ಬಹಳ ಸಂತೋಷಪಡುತ್ತೇನೆ. ವಿಪ್ರೋತ್ತಮರೇ, ಅಸ್ಪೃಶ್ಯರು ಚಂಡಾಲರು. ತಾವು ಹಿಂದಿನ ಜನ್ಮದಲ್ಲಿ ಮಾಡಿದ ಪಾಪಕ್ಕಾಗಿ ಅವರು ಹೊಲೆಯರಾಗಿ ಹುಟ್ಟಿರುವರು. ಪರಮಾತ್ಮನ ಇಚ್ಛೆಗನು ಸಾರವಾಗಿಯೇ ಅವರು ನೀಚ ಸ್ಥಿತಿಯಲ್ಲಿರುವರು. ಅವರು ಉತ್ತಮ ರಾಗಬೇಕೆಂದಿದ್ದರೆ, ಪರಮಾತ್ಮನಿಗೆ ಅದು ಅಸಾಧ್ಯವೇ? ಅವನು ಆ ಸ್ಥಿತಿಯಲ್ಲಿಟ್ಟವರನ್ನು ನಾವು ಮೇಲೆ ತರುವುದೆಂದರೆ ಅವನಲ್ಲಿ ದ್ರೋಹ ಮಾಡಿದಂತಾಗುವುದು.

(ಸಭಿಕರು ಸರಿ, ಸರಿ ಎನ್ನುವರು)

ಗೋಪಾಲಃ—ಲಂಬೋದರ ಭಟ್ಟರೆ, ಆ ಸಾರಿ ನಿಮ್ಮ ಮನೆಗೆ ಬೆಂಕಿ ಬಿದ್ದಾಗ ಆರಿಸಲಿಕ್ಕೆ ಬನ್ನಿರೆಂದು ಬೊಬ್ಬೆಯಾಕೆ ಮಾಡಿದಿರಿ? ನಿಮ್ಮ ಮನೆ ಸುಟ್ಟು ಹೋಗಬೇಕೆಂಬ ಇಚ್ಛೆಯಾದ್ದರಿಂದಲ್ಲವೇ ಅಗ್ನಿಯು ಆಕ್ರಮಿಸಿದ್ದು? ಆ ಬೆಂಕಿಯನ್ನು ಆರಿಸಿದ್ದು ಪರಮಾತ್ಮ ನಲ್ಲಿ ದ್ರೋಹವಲ್ಲವೇ?

(ಉತ್ತರ ಕೊಡಲು ದಾರಿಗಾಣದೆ ಲಂಬೋದರ ಭಟ್ಟರು ನಿಶ್ಶಬ್ದರಾಗುವರು)

ರಾಮಚಂದ್ರಃ—ಏನು ಭಟ್ಟರೇ, ಉತ್ತರವಿಲ್ಲವೇ?

ಲಂಬೋದರ ಭಟ್ಟಃ—(ಬೇಗನೇ) ನನ್ನ ಭಾಷಣ ಮುಗಿಯಿತು. ಇನ್ನು ಧರ್ಮರಾಜ ಉಪಾಧ್ಯರು ಮಾತಾಡಲಿರು ವರು. ಅವರನ್ನು ಕೇಳಿರಿ.

ಧರ್ಮರಾಜ ಉಪಾಧ್ಯಃ—(ಎದ್ದು ನಿಂತು ದೋತ್ರವನ್ನು ಸ್ವಸ್ಥಗೊಳಿಸಿ) ಪ್ರತಿಯೊಂದು ವರ್ಣದವರು ತಮ್ಮ ಜಾತಿಧರ್ಮ ವನ್ನು ಅನುಸರಿಸಿದರೆ ಮಾತ್ರವೇ ಅವರಿಗೆ ಮುಕ್ತಿ. ಅನ್ಯ ವರ್ಗ ದವರು ಧರ್ಮಶಾಸ್ತ್ರಗಳಲ್ಲಿ ಕೈಹಾಕಬಾರದು. ಹಿಂದೂರಾಜರ ಕಾಲದಲ್ಲಿ ಹಾಗೆ ಮಾಡಿದವರನ್ನು ತಕ್ಕ ಶಿಕ್ಷೆಗೆ ಗುರಿಮಾಡುತ್ತಿದ್ದರು. ತಪಸ್ಸು ಮಾಡಲು ತೊಡಗಿದ ಶಂಬೂಕನೆಂಬ ಶೂದ್ರನನ್ನು ಶ್ರೀ ರಾಮನು ಸಂಹರಿಸಿದ್ದನ್ನು ನೀವು ಕೇಳಿಲ್ಲವೇ? ಅಂತಹ ರಾಜರು ಈಗ ಇಲ್ಲದುದರಿಂದಲೇ ಧರ್ಮಗ್ಲಾನಿಯಾಗಿ ಹಿಂದೂಧರ್ಮವು ಅವನತಿಯನ್ನು ಹೊಂದಿದೆ.

ಗೋಪಾಲಃ—ಬಹಳ ಯೋಗ್ಯವಾದ ಮಾತು. ಶ್ರೀರಾಮನ ಕಾಲದಲ್ಲಿ ನಿಮ್ಮಂತೆ ಗಾಂಜಾ ಮೂರುವ ಬ್ರಾಹ್ಮಣರು ಇದ್ದಿರಲಿಕ್ಕಿಲ್ಲ. ಇದ್ದರೆ, ಅವರಿಗೆ ಯಾವ ಶಿಕ್ಷೆ ಕೊಡುತ್ತಿದ್ದನೊ!

ತಿಮ್ಮಸ್ಯ ಹೆಗ್ಡೆಃ—ಕಲಿಕಾಲವಾದುದರಿಂದ ಬ್ರಾಹ್ಮಣರು ಕೂಡ ಜೀವನೋಪಾಯಕ್ಕಾಗಿ ಅಂತಹ ಕೆಲಸವಾಡಬೇಕಾಗಿದೆ.

ಗೋಪಾಲಃ—ಅಂದರೆ, ಧರ್ಮವು ಕಲಿಕಾಲಕ್ಕೆ ಅನ್ವಯಿಸು ವುದಿಲ್ಲವೇ?

ತಿಮ್ಮಸ್ವ ಹೆಗ್ಡೆಃ—ಹಾಗೆ ಯಾರು ಹೇಳಿದರು? ಆದರೆ, ಹಿಂದಿನ ಪುಣ್ಯ ಯುಗಗಳ ನಿಯಮಗಳನ್ನು ಪೂರ್ಣವಾಗಿ ಆಚರಿಸಲು ಈಗ ಸಾಧ್ಯವಿದೆಯೇ?

ಗೋಪಾಲಃ—ಹಾಗಿದ್ದರೆ, ಅಸ್ಪೃಶ್ಯರ ವಿಷಯಕ ನಿಯಮಗಳನ್ನೇಕೆ ಬದಲಿಸಬಾರದು?

ಲಂಬೋದರಃ—ಏನು ಹುಚ್ಚರ ಹಾಗೆ ಮಾತಾಡುತ್ತೀರಯ್ಯಾ? ಅಸ್ಪೃಶ್ಯರು ಸ್ಪೃಶ್ಯರಾಗುವುದು ಹೇಗೆ? ಕತ್ತೆಯು ಕುದುರೆಯಾಗುವುದೇ?

ರಾಮಚಂದ್ರಃ—ಕುದುರೆಯು ಕತ್ತೆಯಾಗುತ್ತದೆ. ಶ್ರೀರಾಮನ ಕಾಲದ ವಿಪ್ರೋತ್ತಮರೆಲ್ಲ, ಕಾಫಿ ಹೊಟೇಲು, ಗಾಂಜಾ ಅಂಗಡಿ, ಇಟ್ಟ ನಮ್ಮಂತಹ ಬ್ರಾಹ್ಮಣರೆಲ್ಲಿ? ನಿಜವಾದ ಧರ್ಮವು ಎಲ್ಲಾ ಯದರೂ ಉಳಿದಿದ್ದರೆ, ಆ ಹೊಲೆಯರ ಗುಡಿಸಲುಗಳಲ್ಲಿ! ಅತ್ಯಾಚಾರದ ಕೇಂದ್ರಗಳಾದ ದೇವಸ್ಥಾನಗಳಲ್ಲಿ ಅಲ್ಲ!

ಸುಬ್ಬಾ ಜೋಯಿಸಃ—ಆಗಮಶಾಸ್ತ್ರವನ್ನರಿಯದ ಹುಡುಗರ ಹತ್ತರ ದೇವಸ್ಥಾನ ಪ್ರವೇಶದ ಚರ್ಚೆಯೇನು ಮಾಡುತ್ತೀರಿ ಲಂಬೋದರ ಭಟ್ರೇ?

ಗೋಪಾಲಃ—ಆಗಮಶಾಸ್ತ್ರಗಳೊಂದು ಬಾಕಿ. ಬರಲಿ ಅದು, ಹೂಂ ಸುಬ್ಬಾ ಜೋಯಿಸರೇ, ಸುರುವಾಗಲಿ ನಿಮ್ಮದು

ಸುಬ್ಬಾ ಜೋಯಿಸರುಃ— (ಎದ್ದು ನಿಂತು ಕಚ್ಚೆಯನ್ನು ಗಟ್ಟಿಯಾಗಿ ಕಟ್ಟಿ) ಮಾನ್ಯ ಅಧ್ಯಕ್ಷರೇ, ಇತರ ಧರ್ಮಾವಾರ್ತಾಂಡರೆ, ನಮ್ಮ ದೇವಸ್ಥಾನಗಳು ಯಾವ ಆಗಮ ಶಾಸ್ತ್ರಗಳ ಮೇಲೆ ರಚಿಸಲ್ಪಟ್ಟಿವೆಯೋ ಅವುಗಳಲ್ಲಿ ಅಸ್ಪೃಶ್ಯರನ್ನು ಒಳಗೆ ಬಿಡಬಾರದೆಂದು ಸ್ಪಷ್ಟವಾಗಿ ಬರೆದಿರುತ್ತದೆ. ಅಸ್ಪೃಶ್ಯರು ಮದ್ಯವಾನ ಮಾಡುವವರು, ಮಲಿನರು; ಸತ್ತ ಗೋವುಗಳನ್ನು ತಿನ್ನುವವರು ಅಂತಹರನ್ನು ದೇವಮಂದಿರ ದೊಳಗೆ ಬಿಡುವುದು ನ್ಯಾಯವೇ? ಸಭಿಕರೇ, ನೀವೇ ಹೇಳಿರಿ

(ಎಲ್ಲರೂ ಸರಿಯಲ್ಲ, ಸರಿಯಲ್ಲ ಎಂದು ತಲೆ ಅಲ್ಲಾಡಿಸುವರು)

ಗೋಪಾಲಃ—ಬಾಕಿ ಜಾತಿಯವರಲ್ಲೂ ಸೆರೆ ಕುಡಿಯುವವರಿದ್ದಾರಲ್ಲಾ! ಅವರನ್ನು ಒಳಗೆ ಬಿಡಬಹುದೇ? ಅದಲ್ಲದೆ, ಅಸ್ಪೃಶ್ಯರಲ್ಲಿ ಸತ್ತ ಪ್ರಾಣಿಗಳನ್ನು ತಿನ್ನದ ಎಷ್ಟೋ ವರ್ಗದವರಿದ್ದಾರೆ ಅವರನ್ನಾಕೆ ಒಳಗೆ ಬಿಡಬಾರದು?

ಅಧ್ಯಕ್ಷಃ—ಏನು ಉದ್ದಟತನ ಈ ಹುಡುಗರದು! ವಾದ ಮಾಡಲು ಇದು ಕೋರ್ಟಲ್ಲ. ಆಗಮಗಳೆಂದರೆ ಋಷಿವಾಕ್ಯಗಳು. ಅವುಗಳ ವಿಷಯ ಹೀಗೆ ಅನುಮಾನವೆತ್ತಿದ ಮಾತ್ರಕ್ಕೆ ನರಕ ಪ್ರಾಪ್ತಿಯಾಗುವುದು.

ರಾಮಚಂದ್ರಃ—ಐದು ಹೆಂಡಿರನ್ನು ಕೊಂದ ನೀವೂ ಗಾಂಜಾ ಮಾರುವ ಬ್ರಾಹ್ಮಣರೂ ಹೋಗುವುದು ಸ್ವರ್ಗಕ್ಕಾದರೆ, ನಮಗೆ ನರಕವೇ ಒಳ್ಳೇದು.

ಅಧ್ಯಕ್ಷಃ—(ತಿರಸ್ಕಾರದಿಂದ) ಹೂಂ, ಸುಬ್ಬಾ ಜೋಯಿಸರೇ, ಮುಂದರಿಸಿರಿ, ಇವರ ಮಾತು ಏನು ಕೇಳುತ್ತೀರಿ?

ಗೋಪಾಲಃ—(ಜೋರಿನಿಂದ) ನಮ್ಮ ಪ್ರಶ್ನೆಗೆ ಸರಿಯಾದ ಉತ್ತರ ಸಿಗಬೇಕು. ತರಾವನ್ನು ತಂದ ಮೇಲೆ ಅದರ ಸರಿಯಾದ ಚರ್ಚೆಯಾಗಬೇಕು.

ಸುಬ್ಬಾ ಜೋಯಿಸಃ—ಮುಕ್ಕಳೇ, ಸ್ವಲ್ಪ ಸಮಾಧಾನವನ್ನು ತಾಳಿರಿ. ಎಲ್ಲಾ ಸರಿಯಾಗಿ ವಿವರಿಸುತ್ತೇನೆ. ಅಸ್ಪೃಶ್ಯರು ಯಾಕೆ ಅಸ್ಪೃಶ್ಯರಾಗಿ ಹುಟ್ಟಿದ್ದಾರೆ ಎಂಬುದನ್ನು ತಿಳಿಕೊಳ್ಳೋಣ. ಅನೇಕ ಯೋನಿಗಳನ್ನು ದಾಟಿದ ಮೇಲೆ ಜೀವಾತ್ಮನಿಗೆ ಮನುಷ್ಯ ಜನ್ಮವು ಪ್ರಾಪ್ತವಾಗುವುದು. ಹಿಂದಿನ ಯೋನಿಗಳಲ್ಲಿ ತಾನು ಗಳಿಸಿದ ಪುಣ್ಯವು ಮನುಷ್ಯ ಜನ್ಮ ಲಭಿಸುವಷ್ಟಿದ್ದರೂ ಅಂತಹ ಪಾಪವೇನಾದರೂ ಮಾಡಿದ್ದಲ್ಲಿ, ಅವನು ಅಸ್ಪೃಶ್ಯನಾಗಿ ಹುಟ್ಟುವನು. ಅಸ್ಪೃಶ್ಯ ಜನ್ಮದಲ್ಲಿ ಅವನು ಸದಾಚಾರಿಯಾಗಿದ್ದರೆ, ಮುಂದೆ ಉಚ್ಚ ವರ್ಣಗಳಲ್ಲಿ ಹುಟ್ಟುವನು. ಒಂದು ರೀತಿಯಿಂದ ನೋಡಿದರೆ, ಅಸ್ಪೃಶ್ಯರೇ ಪುಣ್ಯವಂತರು. ಅವರಿಗೆ ದೇವಸ್ಥಾನದ ಗೋಪುರದ ದರ್ಶನ ಮಾತ್ರದಿಂದ ಸದ್ಗತಿಯು ದೊರೆಯುವುದು. ಉಚ್ಚವರ್ಣದವರಂತೆ ಅವರು ಪೂಜಾದಿಗಳನ್ನು ಮಾಡಬೇಕಾದುದಿಲ್ಲ ಅವರ ಜಾತಿ ಕಸಬನ್ನು ಮಾಡಿ ಗೋಪುರಕ್ಕೆ ದೂರದಿಂದ ನಮಸ್ಕರಿಸಿದರೆ ಸಾಕು

ರಾಮಚಂದ್ರಃ—ಸುಬ್ಬಾ ಜೋಯಿಸರೇ, ನಿಮ್ಮ ಮಕ್ಕಳು ಸಂಧ್ಯಾವಂದನೆ ಮಾಡುವುದಿಲ್ಲವೆಂದು ಯಾವಾಗಲೂ ಬೊಬ್ಬೆ ಹೊಡೆಯುತ್ತೀರಲ್ಲಾ. ಅವರನ್ನು ಅಸ್ಪೃಶ್ಯರನ್ನಾಗಿ ಮಾಡಿಬಿಡಿರಿ. ಅಂದರೆ ಗೋಪುರದ ದರ್ಶನ ಮಾತ್ರದಿಂದ ಅವರಿಗೂ ಸದ್ಗತಿ ದೊರೆಯುವುದು ಜಪ, ತಪ, ಸಂಧ್ಯಾವಂದನೆ ಯಾಕೆ? ಗೋಪುರ ನೋಡಿದರೆ ಸಾಕು.

ಸುಬ್ಬಾ ಜೋಯಿಸಃ—ಬ್ರಾಹ್ಮಣರು ನಿತ್ಯಕರ್ಮಗಳನ್ನು ಬಿಟ್ಟ ಮಾತ್ರಕ್ಕೆ ಹೊಲೆಯರಾಗುವರೇ? ಇವೆಲ್ಲಾ ಜನ್ಮಸಂಸ್ಕಾರಗಳು. ಕರ್ಮದಿಂದ ಹೋಗುವಂಥವುಗಳಲ್ಲ

ರಾಮಚಂದ್ರ—ಜನ್ಮಸಂಸ್ಕಾರಗಳು ಕರ್ಮದಿಂದ ಹೋಗವಂಥವುಗಳಲ್ಲವಾದರೆ ಹೊಲೆಯರು ಕ್ರೈಸ್ತ ಅಥವಾ ಮುಸಲ್ಮಾನರಾದ ಮಾತ್ರಕ್ಕೆ ಅವರು ಸ್ಪೃಶ್ಯರಾಗುವುದು ಹೇಗೆ?

ತಿಮ್ಮಸ್ವ ಹೆಗ್ಡೆಃ—ಮುಸಲ್ಮಾನ ರಾಜ್ಯದಲ್ಲಿ ಮುಸಲ್ಮಾನರನ್ನು ದೇವಸ್ಥಾನದೊಳಗೆ ಬಿಡುವುದಿಲ್ಲವೆಂದರೆ ಅವರು ಕೇಳುತ್ತಾರೆಯೇ? ಅದರಂತೆ ಈಗ ಕ್ರೈಸ್ತರಾಜ್ಯ, ಕ್ರೈಸ್ತರನ್ನು ಒಳಗೆ ಬಿಡದಿರೋದು ಹೇಗೆ?

ಗೋಪಾಲಃ—ಆಗಮಶಾಸ್ತ್ರಗಳ ನಿಯಮಗಳೆಲ್ಲವೂ ದುರ್ಬಲರಿಗೆ ಮಾತ್ರ ಅನ್ವಯಿಸುತ್ತವೆ. ಅವುಗಳ ಅಧಿಕಾರವು ಶಕ್ತಿ ಇದ್ದವರ ಮೇಲಿಲ್ಲ. ಹೀಗಿದೆಯೇನು ಶಾಸ್ತ್ರಾಧಾರ?

ಪುಟ್ಟಣ್ಣಯ್ಯಃ—ಹಾಗಲ್ಲ ಕವ್ವಿಯರೇ, ಮುಸಲ್ಮಾನರು, ಕ್ರೈಸ್ತರು ನಮಗೆ ಅತಿಥಿಗಳು. ಅತಿಥಿ ಸತ್ಕಾರವು ನಮ್ಮ ಕರ್ತವ್ಯವು. ನಮ್ಮಲ್ಲಿ ನಾವು ಕಲ್ಪಿಸಿಕೊಂಡ ನಿಯಮಗಳನ್ನು ಅವರಿಗೆ ಹಚ್ಚಲಾಗುವುದೇ?

(ಸಭಿಕರು ಸರಿ ಸರಿ, ಯೋಗ್ಯ ಎನ್ನುವರು)

ಗೋಪಾಲಃ—ನಮ್ಮ ಧರ್ಮದಲ್ಲಿ ನಂಬಿಕೆಯಿದ್ದ ಹೊಲೆ

ಯರು ಕ್ರೈಸ್ತರಾಗಿ ನಮ್ಮ ಧರ್ಮವನ್ನು ನಿಂದಿಸಲು ಸುರು ಮಾಡಿದ ಕೂಡಲೇ ಅವರು ಅತಿಥಿಗಳಾಗುತ್ತಾರೆ, ನಮ್ಮ ಸಮಾನರಾಗುತ್ತಾರೆ, ಈ ನಿಮ್ಮ ಸಿದ್ಧಾಂತ ಯಾವ ಶಾಸ್ತ್ರದಲ್ಲಿದೆ ಸ್ವಾಮೀ? ಸದಸದ್ವಿವೇಕ ಬುದ್ಧಿಗೆ ವಿರೋಧವಾದ ಈ ತತ್ವಕ್ಕೆ ಶಾಸ್ತ್ರವೆನ್ನುವರೇ?

ಪುಟ್ಟಣ್ಣಯ್ಯ:—ಇದೆ ಸ್ವಾಮಿ, ಇದೆ. ಶಾಸ್ತ್ರದಲ್ಲೇ ಇದೆಯೆಂದು ನಮ್ಮೂರಿಗೆ ಹತ್ತು ವರ್ಷಗಳ ಮೊದಲು ಬಂದು ಮಹಾ ಪಂಡಿತರು ಹೇಳುತ್ತಿದ್ದರೆಂದು ಅದನ್ನು ಕೇಳಿದವರೊಬ್ಬರು ಹೇಳುತ್ತಿದ್ದರಂತೆ. ನಮ್ಮಣ್ಣ ಹಾಗೆ ಹೇಳಿದ್ದು ನೆನಪು ಕಾಣುತ್ತದೆ, ನನಗೆ.

ಗೋಪಾಲ:—ಇದಕ್ಕೆಲ್ಲವೇ ಪ್ರಮಾಣವೆನ್ನುವುದು. ಯಾರೊ ಒಬ್ಬನು ಓದಿದ್ದಾನೆಂದು ಯಾರೊ ಹೇಳಿದ್ದೆಂದು ಯಾರಿಗೊ ನೆನಪು ತೋರುತ್ತದೆ.. ಶಾಸ್ತ್ರಗಳನ್ನು ಓದಿದವರೂ ಇಲ್ಲ, ಓದಿದ್ದನ್ನು ಕೇಳಿದವರೂ ಇಲ್ಲ. ಯಾರೊ ಏನೊ ಹೇಳಿದ್ದನ್ನು ನಂಬಿ ಅದೇ ಶಾಸ್ತ್ರಧಾರವೆಂದು ನಂಬಿ ದೇವರು ಕೊಟ್ಟ ವಿವೇಕ ಬುದ್ಧಿಯನ್ನು ಉಪಯೋಗಿಸುವುದೇ ಇಲ್ಲ.

ರಾಮಚಂದ್ರ:—ಹಿಂಡಿನ ಮೊದಲಿದ್ದ ಕುರಿ ಹೊಂಡಕ್ಕೆ ಬಿದ್ದರೆ ಹಿಂದಿದ್ದ ಎಲ್ಲಾ ಕುರಿಗಳೂ ಹೊಂಡಕ್ಕೆ ಬೀಳುತ್ತವಂತೆ. ಹಿಂದೂ ಸಮಾಜದ ಸ್ಥಿತಿ ಹಾಗೆಯೇ ಇದೆ.

ಸುಬ್ಬಾ ಜೋಯಿಸ:—ಮಕ್ಕಳೇ, ಗಲಾಟೆ ಮಾಡಬೇಡಿರಿ. ಆಗಮ ಶಾಸ್ತ್ರಗಳನ್ನು ನಮ್ಮಪ್ಪ ಚೆನ್ನಾಗಿ ಅಭ್ಯಾಸ ಮಾಡಿದ್ದರು. ಅವರು ಹೇಳುತ್ತಿದ್ದರು ದೇವಸ್ಥಾನದಲ್ಲಿ ಕಲ್ಲು ಗೊಂಬೆಯನ್ನಿಟ್ಟ ಮಾತ್ರಕ್ಕೆ ದೇವರ ಸಾನಿಧ್ಯವು ಲಭಿಸುವುದಿಲ್ಲ. ಮೂರ್ತಿಯನ್ನು ಶಾಸ್ತ್ರೋಕ್ತ ರೀತಿಯಿಂದ ಪ್ರತಿಷ್ಠಿಸಿ ಆಗಮಗಳಲ್ಲಿ ಹೇಳಿದ ಎಲ್ಲಾ ವಿಧಿಗಳನ್ನು ಆಚರಿಸಿದರೆ ಮಾತ್ರವೇ ದೇವರ ಸಾನಿಧ್ಯವು ಅಲ್ಲಿ ಇರುವುದು. ಆಗಮಗಳಲ್ಲಿ ಅಸ್ಪೃಶ್ಯರನ್ನು ಒಳಗೆ ಬಿಡಬಾರದೆಂದು ಸ್ಪಷ್ಟವಾಗಿ ಹೇಳಿದೆ.

ರಾಮಚಂದ್ರ:—ಒಳಗೆ ಬಿಟ್ಟರೇನು?

ಸುಬ್ಬಾ ಜೋಯಿಸ:—ಒಳಗೆ ಬಿಟ್ಟರೆ, ಆಗಮಗಳ ನಿಯಮವೆನ್ನು ಉಲ್ಲಂಘಿಸಿದಂತಾಗುವುದು. ಪರಮಾತ್ಮನ ಸಾನಿಧ್ಯವು ಅಲ್ಲಿಂದ ಮಾಯವಾಗುವುದು.

ರಾಮು:—ಪರಮಾತ್ಮನು ಸರ್ವ ಶಕ್ತನಲ್ಲವೇ? ಅವನ ಸಾನಿಧ್ಯವು ಎಲ್ಲೆಲ್ಲಿಯೂ ಇರುವುದಲ್ಲವೇ?

ಸುಬ್ಬಾ ಜೋಯಿಸ:—ಹೌದು.

ರಾಮಚಂದ್ರ:—ತಮ್ಮ ಪ್ರವೇಶ ಮಾತ್ರದಿಂದ ಸರ್ವ ಶಕ್ತನಾದ ಪರಮಾತ್ಮನ ಸಾನಿಧ್ಯನನ್ನು ತೊಲಗಿಸುವ ಶಕ್ತಿಯು ಅಸ್ಪೃಶ್ಯರಿಗಿದ್ದರೆ, ಪರಮಾತ್ಮನಿಗಿಂತ ಅವರ ಶಕ್ತಿಯೇ ಅಧಿಕವಾಯಿತು. ದೇವರಿಗೆ ತನ್ನ ಬಳಿಗೆ ಬರುವ ಅಸ್ಪೃಶ್ಯರನ್ನು ಪಾವನ ಮಾಡುವ ಶಕ್ತಿಯಿಲ್ಲ. ಇವರಿಗೆ ದೇವರನ್ನು ದೇವಸ್ಥಾನಗಳಿಂದೋಡಿಸುವ ಶಕ್ತಿಯಿದೆ. ಅಂದರೆ, ಪರಮಾತ್ಮನಿಗಿಂತಲೂ ಇವರೇ ಶ್ರೇಷ್ಠರಾದರು. ಏನು ಜೋಯಿಸರೇ, ದೇವರ ಬದಲಾಗಿ ಇವರನ್ನೇ ಪೂಜಿಸಬೇಕಾಯಿತಲ್ಲಾ

ಸಭಿಕರು ತಮ್ಮೊಳಗೆನೇ ಮಾತಾಡಿಕೊಳ್ಳುವರು. ಒಬ್ಬನು "ಇವರು ಹೇಳುವುದರಲ್ಲಿ ಅರ್ಥವಿದೆ" ಎನ್ನುವನು.

ಪುಟ್ಟಣ್ಣಯ್ಯ:—ಹಾಗೆಲ್ಲ ಸ್ವಾಮೀ. ಜೋಯಿಸರು ಗಲಿಬಿಲಿಯಿಂದ ಏನೊ ಅಂದು ಬಿಟ್ಟರು. ಪರಮಾತ್ಮ ಸಾನಿಧ್ಯವು ಹೊಲೆಯರಿಂದೆಂದೂ ಹೋಗಲಾರದು.

ರಾಮಚಂದ್ರ:—ಹಾಗಾದರೆ, ಅವರನ್ನು ಒಳಗೆ ಬಿಡಬಾರದ್ಯಾಕೆ? ಪರಮಾತ್ಮ ಸಾನಿಧ್ಯದಿಂದ ಅವರು ಪುನೀತರಾಗಲಿ.

ತಿಮ್ಮಸ್ಯ ಹೆಗ್ಡೆ:—(ಸ್ವಗತಂ) ಈ ಸುಧಾರಕರ ಹತ್ತರ ಮಾತಾಡಿ ಜಯಿಸಲು ಸಾಧ್ಯವೇ ಇಲ್ಲ. ಹೇಳಿದ್ದಕ್ಕೆಲ್ಲಾ ಉತ್ತರ ತಯಾರಿದೆ ಇವರ ಕೈಯಲ್ಲಿ. ಇವರೊಡನೆ ವಾದ ಮಾಡುತ್ತಾ ಕೂತರೆ ನಮ್ಮ ತರಾವು ಪಾಸಾಗುವುದು ಕಷ್ಟ.

(ಪ್ರಕಾಶಂ) ಅಧ್ಯಕ್ಷರೇ, ಸಂಧ್ಯಾವಂದನೆಯ ಹೊತ್ತಾಯಿತು. ಬೇಗನೆ ಸಭೆಯನ್ನು ಮುಕ್ತಾಯ ಮಾಡೋಣಾಗಲಿ.

ಅಧ್ಯಕ್ಷ:—ಸರಿಯಾದ ಮಾತು. ಈ ಧರ್ಮವನ್ನರಿಯದ ಮೊಂಡುನ್ಯಾಯ ಮಾತಾಡುವ ಹುಡುಗರ ಹತ್ತರ ಚರ್ಚೆ ಮಾಡುವುದು ನಿರರ್ಥಕ. ಸಭಿಕರೇ, ತರಾವುಗಳನ್ನು ನಿಮ್ಮ ಮುಂದೆ ಇಡುತ್ತೇನೆ. ಮೊದಲನೇದು.

(ಪೋಲೀಸರಬ್ಬರು ಬರುವರು. ಸಭಿಕರೆಲ್ಲರೂ ಬೆಚ್ಚಿಬೀಳುವರು. ಅಧ್ಯಕ್ಷರು ನಿಶ್ಶಬ್ಧರಾದರು.)

ಒಬ್ಬ:—ಚಲೋದಾಯಿತು. ಎಲ್ಲರೂ ಇಲ್ಲೇ ಇದ್ದಾರೆ. (ಅಧ್ಯಕ್ಷರನ್ನು ಉದ್ದೇಶಿಸಿ) ಮುದಿ ಗೂಬೆ, ನಿನಗೆ ಆಮಂತ್ರಣ ಕೊಡಲು ಬಂದಿರುವೆವು.

ರಾಮು:—ಲಗ್ನ ಮಂಟಪಕ್ಕೇನು?

ಪೋಲೀಸ:—ಅಲ್ಲ, ಮಾವನ ಮನೆಗೆ. ಕೋದಂಡ ಶಾಸ್ತ್ರಿಗಳೇ, ನಿಮ್ಮ ಐದನೇಯ ಹೆಂಡತಿಯನ್ನು ಕೊಂದುದಕ್ಕಾಗಿ ನಿಮ್ಮ ಮೇಲೂ ನಿಮ್ಮ ವೇಶ್ಯೆಯ ಮೇಲೂ ವಾರಾಂಟಿದೆ.

ಮತ್ತೊಬ್ಬ ಪೋಲೀಸ:—ತುಪ್ಪದೊಟ್ಟಿಗೆ ವ್ಯಗಗಳ ಕೊಬ್ಬನ್ನು ಸೇರಿಸಿ ಮಾರಿದುದಕ್ಕಾಗಿ ತುಪ್ಪದಂಗಡಿ ಲಂಬೋದರ ಭಟ್ಟರ ಮೇಲೆ ಖಟ್ಲೆಯಾಗಿದೆ. ಭಟ್ರೇ ಬನ್ನಿ.

ಪುಟ್ಟಣ್ಣಯ್ಯ:—ಲಂಬೋದರ ಭಟ್ರೇ ಹೀಗ್ಯಾಕೆ ಮಾಡಿದಿರಿ?

ಪೋಲೀಸ:—ನಿಮಗೂ ಆಮಂತ್ರಣವಿದೇ ಪುಟ್ಟಣ್ಣಯ್ಯನವರೇ, ಎಳೇ ಪ್ರಾಯದ ಅಸ್ಪೃಶ್ಯ ಹುಡುಗಿಯನ್ನು ಕದ್ದೊಯ್ದು ಬ್ರಾಹ್ಮಣ ಹುಡುಗಿಯೆಂದು ನೋಸಗೊಳಿಸಿ ದೇವಸ್ಥಾನದಲ್ಲೇ ಮದುವೆ ಮಾಡಿಸಿದಕ್ಕೆ ನಿಮ್ಮನ್ನು ಚಾರ್ಜು ಮಾಡಲಾಗಿದೆ.

ಪುಟ್ಟಣ್ಣಯ್ಯ:—ನಾನು ಮಾಡಿದ್ದು ಅಸ್ಪೃಶ್ಯತಾ ನಿವಾರಣೆಯಲ್ಲವೇ? ಅದು ತಪ್ಪಲ್ಲ.

ರಾಮು:—ಪೋಲೀಸರೇ, ಅವರನ್ನು ಬಿಟ್ಟು ಬಿಡಿರಿ, ಅಸ್ಪೃಶ್ಯತಾ ನಿವಾರಣೆ ಮಾಡಿದರು, ಅವರು.

ಪೋಲೀಸು—ಇವರನ್ನು ಬಿಟ್ಟರೆ, ಪೋಲೀಸ್ ಲೋಕಪ್ಪಿನಲ್ಲಿ ಸನಾತನ ಧರ್ಮ ಸಭೆಗೆ ಜನ ಸಾಕಷ್ಟು ಇಲ್ಲ.

ತಿಮ್ಮಪ್ಪ ಹೆಗ್ಡೆ:—(ಧರ್ಮರಾಜ ಉಪಾಧ್ಯರನ್ನು ನೋಡಿ)ನಮ್ಮ ಮೇಲೆ ಏನು ಇಲ್ಲವಲ್ಲಾ.

ಮತ್ತೊಬ್ಬ ಪೋಲೀಸು—ಒಹೊ; ನರವ್ಯಾಘ್ರ ಪ್ರಭುಗಳೇ, ಇದೆ, ಇದೆ, ನೀವು ಸೆರೆ ಕುಡಿದು ನಮ್ಮ ಕಾಫಿ ಹೊಟೇಲಿನ ಮುಂದೆ ಅಸಹ್ಯಕರವಾಗಿ ನಡಕೊಳ್ಳುತ್ತೀರೆಂದು ನಿಮ್ಮ ಮೇಲೆ ಆರೋಪವಿದೆ. ಇದೋ ನೋಡಿ ಆಹ್ವಾನಪತ್ರಿಕೆ, ತಾವೂ ಹೊರಡಿ.

ರಾಮಚಂದ್ರಃ—ಸಭಿಕರೇ ಸನಾತನ ಧರ್ಮ ಸಭೆಯು ಪೋಲೀಸ ಲೋಕಪ್ಪಿನಲ್ಲಿ ಜರಗುವುದು. ಈಗ ಆಮಂತ್ರಿಸಲ್ಪಟ್ಟ ಮಹನೀಯರಂತೆ ಹೋಗಲು ಯೋಗ್ಯತೆ ಇದ್ದವರು ಮಾತ್ರ ಹೋಗ ಬಹುದು.

(ಪೋಲೀಸರು ನಾಲ್ವರನ್ನೂ ಕೊಂಡುಹೋಗುವರು)

ಗೋಪಾಲಃ—ಎಂತಹ ಪ್ರಚಂಡ ಧರ್ಮ ಮಾರ್ತಾಂಡರು! ಸುಬ್ಬಾ ಜೋಯಿಸರೇ, ದೇವಸ್ಥಾನ ಪ್ರವೇಶಿಸಲು ಇವರಲ್ಲವೇ ಯೋಗ್ಯರೂ ಅಲ್ಲದೆ, ಭಕ್ತಿಯಿಂದ ಬರುವ ಭಾವಿಕ ಹೊಲೆಯರೇ?

ಸುಬ್ಬಾ ಜೋಯಿಸಃ—ನನ್ನ ಭ್ರಮ ನಿರಸನವಾಯಿತು. ಇಂದಿನಿಂದ ನಾನು ಹರಿಜನ ಸೇವೆಯನ್ನೇ ಕೈಕೊಳ್ಳುವೆನು.

ರಾಮಃ—ಧನ್ಯ, ಹಾಗಾದರೆ ಹರಿಜನ ಸೇವಾ ಸಂಘವಿದ್ದೆಡೆಗೆ ಈಗಲೇ ಹೋಗೋಣ.

-- ಸಮಾಪ್ತ —

-++- -+-++-

ವ್ಯಾಪಿಸಿರಲು, ಅಸ್ಪೃಶ್ಯವೆಲ್ಲಿ?

ಅವನಿಯೊಳಗೆ ವ್ಯಾಪಿಸಿರಲು
ದೇವ ನೀನು ಸ್ಪರ್ಶಿಸಿರಲು
ಹೊಲೆಯ ಸ್ಪರ್ಶದಿಂದ ನೀನು ಬ್ರಹ್ಮನಾದೆಯೋ?
ದುರಿತರಿರುವ ವಿಶ್ವದಲ್ಲಿ ಪತಿತನಾದೆಯೋ?
ಇಳೆಯ ನೀನು ಮನೆಯ ಮಾಡಿ
ಇಳೆಯ ಜನರ ಜನನ ಮಾಡಿ
ಸೂರ್ಯ, ಚಂದ್ರ, ನೀರು, ಗಾಳಿ ಸರಿಸಮಾನದಿ
ಸರ್ವ ಪ್ರಜೆಗಳಿಂಗೆ ಇತ್ತೆ ದಿವ್ಯ ಮಾನದಿ
ಇಷ್ಟು ದಯೆಯ ಗುಣವನಿರಿಸಿ
ಸ್ಪಷ್ಟ ರೀತಿ ವ್ಯಕ್ತಗೊಳಿಸಿ
ಲೋಕವನ್ನು ರಚಿಸಿ ನೀನು ಪ್ರೇಮ ತೋರಿದೆ
ಶೋಕವನ್ನು ಅಳಿಸಲೆಂದು ಸೌಮ್ಯ ತೋರಿದೆ
ಎಳೆದು ಹೊಲೆಯ ಬಿಡುತಲಿರುವ
ಗಾಳಿಯನ್ನು ಸೇದುತಿರುವ
ಇಳೆಯ ಗಾಳಿಯೆಲ್ಲವನ್ನು ಸೇದುತಿರುವರು
ಕೇಳು ಮೇಲು ಭೇದವನ್ನು ತೋರದಿರುವರು
ಹೊಲೆಯರಲ್ಲಿ ಚಲಿಸುತಿರುವ
ಗಾಳಿಯನ್ನು ನಿಲಿಸದಿರುವ
ಜನರು ನನ್ನ ಬಂಧಿಸಲ್ಕೆ ಯತ್ನಿಸಿರುವರು,
ತಾಣ ನಿನ್ನ ದೇವಸ್ಥಾನವೆನ್ನುತ್ತಿರುವರು.
ದೇವ ನಿನ್ನ ಪರಮ ತತ್ವ
ಭಾವವಿರುವ ರೀತಿ ಸತ್ವ
ನರರು ಅರಿತು ಅರಿಯದಂತೆ ನಟಿಸುತಿರುವರು
ಅರಿವ ಮೂರಿ ಗುಡಿಯ ಒಳಗೆ ಬಂಧಿಸಿರುವರು

(ವಿ. ಸತ್ಯಾರ್ಥಿ ಸಿದ್ಧಾಂತ ವಿಶಾರದ).

ಕೆಳಗಿನವು ನಮಗೆ ಬಂದಿವೆ.

The Madras Presidency (1881—1931) ಲೇಖಕರು ಮಿ ಜಿ. ಟಿ, ಬೋಗ್. ಸಿ. ಐ. ಇ. ಐ. ಸಿ. ಎಸ್. ಮುದ್ರಕರು ಸರಕಾರೀ ಮುದ್ರಣಾಲಯ. ಇದು ಮದ್ರಾಸ್ ಸರಕಾರದ ಆಡಳಿತೆಯ ವರದಿ ಬೆಲೆ ರೂ. ೨-೦-೦

ಕುಶಲವಃ— ಕಿರಿಯರ ಪ್ರಪಂಚ ಉಡುಪಿ ಬೆಲೆ. ನಾಲ್ಕಾಣೆ ಲೇಖಕರು ಶ್ರೀ ಕೆ. ಕಾಂತಪ್ರಶಿಷ್ಟ. ನಾಟಕ ಪುಸ್ತಕ.

ರಾಜಾ ಹರದೌಲ—ಬೆಳಗಾಂವಿಯ ಒಂದಾಣೆ ಮಾಲೆಯ ೧೫ನೆಯ ಪುಷ್ಪ. ಅನುವಾದಕರು ಶ್ರೀ. ಶ್ರುಲ್ಹಾದ. ವಾರ್ಷಿಕ ಚಂದಾ ೧-೪-೦ ಇದೊಂದು ಐತಿಹಾಸಿಕ.

(೧) ಮುದ್ ಮಾಳತ್ತ್ ಮುದ್ ಮಾಯೆ- ಲೇಖಕರು—ಶ್ರೀ. ವಿಟ್ಠಲ ಹೆಗ್ಡೆ ಬೆಲೆ ಎರಡಾಣೆ. ತುಳುಭಾಷೆಯಲ್ಲಿ ಕಥೆಯೊಂದು

(೨) ತುಳು ಪದ್ಯ ಮಾಲಿಕೆ—ಬರೆದುದು ಶ್ರೀ. ಕೆ ಗಂಗಾಧರ, ರಾಮಚಂದ್ರ. ಬೆಲೆ ಒಂದಾಣೆ.

(೩) ಬಂಗಾರ್ದಂಗಿದ ಕತೆ—ಬರೆದುದು ಶ್ರೀ ಎ ಎನ್. ಶೀನಪ್ಪ ಹೆಗ್ಗಡೆ. ಬೆಲೆ ಒಂದಾಣೆ ಇವು ಮೂರರ ಪ್ರಕಾಶಕರು ಉಡುಪಿಯ ತುಳು ನಾಡ ಭಾಷಾಭಾನೆಯ ಶ್ರೀ ಎಸ್. ಯು. ಪಣಿಯಾಡಿಯವರು

ಹಾರ್ಮೋನಿಯಂ ಬೋಧನ ಕ್ರಮಃ—ಪುನರ್ಮುದ್ರಣ. ಲೇಖಕರು ಶ್ರೀ ಎ ರಾಮಸ್ವ, ಪಾಂಡೇಶ್ವರ, ಮಂಗಳೂರು. ಶ್ರೀ.ಎಂ. ಎನ್. ಕಾಮತ್‌ರವರ ಮುನ್ನುಡಿಯೊಡನೆ. ಬೆಲೆ ಹನ್ನೆರಡಾಣೆ. ಸಂಗೀತೋಪಾಸಕರಿಗೆ ಅತ್ಯುಪಯುಕ್ತ.

ವಿಮರ್ಶೆಯು ಯಥಾನಕಾಶವಾಗಿ.

ಸ್ವದೇಶಾಭಿಮಾನಿ

ಸಾಹಿತ್ಯ ಸಂಚಿಕೆ.

ಸಂಪುಟ ೨ . ಮೇ ೨೫—೫—೧೯೫೫. ಸಂಚಿಕೆ ೪

— ಅನುಕ್ರಮಣಿಕೆ —

	ಪುಟ
ಶಬ್ದ ಸಾಹಿತ್ಯ . .	೨೫
ಕೈಲಾಸದಲ್ಲಿ . .	೨೬
ಶ್ರೀ ಕೆ. ವಿ ಪುಟ್ಟಪ್ಪನವರು . .	೩೧
ತ್ಯಾಗಿ—ಯೋಗಿ .	೩೨

ಮೇ ತಾರೀಕು ೨೫ನೇ ಶುಕ್ರವಾರ ೧೯೫೫.

ಶಬ್ದ ಸಾಹಿತ್ಯ.

ನಮ್ಮ ಮನಸ್ಸಿನಲ್ಲಿ ಮೂಡಿದುದನ್ನು ಇನ್ನೊಬ್ಬರಿಗೆ ಸರಿಯಾಗಿ ತಿಳಿಸುವುದೇ ಮಾತಿನ ಮೂಲೋದ್ದೇಶ. ಮನುಷ್ಯನ ಅಂತರಂಗದ ಭಾವನೆಗಳೂ ಹೊರಗಿನ ಪ್ರಕೃತಿಯೂ ಅವನ ಹೃದಯದಲ್ಲಿ ಬಿಂಬಿಸುವ ಚಿತ್ರಗಳೂ ವಿಧವಿಧದ ರೂಪವನ್ನು ತಾಳುವುದರಿಂದ ಅವುಗಳೆಲ್ಲವನ್ನು ಅಚ್ಚೆಳೆಯದೆ ಮಾತಿನಲ್ಲಿ ಚಿತ್ರಿಸುವುದು ಪೂರ್ಣ ಸಾಧ್ಯವಲ್ಲ; ಮಾತು ಅಂತರಂಗವನ್ನು ಅರ್ಧ ವ್ಯಕ್ತ ಮಾಡಿ ಅರ್ಧ ಮರೆ ಮಾಡುತ್ತದೆ. ಯಾವ ಭಾಷೆಯಲ್ಲಿ ಅನೇಕ ಸಾವಿರ ಪದಗಳಿದ್ದು ಮಾತಿನ ಬೆಡಗಿಗೆ ಅನುಕೂಲವಿದೆಯೋ ಅದೇ ಮನಸ್ಸಿನ ವಾಹನವಾಗಲಿಕ್ಕೆ ಯೋಗ್ಯವಾದದ್ದು ಎನ್ನಬೇಕು. ಆದುದರಿಂದ ತನ್ನ ಭಾಷೆಯು ಪ್ರಬಲವಾದ ಸಜೀವ ಸಾಹಿತ್ಯದ ವಾಹನವಾಗಬೇಕೆಂದು ಆಶಿಸುವವರು ಅದರ ಶಬ್ದ ಸಮುದಾಯವನ್ನು ಹೆಚ್ಚಿಸುವುದಕ್ಕೆ ಪ್ರಯತ್ನಿಸಬೇಕು.

ನಾಡಿನ ಅಭಿವೃದ್ಧಿಯು ಜನಸಂಖ್ಯೆಯ ಮೇಲೆ ಹೊಂದಿದೆಯೆಂದು ಹತ್ತು ವರ್ಷಗಳಿಗೊಮ್ಮೆ ಖಾನೇಸುನೂರಿ ಲೆಕ್ಕ ಹಾಕುವುದನ್ನೂ ಜನನ ಮರಣದ ಲೆಕ್ಕವನ್ನಿಡುವುದನ್ನೂ ನಾವು ಬಲ್ಲೆವು. ಅದರಂತೆ ಶಬ್ದಗಳ ಖಾನೇಸುಮಾರಿ ಲೆಕ್ಕವು ಪ್ರತಿ ಹತ್ತು ವರ್ಷಕ್ಕೊಮ್ಮೆಯಾದರೂ ಆಗುತಿದ್ದರೆ ನಮ್ಮ ಭಾಷೆಯಲ್ಲಿ ಎಷ್ಟು ಹೊಸ ಶಬ್ದಗಳು ಹುಟ್ಟಿ ಹಬ್ಬಿದ್ದಾವೆ, ಎಷ್ಟು ಹಳೆಯ ಶಬ್ದಗಳು ಅನುಪಯುಕ್ತವಾಗಿ ಮೂಲೆಯ ಪಾಲಾಗಿವೆ, ಇನ್ನೆಷ್ಟು ತನ್ನ ಪೂರ್ವವೃತ್ತಿಯನ್ನು ಬಿಟ್ಟು ಅನ್ಯವೃತ್ತಿಯನ್ನು ಹಿಡಿದಿವೆ—ಇವೇ ಮೊದಲಾದ ಪ್ರಶ್ನೆಗಳಿಗೆ ಉತ್ತರವು ಸಿಕ್ಕಿ ಭಾಷೆಯ ಪ್ರಗತಿಯನ್ನು ಅಳೆಯಲಿಕ್ಕಾಗುವುದು. ಆಗಾಗ್ಗೆ ಹೊಸ ಹೊಸ ಶಬ್ದಕೋಶ (ನಿಘಂಟು)ಗಳನ್ನೂ ಭಾಷಾರೂಢಿ (usage) ಏನೆಂಬುದನ್ನು ವಿವರಿಸುವ ಗ್ರಂಥಗಳನ್ನೂ ತಯಾರಿಸಿದ ವಿನಹ ಭಾಷೆಯ ರಥವು ಮುಂದರಿಯುವುದಿಲ್ಲ. ಕನ್ನಡ ಭಾಷೆಯ ಶಬ್ದಕೋಶವೊಂದು ಕಿಟ್ಟೆಲ್ ಸಾಹೇಬರ ಕಾಲದಲ್ಲಿ ತಯಾರಾಗಿ ಇಂದಿಗೆ ವರ್ಷಗಳಾದುವು, ಮಾತ್ರವಲ್ಲ ಅದು ಕನ್ನಡದಲ್ಲಿ ಪ್ರಥಮ ಸಾಹಸವಾಗಿದ್ದುದರಿಂದ ಅದರಲ್ಲಿ ಅನೇಕ ನ್ಯೂನತೆಗಳು ಇವೆಯೆಂಬುದು ನಿರ್ವಿವಾದ. ಹೀಗಿರುತ್ತ ಇದುವರೆಗೆ ಕನ್ನಡ ನಾಡಿನ ವಿದ್ಯಾಂಸರಾಗಲಿ ಮೈಸೂರು ಯುನಿವರ್ಸಿಟಿಯಾಗಲಿ ಈ ಕೆಲಸಕ್ಕೆ ಕೈಹಾಕದಿದ್ದುದು ಶೋಚನೀಯ ತುಂತುರು ಕಥೆಗಳನ್ನು ಬರೆದೋ, ಹಿಂದೀ ಬಂಗಾಳೀ ಇಂಗ್ಲಿಷುಗಳಿಂದ ಪರಿವರ್ತನ ಮಾಡಿಯೊ ಸಾಹಿತ್ಯ ಸೇವೆ ಮಾಡಿದ್ದೇವೆ ಎಂದುಕೊಂಡರೆ ಸಾಲದು. ಕನ್ನಡ ಶಬ್ದಕೋಶವೊಂದಿರಬೇಕು. ಕನ್ನಡ ವಿಶ್ವಕೋಶ (Encyclopaedea) ಒಂದಿರಬೇಕು. ಕನ್ನಡದ ರೂಢಿಯನ್ನು ವಿವರಿಸುವ ಶಾಸ್ತ್ರಗಳು ಬೇಕು. ಕನ್ನಡಕ್ಕೊಂದು ಸಶಾಸ್ತ್ರೀಯವಾದ ಅಧುನಿಕ ವ್ಯಾಕರಣವೊಂದಿರಬೇಕು.

ಇವುಗಳೊಂದಿಗೆ ಕನ್ನಡ ಶಬ್ದ ಸಂಖ್ಯೆಯನ್ನು ಹೆಚ್ಚಿಸುವ ಪ್ರಯತ್ನವು ಇನ್ನಷ್ಟು ಭರದಿಂದ ಸಾಗಬೇಕು. ಅಚ್ಚಗನ್ನಡ ಶಬ್ದಗಳು ವ್ಯವಹಾರಕ್ಕೆ ಸಾಕಾಗದೆ ಸಂಸ್ಕೃತದಿಂದ ಶಬ್ದಗಳ ಸೇನೆಗಳನ್ನೆ ತತ್ಸಮಗಳೆಂದಾಗಲಿ ತದ್ಭವಗಳೆಂದಾಗಲಿ ತಂದು ನಮ್ಮ ನಾಡಮಾತಿನ ಸೇನೆಗೆ ಹಿರಿಯರು ಹೇಗೆ ಉಪಯೋಗಿಸಿದರೊ ಅದರಂತೆ ಈಗಿನ ಕಾಲದಲ್ಲಿ ಜಗದ್ವ್ಯಾಪಿಯಾದ ಆಧುನಿಕ ಜ್ಞಾನವನ್ನು ವಿವರಿಸಲು ನೂರಾರು ಹೊಸ ಶಬ್ದಗಳು ಅಗತ್ಯ ಬೇಕಾಗಿದ್ದಾವೆ. ಸಂಸ್ಕೃತ ಮತ್ತು ಕನ್ನಡ ಶಬ್ದಗಳಿಗೆ ಹೊಸ ಉಡುಪನ್ನು ತೊಡಿಸಿಯಾಗಲಿ ಅನ್ಯದೇಶದ ಶಬ್ದಗಳಿಗೆ ಕನ್ನಡ ತೊಡಿಗೆಯನ್ನು ಉಡಿಸಿಯಾಗಲಿ ಹೊಸ ಶಬ್ದಗಳನ್ನು ನಿರ್ಮಿಸಿ ಅವುಗಳನ್ನು ಬಳಕೆಯಲ್ಲಿ ತಾರದೆ ನಿರ್ವಾಹವಿಲ್ಲ. ಇಂಗ್ಲಿಷರು ಜಗತ್ತಿನ ಎಲ್ಲಾ ಭಾಷೆಗಳಿಂದ ತಮಗೆ ಅಗತ್ಯವಿರುವ ನವೀನ ಪದಗಳನ್ನು ನಿರ್ಭೀತರಾಗಿ ನಿರ್ಲಜ್ಜರಾಗಿ ಉಪಯೋಗಿಸುತ್ತ ಬಂದುದರಿಂದಲೆ ಅವರ ಭಾಷೆಯು ಇಷ್ಟು ಉನ್ನತ ಸ್ಥಿತಿಗೆ ಬರಲು ಕಾರಣವಾಯಿತು. ಇಂಗ್ಲಿಷು ಭಾಷೆಯಲ್ಲಿ ಫ್ರೆಂಚ್ ಜರ್ಮನ, ಲೆಟಿನ, ಗ್ರೀಕ ಮೊದಲಾದ ಯುರೋಪಿನ ಭಾಷೆಗಳಿಂ

ಾತ್ರವಲ್ಲ ಹಿಂದುಸ್ಥಾನಿ, ತಮಿಳು, ಸಂಸ್ಕೃತ ಮೊದಲಾದ ನಮ್ಮ ಾವೆಗಳಿಂದಲೂ ಜಪಾನು, ಚೀನ, ಅಫ್ರಿಕಾ ಖಂಡಗಳಿಂದಲೂ ಯ್ದ ಶಬ್ದಗಳು ಅನೇಕ ಇವೆ: ಛೀ, ಬಜಾರ್, ರಾಯ್ಸ, ಮೆಂಗೊ, ೂದಲಾದ ಶಬ್ದಗಳು ನಮ್ಮಲ್ಲಿನವಲ್ಲವೆ?

ನಮ್ಮಲ್ಲಿನ ಶಾಲಾ ಕೊಲೇಜುಗಳಲ್ಲಿ ಎಲ್ಲ ಶಿಕ್ಷಣವನ್ನು ಕನ್ನಡ ಲ್ಲಿ ಕೊಡಬೇಕೆಂದು ಕೇಳಿದರೆ ತಕ್ಕದಾದ ಪುಸ್ತಕಗಳಿಲ್ಲ, ಪುಸ್ತಕ ಳನ್ನು ಬರೆಯಲು ಉಪಕ್ರಮಿಸಿದರೆ ಕನ್ನಡ ಪ್ರಾಂತ್ಯದಲ್ಲೆಲ್ಲ ಬಳಕ ುಲ್ಲಿರುವ ಪಾರಿಭಾಷಿಕ ಶಬ್ದಗಳಿಲ್ಲ. ಈ ಕುಂದನ್ನು ಹೋಗಲಾಡಿ ಲು ಅಲ್ಲಲ್ಲಿ ಕೆಲವು ವ್ಯಕ್ತಿಗಳು ತೊಡಗಿದರೆಂಬುದು ನಿಜ, ಆದರೆ ವರು ನಿರ್ಮಿಸಿದ ಶಬ್ದಗಳೇ ಸರಿಯೆಂದು ಎಲ್ಲರೂ ಒಪ್ಪುವಂತಿಲ್ಲ. ದುದರಿಂದ ಮೈಸೂರು ಯುನಿವರ್ಸಿಟಿಯವರು ಈ ಕಾರ್ಯಕ್ಕೆ ಕೈ ಾಕಿ ಕರ್ನಾಟಕದ ಬೇರೆ ಬೇರೆ ಭಾಗಗಳ ತಜ್ಞರನ್ನು ಸೇರಿಸಿ ಪಾರಿ ಾಷಿಕ ಸಂಗ್ರಹವನ್ನು ಬೇಗನೆ ತಯ್ಯಾರಿಸಿದರೆ ಕನ್ನಡಕ್ಕೆ ಮಹದುಪ ಾರವಾಗುತಿತ್ತು.

ಕೈಲಾಸದಲ್ಲಿ.

(ಲೇಖಕರು:—ಶ್ರೀ. ಕುಪ್ಪಿ ವಾಸುದೇವ ಶೆಣೈ, ಕರಂಗಲಪಾಡಿ)

ಸುಳ್ಳು ಹೇಳಲಾರೆ. ಯಮನ ಭಯದಿಂದಲ್ಲ. ಪ್ರಪಂಚವೇ ಧಸ್ಮವಾಗುವುದಾದರೂ ಒಂದು ಸುಳ್ಳು ಹೇಳುವುದರಿಂದ ನನ ೊಂದಾಣೆ ಲಾಭವಿದೆಯೆಂದು ಖಚಿತವಿದ್ದರೆ—ಲಾಭವಿಲ್ಲದೆ ಸುಳ್ಳು ಹೇಳುವವರಿಗಿಂತ ನಾನು ಉತ್ತಮನೆಂಬ ಸಮಾಧಾನ ತಾಳಿ—ಆಡಿಯೇ ಬಿಡುತಿದ್ದೆ. ಆದರೆ, ನನಗೂ ಲಾಭವಿಲ್ಲ; ನಿಮಗೂ ಇಲ್ಲ. ಸತ್ಯ ವನ್ನೆ ಆಡಿ ಬಿಡೋಣವೆಂದು ನಿಶ್ಚೈಸಿ,—ಇಗೊಳ್ಳಿ, ಇದೆಲ್ಲ ಅಕ್ಷರಶಃ ಸತ್ಯ.

ಏನರೀ,—ನಾನು, ಮೇಜರ್ ರೆಡ್‌ಬರ್ನ್, ಫೊಟೊಗ್ರಾಫರ್ ನಿವರ್‌ಡಾಯ್, ಲೆವ್ಸ್‌ನೆಂಟ್ ಎನಿಮೊಮೆಂಟ್ ಮತ್ತು ಈಶ್ವರ, ಇವ ರಷ್ಟು ನುಂದಿ ಕುಳಿತಿದ್ದೆವು. ಎಲ್ಲಿ?—ಪ್ರತ್ಯಕ್ಷ ಕೈಲಾಸದಲ್ಲಿ!

ಈಶ್ವರನು ಮತ್ತು ನಾನು ಹೊರತು! ಉಳಿದವರಾರು ಎಂದು ನೀವು ಆಶ್ಚರ್ಯ ಪಡಬಹುದು. ಅವರು ಇಂಗ್ಲೀಯರು. ಪರಿ ಚಯವು ನನಗೆ ಹೇಗೋ ಎಲ್ಲಿಯೋ ಆಯಿತು. ಹೇಗೋ ಏಕೋ ವಿಮಾನವೇರಿ ಕೈಲಾಸಕ್ಕೆ ಬಂದೆವು. ಈಶ್ವರನು ಸುಸ್ವಾಗತವಿತ್ತು ಕುಳ್ಳಿರಿಸಿದನು. ಕುಳಿತೆವು.

ಮೇಜರ್ ರೆಡ್‌ಬರ್ನರೆಂದರೆ ಅಂತಿಂಥವರಲ್ಲ. 'ತಾಜಾ' ಆಂಗ್ಲ ಮಹಾನುಭಾವ. ಒಂದಿಷ್ಟು ಸೂರ್ಯನ ಕಿರಣ ಮೈಮೇಲೆ ಬಿದ್ದರೆ ಸೆಖೆ ಸಹಿಸಲಾರದೆ ಫಕ್ಕನೆ ನೀರಿಗೆ ಹಾರಿ ಕುಳಿತು, ಅಲ್ಲೆ ಐಸ್‌ಕ್ರೀಮು'ನ್ನು ತರಿಸಿ ತಿನ್ನುವಂತಹ ನಾಜೂಕು ಪ್ರಕೃತಿಯವರು. ಇವರು ಹುಟ್ಟುವಾಗ ಬರೀ ರೆಡ್‌ಬರ್ನರಾದರೂ ಮೇರುವನ್ನೇರ ಹೊರಟಾಗ ಫಕ್ಕನೆ 'ಮೇಜರ'ರಾದರಂತೆ. ಹೆಸರಿಗೆ ತಕ್ಕಂತೆ ಕೆಂಬಣ್ಣ.

ಫೊಟೋಗ್ರಾಫರ್ ನಿವರ್‌ಡಾಯ್ ಮಹಾಶಯರು ಸ್ಥೂಲ ಪ್ರಕೃತಿಯವರು; ಹುಟ್ಟುವಾಗಲೇ ೭೦ ರಾತ್ಲ ಭಾರವಿದ್ದರಂತೆ. ಇಂಥ ಮಗುವು ಇದೊಂದೇ ಎಂದು ಎಲ್ಲ ದಾಖಲೆಗಳ ದಾಖಲೆಯಿಂದ ಹಿಗ್ಗಿದ್ದ ಲಂಡನ್ ನಗರವು ಕಂಗಾಲಾಗಿರಲು, ೫೦ ಫೊಟೋಗ್ರಾಫ ರರು ಅಲ್ಲಿಗೆ ಓಡಿ ಬಂದು ಬಾಣಂತಿಯ ಕೋಣೆಗೆ ಲಗ್ಗೆ ಹತ್ತಿ, ಮಗ್ಗಾ ಟದಲ್ಲಿ ಫೊಟೋ ತೆಗೆದು, ಅರ್ಧ ತಾಸಿನಲ್ಲೆ ೩೦ ಸಾವಿರ ಪ್ರತಿಗಳನ್ನು ಮಾರಾಟ ಮಾಡಿದ ಮೇಲೆ ಅದೊಂದು ನಾಯಿಯ ಭಾವ ಚಿತ್ರವೆಂದು ತಿಳಿದು ದಿಗ್ಭ್ರಾಂತರಾಗಿ ಪುನಃ ಆ ಮನೆಯನ್ನು ಹೊಕ್ಕು ಕೊಠಡಿಯ ಲ್ಲಿದ್ದವರೆಲ್ಲರ ಮೇಲೂ 'ಕೆಮರ' ತಿರುಗಿಸಿ ಮಗುವನ್ನು ಮುಂದೆ ಗು ತಿಸಿ ಒಯ್ದುದೇ ಬ್ರಿಟಿಷ್ ಕೈಗಾರಿಕೆಗೊಂದು ಹೆಸರು—ಫೊಟೋ ಕೌಶ ಲ್ಯಕ್ಕೊಂದು ಕೀರ್ತಿ—ಈ ನೂತನ ಬ್ರಿಟಿಷ್ ಪ್ರಜೆಗೊಂದು ಹೆಸರು ಉಂಟಾಗಿ, ಮಗುವು ಬೆಳೆಯುತ್ತಲೇ ತನ್ನ ಜನನ ಕಾಲದಲ್ಲಾದ ಫೊಟೋ ಮಾರಾಟದ ದಾಖಲೆಯನ್ನು ಕೇಳಿ, ಮನಸ್ಸಿನಲ್ಲಿ ಫೋಟೋ ಗ್ರಾಫಿಯ ಮೇಲೆ ಪ್ರೇಮ ತಾಳಿ, ಅಭ್ಯಾಸಿಸಿ, 'ಎಲ್ಸ್‌ಟ್ರೀ' (ಬ್ರಿಟಿಷರ ಚಲಚಿತ್ರ ನಗರ)ದಲ್ಲಿ ತಾನೊಬ್ಬ ಫೊಟೋಗ್ರಾಫರನಾಗಿ, ಅಜ ರಾಮರ ಕೀರ್ತಿಯನ್ನು ಗಳಿಸಿತು.

ಲೆಫ್ಟನೆಂಟ್ ಎನಿಮೋಮೆಂಟಧಾರೆಂದು ಅವರಿಗೇ ತಿಳಿದಿಲ್ಲ; ಇವರಿಗೆ ಹೆಸರಿಗೆ ತಕ್ಕಂತೆ ಗುಣ. ಯಾವ ಕ್ಷಣದಲ್ಲಾದರೂ ಸಿಗ ರೇಟು ಸೇದಬಲ್ಲರು; ಬ್ರಾಂಡಿ ಕುಡಿಯ ಬಲ್ಲರು; ತತ್ತಿಗಳನ್ನು—ಕೋಳಿ, ಬಾತುಕೋಳಿ, ಉಷ್ಟ್ರಪಕ್ಷಿ ಎಂಬ ಭೇದವಿಲ್ಲದೆ—ಅನೇಕ ಸಂಖ್ಯೆಯಲ್ಲಿ ನುಂಗಬಲ್ಲರು; ನೆಪೋಲಿಯನನಂತೆ, ಮೂರು ಮೂರು ದೂರದಲ್ಲಿ ಮನೆ ಉರಿಯುತ್ತಿದ್ದರೂ ಕಂಬಳಿ ಹಾಸಿ ಸುಖ ನಿದ್ರೆ ಮಾಡ ಬಲ್ಲರು. ಇವರದೊಂದು ವಿಶೇಷ ಗುಣವೆಂದರೆ ದನ—ಎತ್ತು—ಕುದುರೆಗಳನ್ನು ಕಂಡರೆ ಫಕ್ಕನೆ ಅಲ್ಲೆ ಮೈಮರೆತು ಅವುಗಳ ಸೌಂದ ರ್ಯವನ್ನು ಕಣ್ಣುಗಳಿಂದ ಕುಡಿದು, ಚಟಕ್ಕನೆ ಎತ್ತಿ ಮುತ್ತಿಟ್ಟು ನಡೆದು ಬಿಡುವುದು. ಈ ವಿಚಿತ್ರ ತ್ರಿಮೂರ್ತಿಗಳೊಂದಿಗೆ ನಾನು ಕೈಲಾಸ ಸೇರಿ, ಈಶ್ವರನೊಡನೆ ಒಡ್ಡೋಲಗ ಬೇಡಿ, ಮಂಡಿಸಿದ್ದೆನು.

ಈಶ್ವರನಾರೆಂದು ನಿಮಗೆ ತಿಳಿಸುವುದವಶ್ಯವಿಲ್ಲ. ಕೈಲಾಸ ಪತಿಯೇ ಅವನು. ತಲೆಗೊಂದು ಹಾವು, ಹಣೆಯ ಮೇಲೊಂದು ಕಣ್ಣು, ಮುಖ ತುಂಬ ಗಡ್ಡ, ಮೈತುಂಬ ಭಸ್ಮ, ಮೈಗೆ ಸುತ್ತಿ ಒಂದು ಕೃಷ್ಣಾಜಿನ, ಹೀಗೆ ಅಲಂಕೃತನಾಗಿದ್ದನು. ಪುರಾಣಕಾರರೂ ತಪ್ಪಿರ ಲಿಲ್ಲ. ಒಬ್ಬಳು ಗಂಗೆ ಮತ್ತು ಆ ಚಂದ್ರ ಇವರಿಬ್ಬರ ಹೊರತು, ಪುರಾಣಗಳಲ್ಲಿ ವರ್ಣಿತವಾದುದೆಲ್ಲ ಅಕ್ಷರಶಃ ನಿಜ.

ಕುಳಿತು ಒಂದು ತಾಸಾದರೂ ಯಾರೂ ಮಾತೆತ್ತಲಿಲ್ಲ. ಕೊನೆಗೆ ನಾನೇ ಮೊದಲು ಮಾಡಿದೆ: "ಪ್ರಭೋ! ನಾವು ಬಂದುದಕ್ಕೆ ನಿಮಗೆ ಸಂತೋಷವಾಗಿರಬಹುದು. ನಿಮಗೆ ಸಂತೋಷವಾಗಿರಬಹುದೆಂದೂ ಹಿಸಿಯೇ ನನಗೂ ಸಂತೋಷವಾಗಿದೆ."

ಈಶ್ವರನು ಆಶ್ಚರ್ಯದಿಂದ ನೋಡಿದನು. ಈ ಆಶ್ಚರ್ಯವನ್ನು ತಡೆಯಲಾರದೆ) ಫಕ್ಕನೆ ಆ ಮೂರನೆ ಕಣ್ಣನ್ನು ತೆರೆದರೆ . . . ! ಬೇಗನೆ ನಾನು ಮುಂದರಿದು—"ತಂ ತಂ—ತಮ್ಮ ಆಶೀರ್ವಾದ!" ಎಂದೆ.

"ಹಿಂದಿಯಲ್ಲಿ ಮಾತಾಡು; ನಿಮ್ಮ ಭಾಷೆ ತಿಳಿಯುದು!" ಎಂದನು.

ನನ್ನ ಪುಣ್ಯ; ಜಡುಕಿದೆಯೆಂದುಕೊಂಡೆ. ಮೊನ್ನೆ ತಾನೇ ಜರಗಿದ ಹಿಂದೀ ಪರಿಷತ್ತಿನಲ್ಲಿ, ಸ್ವಾಗತಾಧ್ಯಕ್ಷರು ಭಾಷಣ ಓದಿ ಮುಗಿಸುವುದರೊಳಗೆ ನನಗೆ ಹಿಂದಿಯು ಬಾಯಿಪಾಠ ಬಾರದಿರುತಿದ್ದರೆ!

(ಆದರೆ, ವಾಚಕರ ಸೌಲಭ್ಯಕ್ಕಾಗಿ ಕನ್ನಡದಲ್ಲೆ ಬರೆಯುತ್ತೇನೆ).

ರೆಡ್‌ಬರ್ನ್, ನೆವರ್‌ಡಾಯ್ ಎನಿಮೊಮೆಂಟ್ ಪ್ರಭೃತಿಗಳ ಕಡೆಗೆ ನೋಡಿದೆ.

"ಏನಂತೆ?" ಎಂದು ನನ್ನೊಡನೆ ಕೇಳಿದರು.

"ಹಿಂದಿಯಲ್ಲೇ ಮಾತಾಡಬೇಕಂತೆ!"

"ಡೆಮಿಟ್! ಅವರಿಗೆ ಇಂಗ್ಲಿಷ್ ಬರುವುದಿಲ್ಲವೇ?"

ಮುಕ್ಕಣ್ಣನ ಕಡೆಗೆ ನೋಡಿದೆ: "ಭಗವಾನ್! ತನುಗೆ ಇಂಗ್ಲಿಷ್ . . . . !"

"ಇಂಗ್ಲಿಷ್ ಎಂದರೇನು?"

ಒಂದು ನಿಟ್ಟುಸಿರು ಬಿಟ್ಟೆ. ಇವರಿಗೆ ಮಧ್ಯವರ್ತಿಯಾಗಿ ನಾನು ಉಳಿದಿರಬೇಕಾಯಿತಲ್ಲ!

"ಇಂಗ್ಲಿಷ್ ಎಂದರೆ ಒಂದು ಭಾಷೆ; ಸರ್ವಾಂತರ್ಯಾಮಿ! ಪ್ರಪಂಚವನ್ನೆಲ್ಲ ತುಂಬಿದೆ!" ಎಂದೆ.

ಈಶ್ವರನು ಮಾತಾಡಲಿಲ್ಲ. ಬಹುಶಃ ಪ್ರಪಂಚದ ವಿಷಯವಾದುದನ್ನು ಕೇಳಲು ಅವನಿಗೆ ಆತುರವಿಲ್ಲದಿರಬಹುದು. ಪ್ರಪಂಚಕ್ಕೂ ಅವನ ಹಂಬಲವಿಲ್ಲವೆನ್ನುವ.

ಪುನಃ ಅರ್ಧ ತಾಸಿನ ಮೌನವಾಯಿತು. ಆ ಮರವನ್ನು ನೋಡಿದೆ—ಈ ಗಿಡವನ್ನು ನೋಡಿದ—ದೂರದ ಶಿಖರಗಳನ್ನು ಕಂಡೆ—ಹಳ್ಳಗಳನ್ನು ನೋಡಿದೆ, ಏದಾರು ಗುಡಿಸಲುಗಳಿದ್ದುವು ದೂರದಲ್ಲಿ. ಫಕ್ಕನೆ ಒಂದು ಪ್ರಶ್ನೆಯು ತಲೆಗೆ ಹೊಕ್ಕಿತು. ಆ ಗುಡಿಸಲುಗಳಾರವು?

ಮೆಲ್ಲನೆ, "ಭಗವಾನ್! ಆ ಗುಡಿ . . . !" ಎನ್ನುತ್ತಿರಲು,—

"ತಿಳಿಯಿತು. ಧರ್ಮರಾಯನದೊಂದು—ಕ್ಲಿಕ್ ಎಂಬವನದೊಂದು—ವಾರ್ನತಿದೊಂದು—ಗಣಪನದೊಂದು—" ಎಂದುತ್ತರವಿತ್ತನು.

ಧರ್ಮರಾಯ?—ಅಹದು, ೫೦೦೦ ವರ್ಷಗಳ ಕೆಳಗೆ ಕೈಲಾಸಕ್ಕೇರಿದವರಲ್ಲಿ ಭೀಮಾರ್ಜುನರೆಲ್ಲ ದಾರಿಯಲ್ಲೆ ಮಡಿದು, ಧರ್ಮರಾಯನೊಬ್ಬನೆ ಕೈಲಾಸ ಸೇರಿದ್ದನಂತೆ. ಈಗಲೂ ಇಲ್ಲೇ ಇರುವನೆಂದರೆ!

"ಭಗವಾನ್! ಎಲ್ಲಿ? ನೋಡಬಹುದೇ?" ಎಂದು ಆತುರದಿಂದ, ಆ ಪೂಜ್ಯ ವ್ಯಕ್ತಿಯನ್ನು ನೋಡುವ ತವಕದಿಂದ ತೊದಲ್ನುಡಿದೆ.

ಈಶ್ವರನು, ಆಗಬಹುದೆಂದನು. ಆದರೆ, ಆ ಆಂಗ್ಲ ಮಹನೀಯರ ಕಡೆಗೆ ನೋಡಿ, "ಇವರೂ ಬರುವರೇ?" ಎಂದು ಕೇಳಿದನು.

ನಾನು ಅವರ ಕಡೆಗೆ ತಿರುಗಿ, "ಈಶ್ವರನವರು ಕೇಳುತ್ತಾರೆ ನೀವು ಧರ್ಮರಾಯನನ್ನು ಕಾಣುವಿರೋ ಎಂದು" ಎಂದೆ.

"ಇಲ್ಲ, ನಾವಿಲ್ಲೇ ಕೊಂಚ ತಿರುಗಾಡುವೆವೆಂದು ಮಿಸ್ಟರ್ ಈಶ್. . ."

"ಲ್!"—ಬಾಯಿ ಕಚ್ಚಿದೆ ನಾನು—"ಈಶ್ವರನಿಗೆ ಮಿಸ್ಟರ್ ಎನ್ನಬೇಡಿರಯ್ಯಾ! ನಿಮ್ಮ ಹುಟ್ಟು ಗುಣ. ಮಹಾತ್ಮರಿಗೆ ಮಿಸ್ಟರ್ ಎನ್ನಬಹುದೇ? ಇದು ಕೈಲಾಸ—ಇವರು ನನ್ನ ದೇವರು!" ಎಂದು ಮೆಲ್ಲನೆ ಎಚ್ಚರ ಕೊಟ್ಟೆ.

ರೆಡ್‌ಬರ್ನರು ಗಹಗಹಿಸಿ ನಕ್ಕು ಕೆಂವು ಕೆಂಪಾದರು ನೆವರ್‌ಡಾಯಿಯು ಒಂದು ಬಾರಿ ಕೆಮ್ಮುತ್ತ ತಮ್ಮ ತಿರಸ್ಕಾರ ಸೂಚಿಸಿದರು. ಎನಿಮೊಮೆಂಟರವರು ಮಾತ್ರ ಯಾವುದಕ್ಕೂ ಮನಕೊಡದೆ, ಒಂದು ಕಿತ್ತಳೆ ಮರದ ಮೇಲೆ ಕಣ್ಣಿಟ್ಟು, ಎಲೆಗಳಡಿಯಲ್ಲೆಲ್ಲಿಯಾದರೂ ದುಂಡಗಿನ ಹಳದಿ ಚೆಂಡುಗಳು ಕಾಣಬಹುದೋ ಎಂದು ಆಶ್ಚರ್ಯಪಡುತ್ತಿದ್ದರು

"ಇಲ್ಲವಂತೆ—ಬರುವುದಿಲ್ಲವಂತೆ!" ಎಂದು ಈಶ್ವರನಿಗೆ ತಿಳಿಸಿಬಿಟ್ಟು ನಾನೂ ಈಶ್ವರನೂ ಅತ್ತ ನಡೆದು ಹೋದೆವು.

ಮಾನನ ವ್ಯಾಣಿಯ ಸುಳಿವು ಇದ್ದಿಲ್ಲ "ಇಲ್ಲಿ ಇನ್ನಾರು ಇರುವರು?" ಎಂದು ಈಶ್ವರನೊಡನೆ ಕೇಳಿದೆ.

"ಯಾರೂ ಇಲ್ಲ. ಮನುಷ್ಯರಾರಿಗೂ ಇಲ್ಲಿಗೆ ಪ್ರವೇಶವಿಲ್ಲ. ಕೆಲವು ವರ್ಷಗಳ ಹಿಂದೆ ಬಂದ ಆ ಕ್ಲಿಕ್ ಎಂಬ ಬಿಳಿ ಮನುಷ್ಯ ಮಾತ್ರ!" ಎಂದನು ಯಾರಾಗಿರಬಹುದು ಈ ಕ್ಲಿಕ್?

"ಅವನೇ! ಎಂದು ಬೆರಳಿಟ್ಟು ತೋರಿಸಿದನು, ಒಂದು ಹೊಲದ ಕಡೆಗೆ, ಈಶ್ವರ ನೋಡಿದರೆ,—ಅಹುದು, ಒಬ್ಬ ಆಂಗ್ಲೇಯನುತ್ತೊಬ್ಬ ಸ್ಪಷ್ಟ ಕಾಣಿಸಿದನು ಆದರೆ, ಧರ್ಮರಾಯನಂತೆ. ಇಬ್ಬರೂ 'ಕ್ರಿಕೆಟ್' ಆಡುತ್ತಿದ್ದರು. "ಇದೆಂತಹ ಆಟ, ತಿಳಿಯಿತೇ?" ಎಂದು ಕೇಳಿದೆ.

"ಕ್ರಿಕೆಟ್ ಎನ್ನುತ್ತಾರಯ್ಯ, ಆ ಕ್ಲಿಕ್ ಮಹಾರಾಯನು;—ಅವನು ಧರ್ಮಣ್ಣನಿಗೆ ಆ ಆಟ ಕಲಿಸುತ್ತಿದ್ದಾನೆ ನೂರು ವರ್ಷಗಳಾದರೂ ಧರ್ಮಣ್ಣನಿಗೆ ಇವ್ವತ್ತೇಳು ಜಯಂ ಹೊರತು, ಆಟ ಇನ್ನೂ ತಿಳಿದಿಲ್ಲ" ಎಂದನು ಈಶ್ವರ-

"ಓ ಧರ್ಮಣ್ಣಾ!" ಎಂದು ಕೂಗಿದೆ. ಆಶ್ಚರ್ಯ! ನಿಮಿಷಾರ್ಧದಲ್ಲಿ ಎರಡು ವ್ಯಕ್ತಿಗಳೂ ಕಾಣಿ!

"ಅದೇನು ಭಗವಾನ್, ಅವರು ವರಾರಿ?" ಎಂದು ಈಶ್ವರನೊಡನೆ ವಿಸ್ಮಯ ಹೊಂದಿ ಕೇಳಿದೆ.

"ಏನೋ, ಅವರಿಗೆ ಮನುಷ್ಯರನ್ನು ಕಂಡರೆ ಆಗದು" ಎಂದು ಮುಗುಳ್ನಗುತ್ತ ನುಡಿದನು ಮುಕ್ಕಣ್ಣ.

ಈಶ್ವರನೊಡನೆ ಹಿಂದಿರುಗಿದೆ. ದಾರಿಯಲ್ಲೊಂದು ಎತ್ತು, ಹುಲ್ಲು ಮೇಯುತ್ತಿತ್ತು. ಈಶ್ವರನು ಫಕ್ಕನೆ ಬಾಗಿ, ನನ್ನ ಕಿವಿಯಲ್ಲಿ, "ನೋಡು, ಅದು ನನ್ನ ನಂದಿ! ಆ ಕ್ಲಿಕ್ ಇದ್ದಾನಲ್ಲ, ಆತನೊಮ್ಮೆ ಈ ನಂದಿಯನ್ನು ಕೊಂದು ಒಂದು ಚೆಂಡು ಹೊಲಿಯಬೇಕೆಂದೂ, ಒಂದು

ಪತ್ರ ವಾದರಕ್ಷೆ ಮಾಡಬೇಕೆಂದೂ ನೆನಸಿ ಧರ್ಮಣ್ಣನೊದನೆ ತನ್ನ ಆ ಆಸೆಯನ್ನು ಹೇಳಿದನಂತೆ. ಧರ್ಮಣ್ಣನು ಮಹಾ ಕೋಪುಲ ಹೃದಯಿ ನೋಡು. ನನಗೆ ತಿಳಿಸಿಯೇ ಬಿಟ್ಟ. ನಾನು ರೇಗಿ, ಕ್ಲಿಕ್ಕನು ಇದ್ದಲ್ಲಿಗೆ ಹೋದ. ಅಂಗಿ ತೆಗೆಯದೆ ಊಟ ಮಾಡುತ್ತಿದ್ದ ನಯ್ಯ. ನನ್ನ ಕೋಪವು ಇಮ್ಮಡಿಸಿ, ತ್ರಿಶೂಲವನ್ನು ಆತನ ಕಡೆಗೆ ಬಿಸುಡಿದೆ. ಆದರೆ—ಆದರೆ—ಆದರೆ—ನಮ್ಮ ಹೆಸರೇನು?''

''ಶ್ರೀನಾಥ; ನನ್ನ ಹೆಂಡತಿಯ ಹೆಸರು ವಿೂರೆ?''

''ನಿಮ್ಮ ವಿೂರೆ ಅಲ್ಲೆ ಇರಲಿ; ಆದರೆ—''

''ಅಲ್ಲೆ ಇದ್ದಾಳೆ. ಬರುವುದಿಲ್ಲವೆಂದಳು.''

''ಒಳ್ಳೆದಾಯಿತು. ಒಬ್ಬಳು ಪಾರ್ವತಿದೇ ಕಾಟ ಸಾಕು. ಆದರೆ—''

''ಪಾರ್ವತಿಗೆ ಮಕ್ಕಳು ಹುಟ್ಟಿವೆಯೆ?''

''ಇಲ್ಲ. ಆದರೆ—''

''ಬಸಿರಿಂದು ತೋರುವುದು—''

''ಇಲ್ಲ, ಇಲ್ಲ. ಆದರೆ—ಆದರೆ, ಆದರೆ ನಾನು ಹೇಳುತಿದ್ದು ದೇನು?''

''ಪಾರ್ವತಿ ಬಸಿರಾಗಿಲ್ಲವೆಂದು.''

''ಛೀ ಛೀ, ಅಲ್ಲ—''

''ನನ್ನ ಹೆಸರೇನೆಂದು.''

''ಅಲ್ಲವಯ್ಯಾ—''

''ತ್ರೀಶೂಲ—''

''ನಿಜ ನಿಜ! ಅದೇ ನಾನು ಕೋಪದಿಂದ ಆ ತ್ರಿಶೂಲವನ್ನು ಕ್ಲಿಕ್ಕನ ಕಡೆಗೆ ಬಿಸುಡಿಬಿಟ್ಟೆ. ಆದರೆ, ಶ್ರೀನಾಥ! ಏನು ಹೇಳಲಿ! ಆ ಕ್ಲಿಕ್ಕನು ಒಂದಿಷ್ಟೂ ಗಾಬರಿ ತೋರಿಸದೆ ಅದನ್ನೆತ್ತಿ, ಅದರಿಂದ ದೋಸೆ ಚುಚ್ಚಿ ಎತ್ತಿ ಬಾಯಿಗೆ ಇಟ್ಟು ತಿಂದನಯ್ಯ!''

ಅವಾಕ್ಕಾದೆ! ''ಭಗವಾನ್! ಜೋಕೆಯಿರಲಿ. ಈ ಆಂಗ್ಲರಿಗೆ 'ಫೊರ್ಕ್' ಎಂಬ ತ್ರಿಶೂಲದಂತಹ ಉಪಕರಣವಿಲ್ಲದೆ ಊಟವಾಗದು. ಜಾಗ್ರತೆಯಿಂದದನ್ನು ಪೆಟ್ಟಿಗೆಯಲ್ಲಿಡಿರಿ.'' ಎಂದು ಎಚ್ಚರ ಕೊಟ್ಟೆ.

ಈಶ್ವರನು ಚಿಂತಾಕ್ರಾಂತನಾಗಿ, ಅಳು ಮೋರೆಯಿಂದ ''ಶ್ರೀನಾಥಾ! ನಾನು ಕೆಟ್ಟೆ; ನೊದಲು ನಂದಿಯ ಮೇಲೆ ಕಣ್ಣಿಟ್ಟ; ಹಟ್ಟಿ ಕಟ್ಟಿ ಬೀಗ ಇಕ್ಕಬೇಕಾಯಿತು. ಈಗ ತ್ರಿಶೂಲದ ಗಂಡಾಂತರ! ಹುಲಿ ಕರಡಿಗಳ ಕಾಟಕ್ಕಿಂತಲೂ ಹೆಚ್ಚಾಯಿತು. ನಾಥಾ, ನಾನು ಹೇಗೆ ಸುಖವಾಗಿ ಬಾಳಲಿ? ಸಾಲದುದಕ್ಕೆ ಇನ್ನು ಮೂವರು ಬಂದಿರುವರು!'' ಎಂದು ಅನಾಥನಂತೆ ಹಂಬಲಿಸಿದನು.

ಈಶ್ವರನಿಗಾಗಿ ನನಗೆ ನಿಜವಾಗಿಯೂ ದುಃಖವುಂಟಾಯಿತು. ಮೂಜಗದ ಒಡೆಯನಾದ ಮುಕ್ಕಣ್ಣನಿಗೂ ಸುಖವಿಲ್ಲ,—ಇವರಿಂದ! ''ಪ್ರಭೂ ಆ ಕ್ಲಿಕ್ಕನಿಗೆ ಇಲ್ಲೇನು ಕೆಲಸ?'' ಎಂದೆ.

''ತನಗೆ ಹೂದೋಟಗಳ ಮಾಹಿತಿಯಿದೆ ಎಂದನು. ಅಪ್ಪಣೆ ಕೊಟ್ಟೆ. ಒಂದು ಹೂದೋಟ ಮಾಡಿದ್ದಾನೆ. ಆ ತೋಟದ ನಡುವಿನಲ್ಲೊಂದು ಗುಡಿಯ ಹಾಗೆ ಕಟ್ಟಿದ್ದಾನೆಯ್ಯ! ಅದರಲ್ಲಿ, ಗಲ್ಲ ಗೇರಿಸಿದ ಒಂದು ಚಿತ್ರ ಬರೆದಿರುವನು. ಅದೇನು?''

''ಅಯ್ಯೋ ಸ್ವಾಮಿ! ಇಗರ್ಜಿ'' ಎಂದೆ.

''ಅಯ್ಯೋ ಕೆಟ್ಟೆ!'' ಎಂದು ಹಣೆಗೆ ಬಡಿದುಕೊಂಡನು ಈಶ್ವರ.

''ಸ್ವಾಮೀ, ಹಾಗೆ ಹಣೆಗೆ ಬಡಿದುಕೊಳ್ಳಬೇಡಿ. ಅಲ್ಲಿ ನಿಮ್ಮ ಪ್ರಳಯಾಗ್ನಿಯ ಕಣ್ಣಿದೆ. ಅದಕ್ಕೆ ಪೆಟ್ಟು ಬಿದ್ದು ಫಕ್ಕನೆ—ತೆಕ್ಕೆ ಪ್ರಮಾದ ಘಟಿಸಿದರೆ—ಮೊದಲೇ ಸೆಖೆಕಾಲ—ಸ್ವಾಮಿ, ನಾನೂ ನನ್ನ ವಿೂರೆಯೂ ಭಸ್ಮ!'' ಎಂದೆ.

ಈಶ್ವರನು ಮಾತಾಡಲಿಲ್ಲ. ನನ್ನ ಮತ್ತು ನನ್ನ ವಿೂರೆಯ ಚಿಂತೆಗಿಂತಲೂ ಆತನಿಗೆ ಆತನ ನಂಧಿ—ತ್ರಿಶೂಲಗಳ ಚಿಂತೆ ಹೆಚ್ಚಿರಬೇಕು. ಕೊನೆಗೆ, ''ನಿಮ್ಮನ್ನಾಳುವವರಾರು?'' ಎಂದು ಪ್ರಶ್ನಿಸಿದನು.

''ನಮ್ಮನ್ನಾಳುವವರು ಇವರೇ—ಇಂಗ್ಲಿಷರು. ಆದರೆ, ನನ್ನನ್ನು ವಿೂರೆ ಆಳುತ್ತಾಳೆ!'' ಎಂದೆ.

''ನಿನ್ನ ವಿೂರೆಯ ಮಾತಿರಲಯ್ಯಾ. ಆಂಗ್ಲರ ವಿಷಯ ಮಾತಾಡುವ. ಇವರಿಂದ ನಿಮಗೆ ಹೀಗೆಯೆ ಕಾಟವಿದೆಯೋ?

ಇಲ್ಲ ಸ್ವಾಮೀ. ನಮ್ಮ ಎತ್ತುಗಳೂ ದನಗಳೂ ಸುರಕ್ಷಿತ. ನಮಗೆ ಬರುವ ವಾದರಕ್ಷೆಗಳೆಲ್ಲ ಎಲ್ಲಿಂದಲೋ ಬರುತ್ತವೆ. ಎಲ್ಲಿಯೋ ಪಶುಗಳನ್ನು ಯಾರೋ ಕಡಿಯುತ್ತಾರೆ. ಯಾರೋ ವಾದರಕ್ಷೆ ಮಾಡುತ್ತಾರೆ ಸರಕಾರದವರು ಕಡಿಯುವುದಿಲ್ಲ'' ಎಂದೆ.

''ನೀವೆಲ್ಲ ಸುಖವಾಗಿರುವಿರಾ?''

''ಅಹುದು ನನಗೆ ೫೦ ರೂಪಾಯಿ ಸಂಬಳ!''

''ಉಳಿದವರು?''

''ಸಾಯಲಿ; ಶಾಸನಭಂಗ ಮಾಡುತ್ತಾರೆ.''

''ಶಾಸನ ಭಂಗಂವೆಂದರೇನು?''

''ಜೈ ಎಂದು ಕೂಗುವುದು.''

''ಅಷ್ಟೆ ಅದು ಶಾಸನಭಂಗ?''

ಅಹುದು, ಅಷ್ಟೆ. ಅಷ್ಟು ಹೇಳುವಾಗಲೇ ಕೈದುಮಾಡಿ . . ಜೈಲು! ಜೈಲಿಗೊಯ್ದು . . . . ಭಗವಾನ್! . . . . ಮುಜ್ಜಿಗೆಯಿಲ್ಲ. ಇವರ ಕರ್ಮದಿಂದ ರಿಟ್ರೆಂಚ್‌ಮೆಂಟ್ ಎಂಬ ಚಿತ್ರ ಹಿಂಸೆಯು ರೋಗ ಬಂದು ನಮಗೂ ಮುಜ್ಜಿಗೆಗೆ ತತ್ವಾರ!''

ಈಶ್ವರನು ಮೌನವಾಗಿ ಕೇಳುತಿದ್ದನು. ನಾನು ಮುಂದರಿಸಿದೆ:

''ಭಗವಾನ್! ಇನ್ನೊಂದು ಹೊಸ ಗಂಡಾಂತರ!''

''ಏನು?''

''ಹರಿಜನೋದ್ಧಾರವಂತೆ!''

''ಹರಿಜನರೆಂದರೆ ಯಾರು?''

''ಹೊಲೆಯರು.''

''ಉಸ್! ತಪ್ಪಿ ಹರಿಜನರೆನ್ನುವುದಿಲ್ಲವೆಷ್ಟೆ?''

''ಇಲ್ಲ''

ಸಂಕಲ್ಪಿಂದು ನಿಟ್ಟುಸಿರು ಬಿಟ್ಟನು ಮುಕ್ಕಣ್ಣ. ಬಹುಶಃ ಹರಿ ಜನರನ್ನು ಸೃಷ್ಟಿಸಿದನು ಇವನಲ್ಲ.

ಒಂದು ನಿಮಿಷದ ಮೌನವಾಯಿತು. ಆ ಮೇಲೆ ಮೆಲ್ಲನೆ– "ಇವರು—ಈ ಆಂಗ್ಲೇಯರು—ಇಲ್ಲೀಕೆ ಬಂದರು?" ಎಂದು ಕೇಳಿದನು.

"ಯಾರಿಗೆ ಗೊತ್ತು? ದುರ್ಗಮವಾದುದಾವುದೋ ಅಲ್ಲಿ ಸ್ಥಾನವು ಏನೋ ಅಮೂಲ್ಯ ವಸ್ತುವನ್ನಿರಿಸಿಡಬೇಕೆಂದು ಜನರ ಖಂಡಿತಾಭಿಪ್ರಾಯ. ಆಲ್ಪ್ಸ್ ಪರ್ವತವನ್ನೇರಿದರು; ಉತ್ತರ ಧ್ರುವವನ್ನು ತಿರಿಗಿ ಬಂದರು. ಆಫ್ರಿಕದ ಕಟ್ಟಡವಿಗಳನ್ನು ಭೇದಿಸಿದರು. ಇದೊಂದು ಎವರೆಸ್ಟ್ . . "

"ಎವರೆಸ್ಟ್ ಎಂದರೆ?"

"ಇದೇ–ನಿಮ್ಮ ಈ ಕೈಲಾಸ. ಎವರೆಸ್ಟ್ ಎಂಬ ಹೆಸರಿನ ಆಂಗ್ಲ ಮಹನೀಯನೊಬ್ಬನು ಕೆಳಗೆ ಮೈದಾನಿನಲ್ಲೇ ಕುಳಿತು, ಪ್ರಪಂಚದಲ್ಲಿ ಅತ್ಯುನ್ನತ ಶಿಖರವೇ ಇದು ಎಂಬುದನ್ನು ಕಂಡು ಹಿಡಿದು, ಎತ್ತರ ವೆಷ್ಟೆಂದು ಅಲ್ಲಿಂದಲೇ ಲೆಕ್ಕ ಹಾಕಿ ಹೇಳಿದನು. ಅಂದಿನಿಂದ ನಿಮ್ಮ ಕೈಲಾಸವೆಂಬ ಹೆಸರು ಹೋಗಿ 'ಎವರೆಸ್ಟ್' ಎನ್ನಲಾರಂಭ."

ಈಶ್ವರನು ಮುತ್ತೊಂದು ನಿಟ್ಟುಸಿರು ಬಿಡುತ್ತಾ "ಕಷ್ಟ! ಅವರ ಮೊದಲು ಹಿಂದೂಗಳು ಇದನ್ನು ಕಂಡುಕೊಂಡಿದ್ದರಾದರೂ, ಕಂಡು ಕೊಂಡವರಾರೋ ಅವರ ಹೆಸರು ಬರಲಿಲ್ಲ. ಆಂಗ್ಲರೆಂದರೆ ಹೆಸರಿಡುವಲ್ಲಿ ಅಷ್ಟೂ ದಿಟ್ಟರು. ಇನ್ನು,–ನನ್ನನ್ನು ಕಂಡ ಆ ರೆಡ್‌ಬರ್ನ್ ಇದ್ದಾನಲ್ಲ;–ಅವನು, ತಾನೇ ನನ್ನನ್ನು ಮೊದಲು ಕಂಡೆನೆಂದು ನನ್ನನ್ನು ಮುಂದೆ 'ರೆಡ್‌ಬರ್ನ್ ಈಶ್ವರ' ಎಂದು ಹೇಳುವ ಸಂಭವವಿದೆಯೇ?"

ಅಷ್ಟರಲ್ಲೆ ನನ್ನ ಹಿಂದೆ ರೆಡ್‌ಬರ್ನ್, ಅವನೊಂದಿಗೆ ಎನಿ ಮೊಮೆಂಟ್ ಮುತ್ತು ನೆವರ್‌ಡಾಯ್!

"ಏನಂತೆ?" ಎಂದರು ರೆಡ್‌ಬರ್ನ್. ಈಶ್ವರನು ಹೇಳಿದುದನ್ನು ತಿಳಿಸಿದೆ.

"ಅಹುದೆಂದನು" ರೆಡ್‌ಬರ್ನ್.

"ಎನಿ ಮೊಮೆಂಟ್ ಎನ್ನುವೆವು ತನ್ನಾನಿ.

"ನೆವರ್‌ಡಾಯ್ ಎನ್ನುವೆವು" ಎಂದರು ನೆ. ಡಾ. ಮಹಾಶಯರು.

ಈಶ್ವರನಿಗೆ ಇದರರ್ಥವನ್ನು ತಿಳಿಸಿದೆ. ದಿಕ್ಕುಗೆಟ್ಟು, "ಅಯ್ಯೋ –ಭಯಂಕರ!" ಎಂದು ಅರಚಿ, ನಿಂತಲ್ಲೆ ಮಾಯವಾದನು.

ನಾವು ಬೆಪ್ಪಾದೆವು. ಒಂದರೆ ನಿಮಿಷದ ಮೇಲೆ ನಾನು ದುಃಖ ಪೂರಿತ ಸ್ವರದಿಂದ ಹೇಳಿದೆ: "ಮಿಸ್ಟರ್ ರೆಡ್‌ಬರ್ನ್ ಎನಿಮೊಮೆಂಟ್ ಮತ್ತು ನೆ। ಡಾ। ನೆಹಾಶಯರೇ ನಿಮ್ಮ ಜಗಳದಿಂದ ಈಶ್ವರ ಹೋಗಿಯೇ ಬಿಟ್ಟನು. ನಮಗೆ ಇನ್ನೇನು ಗತಿ?"

"ಚಿಂತೆಯಿಲ್ಲ. ನಾವು ಇಲ್ಲೆ ತಿರುಗಾಡುತ್ತಿರುವ. ಮುತ್ತು–ಮಾಣಿಕ್ಯ–ವಜ್ರ–ಹವಳಗಳ ಮರಗಳೇ ಇಲ್ಲಿ ಇವೆಯಂತೆ. ಎಲ್ಲಿರುವುವೆಂದು ನೋಡುವ" ಎಂದರು ರೆಡ್‌ಬರ್ನ್.

"ಇಲ್ಲೆಲ್ಲಿಯಾದರೂ ನೆಲೂನು ಇದ್ದರೆ ಮೊದಲು ಕ್ಷೌರ ತೆಗೆಸ ಬಹುದಿತ್ತು. ಬರುವಾಗ ನಾನು ಬಾಳು ತರಲು ಮರೆತೆ!" ಎಂದರು ನೆ. ಡಾ.

"ಹುಚ್ಚಾ, ನೆಲೂನು ಇದ್ದರೆ ಈಶ್ವರನಿಗೆ ಈ ಗತಿಯೇ? ನೋಡ ಬಾರದೇ ತಲೆ ಮೇಲೆ ಐದಡಿ, ಮುಖದ ಮೇಲೆ ಎರಡಡಿ?" ಎಂದು ಈಶ್ವರನ ಗಡ್ಡದ ಅಳತೆಯನ್ನು ಹೇಳಿ, ಸಮಾಧಾನಗೊಳಿಸಿದೆ.

"ಎಲ್ಲಿಯಾದರೂ ಕಿತ್ತಳೆ ದೊರೆತರೆ ಎರಡನ್ನು ಕಿತ್ತು ತಿನ್ನ ಬಹುದಿತ್ತು!" ಎಂದು–ಮರಗಳ ಮೇಲಿನ ದೃಷ್ಟಿಯನ್ನು ಕೆಳಗಿಳಿಸದೆ ದುಃಖದಿಂದ ನುಡಿದರು ಎನಿಮೊಮೆಂಟ್, ಕೀಕ್ಷ್ಣ ಪಕ್ಷದವರು.

"ಅಥವಾ, ಹೊಟೇಲು!" ಎಂದರು ರೆಡ್‌ಬರ್ನ್. ಮುಂದ ಪಕ್ಷದವರು.

"ಅಥವಾ ಮಿಠಾಯಿ ಮಾಡುವನು!" ಎಂದರು ನೆವರ್‌ಡಾಯ್ ಉದಾರ ಪಕ್ಷದವರು.

"ಅಥವಾ ಒಬ್ಬ ಅಡಗೂ ಲಜ್ಜೆಯ ಮನೆ!" ಎಂದೆ ನಾನು, ಹಳೇ 'ಟೋರಿ!

ಅಷ್ಟರಲ್ಲೆ ವಿಕಾರವಾಗಿ ಕೂಗಿದನು–"ಹೂ–ಹ್ಹು–ಹ್ಹು!" ಎಂದು ಎನಿ ಮೊಮೆಂಟ್–ನೋಡಿದರೆ,–ದೂರದಲ್ಲೊಂದು ಎತ್ತು; ಈಶ್ವರನ ನಂದಿ!

"ಪ ಪ ಪ ವ್–ಭ್–ಭ!" ಎಂದು ಪ್ರೇಮವನ್ನು ವ್ಯಕ್ತಪಡಿಸುತ್ತ ಎನಿಮೊಮೆಂಟರವರು ಮುಂದರಿದರು. ನಂದಿಯು ತಲೆಯಲ್ಲಾಡಿಸಿತು–ಬರುವುದಿಲ್ಲವೆಂದು.

ಎ। ಮೊಮೆಂಟರು ಮುಂದರಿದು ಹೋಗಿಯೇ ಹೋದರು. ರೆಡ್‌ಬರ್ನಾರು ತಿರಸ್ಕಾರದಿಂದ ಬಾಯಿಯಗಲಿಸಿ,"ವಶ! ಎತ್ತನ್ನು ಕಂಡರೆ ತಾನೇ ಎತ್ತಾಗುವನು! ವಿಚಿತ್ರ ಪ್ರಾಣಿ!" ಎನ್ನುತ್ತಿರಲು,—

"ಹೋ ೀ ೀ" ಎಂದೊಂದು ಕೂಗು, ಕರ್ಣಕುಹರಗಳನ್ನು ಭೇದಿಸಿ, ಮಿದುಳನ್ನು ಚಿರ್ರನೆ ಕೊಯ್ದಂತೆ ಮಾಡಿತು ನೋಡುವಷ್ಟರಲ್ಲಿ ರೆಡ್‌ಬರ್ನ್ ಮತ್ತು ನೆವರ್‌ಡಾಯ್ ಮಹಾಶಯರು ಎನಿ ಮೊಮೆಂಟರ ಕಡೆಗೆ ಓಡಿ ಹೋದರು ನಂದಿಯು ಎ। ಮೊ।ವನ್ನು ಕೊಂಬುಗಳ ಮೇಲೆತ್ತಿ ಬಿಸುಡಿ ಹೋಯಿತು. ನಾನೂ ಅತ್ತ ಹೋದೆ ಎ। ಮೊ।ರವರು ಮೃತ್ಯು ವಶರಾಗಿದ್ದರು!

ಕೈಲಾಸದಲ್ಲಿ,—ಮುನುಸಿಪಾಲಿಟಿಯ ಅಪ್ಪಣೆಯಿಲ್ಲದೆ ಕಟ್ಟಿಸಿದ ಮೊದಲನೆ ಗೋರಿಯೇ ಅತನದು. "ಇಲ್ಲಿ, ಬ್ರಿಟಿಷ್ ಸಾಮ್ರಾಜ್ಯದ ಕೀರ್ತಿಗಾಗಿ ಚಕ್ರವರ್ತಿಯವರ ಹೆಸರಲ್ಲಿ ಮಡಿದು ಮಡಿದ ವೀರನು, ೨೯೧೪೦ ಅಡಿ ಎತ್ತರದ—ಪ್ರಪಂಚದ ಅತ್ಯುನ್ನತ ಶಿಖರದಲ್ಲೂ ನಮ್ಮ ಧ್ವಜವನ್ನೂರಿರುವೆವೆಂಬುದನ್ನು ಸಾರಲು ಪವಡಿಸಿರುವನು" ಎಂದು ಇಂಗ್ಲಿಷಿನಿಂದ ಆ ಗೋರಿಯ ಮೇಲೆ ಲಿಸಿ Inscription ಲಿಖಿಸಿದುದಾಯಿತು. ಅಳುತ್ತ ಅಳುತ್ತ ನೆವರ್‌ಡಾಯಿಯು ಆ ಗೋರಿಯ ಚಿತ್ರವನ್ನೆತ್ತಿದನು.

ಮುತ್ತುಗಳ ಮರ!–"ಇಲ್ಲಿ ಮುತ್ತುಗಳು ಮರಕ್ಕೆ ಹುಟ್ಟುತ್ತವಲ್ಲ! ಎನ್ನುತ್ತ ನೆವರ್‌ಡಾಯಿಯು ಆ ಮರದ ಮೇಲೆ ಕುಳಿತು, ಮುತ್ತುಗಳನ್ನು ಹೆಕ್ಕಿ ತನ್ನ ಚೆಲ್ಲಣದ ಬದಿಯ ಚೀಲಗಳಲ್ಲಿ ತುಂಬುತಿದ್ದನು. ನಾನೂ ನೆವರ್‌ಡಾಯಿಯೂ ನಿಂತು ನೋಡುತಿದ್ದೆವು, ಅಷ್ಟ

ರಲ್ಲಿ ಒಂದು ಇಲಿ ಕರಡಿಯಷ್ಟು ದೊಡ್ಡದು!—ಗಣಪನದ್ದಂತೆ!—ನೆವರ್ ಡಾಯಿಯ ಹಿಂದಿನಿಂದ ಬಂತು. ಹಿಡಿಯಿತು ಕತ್ತನ್ನು! ನುಂಗಲಾರಂಭಿಸಿತು. ರೆಡ್ ಬರ್ನರು ಫಕ್ಕನೆ ಕೆಮರವೆತ್ತಿ, ಇಲಿಯು ನೇ ಡಾಯಿಯನ್ನು ನುಂಗುವ ಆ ಚಿತ್ರವೆತ್ತಲು ತಿರುಗಿಸಲಾರಂಭಿಸಿದರು. ನಾನು ಭಯಾಸ್ಪತನಾಗಿ ನೋಡುತಿದ್ದಂತೆ ಆ ಇಲಿಯು ನೆ ಡಾಯಿಯ ಬೂಟ್ಸುಗಳನ್ನು ಸಹ ಬಿಡದೆ ಇಡಿಯಾಗಿ ನುಂಗಿ ಬಿಟ್ಟಿತು! ಚಿತ್ರವನ್ನು ಪೂರೈಸಿ ರೆಡ್ ಬರ್ನರು ಹಣೆಯ ಮೇಲಿನ ಬೆವರನ್ನುಜ್ಜಿ, ಸಂತೃಪ್ತಿಯ ನಿಟ್ಟುಸಿರು ಬಿಟ್ಟು—"ಈ ಚಿತ್ರಕ್ಕೆ ೮ ಲಕ್ಷಕ್ಕೆ ಕಡಿಮೆಯಿಲ್ಲದೆ ಬೆಲೆ!" ಎಂದು ವಿಜಯ ಗೌರವದಿಂದ ನುಡಿದರು. ಈ ಮುಖಪರ್ಯಾವಸಾಯಿ ಘಟನೆಯಿಂದ ಗಂಟಲು ಪಸೆಯೊರಿರುವ ನಾನು—'ಹಿ ಹಿ' ಎಂದು ಸುಳ್ಳು ನಗೆಯನ್ನು ನಕ್ಕು, ಇನ್ನು ನನ್ನ ಪ್ರಾಣಾಪಹರಣಕ್ಕೆ ಯಾವ ಜಂತುವು ಬಾದು ಕುಳಿತಿರುವುದೋ ಎಂಬ ಶಂಜಕೆಯಿಂದ ಅತ್ತಿತ್ತ ನೋಡಿದೆ.

"29140 ಅಡಿಗಳ ಮೇಲೆ 50 ಅಡಿ ಎತ್ತರವಾಗಿರುವ ನುರದ ಮೇಲೆ ಕಣ್ಣೀರಿಲ್ಲದೆ ಪ್ರಾಣ ಬಿಟ್ಟ ಅಸಮ ಬ್ರಿಟಿಷ್ ನೀರ!" ಎಂದು ನೆವರ್ ಡಾಯಿಯ ಗೋರಿಯ ಮೇಲೆ ಲಿಪಿಯು ಮುತ್ತುಗಳಿಂದಲೇ ಮಿನುಗಿತು.

"ಇನ್ನು ಉಳಿದವರು ನಾವಿಬ್ಬರೇ! ರೆಡ್ ಬರ್ನ್ ಸಾಹೇಬರೇ, ನಾವೇನು ಮಾಡೋಣ?" ಎಂದು ಕೇಳಿದೆ.

"ಮಾಡುವುದೇನು? ಇದೋ—ನೋಡು!" ಎಂದು, ತಾನೆತ್ತಿದ ಚಿತ್ರವನ್ನೂ ಕೆಮರವನ್ನೂ ಎತ್ತಿ, ವಿಮಾನ ವೇರಿ, ಅಪಹಾಸ್ಯ ಸೂಚಕ ನಗುವನ್ನು ನಕ್ಕು, ಮೇಲೇರಿ—ಅಲ್ಲಿಂದ ಹಿಂದೂಸ್ಥಾನದ ಕಡೆಗೆ ಕೆಳಗಿಳಿಯಲಾರಂಭಿಸಿದನು. ದಂಗು ಬಡಿದು ನಿಂತು, 'ಝೂಮೆ' ಎಂದು ಹಿಮಾವೃತ ಪರ್ವತ ಶ್ರೇಣಿಗಳ ನಡುವೆ ಹಾರಾಡುವ ಪ್ರಚಂಡ ಪಕ್ಷಿಯಂತಹ ಆ ವಿಮಾನನ್ನು ನೋಡಿದೆ! ಹೋಗುತ್ತ ಹೋಗುತ್ತ, ಆ 8 ಲಕ್ಷಗಳ ಚಿತ್ರದೊಂದಿಗೆ ಮುರಿದು ಬಿದ್ದುದು ತೋರಿತು! ಒಂದೇ ದನದಲ್ಲಿ ಈ ಮೂರನೆದು ಪ್ರಕಟನೆಯನ್ನು ನೋಡಿ, ಸುತ್ತಮುತ್ತಲಿರುವ ಹಿಮಕ್ಕಿಂತಲೂ ತಣ್ಣಗಾದೆ.

† † † † † † †

ಪಾರ್ವತಿಯ ಹೂದೋಟವಂತೆ;—ಅಲ್ಲಿ ನಿಂತು, ಎರಡು ಸುಗಂಧಿ ಹೂಗಳನ್ನು ಹಿಕ್ಕುತಿದ್ದೆ. "ಕೈಲಾಸದಿಂದ ಬರುವಾಗ ಒಂದು ಹೂ ಚೆಂಡು ತನ್ನಿರಿ!" ಎಂದು ಆಕೆ ಹೇಳಿದುದು ನೆನಪಾಗಿತ್ತು.

ಝಣಝಣ ಶಬ್ದವಾಯಿತು. ಕಾಲಿಗೆ ಗೆಜ್ಜೆ ಹಾಕಿ ಗಣಪನು ಬರುತಿದ್ದನು. ಸೊಂಡಿಲಿನ ಮುಖ; ಮನುಷ್ಯ ದೇಹ. ಬಂದು ನನ್ನನ್ನೆ ನೋಡುತ್ತ ನಿಂತನು.

ನಾನು ಮಾತಾಡಲಿಲ್ಲ. ಮಕ್ಕಳೊಡನೆ ಏನು ಮಾತು?

"ಗಣಾ!" ಎಂದು ಒಂದು ಮಧುರ ಸ್ವರವು ಕರೆಯಿತು. ಪಾರ್ವತಿ! ಸಾಲಂಕೃತೆಯಾಗಿದ್ದಾಳೆ. ರೇಶ್ಮೆಯ ರವಕೆ; ಜರತಾರಿಯ ಶೀರೆ; ಕೈ ತುಂಬ ಬಳೆಗಳು. 'ಬ್ರೂಚ್' ಹಾಕಿಕೊಂಡಿರುವಳು—ಕಾಲಿಗೆ 'ಸ್ಲಿಪ್ಪರ್' ಇದೆ!

ನನ್ನನ್ನು ನೋಡುತ್ತಲೆ ಕೆಳಗಿಳಿದು ಬಂದು, ಹುಬ್ಬು ಗಂಟಿಕ್ಕಿ, "ಇದೇನು?" ಎಂದು ಕೇಳಿದಳು-

"ಹೂ, ಸುಗಂಧಿ, ನಿನ್ನ ಮೊರೆಗೆ!" ಎಂದೆ, ನಾಚಿಕೆಯಿಂದ,

"ನಿನ್ನ ಮೊರೆ? ಮೊರೆಯೆಂದರೆ?"

"ನಿನ್ನವಳೇ,—ಹೆಂಡತಿ!"

ಅಷ್ಟು ಸುಂದರಿ ಪಾರ್ವತಿಯು ನಿಮಿಷಾರ್ಧದಲ್ಲಿ ರಾಕ್ಷಸಿಯಂತಾದಳು. ಬಿಡು ಕಚ್ಚಿ, ತನ್ನ ಕೈಯಿಂದ ಒಂದು ಗುದ್ದನ್ನು ನನ್ನ ಮಣಿಗಂಟಿಗೇ ಹೊಡೆದಳು. ಹೆಕ್ಕಿದ ಹೂಗಳೆಲ್ಲ ಕೆಳಗೆ ಬಿದ್ದುವು. ಗಣಪನು ಫಕ್ಕನೆ ಬೆಳೆದು ನನ್ನ ಮೇಲೆ ಹಾರಿದನು. ಎಡದಿಕ್ಕಿನಿಂದ, ಕರಡಿಯಂತಹ ಆ ಇಲಿ ಓಡಿಬಂತು. ಬಲದಿಕ್ಕಿನಿಂದ, ಖಡ್ಗಮೃಗದಂತಹ ಆ ನಂದಿ ಬಂತು. ಎದುರಿನಿಂದ ಈಶ್ವರನು ಓಡುತ್ತೋಡುತ ಬಂದು, ತಲೆಗೆ ಸುತ್ತಿದ ಸರ್ಪವನ್ನು ಬಿಡಿಸಿ ನನ್ನ ಕಡೆಗೆ ಬಿಸುಡಿದನು. ನಾಲ್ಕೂ ಕಡೆಗಳಿಂದ ಫಕ್ಕನೆ ಕತ್ತಲೆಯು ಆವರಿಸಿಕೊಂಡಿತು. ಸಿಡಿಲು ಗರ್ಜಿಸಿತು. ಗಗನವು ತನ್ನ ರೋಷವನ್ನೆಲ್ಲ ಕಾರತೊಡಗಿತು. ಈ ಕತ್ತಲಲ್ಲಿ ಭಯಂಕರವಾದ ಅಷ್ಟು ಶತ್ರುಗಳು,—ಮೊರೆಗಾಗಿ ಒಂದು ಹೂವನ್ನು ಕಿತ್ತ ಚಿಕ್ಕ ಅಪರಾಧಕ್ಕಾಗಿ ನಿಸ್ಸಹಾಯನಾದ ನನ್ನ ಮೇಲೆ ದಂಡೆತ್ತಿ ಬರುವಾಗ ಉಂಟಾದ ಆ ಭೀತಿಯಲ್ಲಿ "ದನ್ಮಯ್ಯ!—ಸತ್ತೆ!—ರಕ್ಷಿಸಿರಿ!" ಎಂದು ಚೀರಿ, ಹಾರಿ, . . . ಕಣ್ಬೆರೆದೆ.

ಎದುರಿನ ಗೋಡೆಯ ಮೇಲೆ ದಂಡೀಯಾತ್ರೆಗೆ ಹೊರಟ ಮಹಾತ್ಮನ ಚಿತ್ರವು ನಿಂತು ನನ್ನ ಕಡೆಗೇ ನೋಡುತಿತ್ತು. ಬಳಿಯಲ್ಲಿ ನಿದ್ರಾಭಂಗವಾಗಿ ಎದ್ದು ಕುಳಿತು, ಕಣ್ಣುಜ್ಜುತ್ತ ಮೊರೆಯು ನನ್ನ ಕಡೆಗೆ ಮುಖವೆತ್ತಿದಳು. ನನ್ನ ಕೋಣೆ—ನಮ್ಮೂರು—ನಮ್ಮ ಭೂಲೋಕ—ಎಂದು ಮನಗಂಡು, ಹಿಡಿಸಲಾರದಷ್ಟು ಸಂತೋಷವಾಯಿತು. ಇನ್ನೂ ಭಯದಿಂದ ನಡುಗಿ ಬೆವರುತ್ತಿರುವ ನನ್ನನ್ನು ನೋಡುತ್ತ ಮೊರೆ,—"ಏನು, ಏನಾಯಿತು? ಎಂದಳು.

"ಏನಿಲ್ಲ. ಒಂದು ದೊಡ್ಡ ಕನಸು—29,140 ಅಡಿ ಎತ್ತರ!" ಎಂದುತ್ತರ ಕೊಟ್ಟೆ.

"ಇನ್ನೂ ನಿದ್ದೆಯಲ್ಲಿರುವಿರೇನು?" ಎನ್ನುತ್ತ, ನನ್ನ ಭುಜಗಳನ್ನು ಹಿಡಿದು, ಬಲವಾಗಿ ಅಲುಗಾಡಿಸಿದಳು.

"ಇಲ್ಲ, ಎಚ್ಚರವಾಗಿದ್ದೇನೆ. ಹಾಗೆ ಅಲುಗಾಡಿಸಬೇಡ. ಘಂಟೆ ಎಷ್ಟಾಯಿತು?" ಎನ್ನುತ್ತ ಗಡಿಯಾರದ ಕಡೆಗೆ ನೋಡಿದೆ. ಎರಡು!—

ಮೊರೆಯು ಬಿಡಲಿಲ್ಲ. ಕನಸನ್ನು ತಿಳಿಸಲೇ ಬೇಕೆಂದು ಹಟ ತೊಟ್ಟಳು. ಎಲ್ಲವನ್ನೂ ಸಂಕ್ಷೇಪವಾಗಿ ವಿವರಿಸಿ,—"ಮೊರಾ, ನಿನಗಾಗಿ ಹೂ ಹೆಕ್ಕಲು ಹೋಗಿ ನನಗಾ ಅವಸ್ಥೆ! ಎಲ್ಲರೂ ಹೆಂಗುಸರಿಗಾಗಿಯೆ ಅಧಃಪತನ ಹೊಂದಿದರೆಂಬುದಕ್ಕೆ ನಿದರ್ಶನವಿದು! ನಾನು ಹಿಂದೊಮ್ಮೆ ಹೇಳಿದ್ದೆ . . . ಹೆಂಗುಸರಿಲ್ಲದಿದ್ದರೆ . . .!"

"ನೀವು ಕೈಲಾಸಕ್ಕೆ ಹೋಗುವ ಸಾಹಸವನ್ನೆ ಮಾಡುತಿದ್ದಿಲ್ಲ—ಈಶ್ವರನೊಡನೆ ಸಮತಾಭಾವದಿಂದ ಮಾತಾಡುತಿದ್ದಿಲ್ಲ—ಪಾರ್ವತಿಯನ್ನು ಕಾಣುತಿದ್ದಿಲ್ಲ—ಗಣಪನನ್ನು ನೋಡುತಿದ್ದಿಲ್ಲ—ದೇವಲೋಕದ ಸುಗಂಧಿಯನ್ನು ಮೂಸುತಿದ್ದಿಲ್ಲ—" ಎಂದು ಮೊರೆಯು ಆ ನಡು ರಾತ್ರೆಯಲ್ಲಿ ನನ್ನ ಮೇಲೆ ವಾಗ್ಬಾಣಗಳನ್ನು ಎಸೆಯುತ್ತಿರಲು,—

(ಇನೀ ಪುಟಕ್ಕೆ ಮುಂದುವರಿಸಿಯದೆ)

ನಾಡಿನ ಪ್ರಸಿದ್ಧ ಪುರುಷರು. ೪.

ಶ್ರೀ ಕೆ. ವಿ. ಪುಟ್ಟಪ್ಪನವರು.

(ಲೇಖಕ:-ಶ್ರೀ. ಕೊ. ಶಿ. ಕಾರಂತರು.)

ಶ್ರೀಮಾನ್ ಪುಟ್ಟಪ್ಪನವರ ಪ್ರಸಿದ್ಧಿ ಇವತ್ತು ಕರ್ನಾಟಕದ ಪ್ರತಿ ಮೂಲೆಯಲ್ಲೂ ಕೇಳಿಸುತ್ತದೆ. ಅವರ ಹೆಸರು, ಅವರ ಲೇಖನಿಯಿಂದ ಹೊರಡುತ್ತಿರುವ ಬರಹಗಳು, ಅವರ ಮಾತುಗಳಲ್ಲಿ ಕಂಡು ಬರುವ ವೇದಾಂತ ಇವೆಲ್ಲವುಗಳ ಮೇಲೆ ಪುಟ್ಟಪ್ಪನವರನ್ನು ಕಾಣದವರಿಗೆ ಅವರೊಬ್ಬ ವಯೋವೃದ್ಧ ಜ್ಞಾನವೃದ್ಧರೆಂದು ತೋರಬಹುದು. ಅಲ್ಲಲ್ಲಿ ಅವರ ಕವಿತೆಗಳು, ಬರಹಗಳು ಇವುಗಳಲ್ಲಿ ಕಂಡು ಬರುವ ಕ್ರಾಂತಿಮಯವಾದಗಳನ್ನು ಕೇಳಿದರೆ, ಅವರು ತೀರ ತರುಣರಿರ ಬೇಕೆಂದೂ ತೋರುವುದು. ಆದರೆ ಅವರನ್ನು ಕಂಡು ಪರಿಚಿತಿಯಿಲ್ಲದವರ ಸಲುವಾಗಿ, ಅವರು ಈ ಎರಡೂ ತಂಡದವರಲ್ಲ, ಉತ್ತರ ಪಕ್ಷದವರೇ ಎಂದು ಹೇಳ ಬೇಕಾಗುತ್ತದೆ.

ನನಗೆ ಪುಟ್ಟಪ್ಪನವರ ಪರಿಚಯವಾದುದು ಅವರು ಎಂ ಎ. ಪರೀಕ್ಷೆಗಾಗಿ ಮೈಸೂರಲ್ಲಿ ವ್ಯಾಸಂಗ ಮಾಡುತ್ತಿದ್ದಾಗ. ಆ ಒಂದು ದಿನ ಆಗ ತಾನೆ ಸ್ಥಾಪಿತವಾದ ಶ್ರೀರಾಮಕೃಷ್ಣಾಶ್ರಮಕ್ಕೆ ಹೋಗಿದ್ದೆ. ಅಲ್ಲಿ ಅವರ ಪರಿಚಯವಾಯಿತು. ಆಗಷ್ಟೆ ಅವರು ಸಾಹಿತ್ಯರಂಗದಲ್ಲಿ ಕಾಲಿಟ್ಟಿದ್ದರಷ್ಟೆ. ಅವರ ಯಮುನ ಸೋಲು, ಬುದ್ಧ ಕಾವ್ಯಗಳು ಆಗಲೇ ಬರೆದುವುಗಳು. ಅವರನ್ನು ಗೆಳೆಯರೊಬ್ಬರು ತೋರಿಸಿ ನನಗೆ ಪರಿಚಯ ಮಾಡಿಕೊಟ್ಟರು. ತೀರ ತರುಣರು, ಅವರ ಉಬ್ಬಿದ ಎದೆ, ನೇರಾಗಿ ಹಣೆಯಿಂದ ಮುಂದರಿಯುವ ಮೂಗು ಇವು ನನಗೆ ಕಾಣಿಸಿದ ಅವರ ರೂಪ-ವಿಶೇಷಗಳು. ಮುಖದಲ್ಲಿ ಮೊಂಡತನವಿರಲಿಲ್ಲ. ''ಇವರು ಮಲೆನಾಡಿನವರು'' ಅದರಲ್ಲೂ ತೀರ ಕಗ್ಗಾ ಹಳ್ಳಿಯವರು ಎಂದರು. ಅವರನ್ನು ಕಂಡರೆ ನನಗೆ ಹಾಗೆ ಕಾಣಿಸಲಿಲ್ಲ.

ಆ ಮೇಲೆ ನನಗೆ ಅವರ ಭೇಟಿ, ಮೈಸೂರಿಗೆ ನಾನು ಶ್ರೀರಾಮಕೃಷ್ಣಾಶ್ರಮಕ್ಕೆ ಹೋದಾಗಲೆಲ್ಲ, ಮೊರೆಯುತ್ತಿತ್ತು. ಆರಾಮ ಕುರ್ಚಿಗೆ ಅಂಟಿ ಅವರು ಕುಳಿತಿರುವುದೇ ನನ್ನ ಕಣ್ಮುಂದಿರುವ ಚಿತ್ರ. ಪುಟ್ಟಪ್ಪನವರ ನಾಟಕಗಳಲ್ಲಿ, ಕಾಣುವ ಅವರ ಭಾವಚಿತ್ರವನ್ನು ಕಂಡವರಿಗೆ, ಅವರ ಪರಿಚಯವಾಗದು. ಒಂದು ಚಿತ್ರದಲ್ಲಿ, ಎದೆಯಿಂದಲೂ, ಬಿರುಗಣ್ಣಿನಿಂದಲೂ ತುಂಬಿ ಪುಟ್ಟಪ್ಪನವರೇ ಕಾಣಿಸದಾಗಿರುವರು. ಇನ್ನೊಂದು, ರಂಗ ಭೂಮಿಯ ಚಿತ್ರ. ೧೯೩೩ನೇ ಇಸವಿಯ ಸಾವಿತ್ರಿಯ ಜತೆಯಲ್ಲಿ ನಿಂತ ಕೈಲಾಗದ ಹುಡುಗ! ರಂಗ ಭೂಮಿಗೆ ತೀರ ಹೊಸಬರಾಗಿ, ಏನು ಮಾಡುವುದೆಂದು ತಿಳಿಯದೆ ದಿಗಿಲು ಬಿದ್ದಂತೆ ಕಾಣುತ್ತಿತ್ತು. ಆದರೆ, ನಿಜವಾದ ಪುಟ್ಟಪ್ಪನವರೇ ಬೇರೆ.

ಅವರ ಕವಿತೆಗಳು ಒಂದು ರಾಶಿ ಇವೆ; ನಾಟಕಗಳು ತುಂಬಾ ಇವೆ. ಇತರ ಪ್ರಬಂಧ ಉಪನ್ಯಾಸಗಳೂ ಹಲವು ಇವೆ. ಇವುಗಳನ್ನು ಓದುವವರಿಗೆ ಅವರ ವಿಚಾರಶಕ್ತಿ ಹೇಗೆ ಹರಿಯುತ್ತದೆ ಎಂಬುದು ತಿಳಿಯದ ವಿಷಯವಲ್ಲ. ಆದರೆ ನನ್ನ ಪಾಲಾಗಿ ಪುಟ್ಟಪ್ಪನವರು ಒಂದು ಸಮಸ್ಯೆಯಾಗಿದ್ದಾರೆ. ಅತ್ತ ಅವರ ಪರಿಚಿತರೂ ಪ್ರಶಂಸಕರೂ ಇಂಥವರಲ್ಲಿ ಕನ್ನಡನಾಡಿನ ತೀರ ಸುಪ್ರಸಿದ್ಧರಿದ್ದಾರೆ, ಒಮ್ಮೆಗೇ ಅವರನ್ನು ಸಾಹಿತ್ಯ ಲೋಕದಲ್ಲಿ ಸರಸ್ವತಿಯಾಗಿ ಮಾಡಿದ್ದಾರೆ. ರನ್ನ, ಪಂಪ, ಕಾಳಿದಾಸ ಭವಭೂತಿಗಳ ಮುಕುಟಗಳನ್ನು ಕಳಚಿ ಅವರ ಪಾದತಳದಲ್ಲಿ ಕೆಡೆದೇ ಬಿಟ್ಟಿದ್ದಾರೆ. ಇನ್ನೊಂದು ಕಡೆಯಿಂದ, ಅವರ ವಿಮರ್ಶಕರು ಅವರನ್ನು ನರಕದ ಅತೀವ ಗೂಢವಾದ ಕೊರಡಿಯೊಂದರಲ್ಲಿ ಉರುಳಿಸಲು ಶತಪ್ರಯತ್ನ ಮಾಡುತ್ತಿದ್ದಾರೆ. ಅವರು, ಇವರ ಎಡೆಯಲ್ಲಿ ಸಿಲುಕಿದ ಮಂದರಪರ್ವತವೆನ್ನಲೇ, ಧೈರ್ಯವಿಲ್ಲ. ವಾಸುಕಿಯನ್ನೆಲ್ಲಿಂದ ತರಲಿ?

ಅವರ ಕವಿತೆ, ಬರಹಗಳಲ್ಲಿ ದಿನಂದಿನ ಅವರ ವಿಚಾರಲಹರಿಯ ಪ್ರವಾಹವು ಹೇಗೆ ಹರಿಯುತ್ತಿದೆ ಎನ್ನುವುದನ್ನು ತಿಳಿಯಬಹುದು. ಇಲ್ಲಿಯೂ ಎಲ್ಲವೂ ಹಾಗೆನ್ನುವುದು ಕಷ್ಟದ ಮಾತು. 'ಅವರ ವಿಚಾರಲಹರಿ'ಯೆನ್ನಲೇ—ಕೂಡಲೇ 'ಅವರ ವಿಚಾರಗಳಾವುವೂ ಇಲ್ಲ. ಅವರದು ಇವರದು ಕದ್ದವು'—ಎಂದು ಅನ್ನುತ್ತಾರೆ. ಅವರದಲ್ಲವೆನ್ನಲೂ, ಹಾಗೂ ಧೈರ್ಯವಾಗದು; ವಿಚಾರಗಳು ಯಾರವೋ ಏನೋ, ಅವನ್ನು ತಾನು ಗ್ರಹಿಸಿ ತನಗೆ ಕಂಡ ರೀತಿಯಲ್ಲಿ, ಅವರು ಕೊಡುತ್ತಿದ್ದಾರೆ ಎಂದು ನಾನು ಸುಲಭದಲ್ಲಿ ಜಾರುವುದು ಲೇಸು.

ಒಮ್ಮೆ ನನಗೆ, ನನ್ನೊಬ್ಬ ಮಿತ್ರರು ಅವರ ಕವಿತೆಯನ್ನು ಓದಿ ಹೇಳಿದರು. ಹೇಳುವಾಗ ಇಲ್ಲದೊಂದು ವಿರಿಕೆಯನ್ನು ಮಾಡಿದರು. ''ಇದನ್ನು ನೋಡಿ, ಈ ವಸ್ತುವನ್ನು ಅವರು ಕಂಡಿಲ್ಲ. ನನ್ನ ಸೂಚನೆಯ ಮೇರೆಗೆ, ಕಲ್ಪಿಸಿ, ಬಣ್ಣಿಸಿದರು''—ಎಂದರು. ಬಣ್ಣಿಸಿದುದು ಚೆನ್ನಾಗಿದೆ. ಅವರ, ಕವಿತೆಗಳ ಶೈಲಿಯು ತೀರ ಮೋಹಕವಾಗಿತ್ತು. ಅದಕ್ಕೆ ಯಾರೂ ಮುಗ್ಧರಾಗಬೇಕು. ಇಲ್ಲ, ಯಾರೂ ಎನ್ನುವಲ್ಲಿ, 'ವೈಯ್ಯಾಕರಣಿಗಳ ವಿನಹ,' ಎಂದು ಸೇರಿಸಿದರೆ, ಒಂದು ಕಡೆಯವರ ಗಧಾ ಪ್ರಹಾರದಿಂದ ನಾನು ದೂರಾಗುವೆ' ಬಣ್ಣಿಸುವುದರಲ್ಲಿ ಒಂದು ಹೊಸ ಬಗೆ, ಸ್ವಾತಂತ್ರ್ಯಗಳಿವೆ' ಅದರೆ—

ಆದರೆ—ಎಂದರೆ ಟೀಕೆ! ಆಗಲಿ ಮಾಡುತ್ತೇನೆ. ಅವರೂ ಕ್ಷಮಿಸಬಹುದು – ಅವರ ಮಾತು ಕವಿಯನ್ನು ಓಲಾಡಿಸುವಂಥದು. ಕೆಲವು ಬಾರಿ ಮನಸ್ಸನ್ನೂ ತೂಗಲೂ ಬಹುದು. ಆದರೆ ಒಡಲನ್ನು ನಾಟುವ ಶಕ್ತಿ ಬಲು ಕಡಿಮೆ. ಇಲ್ಲ—ವೆನ್ನಲೂ ಬಹುದು, ಅಲ್ಲಲ್ಲಿ ಇದೆ. ಅವರು ಮಲೆನಾಡಿನ ಒಬ್ಬ ಗೆಳೆಯನ ವಿಷಯ ಬರೆದಿದ್ದಾರೆ. ಅದೇ ಪ್ರಮಾಣಿಕತೆಯು ಅವರ ಇತರ ಕವಿತೆಗಳಲ್ಲಿ ಕಾಣುವುದಿಲ್ಲ. ಅವರ ಎಲ್ಲ ಬರಹಗಳು, ಹೃದಯಮಂದಿರದಿಂದ ಹೊರಡುವ ಬದಲು, ಬಹುವಾಗಿ, ಮನೋ ಕಾರ್ಖಾನೆಯಿಂದ ಹೊರಡುವುವು. ಅಲ್ಲೂ ಶ್ರೀ. ಸ್ವಾಮಿ ವಿವೇಕಾನಂದರ, ಶ್ರೀ ರಾಮಕೃಷ್ಣಾಶ್ರಮದ ವಾಸನೆಗಳು ಪ್ರತಿ ಹೆಜ್ಜೆಗೂ ಕಾಣುತ್ತವೆ.

ಒಟ್ಟಾರೆ, ಅವರ ಕವಿತೆಗಳ ವಿಷಯ ಅವರಿಗೇ ಅಂಜಿಕೆಯಾದಂತೆ ಕಾಣುತ್ತದೆ. ಇತರರು ಕನ್ನಡ ಕವಿಯಲ್ಲವೆಂದು ಅಂಜುವರೋ ಎಂಬಂತೆ ಕಾಣುವುದು. ಪ್ರತಿ ಬರಹದಲ್ಲೂ, 'ಕಬ್ಬದಂಗನೆ ಬಾ,' 'ರಸಋಷಿ ನೋಡು'—ಈ ಪಲ್ಲವಿಗಳ ಒಂದು ಬೇನೆಯೇ ತೋರುತ್ತಿದೆ. ನಮ್ಮ ನಾಟಕ ಕಂಪೆನಿಯವರು ಕಥೆಯ ಎಡೆಯಲ್ಲಿ ''ಇಲ್ಲಿಯ ತನಕ ಸಾಗಿದ ಈ ನಾಟಕದ ಪರ್ಯವಸಾನವು ಇಷ್ಟೆಲ್ಲಿ ಆಗುವುದು, ನೋಡುವ'' ಎಂದು—''ಇದು ನಾಟಕ''ವೆಂದು

ಮೇಲಿಂದ ಮೇಲೆ ನುಡಿದ ನಮ್ಮ ಕನಸನ್ನು ಒಡೆಯುವಂತೆ ಅವರು ಒಡೆಯುತ್ತಾರೆ!

ಅವರ ಕವಿತೆಯ ವಿಮರ್ಶೆಯು ಒಂದು ಬಗೆಯಿಂದ ಅವರ ವಿಮರ್ಶೆಯೂ ಆಗಬಹುದು. ಅವರು ತುಂಬಾ ಉತ್ಸಾಹಿಗಳು! ಬುದ್ಧಿ ಶಕ್ತಿ ತೀಕ್ಷ್ಣವಾದುದು! ಕ್ರಾಂತಿವರವಾದ ಲಹರಿ! ಆದರೆ ಅನುಭವದ ಅಂಟುರೋಗವಿಲ್ಲದೆ, ಎಲ್ಲೆಲ್ಲೂ ಹಾರಾಡುತ್ತಿದ್ದಾರೆ. ಕವಿಯೆಂಬವನು ಸಂಪೂರ್ಣ ಗಾಳಿಗೋಪುರವನ್ನು ನಿರ್ಮಿಸುವ ವಿಶ್ವ ಕರ್ಮನೆಂದು, ನಿರ್ಮಿಸಲು ಹೊರಟಿದ್ದಾನೆ. ಆದರೆ ಯಾವ ಕವಿತೆಯೂ, ಸ್ಪಾವಮಾಣಿಕತೆಯ ನೆಲಗಟ್ಟಿನ ಮೇಲಿಲ್ಲದೆ ಚೆನ್ನಾಗಿ ನಿಲ್ಲದು. ಅಷ್ಟನ್ನು ಗಳಿಸಲು, ಅವರು ತಮ್ಮ ಆರಾಮು ಕುರ್ಚಿಯಿಂದಿಳಿದು, ತಿರುಗಿ ತಿರುಗಿ ಜೀವನದ ಸಂಗ್ರಾಮದಲ್ಲಿ ಧುಮುಕ ಬೇಕು. ವೇದಾಂತ ಕೇಸರಿಗಳು, ರಣ ದುಂಧುಭಿಗಳು, ಕ್ರಾಂತಿ ಪ್ರಳಯಗಳು—ಆಗ ತಮ್ಮ ಮಿತ, ಮೂರ್ತಿಮಂತ ರೂಪಗಳನ್ನು ತಾಳುವುವು' ತಮ್ಮ ಚಿಕ್ಕಂದಿನಲ್ಲಿ, ಕಳೆದ ಹಳ್ಳಿಯ ಜೀವನದ ನೆನಹುಗಳನ್ನೂ, ತಿರುಗಿ ಸ್ಮರಣೆಗೆ ತರುವಂತೆಯೇ, ಅನುಭವಿಸಲು ಯತ್ನಿಸಬೇಕು.

ಇತ್ತ ಅವರ ನಾಟಕಗಳು ಹಲವು ಇವೆ. ಎಷ್ಟೋ ಹೊಸ ಬಗೆಯವು. ತುಂಬ ನಾವಿನ್ಯವುಳ್ಳವಾಗಿವೆ. ಅವರ ಪರಿವರ್ತನೆಗಳಿಗಿಂತ ಮೂಲನಾಟಕಗಳೇ ಚೆನ್ನಾಗಿವೆ. ಅವರ ಶೇಕ್ಸ್‌ಪಿಯರನ ಅನುವಾದಗಳಾದ ಬಿರುಗಾಳಿ, ರಕ್ತಾಕ್ಷಿಗಳಲ್ಲಿ ಶೇಕ್ಸ್‌ಪಿಯರನೂ ಇಲ್ಲ, ಪುಟ್ಟಪ್ಪನವರೂ ಇಲ್ಲವಾಗಿರುವರು.

ಅವರ ಪುಟ್ಟ ನಾಟಕಗಳೆಲ್ಲಾದರೂ, ಮಸೋರಾಜ್ಯದ ಮಂಡಿಗೆಗಳು ಬಹಳ! ಹೃದಯದ ಆಳ ಅಲ್ಲಲ್ಲಿ, ಸಿಗುತ್ತದೆಯಷ್ಟೆ. ಸರಾಗವಾಗಿ ಹರಿಯುವುದಿಲ್ಲ

ಅವರ ತೀರ ಹೊಸ ಕವಿತೆಗಳು ನನಗಂತು—ಸಮಸ್ಯೆಯ ಸಮಸ್ಯೆಯಾಗಿವೆ! ಅವರ 'ನವಿಲಿ'ನಲ್ಲಿ—ನಾಲ್ಕು ಇಂಗ್ಲಿಷು ಮಾತ್ರ ತಿಳಿದು ಕನ್ನಡವನ್ನು ಅರ್ಧ ಮಾಡಲು ಹೋಗುವವರಿಗೆ ತುಂಬಾ ಹಿತೋಕ್ತಿಯಿದೆ! ಆದರೆ ಅವರ 'ನವಿಲೆ'ಂಬ ಮೊದಲಿನ ಕವಿತೆಯೇ ಸಂಸ್ಕೃತ ಶಿಕ್ಷಣಕ್ಕೆ ಹೊರಟ ಹಾಗಿದೆ! ತಮ್ಮ ಕನ್ನಡ ವಿಮರ್ಶಕರ ಬಾಯಿಗೆ ಮಣ್ಣೆರಚಲು ಈ ಹೊಸ ಆಯುಧವನ್ನು ತೆಗೆದಿರಬೇಕು. ಮೊದಲಿನ ಮಾಧುರ್ಯವು ಈಗಿನ ಕವಿತೆಗಳಲ್ಲಿ ಕಾಣುವ ಬದಲು, ಒರಟಾಟವು ಕಾಣುತ್ತ ಬಂದಿದೆ.

ಈ ರೀತಿಯ ಬರವಣಿಗೆಯಿಂದ, ಪುಟ್ಟಪ್ಪನವರ ವಿಚಾರವಾಗಿ ಅನಾದರಣೆಯು ಬರಬಹುದು. ಕಾರಣ, ಅದನ್ನು ಹುಟ್ಟಿಸುವ ಕಾರ್ಖಾನೆಗಳು ಬಲುವಾಗಿವೆ! ಆದರೆ ಅವರು ಹಾಗಿಲ್ಲ. ತೀರ ಮೃದುಹೃದಯರು! ಸರಳರು! ಬಳಿಗೆ ಬಂದರೆ ಕ್ರಾಂತಿಯ ತಂಟೆಯನ್ನು ತೋರಿಸುವುದಿಲ್ಲ. ನಗುವಿನಲ್ಲಿ, ನಲವಿನಲ್ಲಿ ಅವರೊಡನೆ ಎಷ್ಟೋ ಸಮಯ ಕಳೆಯ ಬಹುದು. ನೋಡಲು, ಬ್ರಿಲಿಯಂಟ್ಯೆನ ಕುಲದವನಂತೆ ಕಾಣುವರು! ವಿಚಾರಗಳು, ಶಿವನ ಮೈಬೂದಿಯನ್ನು ಅವಹರಿಸುವುವು! ಇವೆರಡರ ನಡುವೆ ಅವರು ತೇಲಾಡುತ್ತಿದ್ದಾರೆ!

ಆದುದರಿಂದ ಶ್ರೀ. ಪುಟ್ಟಪ್ಪನವರನ್ನು ಸ್ವರ್ಗ ನರಕಗಳೊಳಿಗೆ ಹಂಚುವ ಬದಲು, ಮರ್ತ್ಯರಲ್ಲಿಯೇ ತೇಲ ಬಿಟ್ಟರೆ, ತಮ್ಮ ಹಾದಿಯನ್ನು ತಾವು ಕಂಡು ಹಿಡಿದಾರು!

(೪೦ನೇ ಪುಟದಿಂದ ಮುಂದುವರಿದುದು.)

"—ಮತ್ತು ಹಾಗೆ ಕತ್ತಲಲ್ಲಿ ಭೀಕರ ಶತ್ರುಗಳ ಸೈನ್ಯದಲ್ಲಿ ಸಿಲುಕಿ ಕಂಗಾಲಾಗುತ್ತಲೂ ಇರಲಿಲ್ಲ!" ಎಂದು ನಾನು ಸರ್ಪಾಸ್ತ್ರವನ್ನೆಸೆದುದನ್ನು ಪುನಃ.—

ನರಕದಲ್ಲೆ ಹುಟ್ಟಿ ನರಕದಲ್ಲೆ ಸಾವಿರ ವರ್ಷ ಇರುವುದಕ್ಕಿಂತ ಒಂದೇ ನಿಮಿಷದ ಸ್ವರ್ಗವಾಸವಾದರೂ ಉತ್ತಮ. ಬ್ರಹ್ಮಚಾರಿಣಿಯಾಗಿದ್ದು ಯಾರಿಗೂ ಏನನ್ನೂ ಮಾಡದೆ ಇರುವುದಕ್ಕಿಂತ ವಿವಾಹಿತರಾಗಿ ಹೆಂಡತಿಯಿಂದ ಒಂದು ನಿಮಿಷದ ಸ್ವರ್ಗ ಸುಖವನ್ನಾದರೂ ಅನುಭವಿಸುವುದೊಳ್ಳೆಯದು!" ಎಂದು ನನ್ನ ಮೇಲೆಯೆ ಎಸೆದು ಬಿಟ್ಟಳು.

ರಾತ್ರೆ ಕಾಲದಲ್ಲಿ ರಾಕ್ಷಸರಿಗೂ ಸ್ತ್ರೀಯರಿಗೂ ಇಷ್ಟೊಂದು ಬಲವಂತೆ! ಎಂದೇ,—

"ಇರಲಿರಲಿ ಮುದ್ದು ಸಾವಿರ ವರ್ಷಗಳ ಕೈಲಾಸ ವಾಸಕ್ಕಿಂತ ನಿನ್ನೊಡನೆ ಒಂದು ನಿಮಿಷದ ಸಂಸಾರ ಸುಖವನ್ನು ಅಪೇಕ್ಷಿಸುವೆನು'" ಎಂದು ಶರಣಾಗತನಾದೆ. ಆ ಮೇಲೆ .....

ಆ ಮೇಲೆ ಏನಾದರೇನು? ಕೊನೆಯದೊಂದು ಮಾತನ್ನು ಹೇಳುತ್ತೇನೆ. ಎಚ್ಚರಿಕೆ!—

ಭೂಮಿಯು ನಿಮ್ಮನ್ನು ಬಿಡುವ ತನಕ ನೀವು ಭೂಮಿಯನ್ನು ಬಿಡಬೇಡಿ. ಕೈಲಾಸದಲ್ಲೇನೂ ಇಲ್ಲ ಇದೆಯಾದರೆ ಅದು ನಮಗೆ ಬೇಡ!

ತ್ಯಾಗಿ—ಯೋಗಿ.

ಓ ಕರ್ಮಯೋಗಿ! ನಿನ್ನನಶನನ್ರತಕಾಗಿ
ಲೋಕವೆಲ್ಲಾ ದುಃಖತಪ್ತವಾಗಿದೆಯಲ್ಲ!
'ಸಾಕೆ'ನುವ ಮಾತು ನಿಷ್ಠುರವು ವ್ಯರ್ಥವದನಲು,
'ಬೇಕೆ'ನುವ ಮನವಿರದು ಶೋಕಗದ್ಗದವಹುದು

ಆತ್ಮಪ್ರೇರಣೆಯಿಂದ ಉಪವಾಸಿಯಾಗಿರುವೆ;
ಆತ್ಮಶಕ್ತಿಯ ತೇಜವನ್ನು ಬೆಳಗಿಸುವೆ,
ಆತ್ಮಜ್ಯೋತಿಯ ಚಿತ್ಕಾಶದಲಿ ಬಿಡದೆ ಪರ—
ಮಾತ್ಮನನು ನೋಡಲುದ್ಯೋಗಿಸಿಹೆ! ಕರ್ಮಪರ!

ತ್ಯಾಗವನ್ನುಚ್ಚರಿಸಿ ಭೋಗಿಗಳನೆಚ್ಚರಿಸಿ,
ತ್ಯಾಗದಲಿ ಯೋಗವೆಂದೆನ್ನಿಸಿದೆಯಾಚರಿಸಿ,
ತ್ಯಾಗವೇ ಭೋಗವೆಂದೆಂಬುದನ್ನಾಗಿಸುತ—
ಸಾಗಿಸಿದೆ ಜನತೆಯನು ಯೋಗ ಮಾರ್ಗದಿ ಸತತ.

ನಿನ್ನಾತ್ಮ ಪ್ರೇರಣೆಯು ಪರ ತತ್ವಸಾಧನೆಯು,
ನಿನ್ನೀ ಸದಾಚರಣೆಯು ಯೋಗಿಗಳ ಸಲಕರಣೆ,
ನಿನ್ನಾರ್ತಿಯೆನಗಿರಲಿ ಸನ್ಯಾಸಿ-ಉಪವಾಸಿ,
ನಿನ್ನಂಶ ಬೆಳಗಿರಲಿ ತ್ಯಾಗಿಯೇ! ಯೋಗಿಯೇ!

"ದುರ್ಗಾದಾಸ."

ಸಾಹಿತ್ಯ

ಸ್ವದೇಶಾಭಿಮಾನಿ

ಸಂಜೆಕೆ.

ಸಂಪುಟ ೨ ಜೂನ್ ೩೦—೬—೧೯೩೩. ಸಂಚಿಕೆ ೫೫

— ಅನುಕ್ರಮಣಿಕೆ —

	ಪುಟ
ಸಾಹಿತ್ಯಸೇವೆಯಲ್ಲಿ ಸಭ್ಯತೆ. .	೩೩
ಶ್ರೀ। ಕಾರ್ನಾಡು ಸದಾಶಿವ ರಾಯರು . .	೩೫
ಲಕ್ಷ್ಮಿಸದ ಕಿಡಿ ಮನೆ ಸುಡುವುದು	೩೫
ಮುಂಗ್ಯೆಯಾಳಿಕೆ, ಹಸಿವು, ವಿಮರ್ಶೆ	೪೧

ಜೂನ್ ತಾರೀಕು ೩೦ನೇ ಶುಕ್ರವಾರ ೧೯೩೩

ಸಾಹಿತ್ಯಸೇವೆಯಲ್ಲಿ ಸಭ್ಯತೆ.

ಸಾಹಿತ್ಯದ ಬೆಳವಣಿಗೆಗಾಗಿ ಅನ್ಯಭಾವೆಗಳಲ್ಲಿನ ಗ್ರಂಥಗಳನ್ನು ಭಾಷಾಂತರಿಸಿಯಾಗಲಿ ರೂಪಾಂತರಿಸಿಯಾಗಲೀ ನಮ್ಮ ಭಾಷೆಯಲ್ಲಿ ಸೇರಿಸುವುದು ಅನ್ಯಾಯವಲ್ಲ, ಅಗತ್ಯದ ಕೆಲಸ ಭಾಷಾಂತರಕ್ಕೆ ಕೈಹಾಕುವುದು ಮೇಲೋ, ರೂಪಾಂತರಿಸುವುದು ಸಮಂಜಸವೋ ಎಂಬ ಪ್ರಶ್ನೆಯು ಆಗಾಗ್ಗೆ ಕೇಳಬರುತ್ತದೆ. ಮೂಲಗ್ರಂಥವು ಜನ ಹೂಸ್ಯ ಗ್ರಂಥವಾಗಿದ್ದರೆ ಅದನ್ನು ಇದ್ದಕ್ಕಿದ್ದಂತೆ ಭಾಷಾಂತರಿಸುವುದೆ ಎಲ್ಲಕ್ಕಿಂತ ಲೇಸೆಂದು ಎಲ್ಲರೂ ಒಪ್ಪುವರು ಹೀಗೆ ಭಾಷಾಂತರ. ಮಾಡಿದ ಗ್ರಂಥಗಳ ಮುಖಪತ್ರದ ಮೇಲೆ ಮೂಲ ಗ್ರಂಥಕಾರನ ಹೆಸರನ್ನೆ ಅಚ್ಚು ಮಾಡುವುದು ಅಗತ್ಯವೆಂದು ನಮ್ಮ ಕನ್ನಡಿಗರಿಗೆ ಹೇಳಬೇಕಾಗಿದೆ. ವೆಂಕಟಾಚಾರ್ಯರು ಬಂಗಾಳಿ ಕಥೆಗಳನ್ನು ಭಾಷಾಂತರಿಸಿದವರಾದರೂ ಜನರಲ್ಲಿ "ವೆಂಕಟಾಚಾರ್ಯರ ನೊವೆಲು"ಗಳು ಎಂದೆ ಖ್ಯಾತಿಯಾಗಿವೆಯಲ್ಲದೆ, ಬಂಕಿಮಚಂದ್ರರ ಹೆಸರು ಹೆಚ್ಚಿನ ಮಟ್ಟಿಗೆ ಪ್ರಕಟವಾಗಿಲ್ಲ. ಇದರಿಂದ ಮೂಲಗ್ರಂಥಕಾರನಿಗೆ ಸಲ್ಲಬೇಕಾದ ಮನ್ನಣೆಯ ಮಣೆಯನ್ನು ಭಾಷಾಂತರಕಾರನಿಗೆ ಕೊಟ್ಟಂತಾಗುವುದು. ಇದು ಅಸಭ್ಯವಲ್ಲವೇ? ಭಾಷಾಂತರಕಾರನಿಗೂ ಯೋಗ್ಯ ಮರ್ಯಾದೆ ಸಿಗಬೇಕು. ಆದರೆ ಮೂಲ ಗ್ರಂಥಕರ್ತನಷ್ಟಲ್ಲ.

ರೂಪಾಂತರ ಮಾಡಿದ್ದಲ್ಲಿ ಯಾರ ಕೀರ್ತಿ ಹೆಚ್ಚಿನದೆಂಬುದನ್ನು ಇತ್ಯರ್ಧಿಸುವುದು ಸುಲಭ ಕೆಲಸವಲ್ಲ. ಮೂಲಗ್ರಂಥವನ್ನು ಒಂದು ಮಣ್ಣು ಮುದ್ದೆಯಂತೆ ಇಟ್ಟುಕೊಂಡು ರೂಪಾಂತರಿಸುವವನು ತನ ಸ್ವಂತ ಬುದ್ಧಿಚಕ್ರದ ಮೇಲೆ ಅದನ್ನು ತಿರುಗಿಸಿ ಅದಕ್ಕೆ ನವೀನ ಶೋಭೆ, ವಿಶಿಷ್ಟವಾದೊಂದು ಸೌಂದರ್ಯವನ್ನು ಕೊಟ್ಟರೆ ರೂಪಾಂತರ ಕಾರನೆ ಹೆಚ್ಚಿನವನಾಗುವನು. ಕಾಳಿದಾಸ, ರವೀಂದ್ರನಾಥ, ಶೇಕ್ಸ್ ಪಿಯರ್, ಸ್ಕೊಟ್, ಇನರೆಲ್ಲ ಹಳೆಯ ಕತೆಗಳನ್ನು ಗಾದೆಗಳನ್ನು ಹಾಡುಗಳನ್ನು ಅರಿಸಿ ಅವುಗಳಿಗೆ ಪುಟ ಕೊಟ್ಟು ಹೊಸತೊಂದು ಬಣ್ಣ, ಎಂದೂ ಸ್ಮರಿಸದಂತಹ ಒಂದು ಶೋಭೆಯನ್ನು ಕೊಟ್ಟಿದ್ದಾರೆ. ಅಂಥವರು ಚೋರರೆಂದು ಯಾರೂ ಹೇಳಲಿಕ್ಕಿಲ್ಲ.

ಆದರೆ? ಹೌದು, ನಮ್ಮ ಸುತ್ತಮುತ್ತ ಈಗ ಹುಟ್ಟಿ ಹಾಡುತ್ತಿರುವ ಕವಿಗಳು, ಕಾವ್ಯಸಂಪನ್ನರು, ಸಾಹಿತ್ಯಧುರೀಣರೆಂಬುವರು ಏನು ಮಾಡುತಿದ್ದಾರೆ? ಮೂಲಗ್ರಂಥದ ಹೆಸರುಗಳನ್ನು ಮಾರ್ಪಡಿಸಿ ಘಟನೆಗಳಲ್ಲಿ ಒಂದೆರಡನ್ನು ಹೆಚ್ಚು ಕಡಿಮೆ ಮಾಡಿ ನೂತನ ಗ್ರಂಥಗಳನ್ನು ಸೃಷ್ಟಿಸುತ್ತಿದ್ದಾರೆ, ಮಾತ್ರವಲ್ಲ ಮೂಲಗ್ರಂಥಕಾರನ ನಾಮ ಸ್ಮರಣೆಯನ್ನು ಮಾಡದೆ, ಮಾಡಿದರೂ ಗುಟ್ಟಿನಲ್ಲಿ ಶಪಿಸುವವರಂತೆ ಗೊಣಗುತ್ತಾರೆ. ಇವರನ್ನೂ ಪ್ರಾಚೀನ ಕರ್ನಾಟಕ ಕವಿಗಳನ್ನೂ ಹೋಲಿಸಿರಿ. ಪ್ರತಿಯೊಬ್ಬ ಕವಿಯು ತನಗಿಂತ ಮುಂಚೆ ಸರಸ್ವತಿಯ ಸೇವೆ ಮಾಡಿ ಕೃತಾರ್ಥರಾದವರಿಗೆಲ್ಲ—ಅವರನ್ನು ಅನುಕರಿಸಲಿ ಇಲ್ಲದಿರಲಿ— ತನ್ನ ವಂದನೆಗಳನ್ನರ್ಪಿಸುತ್ತಿದ್ದನು. ಅಂಥವರ ಕುಲದಲ್ಲಿ ಹುಟ್ಟಿದ ನಮಗೆ ಸಾಹಿತ್ಯ ಸೇವೆಯಲ್ಲಿ ಇರಬೇಕಾದ ಸಭ್ಯತೆಯೇನೆಂದು ಹೇಳಬೇಕಾಗಿದೆಯೇ?

ಒತ್ತಿ ಹೇಳಬೇಕಾಗಿದೆ. ಮೂಲ ಗ್ರಂಥಗಳಲ್ಲಿನ ಘಟನೆಗಳನ್ನಾಗಲೀ ವಾತ್ರಗಳ ವಿಶಿಷ್ಟ ಲಕ್ಷಣಗಳನ್ನಾಗಲಿ ಹೆಚ್ಚಿನಮಟ್ಟಿಗೆ ಮಾರ್ಪಾಟು ಮಾಡುವ ಸಂದರ್ಭ ಅಥವಾ ಅಗತ್ಯವಿದ್ದಲ್ಲಿ ಹೆಸರುಗಳನ್ನು ಬೇರೆ ಮಾಡಿದರೂ ಚಿಂತೆಯಿಲ್ಲ. ಮೂಲಗ್ರಂಥವನ್ನು ಹೊತ್ತು ಹೆತ್ತವನ ಹೆಸರನ್ನೇ ಹೊಗಳಬೇಕು. ರೂಪಾಂತರಕಾರನಿಗೆ ಸಲ್ಲತಕ್ಕ ಘನ್ಯತೆಯನ್ನು ತಪ್ಪಿ ಮೂಲಗ್ರಂಥಕಾರನಿಗೆ ಸಂದರೂ ಯೋಚನೆಯಿಲ್ಲ, ದುಃಖವಿಲ್ಲ. ಕೊಪಿರೈಟ್ ಕಾನೂನನ್ನು ತಪ್ಪಿಸಿಕೊಳ್ಳುವ ಅಥವಾ ತನ್ನ ಶ್ರಮವನ್ನು ತಾನೆ ಊದುವ ಆಶೆಯಿಂದ ರೂಪಾಂತರಕಾರರಾಗಲಿ ಭಾಷಾಂತರಕಾರರಾಗಲಿ ಸಾಹಿತ್ಯದ ಸಭ್ಯವರ್ತನೆಯನ್ನು ಮರೆಯಬಾರದಲ್ಲವೆ?

ನಾಡಿನ ಪಸಿದೆ ಪುರುಷ

ಶ್ರೀ ಕಾರ್ನಾಡ್ ಸದಾಶಿವ ರಾಯರು.

(ಲೇಖಕ:—ಶ್ರೀ. ಕೊ. ಶಿ. ಕಾರಂತರು.)

೧೯೨೦ನೆಯ ಇಸವಿ ಆದಿಯಲ್ಲಿ, ಮಂಗಳೂರಿನ ಬೀದಿಯೊಂದರಲ್ಲಿ ಸಂಚರಿಸುವ ವೇಳೆ, ಆಗಿನ ಕಾಲಕ್ಕೆ ತೀರ ಅಪ್—ಟು—ಡೇಟ್ ಆದ ಜೊರಿಗಳೊಬ್ಬರನ್ನು ಕಂಡಿದ್ದೆ. ಇವರಾರು ಎಂದು ಬಳಿಯಿದ್ದವರನ್ನು ಕೇಳಿದ ನೆನಪು. ಅದಕ್ಕವರು 'ವಕೀಲ ಕಾರ್ನಾಡು ಸದಾಶಿವ ರಾಯರು' ಎಂದು ಉತ್ತರವಿತ್ತ ನೆನಪು. ಪ್ರಸಿದ್ಧ ವಕೀಲರಾಗಿ ಆಗಲೂ ಅವರಿದ್ದಿಲ್ಲ. ಮಂಗಳೂರಿನ ಲಕ್ಷ್ಮೀವೆಂಕಟ್ರಮಣ ಸಾಲಿನಲ್ಲಿ ಅವರ ಹೆಸರು ಇತ್ತು. ಆ ಬಳಿಕ ಎರಡನೆಯ ಬಾರಿಗೆ ನನಗವರ ಹೆಸರಿನ ಪರಿಚಯವಾದುದು—'ಹಿಂದೂ' ಪತ್ರಿಕೆಯನ್ನು ಓದುವಾಗ ನಾಗಪುರದಲ್ಲಾದ (೧೯೨೧ನೇ ಇಸವಿ) ರಾಷ್ಟ್ರೀಯ ಸಭೆಯ ವಿಶೇಷ ಅಧಿವೇಶನಕ್ಕೆ ನಮ್ಮ ಜಿಲ್ಲೆಯಿಂದ ಹೋದ ಏಕಮಾತ್ರ ಪ್ರತಿನಿಧಿಗಳು ಅವರೆಂದು ತಿಳಿಯಿತು. 'ಈ ಕಾರ್ನಾಡು ಸದಾಶಿವರಾಯರು ಯಾರು'ಎಂದು ಕೇಳಿದೆ. 'ಇವರು ಅವರೇ'—ಎಂದು ಉತ್ತರ ದೊರೆಯಿತು. ನನಗೆ ಹಿಡಿಯಲಾರದ ಆಶ್ಚರ್ಯ. ಕೋಣ ಕರುವಿತ್ತು ದನ್ನಾದರೂ ಆ ಗಳಿಗೆಯಲ್ಲಿ ನಾನು ನಂಬುವುದರಲ್ಲಿದ್ದೆ–ಆದರೆ ಇದು ಅಷ್ಟಷ್ಟೆ.

ಮುಂದೆ ಅಸಹಕಾರ ಚಳವಳವು ತೊಡಗಲು, ನನಗೆ ಅವರ ನಿಕಟ ಪರಿಚಯವಾಯಿತು. ಅಷ್ಟರೊಳಗೆ–ಅವರ ಉಡುಗೆ ತೊಡಿಗೆಗಳಲ್ಲಿ ಒಂದು ಪೂರ್ಣ 'ಟ್ರಾನ್ಸ್‌ಫರ್ ಸೀನು' ಆಗಿ ಹೋಗಿತ್ತು. ಮುಂದೆ, ಅವರ ಹೆಸರು, ಪ್ರತಿ ದೀಪದ ಕಂಭವೂ ಹೇಳುವಷ್ಟು ಜನಜನಿತವಾಯಿತು. ನಮ್ಮ ಜಿಲ್ಲೆಯ ಆ ತುದಿಯಿಂದ ಈ ತುದಿಯ ತನಕ ಒಂದೇ ಗಳಿಗೆಗೆ ಅವರ ಬಿಳಿ ಟೋಪಿಯನ್ನು, ಕಾಣುವುದು ಸಾಧ್ಯವಿತ್ತು. ಆಗಿನ ಮಂಗಳೂರಿನ ಉತ್ಸಾಹವು ಎಂದೂ ಮರೆಯದ ಉತ್ಸಾಹ. ರಾಷ್ಟ್ರೀಯ ಶಾಲೆಗಳು, ನೆಯ್ಗೆಯ ಶಾಲೆಗಳು—ಇನ್ಸೆಪ್ಶೋಗಳು ಬಲು ಬಿರುಸಿನಿಂದ ನಡೆದುವು. ಆದರೆ ದುರ್ದೈವವೆಂಬಂತೆ, ಎಲ್ಲಾ ಕಡೆಗಳಲ್ಲಿ ಸ್ತಬ್ಧವಾದಂತೆ ನಮ್ಮಲ್ಲೂ ಶಾಂತವಾಯಿತು. ಮುಂದಾಳುಗಳಾದವರಿಗೆ ಅದೊಂದು ಅಪಕೀರ್ತಿಯೆನ್ನಲೇ? ಹಾಗೂ ಅನ್ನಲು ಬರುವಂತಿಲ್ಲ.

ಸದಾಶಿವರಾಯರೊಡನೆ, 'ಇಡೀ ಜಿಲ್ಲೆಯನ್ನೇ ಹೊರುತ್ತಿರುವ ಮಹಾಶೇಷರು ನೀವು'—ಎಂದರೆ ನಂಬುವರು ಅವರು. ಅಹಂಭಾವದಿಂದಲ್ಲ, ಸರಳತನದಿಂದ ನಂಬಿ ಮಹಾಶೇಷನಂತೆ ಜವಾಬುದಾರಿಯನ್ನು ವಹಿಸಲು ಓಡಾಡುವರು. ತಂತಿಯ ಮೇಲೆ ಓಡಾಡುವುದು ಸಾಧ್ಯವಿದ್ದರೆ, ಅದನ್ನೂ ಮಾಡುವರು. ಆದರೆ ಅಪಕ್ಕೂ ಹೆಚ್ಚಿನದು ಅವರಿಂದಾಗುವುದು ಕಡಿಮೆ. ಕೆಲಸವನ್ನು ಮಾಡಿಸುವ ಶಕ್ತಿಯೊಂದು ಮುಖಂಡರಿಗಿರಬೇಕು. ಅದು ಅವರಿಗಿಲ್ಲ. ಅವರ ಕಣ್ಣಿಗೆ ಮಣ್ಣೆರಚುವುದೆ ನಿಮಿಷದ ಕೆಲಸ.

"ಸ್ವಾಮಿ ಸದಾಶಿವರಾಯರೇ, ಈಗ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಸಾವಿರ ಜನರನ್ನು ಒಂದು ಪೆಟ್ಟಿಗೆಯಲ್ಲಿ ಪಾರ್ಸೆಲು ಮಾಡಿ ತರಿಸಿದ್ದೇನೆ–ವಿ. ಪಿ. ವಡೆಯಲು ೧೦೦೦ರೂಪಾಯಿ ಬೇಕು"–ಎಂದರೆ ಸಾವಿರ ರೂಪಾಯಿಗಳನ್ನು ಒಗೆಯುವರು. ಈ ಸಾವಿರ ಜನರ ಸಲುವಾಗಿ ಅಡುಗೆ ಮಾಡುವ ಜನರನ್ನು ಹುಡುಕುವರು–ಅಡುಗೆಯು ಆಯಿತು. ನಂಬಿಕೆ ಅಂದರೆ ಅಷ್ಟು ನಂಬಿಕೆ. ಮರುಗಳಿಗೆಗೆ ಬಂದು, 'ಸ್ವಾಮಿ, ಎಂಥಾ ಅಸಾಮಿಯನ್ನು ನೋಡಿ ಹಣ ಕೊಟ್ಟೀರಿ?" ಎಂದರೆ "ಹಾಗೋ, ನನಗೆ ತಿಳಿದಿರಲಿಲ್ಲ. ಈ ರೀತಿ ವಂಚನೆ ಮಾಡುವುದೆಂದರೇನು? ಅಬ್ಬಾ ಜನರೇ" ಅನ್ನುವರು–ಅಷ್ಟೇ, ಮುಗಿಯಿತು.

ಕಾರ್ಯಾತುರವು ಅವರಲ್ಲಿರುವಂತೆ ನಮ್ಮಲ್ಲಿರುವುದು ಕಡಿಮೆ. ಮೀರಿದ ಆತುರಕ್ಕೆ ಸರಿಯಾಗಿ, ತೆರೆದ ಪೆಟ್ಟಿಗೆಯಿತ್ತು. ಅವರ ಅನುಯಾಯಿಗಳಲ್ಲಿ—ಕೆಲವರು ಕೊನೆಗೆ ಅನುನಾಯಿಗಳಾದದು! ಕೆಲವರು ತಮ್ಮ ದೃಢ ತತ್ವಗಳನ್ನು ಬಿಡಲಾರದೆ ಅವರಿಂದ ದೂರಾದರು. ಕಾರ್ಯಪಟುತ್ವದ ಹಾದಿಗಿಂತ ಅವರಲ್ಲಿನ ಆತುರದ ವೇಗವು ಬಲು ಹೆಚ್ಚು.

ಮುಂದೆ, ಅವರ ಸರಳತನ, ವಿಶ್ವಾಸಗಳ ಫಲವು ಅವರ ಜೀವನಕ್ಕೆ ಸಂದಿತು. ಅವರು ತೊಡಗಿದ ಕಾರ್ಯಗಳು, ಜನಸಹಾಯವಿಲ್ಲದೆ ತಳ ತಪ್ಪಿ ಬಿದ್ದಂತೆ, ಅವರ ಭಂಡಾರವು ಬರಿದಾಯಿತು. "ಕಾರ್ನಾಡು ಸದಾಶಿವರಾಯರು ದಿವಾಳಿಯಂತೆ!"—ಅಂದವರೂ ಉಂಟು. ಅನಂತ ದಿವಾಳಿ ಉತ್ಸವಕ್ಕೆ—ಮಹಾತ್ಮಾಜೀಯವರು ಆಶೀರ್ವಾದ ಪತ್ರವೊಂದನ್ನು ಕಳುಹಿಸಿದ್ದರು! ಅದರಂತೆ ಅವರಾದರೂ ಆವತ್ತನ್ನು ತಾಳ್ಮೆಯಿಂದ ವಹಿಸಿಕೊಂಡರು.

ತಿರುಗಿ—ಎರಡನೆಯ ಬಾರಿಯ ಕಾಯಿದೆಭಂಗದ ಚಳವಳಿಯಲ್ಲಿ ಅವರು ಮುಂದುಗಾಲಿಟ್ಟು ನಡೆದರು. ಮೊದಲಿನ ಅನುಭವಗಳನ್ನು ಎರಡನೆಯ ಬಾರಿಗೆ ಉಣ್ಣುವಂತೆ ಅವಕಾಶ ಮಾಡಿಕೊಂಡರು. ಇನ್ನೂ ಅವರು ಸುಲಭ ವಂಚಿತರು. ಈಗ ಮೊದಲಿನ ಬಾರಿಗೆ ತುರಂಗವಾಸವು ಲಭಿಸಿತ್ತು. ಅವರಿಗೂ ನಾಲ್ಕು ಅಡಿ ಮುಂದಿರಿಸಿ ಜನರು ಸೆರೆಮನೆಯನ್ನು ಸೇರಿ ಬಂದರು—ಆ ಮೇಲೆ ಬಂದುದು ಗಾಂಧಿ–ಅರ್ವಿನ್ ಒಪ್ಪಂದ.

ಎರಡನೆಯ ಸಮರ. ಈಗ ಪ್ರಾಯಶಃ ಮುಂಜಾಗ್ರತೆಯನ್ನು ವಹಿಸಿ, ಮುಂದಾಗಿ ಸೆರೆಮನೆಯನ್ನು ಸೇರಿದರು. ಮುಂದಾಳುಗಳು ಹೋಗಲಿಲ್ಲ. ಸಾಕಷ್ಟು ಮುಂದಾಳುಗಳು ಆಗಾಗಲೇ ಹುಟ್ಟಿ ಬೆಳೆದು ದ್ದರಿಂದಿರಬಹುದು. ಈಗ ಜೈಲಿನಿಂದ ಮರಳಿ ಬಂದ ನೀಲೂ ಸೇವಾ ಕಾರ್ಯದಲ್ಲಿ ನಿರತರಾಗಿರುವರು.

ಉತ್ಸಾಹ, ಆತ್ಮೀಯತೆ ಪ್ರಮಾಣಿಕತೆಗಳು ಅವರಲ್ಲಿ ತುಂಬಾ. ಆದರೆ, ಕಾರ್ಯಪ್ರಪಂಚದ ಗತಿಯನ್ನು ಅವರು ಮೇಳೈಸಿ ನಡೆಯುವುದಿಲ್ಲ. ಕಾರ್ಯಪ್ರಪಂಚವು ಓಡುವ ಹಾಸಿಗೆಯಂತೆ ದಕ್ಷಿಣಕ್ಕೆ ಹೋಗುತಿದ್ದರೆ, ಅವರು ಅಷ್ಟೇ ವೇಗದಿಂದ ಉತ್ತರಕ್ಕೆ ಅದನ್ನು ಮೆಟ್ಟಿ

ಓಡುತ್ತಿದ್ದಾರೆ. ಓಡಿದ ಆಯಾಸ ಅವರಿಗೆ ತುಂಬಾ, ಸಾಗದ ಹಾದಿ ಮಾತ್ರ ಕಾಣದು.

ಬಡವರ ಸೇವೆ ಮಾಡುವ ಆತುರ ತುಂಬಾ. ಬಡವನೊಬ್ಬನ ಗೋಳನ್ನು ಕೇಳಿಯೇ, ಒಂದು ಕೂಡ ತುಂಬ ಕಣ್ಣೀರನ್ನು ಸುರಿಯಬಲ್ಲರು; ಆದರೂ ಜಗತ್ತಿನ ಸುಧಾರಣೆಯು ನಾಲಿಗೆಗಳಿಂದಾಗಲಿ ಬರಿ ಕಣ್ಣೀರಿನಿಂದಾಗಲಿ ಆಗದೆಂಬ ವಿಶ್ವಾಸವು ಹೋಗಿಲ್ಲ. ಅವರು ಬಡತನದ ಸದ್ದಿಗಾಗಿ ಮರುಗಿದರು; ಅದರ ಆಳವನ್ನು ಇಳಿಯಬೇಕು. ಅವರೂ ಈಗ ಬಡವರೇ! ಅವರ ಆ ಶ್ರೀಮಂತಿಕೆಗೆ ಇದು ತೀರ ಹೆಚ್ಚಿನ ಬಡತನ—ಆದರೆ ಈ ಬಡ ಜಗತ್ತಿನ ಪಾಲಿಗೆ ಅದು ಶ್ರೀಮಂತಿಕೆಯಾಗಿಯೇ ಇದೆ! ಅಂಥ ಆಳವನ್ನು ಇಳಿದರೆ, ಆಗ ಕರ್ತವ್ಯದ ಸ್ವರೂಪ ತಿಳಿಯುವುದು. ಅವರು, ಬೆರಳಿನಿಂದ ಮುಂಥರವನ್ನು ಎತ್ತಲು ಬಯಸುವರು. ಅಷ್ಟು ಕರುಣೆಯಿದೆ. ಆದರೆ, ಕೃಷ್ಣನಿಗೆ ಅದು ಸಾಧ್ಯವಾಯಿತಂತೆ—ನಾವು ಸುಧಾನುರು; ಸುಧಾನುರ ಹಾದಿಯು ಕೃಷ್ಣರ ಹಾದಿಯಲ್ಲ.

ಅವರು ಸೃಷ್ಟಿಯನ್ನು ಎರಡು ವರ್ಗವಾಗಿ ವಿಭಾಗಿಸುವಂತೆ ಕಾಣುವುದು. ಒಂದು ವಿಭಾಗದ ಜನರು ದೇವತೆಗಳೇ—ಇನ್ನೊಂದು ವಿಭಾಗದವರು ದಾನವರೆನ್ನಲಾರೆ—'ಪಡಪೋಷಿಗಳು'! ನಡುವಿನ ತರಗತಿಯ ಜನರಿರುವ ತಿಳುವಳಿಕೆ ಅವರಿಗಿರುವುದಿಲ್ಲ—ಅಥವಾ ಈ ಎರಡರ ವಿಶ್ರ ಲೋಹವೇ ಅಧಿಕವಾಗಿರುವುದೆಂದು ಅವರು ಅನುಭವದಿಂದ ತಿಳಿದಿಲ್ಲ. ತಮ್ಮ ದೇವತೆಗಳನ್ನು ಕಂಡು ಅವರು ಪೂಜಿಸುವರು ವಿಂತಿಮೂರಿ ಉಣಿಸಸ್ಥೀಯವರು. ಆದರೆ 'ಪಡಪೋಷಿ'ಗಳಿಗೆ ಹಾಸಿಯನ್ನು ಬಗೆಯುವ ಪ್ರಯತ್ನವಿಲ್ಲ.

ಅಂತು ಉಪಸಂಹಾರದ ಕೆಲವು ಮಾತುಗಳನ್ನು ಹೇಳುವುದಾದರೆ ಹೀಗೆ: ನಮ್ಮ ಜಿಲ್ಲೆಯಲ್ಲಿ ಸ್ಮರಣೀಯ ತ್ಯಾಗಿಯಾದವರೊಬ್ಬರಿದ್ದರೆ ಅದು ಅವರೇ. ಒಂದು ಕಾಲದಲ್ಲಿ ಡಾಂಭಿಕತೆಯು ಎಷ್ಟಿತ್ತು (ಎಷ್ಟಿತ್ತೆಂದು ನನಗೆ ಅನಿಸಿತ್ತೊ) ಅಷ್ಟೇ ಸರಳತೆಯು ಅವರಲ್ಲಿದೆ. ಮುಖಂಡರಾದರೂ, ಅವರು ಆಳನ್ನು ಅರಸನಿಂದ ಬೇರೆ ಮಾಡುವುದಿಲ್ಲ. ಕುಗ್ಗಿದ ಕೈಯಾದರೂ ಹಿಗ್ಗಿದ ಔದಾರ್ಯವು ಸಾಯಲಿಲ್ಲ. ಅವರ ಕರಿ ವಿಾಸೆಯು ನೆರೆತು ಬಿಳಿಯಾಯಿತು. ಕಾಲಚಕ್ರವು ಏರಿಳಿತವನ್ನು ತೋರಿಸಿ ಹೋಗುವಂತೆ ಅವರ ಮುಂದೆ ತಿರುಗಿತು. ಆದರೆ ಅವರಿನ್ನೂ ನೋಡುತ್ತಿದ್ದಾರೆ; ಅದನ್ನೆ ಕಾಣುತ್ತಿದ್ದಾರೆ. ಆದರೆ ಅದು? ಕಣ್ಮುಂತಿರುಗಿದೆ ಎಂಬುದನ್ನು ಕಂಡವರಲ್ಲ.

ರಾಜಕೀಯ ವಿಷಯಗಳಲ್ಲಿ ಅವರ ಅಭಿಪ್ರಾಯವನ್ನು ಅವರಾಗಿ ಹೇಳುವುದಿಲ್ಲ. ನಾವು ಕೇಳಿದರೆ ಹೇಳುವರು. ನಮ್ಮಿಂದಲೂ ಕೇಳುವರು. ಈ ವಿನಿಮಯದಲ್ಲಿ ಸೋಲು ಅವರಿಗೇ ಹೆಚ್ಚು. ಆದರೆ—ಅವರು ಒಂದು ಕೈಕಂಭವನ್ನು ಕಾಲಿಡಲು ಯತ್ನಿಸುತ್ತಿರುವರಾದರಿಂದ ಈ ವಿಚಾರಗಳ ತಳಮಳ ಮಳವು ಅವರ ಹಾಯಿಯನ್ನು ಹರಿಯುವಂತಿಲ್ಲ.

ಗೆಳೆತನಕ್ಕೆ ತಕ್ಕವರು, ಅಭಿಮಾನಕ್ಕೆ ತಕ್ಕವರು—ಶ್ರೀ ಸದಾಶಿವರಾಯರು. ಅವರನ್ನು ಅಖಿಲ ಕರ್ನಾಟಕ ರಾಜಕೀಯ ರಂಗದಲ್ಲಿ ಮೆರೆಯಿಸಿದವರುಂಟು. ಮೆರೆದವರಲ್ಲಿ, ಅವರಂಥ ಪ್ರಾಮಾಣಿಕ ವ್ಯಕ್ತಿಗಳು ಕೇವಲ ಮುಷ್ಟಿಯಲ್ಲಿ ಎಣಿಸುವಷ್ಟು ಜನರು ಸಹ ಇಲ್ಲ. ಕಾರ್ನಾಡ ಸದಾಶಿವರಾಯರು ಅಖಿಲ ಕಾರ್ನಾಡ ಸದಾಶಿವರಾದರೂ ಅವರಿಂದಾಗಿ ಭವಿಷ್ಯದ ದಿಗಂತದಲ್ಲಿ ಬೆಳಕು ಕತ್ತಲೆರಡೂ ಉಂಟಾಗಲಿಲ್ಲ. ಅವರನ್ನು ಗದ್ದುಗೆಯಲ್ಲಿರಿಸಿ, ಹಗೆಯಿದ್ದವರೂ ನಿಜವಾದ ಅರಸುತನ ಮಾಡಬಹುದು.

ಎಷ್ಟು ಕೊರತೆ, ದೌರ್ಬಲ್ಯಗಳಿದ್ದರೂ ಅವರ ಸೌಜನ್ಯವು ಅವರನ್ನು ಕಾಯುವಂಥದ್ದು.

ಲಕ್ಷ್ಯವಿಲ್ಲದ ಕಿಡಿ ಮನೆ ಸುಡುವುದು.

(ಟೊಲ್ಸ್‌ಟೊಯಿಯವರ "A spark neglected burnt the house" ಎಂಬ ಕಥೆಯ ಆಧಾರದಿಂದ)

ವೆಂಕಪ್ಪನ ಬಾಳು ನಿಜವಾಗಿಯೂ ಒಡತನದಿಂದ ತುಂಬಿದ್ದರೂ ಸಂತೃಪ್ತಿಯುಳ್ಳದು; ಅವನಿಗೆ ಉಳುವುದಕ್ಕೆ ಭೂಮಿ ಇದ್ದಿತು; ಇರುವುದಕ್ಕೆ ಮನೆಯೂ ಹಿತ್ತಿಲೂ ಇದ್ದವು. ಮೂರು ಜನ ಮಕ್ಕಳಲ್ಲಿ ಮೊದಲನೆಯವನಿಗೆ ಮದುವೆಯಾಗಿದ್ದಿತು; ಎರಡನೆಯವನು ತೀರ ತರುಣನು ಕಿರಿಯವನು ಹೊಸ್ತಿ ಕಾಣದ ದನಕರುಗಳನ್ನು ಗುಡ್ಡಿಗೆ ಅಟ್ಟುವುದಕ್ಕೂ ಗದ್ದೆ ಉಳುವುದಕ್ಕೂ ಕಲಿತಿದ್ದನು. ಮನೆಯ ಹೆಂಗಸರು—ಎಂದರೆ, ವೆಂಕಪ್ಪನ ಹೆಂಡತಿ ಮತ್ತು ಸೊಸೆ,—ಇವರು ಬಿಡುವಿದ್ದಾಗ ನೂಲು ನೇತು ಸಂಸಾರಕ್ಕೆ ಬೇಕಾದ ಬಟ್ಟೆಬರೆಗಳನ್ನು ಮಾಡುತ್ತಿದ್ದರು. ಹೀಗೆ ವೆಂಕಪ್ಪನ ಬಡ ಸಂಸಾರವು ಸುಲಭದಲ್ಲಿ ಸಾಗುತಿದ್ದಿತು. ವೆಂಕಪ್ಪನ ಮುದಿ ತಂದೆ ಯೊಬ್ಬನು ಮಾತ್ರ ಜ್ವರದಿಂದ ಏಳು ವರ್ಷಗಳಿಂದ ಹಾಸಿಗೆ ಹಿಡಿದು ಯಾವ ಕೆಲಸವನ್ನೂ ಮಾಡದವನಾಗಿದ್ದನು.

ವೆಂಕಪ್ಪನಿಗೆ ಸುಬ್ಬಣ್ಣನು ನೆರೆಯವನು. ವೆಂಕಪ್ಪನ ತಂದೆಯು ಮನೆಯ ಯಜಮಾನನಾಗಿದ್ದಾಗ ಸುಬ್ಬಣ್ಣನ ತಂದೆಯು ಜೀವಂತನಾಗಿದ್ದನು. ಎರಡು ಕುಟುಂಬಗಳು ಅನ್ಯೋನ್ಯ ಪ್ರೀತಿಯಿಂದ ಇದ್ದುವು. ಕೊಯ್ಲಿನ ಕಾಲ ಬಂತೆಂದರೆ, ಒಬ್ಬನು ಇನ್ನೊಬ್ಬನ ತೋಟಕ್ಕೆ ಹೋಗಿ ಸಹಾಯವನ್ನು ಮಾಡುವುದೂ ಒಬ್ಬನ ದನ ಕರು ಈಯಿತೆಂದರೆ ಮತ್ತೊಬ್ಬನು ಬೇಗ ಹೋಗಿ ವೈದ್ಯನನ್ನು ಕರೆತರುವುದೂ ವಾಡಿಕೆಯಾಗಿದ್ದಿತು. ಮನೆಯ ಹೆಂಗಸರೂ ಹಾಗೆಯೇ ಇದ್ದರು. ಒಬ್ಬನ ದನ ಮತ್ತೊಬ್ಬನ ಹೊಲಕ್ಕೆ ಮೇಯ ಹೋದರೆ, ಮನೆಯ ಹೆಂಗಸರು ಬಂದು ಅದನ್ನು ನೆರೆಯವರ ಹಟ್ಟಿಗೆ ಅಟ್ಟಿ, 'ನೋಡಿ, ನಿಮ್ಮ ದನ, ನಮ್ಮ ಹೊಲ ಹಾಳು ಮಾಡುತ್ತಿದೆ' ಎಂದು ಹೇಳುವುದಲ್ಲದೆ ಸುಟ್ಟುಗೊಳ್ಳುತ್ತಿದ್ದಿಲ್ಲ; ಈ ರೀತಿಯ ಬಂಧುಸ್ನೇಹದಲ್ಲಿ ಈ ಕುಟುಂಬಗಳು ಬಡತನದಲ್ಲಿದ್ದರೂ ಸುಖವಾಗಿಯೇ ವಾಸಿಸುತ್ತಿದ್ದುವು.

ಇದೆಲ್ಲ ತಾತಂದಿರ ಕಾಲದಲ್ಲಾಯಿತು. ಈಗಿದು ಮಗಂದಿರ ಕಾಲ. ಆ ಅನ್ಯೋನ್ಯಭಾವವು ತೀರ ಪರಿವರ್ತನ ಹೊಂದಿತು—ಒಂದು ಚಿಕ್ಕ ತಪ್ಪಿಗಾಗಿ ಅವರೆಲ್ಲ ಹೊಡೆದಾಡಿಕೊಂಡರು.

ವೆಂಕಪ್ಪನ ಸೊಸೆಯು ತವರುಮನೆಯಿಂದ ಒಂದು ಹೇಂಟೆಯನ್ನು ತಂದಿದ್ದಳು. ಅದು ಪ್ರತಿದಿನವೂ ಹುಲ್ಲುಗಾಡಿಯ ಬಳಿ ಒಂದೊಂದು

ಮೊಟ್ಟೆಯನ್ನಿಡುತ್ತಿದ್ದಿತು. ಒಮ್ಮೆ ಅದು ಸುಬ್ಬಣ್ಣನ ಬೇಲಿ ಹಾರಿ ಅಲ್ಲಿ ತನ್ನ ಮೊಟ್ಟೆ ಇಟ್ಟಿತು. ವೆಂಕಪ್ಪನ ಸೊಸೆ ಅದರ ಕೂಗನ್ನು ಕೇಳಿದರೂ ಯಾವುದೋ ಒಂದು ಕೆಲಸದಲ್ಲಿದ್ದುದರಿಂದ ಅಲ್ಲಿಗೆ ಹೋಗಲು ಆಗಲಿಲ್ಲ. ಅದೇ ಸಂಜೆ ಅವಳು ಮೊಟ್ಟೆಯನ್ನು ಪ್ರತಿದಿನ ಇಡುವಲ್ಲಿ ಹುಡುಕಿದಳು; ಆದರೆ ಸಿಗಲಿಲ್ಲ. ಸುಬ್ಬಣ್ಣನ ಹತ್ತಿಲಲ್ಲಿ ಇರಬೇಕೆಂದು ಎಣಿಸಿ ಅಲ್ಲಿಗೆ ಹೋದಳು. ತನ್ನ ಕೋಳಿಯು ಅಲ್ಲಿದ್ದಿತು, ಆದರೆ ಮೊಟ್ಟೆ ಇರಲಿಲ್ಲ. ಸುಬ್ಬಣ್ಣನ ತಾಯಿಯು ಬಾಗಿಲಲ್ಲೇ ಅವಳನ್ನು ಎದುರಾಗಲು, ವೆಂಕಪ್ಪನ ಸೊಸೆಯು ಅಜ್ಜೀ, ನಮ್ಮ ಹೇಂಟೆಯು ನಿಮ್ಮ ಬೇಲಿ ಹಾರಿ ನಿಮ್ಮ ಹಿತ್ತಲಿಗೆ ಬಂದುದನ್ನು ನೋಡಿದಿರಾ?—ಇಲ್ಲಿ ಅದು ಮೊಟ್ಟೆ ಇಡಲಿಲ್ಲವೇನು?' ಎಂದು ಕೇಳಲು ಅವಳು, 'ಇಲ್ಲವಮ್ಮಾ! ನಿಮ್ಮ ಮೊಟ್ಟೆಯ ಆಸೆ ನಮಗೇಕೆ? ನಮ್ಮ ಹೇಂಟೆಯು ಈಗ ಮೊಟ್ಟೆ ಇಡಲು ಪ್ರಾರಂಭಿಸಿರುವುದು ಎಂದು ಉತ್ತರ ಕೊಟ್ಟಳು.

ವೆಂಕಪ್ಪನ ಸೊಸೆಗೆ ಸ್ವಲ್ಪ ಕೋಪ ಬಂದು ಮಾತಿನ ಭರದಲ್ಲಿ ಏನನ್ನೋ ಅಂದುಬಿಟ್ಟಳು! ಅವಳ ನೆರೆಕರೆಯವಳು ಬಿಡ್ಡಿ ಸಮೇತವಾಗಿ ಹಿಂದಿರುಗಿಸಿಬಿಟ್ಟಳು. ವೆಂಕಪ್ಪನ ಹೆಂಡತಿ ಬಾವಿಯ ನೀರು ಸೇದುತ್ತಿದ್ದವಳು ಈ ಜಗಳವನ್ನು ಸೇರಿದಳು. ಸುಬ್ಬಣ್ಣನ ಪತ್ನಿಯೂ ಹಿಂದಿನ ಪುರಾಣವನ್ನು ತೆಗೆದು ಉಪನ್ಯಾಸಕ್ಕೆ ಆರಂಭಿಸಿಬಿಟ್ಟಳು. ಹೆಂಗಸರೊಳಗೆ ಮಾತಿಗೆ ಮಾತು ಬಂದು, ಅವರವರ ಕೆಟ್ಟ ಗುಣಗಳನ್ನು ತೋರಿಸಿಕೊಂಡು, ಬೈಯಲು ಮೊದಲು ಮಾಡಿದರು.

ಆಗ ಒಬ್ಬಳು ಇನ್ನೊಬ್ಬಳ ಕೂದಲನ್ನು ಹಿಡಿದೆಳೆದಳು; ಮತ್ತೊಬ್ಬಳು ಆ ನೀರಿನ ಕೊಡವನ್ನು ಕೆಳಗೆ ಚೆಲ್ಲಿದಳು; ಹೆಂಗುಸರ ಈ ಕಾದಾಟದಲ್ಲಿ ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದ ಸುಬ್ಬಣ್ಣನು ಓಡಿ ಬಂದು ಅವರನ್ನು ಸೇರಿಕೊಂಡನು. ಹತ್ತಿಲಲ್ಲಿ ಬೈಹುಲ್ಲಿನ ರಾಶಿ ಮಾಡುತ್ತಿದ್ದ ವೆಂಕಪ್ಪನೂ ಅವನ ಮಗನೂ ಒಂದು ಗುದ್ದಾಟಕ್ಕಾರಂಭಿಸಿದರು. ವೆಂಕಪ್ಪನು ಎಲ್ಲರಿಗಿಂತಲೂ ಬಲಶಾಲಿಯಾದುದರಿಂದ ಸುಬ್ಬಣ್ಣನ ಕೆಲವು ಮೂಸೆಗಳನ್ನು ಕಿತ್ತುಬಿಟ್ಟನು. ಸ್ವಲ್ಪ ಸಮಯದಲ್ಲಿ ಜನರು ನೆರೆದು, ಕಾದಾಡುತ್ತಿದ್ದ ಎರಡು ಪಂಗಡಗಳನ್ನು ಬಹು ಪ್ರಯಾಸದಿಂದ ಎಂಗಡಿಸಿದರು.

—ಹೀಗೆ ಆ ಎರಡು ಕುಟುಂಬದಲ್ಲಿ ಕಲಹವು ಉಂಟಾಯಿತು. ಸುಬ್ಬಣ್ಣನು ತನ್ನ ಕಿತ್ತ ಮೂಸೆಗಳನ್ನು ಕಾಗದದಲ್ಲಿ ಮಡಚಿ ನ್ಯಾಯಾಧೀಶರಲ್ಲಿ ದೂರಿಟ್ಟನು. ಅವನ ಹೆಂಡತಿಯಾದರೋ ವೆಂಕಪ್ಪನನ್ನು ಆರು ತಿಂಗಳ ಕಠಿನ ಸಜೆ ವಿಧಿಸುವರೆಂದು ನೆರೆಕರೆಯವರಲ್ಲಿ ಸುದ್ದಿ ಹರಡಿಸಿದಳು.

ವೆಂಕಪ್ಪನ ತಂದೆಯು ಈ ಕಲಹವನ್ನು ನೋಡುತ್ತಾ ಎರಡು ಪಂಗಡಗಳೂ ಪ್ರೀತಿಯಲ್ಲಿರಬೇಕೆಂದು ಎಷ್ಟೋ ಪ್ರಯತ್ನಿಸಿದನು; ಆದರೆ ಅವನ ಮಾತನ್ನು ಅವರು ಲಕ್ಷಿಸದೆ ಹೋದರು. ಅವನು ಎಷ್ಟೋ ಹೇಳಿದನು—'ಮಕ್ಕಳೇ! ನೀವು ಮಾಡಿರುವ ಕಾರ್ಯವು ಎಂದಿಗೂ ಒಳ್ಳಿತಲ್ಲ. ಒಂದು ಮೊಟ್ಟೆಯಿಂದಾಗಿ ಇಷ್ಟು ದೊಡ್ಡ ಕಲಹವನ್ನು ಮಾಡಬೇಕಾಗಿದ್ದಿಲ್ಲ. ಮಕ್ಕಳು ಅದನ್ನು ತೆಗೆದಿರಬಹುದು. 'ದೇವರು ಎಲ್ಲವರಿಗೆ ಸಾಕಾಗುವ ಹೊನ್ನು ಕಳುಹಿಸಿರುವನಲ್ಲವೇ? ಮತ್ತು ನೆರೆಕರೆಯವರು ಒಂದು ತಪ್ಪು ಮಾಡಬಹುದು. ಅದನ್ನು ಸರಿಪಡಿಸುವುದು ನಮ್ಮ ಕರ್ತವ್ಯವಲ್ಲವೆ? ನೀವೂ ಜಗಳ ಮಾಡಿರಬಹುದು—ಅದರಲ್ಲೇನು? ನಾವೆಲ್ಲರೂ ಪಾಪಿಗಳಲ್ಲವೆ. ಇವೆಲ್ಲವನ್ನು ತಿಳಿದು ಹಿಂದಿನದೆಲ್ಲ ಬಿಟ್ಟು, ಸ್ನೇಹಿತರಾಗಿರಿ—ದ್ವೇಷವನ್ನಿಟ್ಟುಕೊಳ್ಳುವುದು ಮತ್ತೂ ಕೆಟ್ಟದು' ಎಂದು ಹೇಳಿದನು. ಆದರೆ, ಮುದೀ ತಂದೆಯ ಮಾತನ್ನು ಕೇಳುವವರಾರು?

'ನಾನು ಅವನ ಮೂಸೆಯನ್ನು ಕಿತ್ತಿರಬಹುದು—ಆದರೆ, ನಾನು ಮೊನ್ನೆಯ ಸಂತೆಯಲ್ಲಿ ಮಾಡಿಸಿದ ಅಂಗಿಯನ್ನು ಸುಬ್ಬಣ್ಣನ ಮಗನು ಹರಿಯಲಿಲ್ಲವೇನು? ಎಂದು ವೆಂಕಪ್ಪನು ಅಂದುಕೊಂಡು ನ್ಯಾಯಾಧೀಶನಲ್ಲಿ ದೂರಿಟ್ಟನು' ಇದು ವಿಚಾರಣೆಯಲ್ಲಿದ್ದಾಗ ಸುಬ್ಬಣ್ಣನ ಗಾಡಿಯ ಕೇಲೊಂದು ಕಳವಾಗಿ ಹೋಯಿತು. ಎಲ್ಲರೂ ವೆಂಕಪ್ಪನ ಮಗನ ಕಳವು ಮಾಡಿದರೆಂದರು. ಹೀಗೆ ಪ್ರತಿಯೊಂದು ದಿನವು ಒಂದೊಂದು ಜಗಳವಾಗುತಿದ್ದಿತು ಮತ್ತು ಹೆಂಗುಸರು ಕೆರೆಗೆ ನಸ್ತ ಒಗೆಯಲು ಹೋದಾಗ ಅಲ್ಲಿಯೂ ಬೈದುಕೊಳ್ಳದೆ ಹಿಂದಿರುಗುತ್ತಿರಲಿಲ್ಲ.

ಮೊದಲು ಮೊದಲು ಅವರ ಬಾಯಿಯಿಂದಲೇ ಜಗಳಾಡಿಕೊಳ್ಳುತಿದ್ದರು. ಕೊನೆಗೆ ಒಬ್ಬರ ಸಾಮಾಗ್ರಿಗಳನ್ನು ಇನ್ನೊಬ್ಬರು ಕಳವುಮಾಡಹತ್ತಿದರು. ಮಕ್ಕಳು ಹಿರಿಯರ ರೀತಿಯನ್ನವಲಂಭಿಸಿದರು. ಜೀವನವು ಇವರಿಗೆ ದಿನೇ ದಿನೇ ಕಷ್ಟವಾಗಿ ಪರಿಣಮಿಸಿತು. ಪ್ರತಿದಿನವೂ ಇವರ ದೂರನ್ನು ವಿಚಾರಿಸಿಯೇ ನ್ಯಾಯಾಧೀಶರು ಬೇಸರ ಪಟ್ಟರು. ವೆಂಕಪ್ಪನು ಸುಬ್ಬಣ್ಣನಿಗೆ ಜೈಲಾಗುವಂತೆ ಮಾಡಿದನು; ಅಥವಾ ದಂಡ ತೆರುವಂತೆ ಮಾಡಿದನು. ಸುಬ್ಬಣ್ಣನು ಹಾಗೆಯೇ ವೆಂಕಪ್ಪನ ಮೇಲೆ ದೂರು ಹಾಕಿಸಿ ಹಾಗೆಯೇ ಮಾಡಿಸಿದನು. ಯಾವದಾದರೂ ಚಿಕ್ಕದೊಂದು ಕಾರಣ ಮಾತ್ರದಿಂದಲೆ ನ್ಯಾಯಸ್ಥಾನದ ವರೆಗೂ ದೂರು ಹೋಗಿ ಒಬ್ಬನಿಗಲ್ಲದಿದ್ದರೆ ಮತ್ತೊಬ್ಬನಿಗೆ ಶಿಕ್ಷೆಯಾಗುತಿದ್ದಿತು. ವೆಂಕಪ್ಪನ ತಂದೆಯಾದರೋ ಸಂಧಿಮಾಡಿಕೊಳ್ಳಿರೆಂದು ಒತ್ತಿ ಒತ್ತಿ ಹೇಳುತ್ತಿದ್ದರೂ ಅವನ ಮಾತುಗಳನ್ನು ಯಾರೂ ಎಣಿಕೆಗೈಯ್ಯಲಿಲ್ಲ. ಹೀಗೆ ಆರು ವರುಷಗಳು ಕಳೆದು ಹೋದುವು.

ಏಳನೆಯ ವರುಷದಲ್ಲಿ ಒಂದು ಮದುವೆಸಮಾರಂಭದಲ್ಲಿ, ವೆಂಕಪ್ಪನ ಸೊಸೆಯು ಸುಬ್ಬಣ್ಣನನ್ನು ಕುದುರೆಜೋರನೆಂದು ಕರೆದು ಹೀನೈಸಿದುದರಿಂದ ಅವನು ಕೋಪಗೊಂಡು ಕೋಪದ ಭರದಲ್ಲಿ ಅವಳಿಗೆ ಒಂದೇಟು ಕೊಟ್ಟುಬಿಟ್ಟನು. ಗರ್ಭಿಣಿಯಾದ ವೆಂಕಪ್ಪನ ಸೊಸೆಯು ಇದರಿಂದ ಒಂದು ವಾರದ ತನಕ ಹಾಸಿಗೆ ಹಿಡಿದಳು. ವೆಂಕಪ್ಪನು ಸುಬ್ಬಣ್ಣನನ್ನು ಜೈಲಿಗೆ ಕಳುಹಿಸುವ ಸಂದರ್ಭವು ಒದಗಿ ಒಂತೆಂದು ಹಿಗ್ಗಿ, ನ್ಯಾಯಸ್ಥಾನಕ್ಕೆ ದೂರು ಕಳುಹಿಸಿದನು. ಕೆಲವರ ಕೈ ಬೆಚ್ಚಗಿರಿಸಿ ಸಾಕ್ಷಿ ಹಾಕಿಸಿದನು. ಇದರಿಂದ ನ್ಯಾಯಸ್ಥಾನದಲ್ಲಿ ಸುಬ್ಬಣ್ಣನಿಗೆ ಇಪ್ಪತ್ತು ಚಡೀ ಹೊಡಿಸಬೇಕೆಂದು ತೀರ್ಪಾಯಿತು. ತೀರ್ಪನ್ನು ಕೇಳಿ ಸುಬ್ಬಣ್ಣನು ಬಹಳ ಮ್ಲಾನವದನದವನಾಗಿ, ಬಹಳ ನಿಟ್ಟುಸಿರನ್ನು ಬಿಟ್ಟು, 'ವೆಂಕಪ್ಪಾ! ಈಗ ನೀನು ನನ್ನ ಬೆನ್ನನ್ನುರಿಸುವೆ! ಆದರೆ ನಿನ್ನ ಪ್ರಿಯ ವಸ್ತುವೊಂದು ಇದಕ್ಕಿಂತ ಹೆಚ್ಚು ಉರಿಯದಿರಲಾರದು'! ಎಂದು ಅಂದುಬಿಟ್ಟನು.

ಸಂತೋಷದಿಂದ ನಗುತ್ತಿದ್ದ ವೆಂಕಪ್ಪನಿಗೆ ಈ ಮಾತುಗಳನ್ನು ಕೇಳಿ ಸ್ವಲ್ಪ ಭಯಭೀತನಾಗಿ ನ್ಯಾಯಾಧೀಶರಿಗೆ, 'ನೋಡಿ ಸ್ವಾಮೀ ನಮ್ಮ ಮನೆಗೆ ಉರಿಹಾಕುವೆನೆನ್ನುತ್ತಾನೆ!' ಎಂದು ಹೇಳಿದನು. ಆದರೆ ಸುಬ್ಬಣ್ಣನು ಇದಕ್ಕೆ ಉತ್ತರವನ್ನು ಕೊಡದೆ, ನ್ಯಾಯಾಧೀಶರ ಕಡೆಗೆ ಬೆನ್ನು ತಿರುಗಿಸಿ ನಿಂತು, 'ನನ್ನನ್ನು ಹೊಡಿಯುವಿಂತಾದರೆ ಹೊಡೆಯಿರಿ! ನ್ಯಾಯ ಸ್ಥಾಪನೆಗಾಗಿ ನನ್ನನ್ನು ಹೊಡೆಯಬೇಕಾದರೆ ನಾನು ಎಂದಿಗೂ ಸಿದ್ಧನೇ!' ಎಂದು ಕೂಗಿದನು. ಅವನ ಕಣ್ಣುಗಳಲ್ಲಿ ಕ್ರೌರ್ಯವಾದ ಅಂಗದೊ

ಪ್ರಕಾಶದಂತೆ ಅವನ ಮನೆಯತ್ತ ಕಡೆಯಿಂದ ಬೆಳಕು ಬರುತ್ತಲಿದ್ದಿತು; ಭಯಂಕರವಾದ ಶಬ್ದವೂ ಕೇಳಿಸುತ್ತಿದ್ದಿತು. ವೆಂಕಪ್ಪನು ತಿರುಗಿ ನೋಡಲಾಗಿ, ತಾನು ಕಟ್ಟಿದ್ದ ಗುಡಿಸಲುಗಳಿಗೆಲ್ಲಾ ಬೆಂಕಿ ತಗಲಿ, ಗಾಳಿಯ ಬಿರುಸಿನಿಂದ ತನ್ನ ಮನೆಯತ್ತಕಡೆ ಬೆಂಕಿ ಕೆಡಿಗಳು ಹಾರುತ್ತಿದ್ದುವು. ''ಅಯ್ಯೋ! ಏನು ಮಾಡಿದೆನು ನಾನು! ಅಲ್ಲೇ ಬೆಂಕಿಯನ್ನು ತುಳಿದುಬಿಟ್ಟಂಗಾಗುತ್ತಿತ್ತು. ಏನು ಮಾಡಲಿ! ದೇವರೆ!'' ಎಂದೆನ್ನುತ್ತ ಮೆಲ್ಲಗೆ ಎದ್ದನು. ಬಹಳ ಆಶಕ್ತಿಯಿಂದ ಏಳಲಾಗಲಿಲ್ಲ. ಉಸಿರೆಳೆಯುತ್ತಾ ಬಹಳ ದುಃಖದಿಂದ ಮನೆಯತ್ತ ಕಡೆ ತೆರಳಿದನು. ಅಷ್ಟರಲ್ಲಿ ಬಚ್ಚಲಿಗೆ ಬೆಂಗಿ ತಗಲಿ, ಅಡುಗೆ ಕೋಣೆಗೂ ಹೊರಬಾಗಿಲಿಗೂ ತಾಗಿತು. ಮನೆಯಂಗಳಕ್ಕೆ ಕಾಲಿಡಲಾಗಲಿಲ್ಲ. ಜನರು ನೆರೆದಿದ್ದರು! ಆದರೆ, ಏನು ಮಾಡಲು ತಾನೇ ಸಾಧ್ಯ? ನೆರೆಕೆರೆಯವರು ತಮ್ಮ ತಮ್ಮ ಸ್ಥಾಪಾನುಗಳನ್ನು ಹೊರಕ್ಕೆ ತಂದಿಟ್ಟು, ಉಳಿದುಗಳನ್ನು ಹೊರಕ್ಕೆ ಆಟ್ಟಿದರು. ತರುವಾಯ ಸುಬ್ಬಣ್ಣನ ಮನೆಗೂ ಬೆಂಕಿ ತಾಗಿತು. ಸ್ವಲ್ಪ ಸಮಯದಲ್ಲಿ ಬೆಂಕಿಯು ಗಾಳಿಯ ರಭಸದಿಂದ ಮನೆಮನೆಗೆ ತಾಗಿ ಅರ್ಧ ಗ್ರಾಮ ಸುಟ್ಟು ಹೋಯಿತು.

ವೆಂಕಪ್ಪನ ಮನೆಯವರೆಲ್ಲರೂ ಬಹು ಪ್ರಯಾಸದಿಂದ ಅವನ ತಂದೆಯನ್ನು ಹೊರಕ್ಕೆ ತಂದರು. ಸ್ವಲ್ಪ ಸಾಮಾನುಗಳನ್ನು ಅಗ್ನಿಯಿಂದ ಉಳಿಸಿದರು. ಹೆಚ್ಚಿನವು ಉರಿಗೆ ತುತ್ತಾದುವು. ದನಕರಗಳೂ ಬಚ್ಚಲು, ಹುಲ್ಲು ರಾಶಿ, ಉಗ್ರಾಣ, ಖನಜ, ಗಾಡಿಗಳು ಇವೆಲ್ಲ ಸುಟ್ಟು ಬೂದಿಯಾದವು.

ಸುಬ್ಬಣ್ಣನ ಮನೆಯಲ್ಲೂ ಉಳಿದುಗಳನ್ನು ಹೊರಕ್ಕೆ ಆಟ್ಟಿ ಸ್ವಲ್ಪ ಸಾಮಾನುಗಳನ್ನು ಉಳಿಸಿದರು.

ಬೆಂಕಿಯು ಇಡೀ ರಾತ್ರಿ ಪ್ರಜ್ವಲಿಸುತ್ತಿತ್ತು. ವೆಂಕಪ್ಪನು ತನ್ನ ಮನೆಯ ಇದಿರಿಗೆ ನಿಂತು, 'ಇದೇನು, ಸ್ನೇಹಿತರೇ! ಏನನ್ನು ನೋಡುತ್ತೀರಿ ತುಳಿಯಿರಿ ಆ ಬೆಂಕಿಯನ್ನು!' ಎಂದು ಮೊದಲಾಗಿ ಹುಚ್ಚನಂತೆ ಮಾತಾಡುತ್ತಿದ್ದನು. ಬೆಂಕಿಯು ಅವನ ಇಡೀ ಮನೆಯನ್ನು ಸುಡುವಾಗ, ಅವನು ನೋಡಲಾರದೆ, ಹುಚ್ಚನಂತೆ ಓಡಿ, ಕೆಲವು ತೊಲೆಗಳನ್ನು ಸೆಳೆದನು. ಹೆಂಗುಸರು ಇದನ್ನು ನೋಡಿ ಚೀರಿದರು. ಆದರೆ, ಅವನು ಇನ್ನೂ ಒಳ ಹೊಕ್ಕು, ಬೆಂಕಿಯ ಮಧ್ಯವನ್ನು ಸೇರಿದನು. ಅಷ್ಟರಲ್ಲಿ ತನ್ನ ಕಾಲು ಜಾರಿದಂತೆ ಬಿದ್ದುಬಿಟ್ಟನು. ಆದರೆ, ಅವನ ಮಗಂದಿರು ಒಳನುಗ್ಗಿ, ಅವನನ್ನು ಹಿಡಿದು ಹೊರಕ್ಕೆ ತಂದರು. ಬೆಂಕಿಯಿಂದ ಅವನ ಮೈಯೆಲ್ಲಾ ಸುಟ್ಟು ಹೋಗಿದ್ದಿತು. ಆದರೆ ಅವನು ನೀರವ. ಅವನಿಗೆ ನೋವೂ ಇಲ್ಲ; ದುಃಖವೂ ಇಲ್ಲ. 'ಇದೇನು ನೋಡುತ್ತೀರಿ! ಬೆಂಕಿಕಣಗಳನ್ನು ತುಳಿದು ಬಿಡಿರಿ!' ಎಂದೇ ಕೂಗುತ್ತಿದ್ದನು. ಅವನ ಈ ಅವಸ್ಥೆಯನ್ನು ನೋಡಿ ಜನರು ಬೆಂಕಿಯಿಂದ ಇವನಿಗೆ ಹುಚ್ಚು ತಾಗಿತೆಂದರು.

ಮರುದಿನ, ಪರೇಲರ ಮಗನು ವೆಂಕಪ್ಪನಲ್ಲಿಗೆ ಬಂದು, 'ವೆಂಕಪ್ಪಾ! ನಿನ್ನ ತಂದೆಯು ಮರಣಾವಸ್ಥೆಯಲ್ಲಿದ್ದಾನೆ. ಕೊನೆಗಾಲದಲ್ಲಿ ನಿನ್ನನ್ನು ನೋಡಬೇಕೆನ್ನುತ್ತಾನೆ' ಎಂದನು.

ವೆಂಕಪ್ಪನಿಗೆ ಎಲ್ಲವೂ ಮರೆತುಹೋಗಿತ್ತು. 'ಏನು? ಯಾವ ತಂದೆ? ಯಾರನ್ನು ಕರೆಯುತ್ತಾನೆ?''

'ನಿನ್ನ ತಂದೆಯು ಮರಣಾವಸ್ಥೆಯಲ್ಲಿದ್ದಾನೆ. ನಿನ್ನನ್ನು ಕರೆಯುತ್ತಾನೆ. ಬಾ!' ಎಂದು ಅವನ ಕೈ ಹಿಡಿದು ಎಳಕೊಂಡುಹೋದನು.

ಮನೆಗೆ ಬೆಂಕಿ ತಗಲಿದ್ದಾಗ ಉರಿಯುತ್ತಿದ್ದ ಕೆಲವು ಮರದ ತುಂಡುಗಳು ವೆಂಕಪ್ಪನ ತಂದೆಯ ಮೈಮೇಲೆ ಬಿದ್ದು, ಅವನಿಗೆ ಗಾಯಗಳಾಗಿದ್ದುವು. ಜನರು ಅವನನ್ನು ಪಠೇಲರ ಮನೆಗೆ ಒಯ್ದಿದ್ದರು.

ವೆಂಕಪ್ಪನು ಪಠೇಲರ ಮನೆಗೆ ಬಂದಾಗ ಪಠೇಲರು ಇರಲಿಲ್ಲ. ಅವರ ಹೆಂಡತಿಯೂ ಮಕ್ಕಳೂ ಇದ್ದರು. ವೆಂಕಪ್ಪನ ತಂದೆಯನ್ನು ಜಾವೆಯ ಮೇಲೆ ಮಲಗಿಸಿದ್ದರು. ಅವನು ವೆಂಕಪ್ಪನನ್ನು ನೋಡಿದೊಡನೆಯೇ ಹತ್ತಿರಕ್ಕೆ ಕರೆದು,

'ಈಗ ಆರದು ತಪ್ಪು? ವೆಂಕಪ್ಪಾ?'

'ಅವನದಪ್ಪಾ! ಬೆಂಕಿ ಇಡುವಾಗ ನಾನು ಅವನನ್ನು ನೋಡಿರುತ್ತೇನೆ. ಅಲ್ಲಿಯೇ ನಾನು ಆ ಬೆಂಕಿಯನ್ನು ತುಳಿದು ಬಿಡುತ್ತಿದ್ದರೆ, ಇದೆಲ್ಲಾ ಆಗುತ್ತಿದ್ದಿಲ್ಲ'.

'ವೆಂಕಪ್ಪಾ ನಾನೀಗ ಮರಣಾವಸ್ಥೆಯಲ್ಲಿದ್ದೇನೆ. ನೀನೂ ನಿನ್ನ ಸತಿ ಬಂದಾಗ ಮರಣವನ್ನು ಎದುರಿಸಬೇಕು. ಈಗಲಾದರೂ ಹೇಳು—ಯಾರದು ತಪ್ಪು?'

ವೆಂಕಪ್ಪನು ಮಾತೆತ್ತಲಿಲ್ಲ; ಬಾಯಿ ಬರಲಿಲ್ಲ. 'ಈಗಲಾದರೂ ದೇವರ ಮುಂದೆ ಹೇಳು! ತಪ್ಪಾರದು?'

ಆಗ ವೆಂಕಪ್ಪನು ಸ್ಮೃತಿಗೆ ಒಂದನು, ಹಿಂದೆ ತಾನು ಮಾಡಿದೆಲ್ಲ ನೆನಪಿಗೆ ಬಂದಿತು. ಒಡನೆ ಕಣ್ಣು ತುಂಬಿ, ಒಂದೆರಡು ಕಂಬನಿ ತಟಕುಗಳು ಹೊರಗೆ ಬಿದ್ದುವು

'ಕ್ಷಮಿಸು, ಅಪ್ಪಾ! ನಾನೇ ಆ ಪಾಪಿ!—ನಿನ್ನ ಮತ್ತು ದೇವರ ಮುಂದೆ ನಾನು ಮಹಾ ಪಾಪಿ!'

ಮುದುಕನಿಗೆ ಬಹಳವಾದ ಆನಂದವುಂಟಾಯಿತು. ಅವನು ಪರಮಾತ್ಮನ ನಾಮ ಸ್ಮರಣೆಮಾಡುತ್ತಾ, 'ವೆಂಕಪ್ಪಾ! ಈಗ ನೀನು ಮಾಡಬೇಕಾದುದೇನು?' ಎಂದು ಕೇಳಿದನು.

ವೆಂಕಪ್ಪನು ಅಳುತಿದ್ದನು.

'ಈಗ ಹೇಗೆ ಜೀವಿಸುವುದೆಂದು ನನಗೆ ತಿಳಿಯದಲ್ಲ!'

ಮುದುಕನು ಬಹಳ ಪ್ರಯಾಸದಿಂದ ಮಾತನಾಡಿದನು—''ಹೇಗಾದರೂ ಪ್ರಯತ್ನಿಸು—ಭಗವಂತನ ಮೇಲೆ ಭರವಸೆ ಇಡು.'' ಮತ್ತೂ ಮುಗುಳುನಗೆ ನಗುತ್ತಾ, ''ಬೆಂಕಿ ಇಟ್ಟವರಾರೆಂದು ಹೇಳಿದಿರು! ಪರರ ಒಂದು ತಪ್ಪನ್ನು ನೀನು ಕ್ಷಮಿಸಿದರೆ, ನಿನ್ನ ಎರಡು ತಪ್ಪನ್ನು ದೇವರು ಕ್ಷಮಿಸುವನು'' ಮುದುಕನು ಹೀಗೆಂದು, ಆಶೀರ್ವದಿಸುತ್ತಾ ಪ್ರಾಣವನ್ನು ಬಿಟ್ಟನು.

ವೆಂಕಪ್ಪನು ಸುಬ್ಬಣ್ಣನ ವಿಷಯ ಏನೂ ಹೇಳಲಿಲ್ಲ.

ಕಾಲವು ಸವೆದಂತೆ ವೆಂಕಪ್ಪನ ಕೋಪವೂ ಅಳಿಯಿತು. ಸುಬ್ಬಣ್ಣನು ಇವನ ಮಾರ್ಪಾಟನ್ನು ನೋಡಿ ಧೈರ್ಯತಗೊಂಡನು. ಮೊದಲು ಮೊದಲು ಅವನು ಭಯಪಟ್ಟನು. 'ಆದರೆ ಕೊನೆಗೆ ವೆಂಕಪ್ಪನು ಮಾತೆತ್ತದಿರುವುದನ್ನು ಕಂಡು, ಭಯವನ್ನು ಬಿಟ್ಟನು. ಇಬ್ಬರೂ ಹೊಡೆದಾಡಿಕೊಳ್ಳುವುದನ್ನು ನಿಲ್ಲಿಸಿದರು. ತಿರಿಗಿ ತಮ್ಮ ಮನೆಗಳನ್ನು ಕಟ್ಟಿದರು;

ಸಾಗಿ ಎರಡು ಕುಟುಂಬಗಳೂ ತಿಲಕಾಲದ ಅಥವಾ ಒಂದೇ ಮನೆ ಮಮ್ಮಲ ಮತ್ತು ಯಾವಾಗಲೂ ನೆರೆಕರೆಯವರಂತೆ ವಾಸಿಸಿ

ನೆರೆಕರೆಯವರು ಹೇಗೆ ಇರಬೇಕೋ ಹಾಗೆಯೇ ಅವರು ತಮ್ಮ ಜೀವನವನ್ನು ಸಾಗಿಸಿದರು. ವೆಂಕಪ್ಪನಿಗೆ ಯಾವಾಗಲೂ ತಂದೆಯ ಸ್ಥಾನ ಚೆನ್ನಾಗಿ ಸ್ಫೂರ್ತಿಯಲ್ಲಿಲ್ಲದವರಿಂದ ಬಂದು ಕಲಹವಾಗಲೀ, ಜಗಳವಾಗಲೀ ಆಗಲಿಲ್ಲ. ಗ್ರಾಮದವರ ಆಶ್ಚರ್ಯಕ್ಕೆ ತಕ್ಕಂತೆ ಅವನು ತಾನು ಮೊದಲಿದ್ದಂತೆ ಜೀವನವನ್ನು ಸಾಗಿಸತೊಡಗಿದನು.

ಎಂ. ಗೋಪಾಲಕೃಷ್ಣ ಕಾಮತ್, ಮಂಗಳೂರು.

ಮುಂಗ್ಯೆಯಾಳಿಕೆ.

ಗೋರಿಯೊಳು ಹೆಣಗಳು ಹೊರಳುತಿವೆ
ಬಸಿರಿನಿಂ ಕೂಸುಗಳು ಉರಳುತಿವೆ
ಸಾತ್ವಿಕ ಆತ್ಮಗಳು ನರಳುತಿವೆ
ಆಳು! ಮುಂಗ್ಯೆ! ಆಳು!

ಉಸಿರಾಡದೊಲು ಜೀಲು ತುಂಬಿಹವು
ಲಾರಿಗಳು ನೆತ್ತರಿಂ ಕೊಬ್ಬಿಹವು
ಬೊಕ್ಕಸವು ಜಡತೆಯಿಂ ಉಬ್ಬಿಹವು
ಆಳು! ಮುಂಗ್ಯೆ! ಆಳು!

ಸುಳಿದಲ್ಲಿ ನೆತ್ತರವು ಸುರಿಯುತಿದೆ
ನಿಂತಲ್ಲಿ ನೆತ್ತರವು ನೊರೆಯುತಿದೆ
ಬೆನ್ನಲ್ಲಿ ಗೋಳು ಭೋರ್ಗರೆಯುತಿದೆ
ಆಳು! ಮುಂಗ್ಯೆ! ಆಳು!

ಎಲ್ಲನಳು ಕೆಡೆದಿನವು ಒಂದಿಹುದು!
ಸರ್ವಕೂ ಸೃಷ್ಟಿಯೊಳು ಹದ್ದಿಹುದು!
ದಾಟಿದರೆ ಅಳಿಗಾಲ ಬಂದಿಹುದು!
ಆಳು! ಮುಂಗ್ಯೆ! ಆಳು!

ಬಿಡುಗಡೆಯೆ ಸೃಷ್ಟಿಯ ಮೂಲವಿದೆ
ಅದ ನೋಡಿ ಕೊಳ್ಳಲದಕೆ ರೀತಿಯಿದೆ
ಅದಕೆ ಕೈ ಹಾಕಿದರೆ ಕಾಲನದೆ!
ತಾಳು! ಮುಂಗ್ಯೆ! ತಾಳು!

ಅದ್ದೊ ಕೇಳು! ರುದ್ರಾತ್ಮ ನೋಡುವದು
ಸಾವ ಬ್ರಯಲಿಗೆ ಬಯಲಾಡುವದು
ಸತ್ಯಕೆ ಜಯ ಶಾಶ್ವತ ಕಡಗಿಹುದು
ಕೇಳು! ಮುಂಗ್ಯೆ! ಬೀಳು!

ಕನ್ನಡ ಕಂದ.

ವಿಮರ್ಶೆ.

1. ಕಾವೇರಿ ಮಹಾತ್ಮೆ: ಮೈಪಾಡಿ ವೆಂಕಟರಮಣಯ್ಯನವರು ರಚಿಸಿದ್ದನ್ನು ಉಡುಪಿ ಶ್ರೀಕೃಷ್ಣ ಮುದ್ರಣಾಲಯದಲ್ಲಿ ಸಾವಂಜಿ ವರಾಯರು ಪ್ರಕಟಿಸಿದರು. ಪುಟ ೧೧೫. ಬೆಲೆ ೧೦ ಆಣೆ.

ವೆಂಕಟ ರಮಣಯ್ಯನವರು ಭಾಮಿನಿ ಷಟ್ಪದಿ ರೂಪದಲ್ಲಿ ವೆಂಕಟ ಮಹಾತ್ಮೆ, ಉತ್ತರ ಕಾಂಡ ಮುಂತಾದ ಗ್ರಂಥಗಳನ್ನೂ ರಚಿಸಿರುತ್ತಾರೆ. ಈ ಗ್ರಂಥವು ಕಾವೇರಿ ನದಿಯ ಮಹಾತ್ಮೆಯನ್ನು ತೋರಿಸುವ ಪೌರಾಣಿಕ ಕಥೆಯನ್ನು ಕೊಟ್ಟಿರುತ್ತದೆ. ಕಥಾಭಾಗವು ಭಾಮಿನಿ ಷಟ್ಪದಿಯಲ್ಲಿ ಬರೆದಿದೆ.

2. ಸಂಧ್ಯಾಯಜ್ಞಃ ಗ್ರಂಥಕರ್ತರು ಮತ್ತು ಪ್ರಕಾಶಕರು—ಕಾಸರಗೋಡು ವೇದಮೂರ್ತಿ ವಿಟ್ಲ ಭಟ್ಟರು. ಪುಟ ೩೮. ಬೆಲೆ ೪ ಆಣೆ.

ಬ್ರಾಹ್ಮಣರು ದಿನಂಪ್ರತಿ ಹೇಳಬೇಕಾದ ಸಂಧ್ಯಾವಂದನೆಯ ಶ್ಲೋಕಗಳ ಅರ್ಥವನ್ನು ಕೊಡಲು ಈ ಚಿಕ್ಕ ಪುಸ್ತಕದಲ್ಲಿ ಪ್ರಯತ್ನಿಸಿರುತ್ತಾರೆ. ವೇದಶಾಲೆಯ ವಿದ್ಯಾರ್ಥಿಗಳ ಪ್ರಥಮ ಪಾಠಪಾಗಿ ಅಧ್ಯಾಯನ ಮಾಡುವುದಕ್ಕೋಸ್ಕರ ರಚಿಸಿದುದು. ಅನೇಕ ಕಡೆಗಳಲ್ಲಿ ಮುದ್ರಣ ದೋಷಗಳಿವೆ ವಿದ್ಯಾರ್ಥಿಗಳಿಗಾಗಿ ಚಿರೆದ ಪುಸ್ತಕಗಳು ಒಳ್ಳೆಯ ಕಾಗದದ ಮೇಲಿ ಮುದ್ರಿತವಾಗತಕ್ಕುದು. ಶ್ಲೋಕಗಳ ಶಬ್ದಾರ್ಥಗಳನ್ನು ಮಾತ್ರ ಕೊಡುವುದಕ್ಕಿಂತ ಭಾವಾರ್ಥವನ್ನು ಕೊಡಬೇಕಿತ್ತು.

3. ಬುದ್ಧಿ ಬಂತು. ಬರಹಗಾರರು—ಬಿ ಕಲ್ಯಾಣ ಶರ್ಮಾ ಪುಟ ೩೨.

4. ವೇದಾಂತಿ. ಬರಹಗಾರರು: ಮುಗುಳಿ ರಂಗನಾಥ ಎಂ ಎ ಬಿ. ಟಿ. ಯವರು. ಪುಟ ೧೮.

ಈ ಎರಡು ಚಿಕ್ಕ ಕಥೆಪುಸ್ತಕಗಳು ಬೆಳಗಾಂವಿಯ ತುಂಟರತಂಡದವರ ಒಂದಾಣೆ ಮಾಲೆಯ ಎರಡನೆಯ ವರ್ಷದ ೯ ಮತ್ತು ೧೦ನೇಯ ಪುಷ್ಪಗಳು.

ಬುದ್ಧಿಬಂತು ಇದರಲ್ಲಿ ವಿಲಾಯತಿಗೆ ಹೋದ ಹಿಂದಿ ತರುಣನೊಬ್ಬನ ಬುದ್ಧಿವಿಕಾಸವನ್ನು ತೋರಿಸಿರುತ್ತದೆ. ವೇದಾಂತಿಯಲ್ಲಿ, ವೈದವ್ಯದ ತೊಡಕುಪ್ರಸಂಗವನ್ನು ತೋರಿಸಿರುತ್ತಾರೆ ಮುದ್ರಣ ತಪ್ಪುಗಳು ಅನೇಕ ಕಡೆಗಳಲ್ಲಿ ಕುಳಿದಿವೆ

5. ಭಾವನಾತ್ರಯಂ. ರಾಜಯೋಗಂ, ಕೋಕಶೋಕಂ, ಜೀವತತ್ವಂ, ಹನುಮಾನ ವೇಂಕಟರಾಯ, ಕವಿಯಿಂ ವಿರಚಿತಂ, ಹೊರ ಬೇಟೆ, ತುಮಕೂರು. ಪುಟ ೫೦. ಬೆಲೆ ೦—೬—೦.

ಹಸಿವು!

೧

ಎಲ್ಲಡಗಿ ಕುಳಿತಿರುವೆ?
ಕಳ್ಳನಂತವಿತ್ತಿರುವೆ,
ಮೆಲ್ಲಗೆನ್ನಿ ಬಂದೆನ್ನ ಸೇರುತಿರುವೆ
ಎಲ್ಲಿಲ್ಲಿಗೋಡಿದರು ಅಲ್ಲಿ ಬರುವೆ

೨

ನಿನ್ನೇಟನುಂತಾಳ
ದಿನ್ನೇನು ಸಥದೋರ
ದನ್ಯಾಯ ಮಾಡುವುದು ಜನಗಳೆಲ್ಲ!
ನಿನ್ನಿರುವಿಕೆಯು ಬಡವರೆದೆಗೆ ಶೂಲ!

೩

ಹೊರ ಕೂಡಲಾರದಾ
ಹೊರೆ ಹೊತ್ತು ಸೂರ್ಯನಾ
ಉರಿಗೆ ಮೈಯೊಡ್ಡಿ, ದೆವರಿಳಿಸಿದಡೆಯು
ತೊರಗುತಹರಿಂದೆಲ್ಲ ನಿನ್ನ ಪಡೆದು

೪

ಹೆ' ದುಷ್ಟ, ನಿನ್ನೊಡನೆ
ಕಾದಲಾರದೆ, ಬೇರೆ
ಹಾದಿಗಾಣದೆ, ವೇಶ್ಯವೃತ್ತಿಗಿಳಿದು
ಹೋದ ಸಾಧ್ವಿಯರೆಷ್ಟು-ನಿನ್ನಳಿದು?

೫

"ಕಣ್ಣಿಲ್ಲ, ಕಾಲಿಲ್ಲ
ಹುಣ್ಣಿಹುದು ನೈ ಎಲ್ಲ'
ಅಣ್ಣಾಲಿಕೆ ಗತಿಗಾಣೆ! ಭಿಕ್ಷೆ ಕೊಡಿರಿ"
ಎನ್ನುತ್ತ ಕೂಗುವುದು ನಿನಗೆ ಬೆದರಿ

೬

ನಿನ್ನಿಂದ ಧಾರುಣಿಯು
ಬನ್ನಬಡುತಿದ್ದರೂ—
ಅಣ್ಣಾ' ನೀನರಿದಿದ್ದರಿಂಥ ಜಗವು
'ಇನ್ನಿತ್ತೆ? ಬಾ' ಬಾರೊ' ಬಾರೆ

[ಹಸಿವು!

ಬಿ. ನರ್ಸಪ್ಪ ಮಂಗಳೂರು.

ಸಾಹಿತ್ಯ

ಸ್ವದೇಶಾಭಿಮಾನಿ

ಪಂಚಿಕೆ.

ಸಂಪುಟ ೨ ಜುಲಾಯಿ ೨೪—೭—೧೯೩೨. ಸಂಚಿಕೆ ೬

— ಅನುಕ್ರಮಣಿಕೆ —

	ಪುಟ
ಪತ್ರಿಕೆಗಳ ಕೊರತೆ	೪೧
ನಾಡಸಾಹಿತ್ಯ	೪೨
ತ್ರೀ ಬೇಂದ್ರೆ	೪೩
ಹಟಮಾರಿ	೪೪
ಅಸ್ಪೃಶ್ಯತಾ ನಿವಾರಣೆ	೪೭
ಹಳೆಯ ಹಾಡು ಗುರಿ	೪೮

ಜುಲಾಯಿ ತಾರೀಕು ೨೪ನೇ ಶುಕ್ರವಾರ ೧೯೩೨

ಪತ್ರಿಕೆಗಳ ಕೊರತೆ.

ಕನ್ನಡ ಸಾಹಿತ್ಯದ ಬೆಳವಣಿಗೆಗೆ ವರ್ತಮಾನ ಪತ್ರಿಕೆಗಳೂ, ಮಾಸ ಪತ್ರಿಕೆಗಳೂ ಮೂಲಾಧಾರವೆಂಬ ಸಂಗತಿಯು ಸಹಜವಿದೆ ಪತ್ರಿಕೆಗಳ ಸಂಖ್ಯೆಯೂ, ಅವುಗಳ ಪ್ರಸಾರಣೆಯೂ ಸಾಹಿತ್ಯ ಪ್ರಗತಿಯನ್ನು ತೋರಿಸುತ್ತದೆ. ಪತ್ರಿಕೆಗಳು ಎಷ್ಟು ತರದ್ದಿರುತ್ತವೋ, ಅಷ್ಟರ ಮಟ್ಟಿಗೆ ಸಾಹಿತ್ಯ ಪ್ರಸಾರವು ವಿವಿಧ ರೀತಿಯಲ್ಲಿ ನಡೆಯುವುದು. ಒಂದು ಒಳ್ಳೆಯ ಜ್ಞಾನಕೋಶ ಪತ್ರಿಕೆಯಿದ್ದರೆ ಆ ವಿಷಯದ ಸಾಹಿತ್ಯವು ಹೆಚ್ಚಾಗುವುದಲ್ಲವೆ? ರಸಾಯನ ಶಾಸ್ತ್ರದ ಪತ್ರಿಕೆಯಿಂದ ರಸಾಯನ ಶಾಸ್ತ್ರ(ಕ್ಕೆ)ವನ್ನು ಜನರಿಗೆ ತಿಳಿಸಲುಬೇಕಾದ- ಶಬ್ದಗಳು ಬೆಳೆಯುದೆಂಬುದು ನಿಸ್ಸಂದೇಹ. ಹಾಗೆಯೇ ಐತಿಹಾಸಿಕ, ಔದ್ಯೋಗಿಕ, ರಾಜಕೀಯ ಮತ್ತು ಶೀಕ್ಷಣ ಪತ್ರಿಕೆಗಳು. ಈ ರೀತಿಯಲ್ಲಿ ನೋಡಿದರೆ ಕನ್ನಡನಾಡಿನಲ್ಲಿ ಎಷ್ಟು ಪತ್ರಿಕೆಗಳಿವೆ?

ರಾಜಕೀಯ ಮತ್ತು ಜನಸಮುದಾಯಕ ವಿಷಯಗಳಲ್ಲಿ ಕೈ ಹಾಕಿ ನುರಿತ ಎಷ್ಟೋ ಜನರು ತಮ್ಮ ಹೇಳಿಕೆಗಳಿಗೆ ತಕ್ಕ ಪ್ರಚಾರ ದೊರೆಯಬೇಕೆಂದೂ, ಇತರರ ಅಭಿಪ್ರಾಯಗಳನ್ನು ಹಬ್ಬಿಸಲು ಸಂದರ್ಭ ಒದಗಿಸಿಕೊಡಲಿಕ್ಕೆಂದು ಆಯಾ ಕಾಲದಲ್ಲಿ ಪತ್ರಿಕೆಗಳನ್ನು ಹೊರಡಿಸಿರುವರು. ಆದರೆ ಅವುಗಳಲ್ಲಿ ಅನೇಕವುಗಳು ಚಿಕ್ಕಪ್ರಾಯದಲ್ಲಿಯೇ ಮರಣ ಹೊಂದಿರುತ್ತವೆ. ಉತ್ಸಾಹದಿಂದ ಹೊರಡುವುದು, ಉತ್ಸಾಹದಿಂದ ಕೆಲಕಾಲ ನಡೆಯುವುದು ಆ ಮೇಲೆ—ಹೇಳದೆ ಕೇಳದೆ ನಿಂತುಬಿಡುವುದು ಇದೇ ಅನೇಕವುಗಳ ಚರಿತ್ರೆಯಾಗಿದೆ. ಈ ಲೇಖನವನ್ನು ಓದುವವರ ಮನಸ್ಸಿಗೆ ದೃಷ್ಟಾಂತಗಳನೇಕ ಹೊಳೆಯಬಹುದು. ಆದುದರಿಂದ ಅವುಗಳನ್ನು ಹೇಳಲವಶ್ಯವಿಲ್ಲ. ಇದರ ನಿಜತ್ವವು ಪ್ರತಿಯೊಬ್ಬನಿಗೆ ತಿಳಿದ ವಿಷಯವಾಗಿದೆ

ಇಂತಹ ಸ್ಥಿತಿಗೆ ಕಾರಣವೇನು? ಮೊದಲಿನ ಕಾರಣವೆಂದರೆ—ಜನರ ಸಹಾನುಭೂತಿಯು ಸಾಕಷ್ಟು ಇರುವುದಿಲ್ಲ. ಪತ್ರಿಕೆಗಳನ್ನು ಕೊಂಡು ಕೊಂಡು ಓದುವುದು ಪ್ರತಿ ಒಬ್ಬ ಸುಶಿಕ್ಷಿತನ ಕರ್ತವ್ಯವೆಂದು ಯಾರೂ ತಿಳಿಯುವುದಿಲ್ಲ. ನಮ್ಮಲ್ಲಿಯೇ ಎಷ್ಟು ಜನರು ಅಥವಾ ಎಷ್ಟು ಸೌಂಸ್ಥೆಯವರು ಕನ್ನಡ ಪತ್ರಿಕೆಗಳಿಗೆ ಚಂದಾದಾರರಾಗಿರುತ್ತಾರೆ? ಬಹಳ ಕಡಿಮೆ ಹೀಗೆ ಜನರ ಔದಾಸೀನ್ಯದಿಂದ ಪತ್ರಿಕೆಗಳಿಗೆ ಕ್ಷಯರೋಗವು ಹಿಡಿದಂತಾಗಿದೆ ಚಾಲಕರಲ್ಲಿ ಉತ್ಸಾಹವು ಕಡಿಮೆಯಾಗುತ್ತಾ ಬರುತ್ತದೆ. ಲೇಖಕರು ಕಡಿಮೆ. ಓದುವವರು ಇನ್ನೂ ಕಡಿಮೆ. ಇದು ನಮ್ಮ ದೇಶದ ತೊಡಕಾಗಿದೆ.

ಪತ್ರಿಕೆಗಳ ಬೆಳೆವಣಿಗೆಗೆ ಮಾಲಿಕರೂ ಹೊಣೆಗಾರರೆನ್ನಬಹುದು. ಅನೇಕರಿಗೆ ಪತ್ರಿಕೆಗಳನ್ನು ನಡೆಸುವುದೇ ಅವರ ಮುಖ್ಯ ಉದ್ಯೋಗವಲ್ಲ. ಇದೊಂದು ಒದಿಯ ಕೆಲಸವೆಂದು ಅವರು ತಿಳಿಯುತ್ತಾರೆ. ತಮಗೆ ಸಮಯ ಸಿಕ್ಕಿದ ಹಾಗೆ ತಮಗೆ ಅನುಕೂಲವಿದ್ದಂತೆ ಪತ್ರಿಕೆಗಳನ್ನು ಚಲಿಸುವುದು. ಪತ್ರಿಕಾ ಚಲನೆಯೆಂಬುದು ಹಗುರವಾದ ಕೆಲಸವಲ್ಲ. ಅದಕ್ಕಿರುವಷ್ಟು ಜವಾಬ್ದಾರಿಯು ಇನ್ನಾವುದಕ್ಕೂ ಇಲ್ಲವೆನ್ನಬಹುದು. ಪ್ರತಿಯೊಂದು ಪತ್ರಿಕೆಯೆಂದರೆ ಅದೊಂದು ಸೌಂಸ್ಥೆಯೆಂದೇ ನಾವು ತಿಳಿಯಬೇಕು. ತಮ್ಮ ಬುದ್ಧಿಶಕ್ತಿಯನ್ನೂ, ಪೂರ್ಣ ಸಮಯವನ್ನೂ ಆ ಕೆಲಸಕ್ಕೆನೇ ವಿನಿಯೋಗಿಸುವ "ಜರ್ನಲಿಸ್ಟ್"ರು ಅದರಲ್ಲಿ ಕೈ ಹಾಕುವುದು ಉತ್ತಮ. ತಮ್ಮ ಕೈಲಾದ ಮಟ್ಟಿಗೆ ದೇಶದ ಉನ್ನತ ಜ್ಞಾನ, ವಿಚಾರಗಳನ್ನು ಒಟ್ಟು ಕೂಡಿಸಿ ಪತ್ರಿಕೆಗಳ ಮುಖಾಂತರ ಆನಂದಿಗೆ ದಾರಿಯನ್ನು ಒದಗಿಸುವ ಕೆಲಸವು ಅವರ ವಾಲಿನದು.

ಕೆಲಸ ನಡೆಸಲು ದ್ರವ್ಯ ಸಹಾಯವಿಲ್ಲದೆ ಆಗುವುದಿಲ್ಲ. ಹಣ ವೆಚ್ಚ ಮಾಡುವಷ್ಟು ಫಲಕಾರಿ ಪತ್ರಿಕೆಗಳೂ ಇನ್ನೂ ಆಗಿಲ್ಲ. ಹಣವನ್ನು ವೆಚ್ಚ ಮಾಡದೆ ಪತ್ರಿಕೆಗಳು ಬೆಳೆಯುವುದಿಲ್ಲ. ಪತ್ರಿಕೆಗಳು ಪ್ರಚಾರವಾಗದೆ ಹಣದ ತೊಡಕು ಮಾಯವಾಗುವುದಿಲ್ಲ! ಇವನ್ನು

ಸಮ್ಮ ತೂಕವಾಗಿಡುವ ಭಾರವು ಪತ್ರಿಕೆಯ ಮಾಲಿಕರ ಮೇಲೆ ಬಿದ್ದಿರುತ್ತದೆ.

ನಮ್ಮ ನಾಡಿನ ಪತ್ರಿಕೆಗಳಿಗೆ ಇನ್ನೊಂದು ಕೆಟ್ಟ ತರದ ತೊಡಕಿದೆ. ಕನ್ನಡ ಪತ್ರಿಕೆಗಳನ್ನೆಲ್ಲ ಸಂಗ್ರಹಿಸಿ ನೀವು ಓದಲು ತೊಡಗಿದರೆ ನಮ್ಮ ಒಂದು ಸಂಗತಿಯು ಖಚಿತವಾಗಿದೆ. ಓದತಕ್ಕ ಲೇಖಗಳು ಎಲ್ಲೆಲ್ಲಿಯೂ ಬಹಳ ಕಡಿಮೆ. ವಿವಿಧ ವಿಷಯಗಳ ಮೇಲೆ ಲೇಖಗಳಿಲ್ಲ. ಪತ್ರಿಕೆಗಳಲ್ಲಿ ಕತೆಗಳಲ್ಲದೆ ಬೇರೆ ವಿಷಯಗಳು ಬಹಳ ಕಡಿಮೆ. ಪತ್ರಿಕೆಗಳಿಗೆ ಲೇಖಗಳನ್ನು ಬರೆಯುವುದು ಒಂದು ಸ್ವಯ ಕೆಲಸ (hobby)ವೆಂದು ಬಗೆಯುವವರು ಕಡಿಮೆ. ಈ ವೃತ್ತಿಯಲ್ಲಿ ನುರಿತವರೂ ಕಡಿಮೆ. ಪ್ರತಿಯೊಂದು ಪತ್ರಿಕೆಗೆ ಲೇಖನಗಳ ಕೊರತೆಯು ಬಹಳವಾಗಿದೆ. ಈ ತೊಡಕನ್ನು ಹೋಗಲಾಡಿಸುವ ಭಾರವು ಓದುಗರ ಮೇಲಿದೆ. ಅವರು ಪತ್ರಿಕೆಗಳನ್ನು ಉದ್ಧರಿಸುವುದು ತಮ್ಮ ಕೆಲಸವೆಂದೆಣಿಸಿ ಲೇಖಗಳನ್ನು ಕಳುಹಿಸಿ ಕೊಟ್ಟರೆ ಅದರಿಂದ ತಮ್ಮ ಜ್ಞಾನ ವಿಚಾರಗಳು ಫಲಕಾರಿಯಾಗಲು ಮಾರ್ಗ ಮಾಡಿಕೊಟ್ಟಂತಾಗುವುದೆಂದು ತಿಳಿಯಬೇಕು. ಅದರಿಂದ ಪರೋಪಕಾರವಾಗುವುದು ಮಾತ್ರವಲ್ಲ ತಮಗೂ ಅದರಿಂದ ಶಿಕ್ಷಣ ದೊರೆಯುವುದು. ತಮ್ಮ ವಿಚಾರಗಳು ಒಂದು ರೂಪವನ್ನು ತಾಳುವುದು ಎಂದು ಪತ್ರಿಕೆಗಳಿಗೆ ಲೇಖಗಳನ್ನು ಕಳುಹಿಸಿ ಸಾಹಿತ್ಯ ವಿಚಾರಗಳನ್ನು ಬೆಳೆಸಿದರೆ ನಾಡ ಸೇವೆಯಾಗುವುದು.

ಜನಪದ ಸಾಹಿತ್ಯಃ— ಈ ಪತ್ರಿಕೆಯಲ್ಲಿ, ನಮ್ಮ ಜಿಲ್ಲೆಯ ಹಳ್ಳಿಯಲ್ಲಿ ಪ್ರಚಾರವಿದ್ದ ಹಳೆ ಹಾಡೊಂದನ್ನು ಕೊಟ್ಟಿರುತ್ತೇವೆ. ಅದನ್ನು ಓದಿದರೆ ಹಳೆಯ ವಿಚಾರಗಳ ರಸವು ಎಷ್ಟು ಸುಧಾರವಿದೆ ಎಂದು ನಮಗೆ ತಿಳಿಯುವುದು. ಮಿತ್ರಮಂಡಲಿಯ ''ಪದ್ಮನಾಭ''ರ ವರು ಇಂತಹ ಅನೇಕ ಹಾಡುಗಳನ್ನು ಸಂಗ್ರಹಿಸಿ ಈ ಪತ್ರಿಕೆಯಲ್ಲಿ ಪ್ರಕಟಿಸುವವರಿದ್ದಾರೆ. ಇದರಿಂದ ನಮ್ಮ ಜಿಲ್ಲೆಯ ಹಳೆಯ ಹಾಡುಗಳು ಪ್ರಚಾರಕ್ಕೆ ಬರುವುವು ಎಂದು ನಾವು ನಂಬುತ್ತೇನೆ.

ನಾಡಸಾಹಿತ್ಯ.

ನಮ್ಮ ನಾಡಸಾಹಿತ್ಯವು ಕನ್ನಡನಾಡಿನ ಪುರಾತನ ಐತಿಹಾಸಿಕ, ಸಾಮಾಜಿಕ, ನೈತಿಕ ರೀತಿನೀತಿಗಳನ್ನು ಬೋಧಿಸುವಂತಹದುದಾಗಿದೆ. ಪರಂತು ಆ ಹಳೆಯ ಸಾಹಿತ್ಯವು ಈಗ ಜಿಡ್ಡು ಹಿಡಿದು, ಈಗಿನ ನಾಗರಿಕತೆಯ ಹೊಳೆಯ ಹೊಯ್ಲಿನಲ್ಲಿ ಕೊಚ್ಚಿ ಹೋಗುವ ಸಂಭವವಿದೆ. ಇಷ್ಟರಲ್ಲಿಯೇ ನಮ್ಮ ಹಳೆಯ ಅಜ್ಜಿ-ಅಜ್ಜಂದಿಯರ ಅಳಿವಿಯಿಂದ ಅದರ ಹಲವು ಭಾಗಗಳು ಹಾಳಾಗಿ ಹೋಗಿವೆ. ಮನೆಗಳಲ್ಲಿ ಚಿಕ್ಕ ಮಕ್ಕಳಿಗೆ ಹೇಳುತ್ತಿದ್ದ ಕತೆಗಳು, ಜೋಗುಳಗಳು, ಇತರ ಸಣ್ಣ ಪುಟ್ಟ ಹಳೆಯ ಹಾಡುಗಳು, ಗಾದೆಗಳು ಇವುಗಳಲ್ಲಿ ಈಗ ಕಾಲಕ್ಕೆ ಮಾತ್ರ ಅರ್ಧಮರ್ಧವಾಗಿ ಇವೆಯೆನ್ನಬಹುದು. ಉಳಿದ ಮುಕ್ಕಾಲು ಭಾಗವು ಸಂಗ್ರಹಕಾರರಿಲ್ಲದೆಯೂ, ನಮ್ಮ ಅಜಾಗರೂಕತೆಯಿಂದಲೂ ನಿರ್ನಾಮವಾಗಲು ಆರಂಭವಾಗಿದೆ. ಇದರಿಂದ ನಮ್ಮ ಹಳೆಯ ಸಾಹಿತ್ಯದ ಬೆನ್ನೆಲುಬು ಮುರಿದಂತಾಗಿದೆ. ಆದು ಕಾರಣ ನಾವೀಗ ಪ್ರಯಾಸವಟ್ಟು, ನಮ್ಮ ಜಿಲ್ಲೆಯಲ್ಲಿ ಇದ್ದಷ್ಟನ್ನಾದರೂ ಸಂಪಾದಿಸಿ ಸಂಗ್ರಹಿಸದಿದ್ದರೆ ನಮ್ಮ ನಾಡಸಾಹಿತ್ಯವು ಅಳಿದು ಹೋಗುವುದರಲ್ಲಿ ಸಂದೇಹವಿಲ್ಲ.

ಹಳೆಯ ಸಾಹಿತ್ಯವೆಂದೊಡನೆ ಹಲವರಿಗೆ ಬಲು ಬೇಸರ. ಮತ್ತು ಉದಾಸೀನ. ಪರಂತು ಅವುಗಳಲ್ಲಿ ಅಡಗಿರುವ ಅಗಾಧ ತತ್ವಗಳನ್ನೂ, ವಿಚಾರಗಳನ್ನೂ ವಿವೇಚಿಸಿದರೆ, ಅದರ ಸವಿಯು ನಮಗೆ ತಿಳಿಯುವುದು. ನಮ್ಮ ಹಳೆಯ ಮಕ್ಕಳು ಕಣ್ಣುಮುಚ್ಚಿಕೆಯಾಟವನ್ನು ಆಡುವಲ್ಲಿ ಹೇಳುವ ''ಕಣ್ಣಾ ಮುಚ್ಚೇ ಕಾಡೇ ಗೂಡೇ, ಉದ್ದಿನ ಮೂಡೇ ಉರುಳೇ ಹೋಯ್ತು'' ಯೆಂಬ ಮಕ್ಕಳಾಟದ ಮಾತಿನಲ್ಲಿಯೂ ರಾಮಾಯಣದ ಕತೆಯು ಅಡಕವಾಗಿದೆಯೆಂಬುದನ್ನು ಪಂಡಿತ ದೇವಶಿಖಾಮಣಿ ಅಳಸಿಂಗಾಚಾರ್ಯರವರು ''ರಾಷ್ಟ್ರ ಬಂಧು''ವಿನ ಯುಗಾದಿ ಕಾಣಿಕೆಯಲ್ಲಿ ಸ್ಪಷ್ಟವಾಗಿ ಕಾಣಿಸಿರುವರು. ಹೀಗೆಯೇ ಇನ್ನೂ ಅನೇಕ ತರದ ಮಕ್ಕಳ ಮಾತುಗಳಲ್ಲಿಯೂ, ಹಾಡುಗಳಲ್ಲಿಯೂ ಕತೆಗಳಲ್ಲಿಯೂ, ಗಾದೆಗಳಲ್ಲಿಯೂ ಪ್ರಕೃತಿಯ ಒಳ ಹೊರಗಣ ಸತ್ಯ ಸೊಗಸುಗಳ ಚೈತಾತ್ಮಕ ಪ್ರಭೆಯು ಕಂಡು ಬರುತ್ತದೆ. ಇಂತಹ ದಿವ್ಯ ಸಾಹಿತ್ಯದ ಕಡೆ ನಾವು ಮಾತ್ರ ಉದಾಸೀನರಾದುದು ವಿಧಿಯ ಉಪಹಾಸವಲ್ಲದೆ, ಮತ್ತೇನು?

ಈಗ ಹಳ್ಳಿಯ ಹೆಂಗಸರು ತಮಗೆ ಬಿಡುವಿದ್ದಾಗ ಹೇಳುವ ಪಾಡ್ದನ, ಸಿರಿ ವಗೈರೆಗಳಲ್ಲಿ ನಮ್ಮ ಪೂರ್ವಜರ ಆಚಾರ ವಿಚಾರಗಳು, ನಡೆನುಡಿಗಳು, ನ್ಯಾಯನೀತಿಗಳು, ಜೀವನ ಚರಿತ್ರೆಗಳು ಗರ್ಭೀಭೂತವಾಗಿವೆ. ಈ ವೈಕಿ 'ಕೋಟಿ-ಚೆನ್ನಯ'ರ ಕತೆಯು ವಿಶೇಷ ಪ್ರಚಾರದಲ್ಲಿದೆ. ಇನ್ನು ಕೆಲವು ಹಾಡುಗಳು, ಗಾದೆಗಳು, ಕತೆಗಳು ಈಗ ಬದುಕಿರುವ ನಮ್ಮ ಹಳಬರ ಸಂಗ್ರಹದಲ್ಲಿವೆ. ಇವುಗಳನ್ನೆಲ್ಲಾ ಕೇಳಿ ಶೇಖರಿಸಿ, ಇವುಗಳ ಪ್ರಕಟಣೆಗೆ ಯೋಗ್ಯವಾದ ವ್ಯವಸ್ಥೆ ಮಾಡುವುದು ನಮ್ಮ ಅದ್ಯ ಕರ್ತವ್ಯ. ಈ ವಿಧದಿಂದ ಹಳ್ಳಿಯ ಹಳೆಯ ನಾಡಸಾಹಿತ್ಯವನ್ನು ಉಜ್ಜೀವನಗೊಳಿಸಲಿಕ್ಕೆ ಉತ್ತರವಾದಿಗಳಾಗಿ ಕಾರ್ಯೋನ್ಮುಖರಾಗುವವರು ಎಷ್ಟು ಮಂದಿ ತಯಾರಿರಬಹುದು???

ನಾಡಿನ ಪ್ರಸಿದ್ಧ ಪುರುಷರು.

ಶ್ರೀ. ದ. ರಾ. ಬೇಂದ್ರೆ.

(ಲೇಖಕರು:—ಶ್ರೀ. ಕೊ. ಶಿ. ಕಾರಂತರು.)

ಕರ್ನಾಟಕ ಆಧುನಿಕ ಸಾಹಿತಿಗಳ ಗುಂಪಿನಲ್ಲಿ, ಶ್ರೀ. ಬೇಂದ್ರೆಯವರ ಹೆಸರು ತಿಳಿಯದವರಿಲ್ಲ. ಅವರು ಧಾರವಾಡದವರು. ಅವರ ಕವಿತೆ ನಾಟಕಗಳಿಂದಾಗಿ, ಅವರ ಹೆಸರು ಸಾಕಷ್ಟು ಪ್ರಸಿದ್ಧಿಯನ್ನು ಹೊಂದಿದೆ. ಜನಸಾಮಾನ್ಯ ಓದುಗರಲ್ಲಿ ಬೇಂದ್ರೆಯವರನ್ನು ಕಾಣದವರೇ ಬಹಳವೆಂದರೂ ಚಿಂತೆಯಿಲ್ಲ. ಅವರದು ತಾರುಣ್ಯವನ್ನು ಏರಿದ ವಯಸ್ಸು, ಅನುಭವವಾದರೂ ಹಾಗೆಯೇ. ಜೀವನದ ಸಂಗ್ರಾಮದಲ್ಲಿ ಕಾದಾಡುವಷ್ಟು ಶಕ್ತಿಯನ್ನು ಗಳಿಸಿಕೊಂಡಿದ್ದಾರೆ. ಸುತ್ತಲಿನ ಪ್ರಪಂಚದ ಅರಿವು ಚೆನ್ನಾಗಿ ಬಂದಿದೆ. ಬಡತನದ ಸವಿಯನ್ನು ಕಂಡಿರಲೂ ಬೇಕು ಮೊದಲೊಂದು ಕಾಲದಲ್ಲಿ, ಅವರು ಶಾಲಾ ಮಾಸ್ತರಾಗಿದ್ದರು. ಕನ್ನಡದ ಮೇಲೆ ಪ್ರೀತಿಯುಳ್ಳ, ಇಂಗ್ಲಿಷು ಶಾಲಾಮಾಸ್ತರರು. ಇಂಗ್ಲಿಷ ಸಾಹಿತ್ಯವನ್ನೂ ಪರಿಶೀಲಿಸದವರಲ್ಲ. ಆದರೆ ಅವರ ಬರಹಗಳಲ್ಲಿ ಅವರದೇ ವರ್ಚಸ್ಸು ತುಂಬಿದೆ.

ಧಾರವಾಡದ ಜನರಂತೆ ಅವರೂ ಇದ್ದಾರೆ. ಮಾತಿನಲ್ಲಾಗಲೀ ಉಡುಗೆಯಲ್ಲಾಗಲೀ ಆಡಂಬರವಿಲ್ಲ. 'ಹಾಂಗಂತಂದ್ರೇನವ್ವಾ' —ಎಂದು ಕಂಡದ್ದನ್ನು, ಖಂಡುತುಂಡಾಗಿ ಹೇಳಬಲ್ಲರು ಮಾತಿನಲ್ಲಿ ಅವರ ದೇಶಕ್ಕೆ, ವಿಶೇಷವಾದ ಖಂಡುತುಂಡುತನವಿದ್ದಂತೆ ಒರಟು ತನವಾದರೂ ಇದೆ. ಧಾರವಾಡದ ಪ್ರಾಂತದವರನ್ನು ಕಂಡರೆ, ಈ ನಾಗೊಂದು ಕಾಲದಲ್ಲಿ ಹೀಗನಿಸುತ್ತಿತ್ತು—ಇವರಲ್ಲಿ ಕವಿಗಳಿರುವುದು ಶಕ್ಯವೇ ಎಂದು? ಕಾರಣ ಅಷ್ಟು ಒರಟಾಗಿ ಕಾಣುತ್ತಿತ್ತು ಅವರ ಬಾಹ್ಯ ಜೀವನ—ನನ್ನ ಕಣ್ಣಿಗೆ. ಆದರೆ ಒರಟಾದ ನಡುವೆ, ಸೂಕ್ಷ್ಮತೆಯು ಇರಬಲ್ಲುದೆಂಬುದಕ್ಕೆ ಅವರೇ ಸಾಕ್ಷಿ. ಇನ್ನು ಅವರ ಜೀವನ ಸಡೆ—ಇವುಗಳ ವಿಷಯವಾಗಿ ನಾನು ಬಹಳ ಹೇಳಲಾರೆ. ಗೆಳೆತನಕ್ಕೆ ಬೇಕಾಗುವ ಗುಣಗಳು ಅವರಲ್ಲಿವೆ.

ಬೇಂದ್ರೆಯವರು, ತರುಣರ ಜೀವನದಲ್ಲಿ, ಒಂದು ವಿಶೇಷ ತರದ ಕ್ರಾಂತಿಯನ್ನೆ ಉಂಟು ಮಾಡಿದರೆನ್ನ ಬಲ್ಲೆ. ಇದು ವಿಚಾರಕ್ರಾಂತಿ. ಅದರ ಲಹರಿಯ ವಿಚಾರವಾಗಿ, ಮುಂದೆ ಚರ್ಚಿಸುವ. "ಗೆಳೆಯರ ಗುಂಪು"—ಇದರ ಹೆಸರನ್ನು ಕೇಳದವರಿಲ್ಲ. ಗುಂಪಿನ ಮುಖ್ಯ ವ್ಯಕ್ತಿಗಳು ಬೇಂದ್ರೆಯವರು. ನಮ್ಮ ನಾಡಿನ ಇತರ ಭಾಗಗಳಲ್ಲಿ, ಒಬ್ಬ ಸಾಹಿತಿಯ ಮಾತಿಗೆ ಇನ್ನೊಬ್ಬನು ತಲೆದೂಗುವನಿದ್ದಾನು. ಅವರ ಸಂಖ್ಯೆಯು ಹೆಚ್ಚಿರಲಿ ಕಡಿಮೆಯಿರಲಿ— ಜನರೇನೂ ಇದ್ದಾರು. ಆದರೆ ಧಾರವಾಡದಲ್ಲಿ ಹಾಗಿರಲಿಲ್ಲ. 'ಶಾಂತಕವಿ' 'ಕರೂರ' ಮೊದಲಾದಂಥ ಜನರನ್ನು ಒಮ್ಮೆಗೇ ಅಟ್ಟಕ್ಕೇರಿಸುತ್ತಿದ್ದರು. ಬದುಕಿದವರನ್ನು ಹೊಗಳುವುದಕ್ಕಿಂತ, ಬದುಕಿದವರು ಸತ್ತ ಬಳಿಕ, ಹೊಗಳುವುದು ಅಧಿಕ. ಆಗಂತು, ಅವರನ್ನು ಗಗನಕ್ಕೆ ಮುಟ್ಟಿಸುವರು. ಆದರೆ, ಬೇಂದ್ರೆಗಳಂಥ ಹೊಸ ಸಾಹಿತಿಗಳಿಗೆ—ಅನುಕೂಲ ವಾತಾವರಣವು ಆಗ ದೊರಕಿರಲಾರದ್ದು. ಇಲ್ಲವೆ, ಹೊಸತೊಂದು ಸಾಹಿತ್ಯಾಭಿರುಚಿಯು ಉಂಟಾಗಲು—ಅದು ಯುಕ್ತರ್ತುವೆನಿಸಿರಲಿಲ್ಲವೆಂದರೂ ಸೆಲ್ಲುವುದು. ಅಂಥದೊಂದು ವಾತಾವರಣದಲ್ಲಿ, ಕನ್ನಡವನ್ನು ಮರೆತು ಇಂಗ್ಲಿಷಿಗೇ ಧಾವಿಸುವ ಮನಸ್ಸನ್ನು ಕನ್ನಡಕ್ಕಾಗಿ ತಡೆದು ಹಿಡಿಯುವ ಕೆಲಸವನ್ನು ಅವರು ಮಾಡಿದರು. ಅವರ ಗುಂಪು ತರುಣರ ಗುಂಪು. ಉತ್ಸಾಹಿಗಳದು. ಎಷ್ಟು ಜನ ವಿದ್ಯಾರ್ಥಿಗಳು ಅವರ ಪರಿಚಯದಿಂದಾಗಿ, ಸಾಹಿತ್ಯ ವ್ಯಾಸಂಗಕ್ಕೆ ತೊಡಗಿದರು ಅವರದೇ ಒಂದು ಕೂಟವಾಯಿತು. ಸಾಹಿತ್ಯಕ್ಕಾಗಿ ದುಡಿಯುವ ಆಸೆ ಅವರಲ್ಲಿ ಅಂಕುರಿಸಿತು. ಅದರಂತೆ ಕೆಲಸ ಮಾಡುತ್ತಿರುವರು.

ಈ ಕೂಟವು ಕನ್ನಡ ಸಾಹಿತ್ಯದಲ್ಲಿ, ಹೊಸದೊಂದು ಶೈಲಿಯನ್ನು ತಂದು ಹಾಕತೊಡಗಿದೆ. ಈ ಬೇಂದ್ರೆಯವರ ಬೆರಹವಾದರು ಆ ಶೈಲಿಯನ್ನು ಬಿಟ್ಟಿಲ್ಲ. ಅವರು ಬರಹಗಳಲ್ಲಿ ಆದಷ್ಟು ಕನ್ನಡ ಶಬ್ದಗಳನ್ನು ಉಪಯೋಗಿಸುವ ಯತ್ನ ಮಾಡಿದರು ಆದರೆ, ಮಾತುಗಳು ಚುಟುಕಾಗಿರಲೆಂದು, ಶಬ್ದಗಳನ್ನು ಒಂದು ಸೂತ್ರವೆಂಬಂತೆ ಉಪಯೋಗಿಸ ತೊಡಗಿದರು. ಬಣ್ಣಗಾರನು, ತನ್ನ ಬಣ್ಣವನ್ನು ಹೇಗೆ ಚೆಲ್ಲುತ್ತಾ ನಡೆದರೆ ದುಂದುಗಾರನಾಗುವನೋ, ಬಣ್ಣ ಖರ್ಚಾಗದೆ ಚಿತ್ರ ಬಿಡಿಸಬೇಕೆಂದು ಯತ್ನಿಸುವವನೂ ಲೋಭಿಯೆನಿಸುತ್ತಾನೆ. ಗೆಳೆಯರ ಗುಂಪಿನ ಬರಹವೆಂಬುದು—ಸೂತ್ರಗಳಾಗ ತೊಡಗಿದೆ. ಅವರ ಚುಟುಕು ಗದ್ಯ ಮಾತುಗಳ ಅರ್ಥವನ್ನು ಅವರೇ ಬಂದು ವಿವರಿಸ ಬೇಕಾದಷ್ಟು ಗೂಢವಾಗಿ ಕಾಣುವುದು. ಇವರ ಮುಖಂಡರ ಪ್ರಯೋಗಗಳಲ್ಲಿ—ಚುಟುಕುತನವಿದ್ದರೆ. ಅವರ ಅನುಯಾಯಿಗಳ ಅದೇ-ತನವು ಬಂದಿತು. ಆದರೆ, ಅವರ ತಮ್ಮ ಹಿರಿಯ ಸಾಹಿತಿಗಳ ಕೆಲವೊಂದು ಶಬ್ದಗಳನ್ನು, ಗದ್ಯ ವ್ಯಾಸಗಳನ್ನು ಅನುಕರಿಸುತ್ತ ಅದರಲೀಲೆ ಆವೇಶದಲ್ಲೇ ತಲ್ಲೀನರಾಗುವಂತೆ ಕಾಣುವುದು ವ್ಯಕ್ತಿಗೊಂದು ಸ್ವತಂತ್ರವಾದ ಶೈಲಿಯು ಗುಂಪಿನಲ್ಲಿ ನಮಗೆ ಕಾಣಿಸುವಿಲ್ಲ —

ಗುಂಪಿನವರು ಮಾಡುತ್ತಿರುವ ಸಾಹಿತ್ಯ ಸೇವೆಯ ಕೆಲಸವು ಮಹತ್ತರವಾದುದೇ ಸರಿ. ಅದೇ—ಗುಂಪಿನ ಹೆಸರೇ ಮಂಗಳೂರು ಮೊದಲಾದ ಕಡೆಗಳಲ್ಲಿನ ಮಿತ್ರ—ಮಂಡಲಿ ಮೊದಲಾದುವಕ್ಕೆ ಕಾರಣವಾಗಿವೆ.

ಗೆಳೆಯರ ಗುಂಪಿನ—ಇನ್ನೊಂದು ವಿಮರ್ಶೆಯು, ಅವರ ಮಾರ್ಗದರ್ಶಕರಾದ ಬೇಂದ್ರೆಯವರಿಗೂ ಸಲ್ಲದಿರದು. ಅವರಲ್ಲಿ ಎಲ್ಲರೂ ಟಾಗೂರರ, ಅರವಿಂದರು ಆಗಲು ಹೊರಟಂತಿದೆ. ಅವರ ವಿಚಾರಗಳ ಗಹನತೆಗೆ ಸರಿಯಾದ, ಕಾರ್ಯಪಟುತ್ವವು ಕಾಣುವುದಿಲ್ಲ. ಮಾನಸಿಕ ಸ್ವರ್ಗದಿಂದಲೇ ಅವರಿಗೆ ತೃಪ್ತಿ. ಅದರಿಂದಾಗಿ ಒಂದು ದಿನ, ಕಾರ್ಯಪಟುಯ ಪ್ರಪಂಚದಲ್ಲಿ ಸೋಲುವುದುಂಟು.

ಈಗ ಸ್ವತಃ ಬೇಂದ್ರೆಯವರ ಬರಹಗಳ ವಿಚಾರವಾದ ಮಾತುಗಳನ್ನು ಆಡುತ್ತೇನೆ. ಅವರ ಕವಿತೆಗಳು ಬಹಳವಾಗಿವೆ. ಮೈಸೂ

ವ ಹೆಸರ ಕವಿಗಳ ಮೇಲೆ ಕತ್ತಿಯೆತ್ತಿದವರಿರುವಂತೆ, ಇವರ ಮೇಲೆಯೂ ಕತ್ತಿಯೆತ್ತಿದವರಿಲ್ಲ; ಭಾಷಾ ಸ್ವಾತಂತ್ರ್ಯವನ್ನು ಅನೇಕರು ವಹಿಸಿರುವರು. 'ನಿನ್ನದು ತಪ್ಪಿಲ್ಲವೇ'—ಎಂದರೆ 'ನಮ್ಮಪ್ಪನವ್ವ ನೂಡಿರಲಿಲ್ಲವೆ'—ಎಂದು ನಿಮ್ಮ ಬಾಯಿಬಡುಕನನ್ನು ಮುಚ್ಚಿಸುವರು. ಅವರ ಕವಿತೆಗಳಲ್ಲಿ ವಿಚಾರಗಳ ಅಳವು ಬಹಳವಾಗಿದೆ. ಹಕ್ಕಿ ಹಾರುತ್ತಿದೆ', 'ಮುವತ್ತಮೂರು ಕೋಟಿ', ಮೊದಲಾದ ಅವರ ಕವಿತೆಗಳು ಅವರ ದೃಷ್ಟಿಯ ವಿಶಾಲತೆಯನ್ನೂ, ಊಹಾ ಬಲವನ್ನೂ ಮಾತಿನ ತೀವ್ರತೆಯನ್ನೂ ತೋರಿಸಬಲ್ಲವು. ಒರಟಾಗಿ ಕಾಣುವಲ್ಲಿ ಪ್ರತಿಮಾ ವೀರರವರು. ಚಿತ್ರಕಲೆಯಲ್ಲಿ 'ಕ್ಯೂಬಿಸ್ಟಿಕ್'—ಕಲೆಯಂತೆ ಅವರ ಕವಿತೆಗಳು ನನ್ನ ಕಣ್ಣಿಗೆ ಕಾಣುವುವು. ಅವೆಲ್ಲ ಏರಿಮಿಡ್ಡಾಗಳು. ಅಗಾಧವಾಗಿ ನಿಮ್ಮ ಕಣ್ಣೆದುರಿಗೆ ನಿಂತು, ನಿಮ್ಮನ್ನು ದಿಗಿಲುಗಾರಿಸುತ್ತವೆ. ನೀವು ನಿಮ್ಮ ಗಮನವನ್ನು ಕೊಡದಿದ್ದರೂ, ನಿಮ್ಮ ಗಮನವನ್ನು ಕೀಳುತ್ತವೆ. ಅವರ 'ಕುಣಿಯೋಣ ಬಾರಾ'—ಹಾಡು, ಒರಟು ಭಾಷೆಯಿಂದ ಕೂಡಿದರೂ, ಲಲಿತ ಭಾವನೆಯಿಂದ ತುಂಬಿರುವುದು. ನಿಜಕ್ಕು ಬೇಂದ್ರೆಯವರು ಕುಣಿದಾರು—ಎಂದು ನಮಗೆ ತೋರಿಸಬಹುದು. ಹಾಗೆ ನಿಜವಾಗಿಯೂ ಕುಣಿದರೆ—ಗಗನಮಂಡಲದ ತನಕ ದೂಳೆಬ್ಬಿಸಿ ಬಿಡುವ ಕಾಯ ಅವರದು! ಅವರ 'ಕುಣಿಯೋಣದಲ್ಲಿ' ನನಗೆ ಶಿವನ ತಾಂಡವವು ಕಾಣುತ್ತದೆ. ಆದರೆ—ಇನ್ನೊಂದು ಬಗೆಯ ಲಲಿತ ಕುಣಿತವಿದೆ. ರಾಸ—ನರ್ತನವೆನ್ನುವ. ಇಂಥ ಕುಣಿತಕ್ಕೆ ಒಪ್ಪುವ ಭಾಷೆಯು ಬೇಂದ್ರೆಯವರಿಗಿಲ್ಲ. ಅವರ ಸ್ಯಿಬಿಸ್ಟಿಕ್ ಶೈಲಿಯ, ಮೃದು ವಿಚಾರಗಳಿಗೆ ಉಪಯುಕ್ತ ಶರೀರವಾಗಿರುವುದಿಲ್ಲ ಆವೇಶ, ಆಕ್ರೋಶ, ಅರ್ಭಟೆ, ವಿಕಟಾನಂದಗಳು ಅವರ ಸಾಮ್ರಾಜ್ಯ. ಅವರು ಭಕ್ತರಾಗಿ ಒಗ್ಗಿದಾಗ, ಹಿರಣ್ಯಕಶಿಪುವಿನ ಭಕ್ತಿಯ ಆಕ್ಕವು, ಪ್ರಹ್ಲಾದನ ಕೋಮಲ ಶರೀರವನ್ನು ಕೊಕ್ಕು ಮುಣಿದರೆ—ಎಂತು ಕಾಣಿಸಬಹುದೋ ಹಾಗೆ ಕಾಣಿಸುವುದು.

ಬೇಂದ್ರೆಯವರ—ನಾಟಕಗಳೂ ಕಲವಿವೆ. ಅವರ 'ನಗೆಯ ಕೊಗೆ', 'ಉದ್ಧಾರ'—ಗಳು ಅವರ ಈಚೆಗಿನ ನಾಟಕಗಳು. ಮೊದಲನದು ಚೆನ್ನಾಗಿದೆ. ಎರಡನೆಯದರಲ್ಲಿ ಅದರ ಉದ್ಧಾರವೇ ಆದಂತೆ ತೋರುವುದಿಲ್ಲ. ನಾಟಕವು ಆದಿಯಿಂದ ಅಂತ್ಯದ ತನಕ ಅರ್ಭಟೆಯಿಂದಲೇ ಸಾಗುವುದು. ಗುಡುಗು ಮಿಂಚುಗಳಂತೆ ಅಬ್ಬರವೆಬ್ಬಿಸಿ, ನಿರುಗಾಳಿಯೊಂದಿಗೆ ನಾಯವಾಗುವ ಮುಗಿಲಿನ ಅರ್ಭಟೆಯದು. ಅರ್ಭಟೆಗೆ ತಕ್ಕ ಮಳೆಯಿಲ್ಲ. ಬೇಂದ್ರೆಯವರ ಮಾತುಗಳು ನುಣುಪಾಗಿಲ್ಲ. ಆದರೆ, ಶಕ್ತಿಯಿದೆ. ಉಪನ್ಯಾಸರ ರೀವಿಗಳು ಅವರಲ್ಲಿಲ್ಲ. ಇನ್ನೇನೋ ಒಂದು ಶಕ್ತಿಯಿಂದ, ಅವರು, ಜನರನ್ನು ಮೋಹಿಸುವಲ್ಲರು. ಅದೇ ಅವರ ಪ್ರಾಮಾಣಿಕತನವಿರಬೇಕು.

ಈಗಿನ ಸಾಹಿತ್ಯ ಗೊಂದಲದಲ್ಲಿ ಅವರು ಬಲಿಯಾದವರು. ಸಾರವಾಡದಲ್ಲಾಗಲೀ ಇತರ ಕಡೆಗಳಲ್ಲಾಗಲೀ ಅವರ ಬರಹಗಳ ಮೇಲೆ ಬೆಂಕಿ ಕಾರುವವರುಂಟು ಕಣ್ಮುಚ್ಚಿ ಮೋಹಿಸುವವರುಂಟು. ಇದರಿಂದ, ಅವರು ತಮ್ಮ ಸಮತೋಲವನ್ನು ಕೆಡಿಸಿಕೊಂಡಾರೆಂಬ ಭೀತಿಯಿದೆ. ವಿಮರ್ಶೆಯನ್ನು ಧಿಕ್ಕರಿಸುವ, ಸೃಷ್ಟಿಕಾರರ ಹಾದಿಯನ್ನು ಅವರು ಹಿಡಿಯುವರೇ?

ಹಟಮಾರಿ.

ಮಕ್ಕಳು ಗುಮ್ಮ ಎಂದರೆ ಹೆದರುತ್ತಾರಲ್ಲ. ಅದೇ ರೀತಿಯಲ್ಲಿ ಮುನ್ನಿಯ ತಾಯಿಗೆ ನಾನು ಬಹಳ ಹೆದರುತ್ತಿದ್ದೆನು.

ಮುನ್ನಿಯು ಬಹಳ ಸಮಯದಿಂದ ತನಕ ಬದುಕಲಿಲ್ಲ; ಮೂರೇ ತಿಂಗಳಲ್ಲಿ ಅವಳ ಬಾಳು ಮುಗಿಯಿತು. ಹೆಸರನ್ನು ಮಾತ್ರ ತನ್ನ ಹಿಂದೆ ಬಿಟ್ಟು ಹೋದಳು. ಅವಳ ತಾಯಿಗೆ ನಾವು ಮುನ್ನಿಯ ತಾಯಿ ಎಂದು ಕರೆಯ ತೊಡಗಿದೆವು. ಅವಳೇನೊ ನನ್ನ ಹೆಂಡತಿಯಾಗಿದ್ದಳು ಆದರೆ ನನಗೆ ಅವಳೊಡನೆ ಮದುವೆ ಎಂದಾಯಿತು, ಏಕಾಯಿತು ಎಂಬುದು ಕನಸಿನಂತೆ ನೆನಪಿಗೆ ಬರಲೊಲ್ಲದು.

ನನಗೆ ಸ್ವಲ್ಪ ವಯಸ್ಸಾಗಲು ತಾನು ಮುನ್ನಿಯ ತಾಯಿ ಗಂಡ ಮುನ್ನಿಯ ತಂದೆ ಎಂದು ತಿಳಿಯಿತು. ಇಷ್ಟರಲ್ಲೇ ಮುನ್ನಿಯು ಈ ಲೋಕ ಬಿಟ್ಟೇ ಹೋದಳು. ಆದರೆ ಮುನ್ನಿಯು ತನ್ನ ತಾಯನ್ನು ಸಂಗಡ ಕರೆದುಕೊಂಡು ಹೋಗಲಿಲ್ಲವಲ್ಲಾ ಎಂದು ನನಗೆ ಬಹಳ ದುಃಖವಾಯಿತು.

ಅವಳು ಸುಖಿಯಾಗಿರಬೇಕೆಂದು ನಾನು ಬಹಳ ಪ್ರಯತ್ನ ಪಟ್ಟೆನು, ಆದರೆ ಅವಳು ಸುಖಿಯಾಗಲೊಲ್ಲಳು. ಯಾವಾಗ ನೋಡಿದರೂ ಹಣೆಯು ಆಕುಂಚಿತವಾಗಿತ್ತು.

ಈ ಸಮಯದಲ್ಲಿ ಬ್ರಹ್ಮನು ನನಗೆ ಸೃಷ್ಟಿ ಕಾರ್ಯದ ಶಕ್ತಿಯನ್ನು ಕೊಡುತ್ತಿದ್ದರೆ, ನನ್ನ ಸೃಷ್ಟಿಯಲ್ಲಿ ಸಿಂಹ, ಹುಲಿ, ಕರಡಿ ಹಾವು, ಚೇಳು, ಪ್ಲೇಗ್, ಕೊಲೆರಾ, ಸಿಡುಬು ಇವೆಲ್ಲವು ಇರುತ್ತಿದ್ದವು. ಆದರೆ ಮುನ್ನಿಯ ತಾಯಿಯು ಇರುತ್ತಿದ್ದಿಲ್ಲ. ಈಗ ಮುನ್ನಿಯ ತಾಯಿಯನ್ನು ತೆಗಳುವವರಿದ್ದರೆ ಭಕ್ತ ಜನರು ರಾಮಾಯಣ ಕಥೆಯನ್ನು ಕೇಳುವಂತೆ ಶ್ರದ್ಧೆಯಿಂದ ಕೇಳುತ್ತಿದ್ದೆನು. ಅವರ ಬಾಯಿಯಲ್ಲಿ ಬೆಲ್ಲ ತುರುಕಿಸಲೆಂದು ಮನಸ್ಸಾಗುತ್ತಿತ್ತು.

ಈ ದಿನಗಳಲ್ಲಿ ನೆರೆಹೊರೆಯ ಶಿವಸರನನ ಮೂವರು ಹೆಂಡಿರು ಪರಲೋಕಕ್ಕೆ ತೆರಳಿದ್ದರು. ನಾನು ಆಕಾಶದ ಕಡೆಗೆ ಕೈಗಳನ್ನೆತ್ತಿ 'ಹೇ ಭಗವಂತನೇ', ಜನರ ಮೂರು ಮೂರು ಹೆಂಡರು ಸತ್ತರು. ದುರ್ಭಾಗ್ಯನಾದ ನನ್ನ ಒಬ್ಬಳೂ ಸಾಯಲಿಲ್ಲವಲ್ಲಾ!' ಎಂದು ನಿಟ್ಟುಸಿರಿಟ್ಟೆನು.

ಈ ನನ್ನ ಮಾತುಗಳನ್ನು ಕೇಳಿ ನಿಮಗೆ ನಗೆಬರಬಹುದು. ಆದರೆ ನಾನು ಈ ದಿನಗಳಲ್ಲಿ ಗೋಳಾಡುತ್ತಿದ್ದೆನು. ಒಮ್ಮೊಮ್ಮೆ ಆತ್ಮಹತ್ಯೆ ಮಾಡಲೊ ಎಂದು ಅನ್ನಿಸುತ್ತಿತ್ತು; ಮನೆಯು ಫಾಸಿಯ ಕೊರಡಿಯಂತೆ ಭಾಸವಾಗುತ್ತಿತ್ತು.

ಇರಲಿ,ಮುನ್ನಿಯ ತಾಯನ್ನು ಪ್ರಸನ್ನಳಾಗಿ ಮಾಡಲು ನನ್ನ ಎಲ್ಲಾ ಪ್ರಯತ್ನಗಳು ನಿಷ್ಫಲವಾದವು. ಇನ್ನು ಸತ್ಯಾಗ್ರಹದಿಂದ ಏನಾದರೂ ಪ್ರಯೋಜನವಾದೀತೆಂದು ಅವಳೊಡನೆ ಮಾತಾಡುವುದನ್ನು ನಿಲ್ಲಿಸಿ

ವೆನು. ಹಲವು ದಿನಗಳು ಕಳೆದು ಹೋದವು. ಅವಳು ಈ ಸತ್ಯಾಗ್ರಹಕ್ಕೆ ಏನೂ ಸೊಪ್ಪು ಹಾಕಿದಂತೆ ಕಾಣಲಿಲ್ಲ.

ಹೀಗೆ ನನಗೊಬ್ಬನಿಗೆ ಮಾತ್ರವಲ್ಲ. ಇಡೀ ಮನೆಗೆ ಅವಳು ಒಂದು ದೊಡ್ಡ ಆಪತ್ತಿನಂತಾದಳು. ಮನೆಯ ಕೆಲಸದವರಿಗೆಂತೂ ಅವಳು ಒಬ್ಬ ಪೊಂಜೀಪತಿ (capitalist) ಯಂತಿದ್ದಳು. ಅವರ ನೆತ್ತರನ್ನು ಸಹ ಹೀರಲೆಳಸುತ್ತಿದ್ದಳು.

'ಈ ಬಡಪಾಯಿಗಳು ಎಂದಿಗೂ ನಿನ್ನ ಹಗೆಗಳಲ್ಲ' ಎಂದು ಅಪ್ಪಿ ತಪ್ಪಿ ಒಂದು ದಿನ ಹೇಳಿದೆನು ಸೈ. ಶ್ರಾವಣ ಭಾದ್ರಪದ ಮಾಸಗಳ ಮೋಡಗಳಂತೆ ಗರ್ಜಿಸಲು ಮೊದಲು ಮಾಡಿದಳು. 'ಹೌದು, ಹೌದು, ನಾನು ಕಪಟಿಯು, ನನಗೆ ಸೇವಕರಿಗಿರುವಷ್ಟು ಮರ್ಯಾದೆ ಸಹ ಇಲ್ಲ. ನೀವು-ಕೂಡ ಇವರದೇ ಸಮಾಚಾರ ತೆಗೆದುಕೊಳ್ಳುತ್ತೀರಿ. ನಾನು ಸತ್ತರೆ ಜೇನು ಕುಡಿಯಿರಿ.'

ನಾನು ಮನಸ್ಸಿನಲ್ಲೇ ಅಂದೆನು-ಇದು ಹದಿನಾರಾಣೆ ಸರಿ.

ನಾನು ಜೇಸತ್ತು ಹೋಗಿದ್ದೆನು.; ಮನೆಯಿಂದ ಹೊರಬಿದ್ದರೂ, ಮುನ್ನಿಯ ತಾಯಿಯ ನೆನಪು ಹೋಗುತ್ತಿದ್ದಿಲ್ಲ ಕುರುವುಳ್ಳ ರೋಗಿಗೆ ಸರ್ಜನನ ಶಸ್ತ್ರದ ನೆನಸಿನಂತೆ ಈ ನೆನಪಾಗಿತ್ತು.

ಕೊನೆಗೆ ಈ ಸಂಕಷ್ಟದಿಂದ ಪಾರಾಗುವುದಕ್ಕೆ ಸಾರಾಯಿ ಕುಡಿಯಲು ಮೊದಲು ಮಾಡಿದೆನು. ಮೊತ್ತಮೊದಲು ಸ್ವಲ್ಪ ಸ್ವಲ್ಪ, ನಂತರ, ಜೆನ್ನಾಗಿ; ಮನೆಯಲ್ಲೇನು ಹಣದ ಕೊರತೆಯಿದ್ದಿಲ್ಲ ಈ ಅವಸ್ಥೆಯಲ್ಲಿ ಕೆನ್ನೀರ ಸಮುದ್ರದ ಆನಂದವನ್ನು ಪಿಕ ಅನುಭವಿಸಬಾರದು. ಮಿತ್ರರ ಸಲಹೆಗನುಸಾರವಾರವಾಗಿ ಒಂದು ದಿನ ನಗರ ಸಂಚಾರವನ್ನು ಕೂಡ ಮಾಡಿದೆನು. ಅಲ್ಲಿ ಏನು ಹೇಳಲಿ? ಸೌಂದರ್ಯದ ವ್ಯಾಪಾರವು ನಡೆಯುತ್ತಿತ್ತು. ದುಡ್ಡಿಗೆ ಪ್ರೇಮವು ಸಿಕ್ಕುತ್ತಿತ್ತು; ಪಾಪವು ಮನುಷ್ಯರ ಕಣ್ಣುಗಳಲ್ಲಿ ಕುಣಿಯುತ್ತಿತ್ತು.

\+ + + + + +

ಅಲಮಾಸಳು ವಜ್ರದಂತೆ ಸುಂದರಳಿದ್ದಳು. ಅವಳ ಕಣ್ಣುಗಳಲ್ಲಿ ಮತ್ತತೆಯು! ತುಟಿಗಳಲ್ಲಿ ಅಮೃತ! ನಾನು ಅವಳನ್ನು ನೋಡಿದೆನು, ಅವಳ ಮಾತುಗಳನ್ನು ಕೇಳಿದೆನು; ಅವಳ ರೂಪದ ಮಾಧುರ್ಯದ ಸವಿ ನೋಡಿದೆನು. ನಾನು ಬೇರೊಂದು ಲೋಕವನ್ನೈದಿರುವೆನೊ ಎಂಬಂತೆ ಭಾಸವಾಯಿತು. ಎಲ್ಲಾದರೂ ಸ್ವರ್ಗವಿರುವುದಾದಡೆ, ಎಲ್ಲಾದರೂ ಆನಂದವಿರುವುದಾದರೆ, ಎಲ್ಲಾದರೂ ಈಶ್ವರನು ಮತ್ತು ಪುಣ್ಯವಿರುವುದಾದರೆ, ಸರಿ, + + ! ನಾನು ಅವಳನ್ನು ನೋಡಿದೆನು. ಅವಳು ನನ್ನನ್ನು. ಅವಳಿಗೆ ನನ್ನ ಹಣದ ಮೇಲೆ ಕಣ್ಣಿತ್ತು. ನಾನು ಅವಳ ಕಣ್ಣಿನಲ್ಲಿ ಅಡಗಿರುವ ಮತ್ತತೆಗೆ--ವಿಳಾಸಕ್ಕೆ--ಹಾ ತೊರೆಯುತ್ತಿದ್ದೆನು. ಏನು ಹೇಳಲಿ? ಇಡೀ ಜಗತ್ತನ್ನೇ ಮರೆತೆನು. ಮತ್ತು ಅಲಮಾಸಳ ದಾಸನಾದೆನು.

ಸಂಜೆಯಾದೊಡನೆ ನಾನು ಅವಳಿದ್ದೆಡೆಗೆ ಹೋಗುತ್ತಿದ್ದೆನು. ಮತ್ತು ಮುಂಜಾನೆ ಅಲ್ಲಿಂದ ಹೊರಟು ಮನೆಗೆ ಮರಳುತ್ತಿದ್ದೆನು.

ಇದೆಲ್ಲಾ ಪಾಪವೆಂದು ನನಗೆ ಗೊತ್ತಿತ್ತು. ಆದರೆ ಇದರಲ್ಲಿ ನನ್ನ ಅಪರಾಧವೇನು? ನೀವು ಈ ಸ್ಥಿತಿಯಲ್ಲಿ ಏನು ಮಾಡುತ್ತಿದ್ದಿರಿ? ಇಲ್ಲವೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಿರಿ. ಇಲ್ಲವೆ ನಾನು ದೂಡಿದಂತೆ ಮಾಡುತ್ತಿದ್ದಿರಿ.

ಇನ್ನೇನು, ಅಲಮಾಸಳೂ ಆದಳು, ನಾನೂ ಆದೆನು. ಅವಳು ಮಧ್ಯನಾದರೆ ನಾನು ಸೇವನೆ ಮಾಡುವವನು; ಅವಳು ಮೂರ್ತಿಯಾದರೆ ನಾನು ಪೂಜಾರಿ.

ಮನೆಯವರೆಲ್ಲರು ಬೆಚ್ಚಿಬಿದ್ದರು; ಆದರೆ ಯಾರಿಗೂ ಮಾತನಾಡುವ ಸಾಹಸವಿರಲಿಲ್ಲ. ಮೆಲ್ಲ ಮೆಲ್ಲಗೆ ಪಿಸಿಗುಟ್ಟ ತೊಡಗಿದರು.

ಒಂದು ದಿನ—ನೀವು ಇದನ್ನು ಕೇಳಿ ನಗಬಹುದು—ಹತಭಾಗ್ಯಳಾದ ಮುನ್ನಿಯ ತಾಯಿಯು ರೋಗದಿಂದ ನರಳುತ್ತಿದ್ದಳು. ರಾತ್ರೆ ನಾನು ಬಂದು ಸುಮ್ಮಗೆ ಮಲಗಿಕೊಂಡೆನು. ಹೊತ್ತಾರೆ ಏಳುವಾಗ ಅವಳ ಸ್ಥಿತಿ ಬಹಳ ಕೆಟ್ಟಿದೆಂದು ಗೊತ್ತಾಯಿತು, ನುಂಚಿದ ಬಳಿಗೆ ಹೋಗಿ 'ಏನಾಗಿದೆಯಾ?' ಎಂದು ಕೇಳಿದೆನು.

ಅವಳು ತೀಕ್ಷ್ಣ ಸ್ವರದಿಂದ ಹೇಳಿದಳು—ಇಲ್ಲಿ ಬನ್ನಿರಿ. ನಾನು ಮುಂದೆ ಅಡಿಯಿಡುತ ನಗುತ ನುಡಿದೆನು—ಅಪ್ಪಣೆ ಏನು?

'ನೀವು ಬುದ್ಧಿಶೂನ್ಯರಾಗಿ ಹೋಗಿದ್ದೀರಿ. ಸಾರಾಯಿ ಕುಡಿಯುತ್ತೀರಿ. ಮತ್ತು ವೇಶ್ಯೆಯಲ್ಲಿಗೆ ಹೋಗುತ್ತೀರೆಂದು ಕೇಳುತ್ತೇನೆ.

ನಾನು ನಗು ನಗುತ್ತಾ ಹೇಳಿದೆನು—ಯಸ್ ಸಾರ್!

ಅವಳ ಮೈಯು ಉರಿದಂತಾಯಿತು, ತಟ್ಟನೆ ಎದ್ದು ಕುಳಿತಳು. ''ಏನು, ನನ್ನನ್ನು ಆ ಗಲ್ಲಿ ಹೆಂಗಸಿನ ಹಾಗೆ ತಿಳಿದಿರುವಿರಾ? ಸರಿ ಹಾಸ್ಯ ನನ್ನೊಡನೆ ಸಾಗದು.''

ನಾನು ನಗುತ್ತಾ ಕೋಣೆಯ ಹೊರಗೆ ನಡೆದು ಬಿಟ್ಟೆನು.

ಹಲವು ದಿನಗಳ ಬಳಿಕ ಮನೆಯಲ್ಲಿ ಗೋಳಾಟವು ಕೇಳಿಸಿತು. ಆಗ ಮುನ್ನಿಯ ತಾಯಿಯು + + +

\+ + + + + +

ಮುನ್ನಿಯ ತಾಯಿಯು ಸತ್ತಳು; ಆದರೆ ನನಗೆ ದುಃಖವಾಗಲಿಲ್ಲ; ವಿಶೇಷ ಸಂತೋಷವೂ ಆಗಲಿಲ್ಲ. ಏಕೆಂದರೆ ಇತ್ತೀಚೆಗೆ ಅವಳಿಂದ ನನಗೆ ಯಾವ ಕಷ್ಟವೂ ಇರಲಿಲ್ಲ. ಅಲಮಾಸಳು ಮತ್ತು ಉಪದೇಶಕನಂತಿರುವ ಆ ಮೂಲೆಯ ಮುದ್ಯದಂಗಡಿಯು ನನ್ನನ್ನು ನಿಶ್ಚಿಂತನಾಗಿ ಮಾಡುತ್ತಿದ್ದಿತು.

ಅಲಮಾಸಳು, ಅವಳ ಕಂಗಿಯು ಮತ್ತು ನರ್ತಕಿಯು, ಇವರು ಒಟ್ಟಿಗೆ ಹಾಡಲು, ಏನೇನು ಆಗಲಿಕ್ಕಿಲ್ಲ.

ಸರಿ, ಮುನ್ನಿಯ ತಾಯಿ ಸತ್ತಳು; ನಾನು ಹಗಲೂ ಇರುಳೂ ಅಲಮಾಸಳವನಾದೆನು. ಮನೆಗೇನೋ ಹೋಗುತ್ತಿದ್ದೆನು. ಆದರೆ

ಒಮ್ಮೊಮ್ಮೆ. ಒಂದು ದಿನ ತಾಯಿಯು ನನ್ನನ್ನು ನೋಡಿ 'ಮಗಳ' ಎಂದು ಅತ್ತಳು.

ನನಗೆಲ್ಲಾ ಮನಸ್ಸಿನಲ್ಲಿ ಹೊಳೆಯಿತು; ಆದರೆ ಏನೂ ನುಡಿಯಲಿಲ್ಲ. ಅವಳೂ ಏನೂ ಮಾತಾಡಲಿಲ್ಲ. 'ಆದರೆ ನಾನೇನು ಮಾಡಲಾಸೆನು? ವಾಸದ ಸಮುದ್ರದಲ್ಲಿ ಆಪಾದ ಮಸ್ತಕ ಮುಳುಗಿದವಳಿಗೆ ಮೇಲಕ್ಕೇಳಲು ದಾರಿ ಎಲ್ಲಿ?

'ತಾಯಿಯು ಕಣ್ಣೀರನ್ನು ಮರೆತೆನು. ಈಗ ಅಲಮಾಸಳು, ಸಾರಾಯಿ, ಮತ್ತು ಗಾಯನ ಇವೇ ನನ್ನ ಜೀವನಾಧಾರ. ನನ್ನ ಮಿತ್ರರೊ? ನಾನು ಹೋಗದಿದ್ದರೆ ಅವರು ಎಳೆದುಕೊಂಡು ಹೋಗುತ್ತಿದ್ದರು. ಸಭಾ ಸಮಾಜಗಳಿಗೆ ನಿತ್ಯ ಕಡಿಮೆಯಿದ್ದಿಲ್ಲ. ಧನವು ಸೂರಿಗೊಳ್ಳಲ್ಪಡುತ್ತಿತ್ತು. ರೂಪಾಯಿಗಳು ನೀರಿನಂತೆ ಹರಿದು ಹೋಗುತ್ತಿದ್ದುವು.

ಕೊನೆಗೆ ತುಸು ಪರ್ಯಾಲೋಚಿಸಿ ತಾಯಿಯು ನನಗೆ ಎರಡನೆಯ ಮದುವೆಯನ್ನು ಮಾಡಿದಳು. ಬಡವನು ಎಂತಹ ಸತ್ಪುರುಷನಾದರೂ ಅವನಿಗೆ ಮದುವೆಯಾಗಲಾರದು. ಒಂದು ವೇಳೆ ಆಗುವುದಾದರೂ ಅನಾಥಾಲಯದಲ್ಲಿ ಯಾ ವಿಧವಾಶ್ರಮದಲ್ಲಿ. ಆದರೆ ಧನಿಕನು ಪಶುಸಮಾನನಾದರೂ ಅವನಿಗೆ ಎಲ್ಲಾ ತಯಾರಿದೆ. ನನ್ನ ತಾಯಿಯು ಒಬ್ಬ ದೊಡ್ಡ ಮನುಷ್ಯನ ಮಗಳನ್ನು ನನಗೆ ಮದುವೆ ಮಾಡಿದಳು. ಅವಳ ಹೆಸರು ಶಾಂತಾ. ಶಾಂತೆಯು ಕೆಟ್ಟವಳಲ್ಲ; ಒಳ್ಳೇಯವಳು. ಕೂದಲನ್ನು ಬಾಚಲು ಅವಳಿಗೆ ಜಿನ್ನಾಗಿ ಬರುತ್ತಿತ್ತು. ಓದು ಬರಹವನ್ನು ಚೆನ್ನಾಗಿ ಬಲ್ಲವಳಾಗಿದ್ದಳು. ಹಾರ್ಮೋನಿಯಮನ್ನು ಬಾರಿಸುತ್ತಿದ್ದಳು, ಇಂಪಾಗಿ ಹಾಡುತ್ತಿದ್ದಳು. ಆದರೆ ನನಗೆ ಶಾಂತೆಯಿಂದ ಏನು ಪ್ರಯೋಜನ? ನನಗೆ ಅಲಮಾಸಳು, ಇತರ ವೇಶ್ಯೆಯರು, ಮದ್ಯದಂಗಡಿ ಮತ್ತು ಗಾಯನ ಇವೇ ಬೇಕಾದವುಗಳು.

ಶಾಂತೆಯು ಬಂದೊಡನೆ ಅಲಮಾಸಳ ಗಾಯನವಾಗ ತೊಡಗಿತು. ಅವಳು ತವರುಮನೆಗೆ ಹೋದಳು; ಆದರೆ ಹಾಡುವುದು ನಿಲ್ಲಲಿಲ್ಲ. ಹೀಗೆ ಆನಂದ ಸಮಾರೋಹದಲ್ಲಿ ಎರಡು ಮೂರು ತಿಂಗಳುಗಳು ಕಳೆದು ಹೋದುವು.

ಈಗ ಶಾಂತೆಯು ನನ್ನ ಮನೆಯಲ್ಲೇ ಇರತೊಡಗಿದಳು. ಕೆಲವು ದಿನಗಳ ತನಕ ನಾನೂ ಮನೆಯಲ್ಲೇ ಇದ್ದೆನು. ಆದರೆ ಹಕ್ಕಿಯನ್ನು ಗೂಡಿನಲ್ಲಿ ಎಷ್ಟು ದಿನಗಳ ವರೆಗೆ ಇಡಲಾದೀತು? ತಿರುಗಿ ಅಲಮಾಸಳು, ಸಖಾಯಿ ಗಾಯನ ಕಚೇರಿ. ಅವೇ ದಿನಗಳು! ಅವೇ ರಾತ್ರಿಗಳು:

ಒಂದು ದಿನ ಬೆಳಿಗ್ಗೆ ಮನೆಗೆ ಬಂದೊಡನೆ ಶಾಂತೆಯು 'ತಾವು ಮಲಗಿರಲಿಲ್ಲವೇ?' ಎಂದು ಕೇಳಿದಳು.

ನಾನು—ಮಲಗಿದ್ದೆನು.

ಅವಳು—ಒಳ್ಳೆಯದು.

ಶಾಂತೆಯು ತುಸುಹೊತ್ತಿನ ತನಕ ಸುಮ್ಮಗಾದಳು. ಆ ಮೇಲೆ 'ನೀರು ಬಿಸಿಯಾಗಿದೆ. ಸ್ನಾನಮಾಡಿರಿ' ಎಂದು ನುಡಿದಳು.

ನಾನು ಹೋಗಿ ಮಿಂದೆನು. ಹೊರಗೆ ಬಂದು ನೋಡಲು. ನನಗೆ ಬಹಳ ಆಶ್ಚರ್ಯವಾಯಿತು. ಶಾಂತೆಯು ತಿಲಕ ನಿಶ್ಶಣ, ಮೊಸರು, ಅಕ್ಷತೆ, ಮತ್ತು ಹೂಗಳನ್ನು ಒಂದು ಹರಿವಾಣದಲ್ಲಿಟ್ಟುಕೊಂಡು ನಿಂತಿದ್ದಳು.

'ಇದೇನು?' ಎಂದು ನಾನು ಕೇಳಿದೆನು.

'ಏನಿಲ್ಲ. ತಿಲಕವನ್ನಿಟ್ಟುಕೊಳ್ಳಿರಿ' ಎಂದು ಶಾಂತೆಯು ಹೇಳಿದಳು.

ನಾನು ತಿಲಕವನಿಕ್ಕಿಕೊಂಡೆನು. ಅವಳು ಹೂಗಳನ್ನು ನನ್ನ ಅಡಿಗಳ ಮೇಲಿಟ್ಟಳು. ಆ ಮೇಲೆ ಹರಿವಾಣವನ್ನು ಒಂದೆಡೆ ಇಟ್ಟುಕೊಂಡು ಮೊಣಕಾಲೂರಿ ಕುಳಿತುಕೊಂಡಳು. ನಂತರ ಕೈ ಜೋಡಿಸಿ ಕಣ್ಮುಚ್ಚಿ ಹೀಗೆಂದು ನುಡಿದಳು. 'ಹೇ ಭಗವಂತನೇ! ಇವರನ್ನು ಅನವರತವೂ ರಕ್ಷಿಸು. ಇವರ ಧನಸಂಪತ್ತುಗಳನ್ನು ಅಭಿವೃದ್ಧಿಗೊಳಿಸು. ನಾನು ಶರೀರವಾಗಿದ್ದೇನೆ. ಇವರು ಪ್ರಾಣ!'

ಆ ಮೇಲೆ ಅವಳು ಕಣ್ಣು ತೆರೆದಳು. ಒಮ್ಮೆ ನನ್ನ ಕಡೆಗೆ ನೋಡಿದಳು, ಮತ್ತೆ ನನ್ನ ಪಾದಗಳ ಮೇಲೆ ತನ್ನ ವಸ್ತಕವನ್ನಿಟ್ಟಳು. ನಂತರ ಹರಿವಾಣವನ್ನು ತೆಕ್ಕೊಂಡು ಹೋದಳು.

ನಾನು ಈ ಅಭಿನಯವನ್ನು ಕಂಡು ಬೇಸತ್ತೆನು; ಕೂನೆಗೆ ನನ್ನ ಕೋಣೆಗೆ ಹೋದೆನು. ಇಷ್ಟರಲ್ಲಿ ಸೇವಕನು ನನ್ನ ಬೂಟ್ಸುಗಳನ್ನು ತಂದನು. ಈ ಹೊತ್ತು ಅವು ಬಹಳ ಹೊಳೆಯುತ್ತಿದ್ದವು. 'ನೀನೆ ಅವುಗಳಿಗೆ 'ಪಾಲಿಸು' ಹಾಕಿದೆಯಾ' ಎಂದು ನಾನು ಕೇಳಿದನು.

ಸೇವಕನು ಬೆದರುತ್ತ ನುಡಿದನು. 'ಸ್ವಾಮಿ ಅಲ್ಲ, ತಮ್ಮ ಪತ್ನಿಯವರು ಇದನ್ನು ಮಾಡಿದರು. ಈಗ ಅವರು ತಮ್ಮ ಎಲ್ಲಾ ಕೆಲಸಗಳನ್ನು ತಾವಾಗಿಯೇ ಮಾಡುತ್ತಾರೆ. ನಾನು ಬೂಟ್ಸುಗಳನ್ನೂ ಎತ್ತಿ ತಂದಿರುವೆನೆಂದು ಎಲ್ಲಾದರೂ ತಿಳಿದರೆ + + +

ಅದೇ ಹೊತ್ತಿನಲ್ಲಿ ಶಾಂತೆಯು ಕೋಣೆಯೊಳಗೆ ಬಂದಳು; ಮತ್ತು ಸೇವಕನನ್ನು ಉದ್ದೇಶಿಸಿ 'ತಮ್ಮಾ ಹರಿ, ಪಾದರಕ್ಷೆಗಳನ್ನು ನೀನು ತಂದಿರುವೆಯಾ' ಎಂದು ಕೇಳಿದಳು.

ಸೇವಕನು ಹೆದರುತ್ತ 'ಅಮ್ಮಾ ಹೌದು' ಎಂದನು. ಶಾಂತೆಯು ನಗುತ್ತಾ ನುಡಿದಳು. 'ಏಕೆ ಹೆದರುವೆ,' ಆದರೆ ಇನ್ನು ಮುಂದಕ್ಕೆ ಹಾಗೆ ಮಾಡಬೇಡ.

ಹರಿಯು ಹೊರಗೆ ನಡೆದನು. 'ತಮ್ಮ ಕೂದಲುಗಳನ್ನು ಬಾಚಲೊ?' ಎಂದು ಶಾಂತೆಯು ಕೇಳಿದಳು.

'ಇಡ ನಾನೇ ಬಾಚಿಕೊಳ್ಳುವೆನು'.

ಆದರೆ ಅವಳು ಮಕ್ಕಳಂತೆ ಹಟ ಮಾಡುತ್ತ 'ಅದಾಗದು ನಾನೇ ಬಾಚುವೆನು' ಎಂದಳು.

ನಾನು ಮಾತೆತ್ತದೆ ಬಾಚಣಿಗೆಯನ್ನು ಅವಳಿಗೆ ಕೊಟ್ಟೆನು. ಆ ಮೇಲೆ ಊಟದ ಹೊತ್ತಾಯಿತು ಶಾಂತೆಯು ವಿದ್ಯುಚ್ಛಕ್ತಿಯ ಬೀಸಣಿಗೆಯನ್ನು ನಿಲ್ಲಿಸಿದಳು ತಾಳೆಯ ಬೀಸಣಿಗೆಯಿಂದ ತಾನು ಗಾಳಿ ಹಾಕ ತೊಡಗಿದಳು.

ನಾನು – ಏನು?

ಅವಳು—ವಿದ್ಯುಚ್ಛಕ್ತಿಯ ಬೀಸಣಿಗೆಯ ಗಾಳಿ ಒಳ್ಳೆಯದಲ್ಲ.

ಮಧ್ಯಾಹ್ನ ನಾನು ನಿದ್ದೆಹೋಗುತ್ತಿರಲು ಅವಳು ಬಂದು ಕಾಲ ನ್ನೊತ್ತ ತೊಡಗಿದಳು ಸಂಜೆಗೆ ನಾನು ಎದ್ದೆನು, ಫಲಾಹಾರದ ನಂತರ ಅಲಮಾಸಳ ಮನಗೆ ಹೋದೆನು

ಇರುಳು ಕಳೆದು ಹೊತ್ತು ಮೂಡಲು ನಾನು ಮನೆಗೆ ಬಂದೆನು. ಹಾಸಿಗೆಯ ಬಳಿಯಲ್ಲಿ ಶಾಂತೆಯು ಕುಳಿತುಕೊಂಡಿದ್ದಳು.

ನಾನು—ಶಾಂತಾ, ನೀನು ನಿದ್ದ ಹೋಗಿಲ್ಲವೆ?

ಅವಳು—'ತಾವು ನಿದ್ರಿಸಿದರೆ ನಾನೂ ನಿದ್ರಿಸುವೆನು.'' ನಾನು ವಲ್ಲಂಗದ ಮೇಲೆ ಮಲಗಿದೆನು ಶಾಂತೆಯು ನನ್ನ ಕಾಲ ಬಳಿಯಲ್ಲಿ ಕುಳಿತು ಕಾಲನ್ನು ಒತ್ತ ತೊಡಗಿದಳು.

ಒಂದ ದಿನ ನಾನ ಹರಿಯನ್ನು ಕೇಳಿದೆನು—'ಹರಿ, ನಿನ್ನ ಯಜಮಾನಿಯು ನಿದ್ರಿಸುವುದೆಂದಿಲ್ಲವೆ?' 'ಸ್ವಾಮಿ ತಾವು ಮನೆಗೆ ಬಂದ ಮೇಲೆ ತಮ್ಮ ಸೇವೆಯನ್ನು ಮಾಡಿ ವಿಶ್ರಾಂತಿಯನ್ನು ತೆಗೆದು ಕೊಳ್ಳುತ್ತಾರೆ'

ಶಾಂತೆಯು ನನ್ನ ಎಲ್ಲಾ ಕೆಲಸಗಳನ್ನು ಸ್ವತಃ ಮಾಡುತಿದ್ದಳು. ಅವಳ ಆರೋಗ್ಯವು ದಿನೇ ದಿನೇ ಕೆಡ ತೊಡಗಿತು; ದುರ್ಬಲಳಾಗುತ್ತಾ ಬಂದಳು.

ಒಂದು ದಿನ ನಾನು, 'ಶಾಂತಾ, ನೀನು ಏಕೆ ಕೃಶಳಾಗುತ್ತಾ ಬರುತ್ತಿಯಾ?' ಎಂದು ಕೇಳಿದೆನು.

ಅವಳು ನುಡಿದಳು. 'ಇಲ್ಲವ್ವಾ'.

ಅಂದಿನಿಂದ ನಾನು ನನ್ನ ಕಾರ್ಯಕ್ರಮವನ್ನು ಬದಲಾಯಿಸಿ ಹನ್ನೊಂದು ಗಂಟೆಯ ಮೊದಲೇ ಮನೆಗೆ ಬರ ತೊಡಗಿದೆನು. ಕ್ರಮೇಣ ಅಲಮಾಸಳು ನನ್ನ ದೃಷ್ಟಿಯಲ್ಲಿ ಬಹಳ ತುಚ್ಛಳಾಗಿ ಕಂಡುಬಂದಳು; ಅವಳ ನೆನಪು ಕೂಡ ನಿಶ್ಶೇಷವಾಗಿ ಅಳಿದು ಹೋಯಿತು. ಶಾಂತೆಯ ಸೇವಾಭಾವವು ನನ್ನನ್ನು ಪಶುವಿನಿಂದ ಮನುಷ್ಯನನ್ನಾಗಿ ಮಾಡಿತ್ತು.

ಒಂದು ದಿನ ನಾನು ಪ್ರೇಮದಿಂದ ನುಡಿದೆನು. 'ಶಾಂತಾ, ನನ ಗೋಸ್ಕರ ಇಷ್ಟು ಕಷ್ಟಗಳನ್ನು ಏತಕ್ಕೆ ತಂದುಕೊಳ್ಳುವೆಯಾ? ಸ್ತ್ರೀ ಯರು ದಾಸಿಯರಂತೆ ಕೆಲಸವನ್ನು ಮಾಡುವುದು ಉಚಿತವಲ್ಲ.'

ಶಾಂತೆಯು ಗಾಂಭೀರ್ಯದಿಂದ ಉತ್ತರವಿತ್ತಳು. 'ಪ್ರೇಮವು ಎಲ್ಲಿಲ್ಲವೊ ಅಲ್ಲಿ ದಾಸಿಯ ಭಾವವಿದೆ. ಆದರೆ ಎಲ್ಲಿ ಪ್ರೇಮವಿದೆಯೊ ಅಲ್ಲಿ ಯಾರೂ ಒಡೆಯರಾಗಲಾರರು ಯಾ ದಾಸಿಯಾಗಲಾರರು.'

(ಹಿಂದೀ ಕಥೆಯ ಅನುವಾದ)

ಅಸ್ಪೃಶ್ಯತಾ ನಿವಾರಣೆ.

ನೋಡಿ! ನೋಡಿ ಗಾಂಧಿಯವರು ಪ್ರಾಣ ಕೊಡುವರೂ, ।
ಬೇಡುತಾರೆ ದಲಿತರನ್ನುದ್ಧಾರ ಗೈಯ್ಯಲೂ. ॥ ವಲ್ಲ ॥

ಹಿಂದೂ ಧರ್ಮ, ಬಂಧು ಅವರು ನಮ್ಮ ಅಂಗವೆ' ।
ಇಂದ ನಾವು ಅವರ ತೊರೆವುದ್ಯಾವ ನ್ಯಾಯವೇ? ॥ ಅ ವಲ್ಲ ॥

ಸೃಷ್ಟಿ ಕರ್ತನಿಂಗೆ ಅವರು ಮಕ್ಕಳಲ್ಲವೇ? ।
ಇಷ್ಟು ದಯವ ಅವರ ಕಡೆಗೆ ನಾವು ತೋರೆವೇ ॥೧॥ನೋಡಿ'ನೋಡಿ'॥

ಸೂರ್ಯ ಚಂದ್ರ ಸೀರು ಗಾಳಿ ಸರಿಸಮಾನದಿ, ।
ಸರ್ವೋ ವರಿಯೊಳಿತ್ತ ದೇವ ದಿವ್ಯ ವಾನದೀ ॥೨॥ ನೋಡಿ'ನೋಡಿ'॥

ಪ್ರಾಣಿ ವರ್ಗದಲ್ಲಿ ಮನುಜ ಶ್ರೇಷ್ಠನಲ್ಲವೆ? ।
ಹೀನವೆಂತು ನಮಗೆ, ಅವರು ಮನುಜರಲ್ಲವೇ?॥೩॥ನೋಡಿ'ನೋಡಿ'॥

ಕೊಳಕುತನವ ಸೀಗಿ ಅವರ ಶುದ್ಧ ಗೈವುದೂ, ।
ಒಳಿತು ಸೇವೆಯೆಂದು ನಾವು ಇಂದು ತಿಳಿವುದೂ ॥೪॥ನೋಡಿ.ನೋಡಿ'॥

ಏಳು ಕೋಟಿ ಪತಿತರೆಲ್ಲ ನಮ್ಮ ಬಿಟ್ಟರೆ, ।
ಅಳಿದು ಕ್ಷೀಣವಾಗೊದಯ್ಯ ಹಿಂದು ಧರ್ಮವೆ. ॥೫॥ನೋಡಿ'ನೋಡಿ!॥

ಹಿಂದು ಧರ್ಮ ತೊರೆದೆ ಅವರು ಕ್ರೈಸ್ತರಾದರೂ, ।
ಇಂದು ನಮ್ಮ ಅವರು ಬಿಟ್ಟು ಯವನರಾದರೂ ॥೬॥ನೋಡಿ'ನೋಡಿ'॥

ಮುಟ್ಟಲಾರೆ ತಟ್ಟಲಾರೆವೆಂದು ಹೇಳುತೆ, ॥
ಅಟ್ಟ ಬೇಡಿ ಕ್ರೈಸ್ತ ಯವನ ವಾಲಿಗನರನೂ. ॥೭॥ ನೋಡಿ! ನೋಡಿ'॥

ಸರ್ವಲೋಕದೊಡೆಯ ದೇವ ವಿಶ್ವವ್ಯಾಪಿಯೂ, ।
ಇರುವನವನೊ ದೇವಸ್ಥಾನದಲ್ಲಿ ಮಾತ್ರವೇ? ॥೮॥ ನೋಡಿ! ನೋಡಿ!॥

ದಲಿತ ಗೃಹದಿ ನಿರತ ಅವನು ವ್ಯಾಪಿಸಿರುವನೂ, ।
ತಿಳಿದು ಅದನು ತರುವಿರೇಕೆ ದೋಷವನಿನಿಗೆ ॥೯॥ ನೋಡಿ! ನೋಡಿ!॥

ಹಿಂದುಗಳಿಗೆ ಸಂಘಶಕ್ತಿ ಒಂದು ಬೇಕಿದೇ? ।
ಎಂದು ಹೃದಯಮಂದಿರವನು ನಾವು ತೆರೆಯುವಾ. ॥೧೦॥ನೋ!ನೋ!॥

ಬಂಧು ಪ್ರೇಮದಿಂದ ಅವರ ನಾವು ಕಾಣುವಾ, ।
ಇಂದು ನಮ್ಮ ದೇವಸ್ಥಾನವನ್ನು ತೆರೆಯುವಾ ॥೧೧॥ ನೋಡಿ!ನೋಡಿ!॥

ವಿ. ಸತ್ಯಾರ್ಥಿ, ಸಿದ್ಧಾಂತ ವಿಶಾರದ.

ಹಳ್ಳಿಯ ಹಾಡು.

ಬಡತನವೆ ನೀಯೆನ್ನ ಬಿಡದೆ ಬೆನ್ನಲಿ ಬಂದೆ
ಕಡು ಕಷ್ಟಗೊಳಿಸಿ ದಣಿಸಿದೆ ಹೊನ್ನಳ್ಳಿ
ಹೊಲೆಯಂಗೆ ಕೈಯ ಮುಗಿಸಿದೆ.

ಬಿದ್ದರಿತ್ತುವರಿಲ್ಲ ಬೆನ್ನ ತಾಂಗುವರಿಲ್ಲ
ಆನಿದ್ದೇನೆಂಬ ಹಿತರಿಲ್ಲ ದೇವರೆ
ತಾಯಂತೆ ನೀವೆ ಸಲಹಿರೊ

ಆರೂ ಇಲ್ಲದ ಕಷ್ಟ ನೀರೆಲ್ಲದ ಕೆರೆ ಕಷ್ಟ
ಅದರಿಂದ ಕಷ್ಟ ಬಡತನ ಬಂದೆರೆ
ಇರುವುದಕ್ಕೆ ಕಷ್ಟ ಪರರೆಡೆ

ಕಷ್ಟ ದರಿದ್ರಂಗೆ ಹುಟ್ಟಲಾಗದು ಹೆಣ್ಣು
ಕೊಟ್ಟು ರಕ್ಷಿಪರೆ ತನಗಿಲ್ಲದಿದ್ದರೆ
ದುಷ್ಟರ ಬಾಯ ನುಡಿ ಕೇಳು

ಕಣ್ಣು ಕಾಣದ ಹಕ್ಕಿ ಹಣ್ಣುಳ್ಳ ಮರವೇರಿ
ಹಣ್ಣೆಂದೆ ಮೆಲುಗು ಕಸುಗಾಯಿ ಆ ಹಕ್ಕಿ
ಹಾಲೆಂದೇ ಕುಡಿಗು ಹಣೆ ನೀರ

* * * * * *

ಕೋಗಿಲೆ ಕೂಗಿತು ಕುಂಬಳ ಹೂವಿಂಗೆ
ಬೆಟ್ಟ ಕೂಗಿತ್ತು ಬಿಸಿಲಿಂಗೆ ನವ್ಮನೆಯ
ಬಾಲೆ ಕೂಗಿದಳೆ ಹೂವಿಂಗೆ ॥ ೬ ॥

ಹಾಲ ಕುಡಿಯಲು ತಟ್ಟೆ ನೀರ ನೊಗೆಯಲು ಗಿಂಡಿ
ಹೂವ ಕೊಯ್ಯಲಿಕೆ ಹರಿವಾಣ ತೆಗೆದುಕೊ
ಅರಳು ಮಲ್ಲಿಗೆಯ ಕೊಯ್ಯಲಿಕೆ ॥ ೭ ॥

ಬಲ್ಲಾಳ ಹಿತ್ತಿಲ ಬಳ್ಳಿಯ ಹೆಸರೇನು
ಬೆಳ್ಳಿಯ ದಂಡೆ ಬಿಡು ನೀರ ಹಿತ್ತಿಲ
ಬಲ್ಲಾಳು ತಿಂಬ ಬಿಳಿಯೆಲೆ ॥ ೮ ॥

ಮಾವಿನ ಹೂವಿಂಗೆ ಆರೆಲ್ಲ ಕಳ್ಳರು
ದೇವೇಂದ್ರನರಸಿಯ ಬಸಿರಿನ ಬಯಕೆಗೆ
ದೇವೇಂದ್ರ ಮಂಜು ಕಳುಹಿದ ॥ ೯ ॥

ಉದ್ದ ಸಂಪಗೆ ಮರ ಗುಡ್ಡ ಸಂಪಗೆ ಹೂವು
ಮುಟ್ಟಿನ್ನ ಹೋಗಿ ಕೊಯ್ತುಂದ ಸಂಪಗೆ
ಮುದ್ದು ತಂಗಿಯರ ತುರುಬಿಂಗೆ ॥ ೧೦ ॥

ಹೆಣ್ಣಾಗಿ ಹುಟ್ಟುವದಕ್ಕೆ ಮಣ್ಣಾಗಿ ಹುಟ್ಟಲಕ್ಕು
ಮಣ್ಣ ಮೇಲೊಂದು ಮರನಾಗಿ ಇದ್ದರೆ
ದಾರಿ ಹೋಪೋರಿಂಗೆ ನೆಳಲಕ್ಕು ॥ ೧೧ ॥

ನಗೆ ನಗೆ ಎಂಬುದು ನಗೆಯ ನಂಬಲೆ ಬಾರ
ನಗೆ ಬೇರೆ ಅವನ ಬಗೆ ಬೇರೆ ಬಾಳಿಯ
ಕುಂಡೀಗೆ ಬೇರೆ ಕೊನೆ ಬೇರೆ

ಮಕ್ಕಳರ್ತಿ ಉಳ್ಳವಂಗೆ ಮಕ್ಕಳಾ ಕೊಡ ದೇವ
ಮಕ್ಕೊ ಬೇಡೆಂದು ಹಲುಬುವ ಬಡವಂಗೆ
ಮಕ್ಕಳ ಕೊಡುಗು ಮನೆ ತುಂಬ

ಆಡಿ ಉಂಡವ ಕೆಟ್ಟ ಕೇಡ ನೆನೆದವ ಕೆಟ್ಟ
ನೋಡದ್ದೆ ಕೆಟ್ಟಾ ಬೆಳೆ ಭೂಮಿ ಸೋದರದ
ಹೆಣ್ಣು ತಂದು ಕೆಟ್ಟಾ ಅಭಿಮನ್ಯು

ಸಂಗ್ರಾಹಕ:—ಪದ್ಮನಾಭ, ಮಿತ್ರಮಂಡಲಿ.

ಗುರಿ.

೧

ಎನ್ನಯ ಧರ್ಮವ ಕೇಳುವಿಯಾ?
ಶೂನ್ಯತೆಯಾಗಿಹುದು;
ನಿನ್ನಯ ಧರ್ಮವ ಹೇಳುವಿಯೋ?
ಮಾನ್ಯತೆಯಿಹುದೆನಗೆ

೨

ಕರ್ಮವ ತಿಳಿಯಲು ಬಯಸುವಿಯಾ?
ಸೇವೆಯು ಗೈಯುವುದು
ನಿರ್ಮಲ ಚಿತ್ತದೊಳಿರಿಸುತ ಪ್ರೇಮವ
ಜೀವನ ಸಾಗಿಪುದು

೩

ನೀತಿಯ ಸೀಮೆಯನರಿಯುವುದೇಕಿನ—
ಕಾತುರಗೊಳ್ಳುವುದು?
ಪ್ರೀತಿಯ ರಾಜ್ಯಕೆ ಮೇರೆಯ ಬೇಲಿಯ
ನೇತಕೆ ಹಾಕುವುದು?

೪

ಗುರಿಯಿಹುದೆನ್ನಯ ಜೀವನಕ್ಷೇತ್ರಕೆ
ಮಿರುಗುವ ತಾರೆಯೊಳು
ಬೆರೆಯುತ ದಿನದಾ ಬೆಡಗಿಗೆ ಸೋಲದೆ
ಮರೆಯಾಗಿರುವುದದು.

ರಾಘವ, ಮಿತ್ರಮಂಡಲಿ, ಮಂಗಳೂರು.

ಸಾಹಿತ್ಯ

ಸ್ವದೇಶಾಭಿಮಾನಿ

ಸಂಜಿಕೆ.

ಸಂಪುಟ ೨ ಸಪ್ಟಂಬರ ೧—೯—೧೯೩೩. ಸಂಚಿಕೆ ೭

— ಅನುಕ್ರಮಣಿಕೆ —

	ಪುಟ
ಕನ್ನಡ ಉಚ್ಚಾರಗಳು .	೪೯
ಕಳೆದು ಹೋದ ಮಗಳು .	೫೪
ಶ್ರೀ. ತಾತಾಚಾರ್ಯ ಶರ್ಮ	೫೩
ನೆಮ್ಮ ಮನೆ ಅಷ್ಟಮಿ .	೫೦
ಕೋಳಿ ಒಂದು ಚಿತ್ರ .	
ಹಳ್ಳಿಯ ಹಾಡು ಬಂಗಭಾಷೆ	

ಸಪ್ಟಂಬರ ತಾರೀಕು ೧೬ನೇ ಶುಕ್ರವಾರ ೧೯೩೩

ಕನ್ನಡ ಉಚ್ಚಾರಗಳು.

ಭಾಷೆಯ ಅಂತರಾತ್ಮವು ಅದರ ಉಚ್ಚಾರದಲ್ಲಿ ನೆಲೆಯಾಗಿದೆ. ಯಾವುದೊಂದು ಭಾಷೆಯ ಶಬ್ದ ಸಂಗ್ರಹವು ನಮ್ಮ ಸ್ವಾಧೀನವಾಗಿರ ಬಹುದು. ಅದರ ವ್ಯಾಕರಣ, ರೂಢಿಗಳು ನಮಗೆ ಸಂಪೂರ್ಣ ತಿಳಿದಿರಬಹುದು. ಅದರ ಉಚ್ಚಾರವು ಅಂತ ವಿಷಯವಲ್ಲವಾದರೆ ಆ ಭಾಷೆಯು ಸಿಹಿಯು ನಮಗೆ ಸಿಗಲಿಲ್ಲವೆಂದಂತಾಯಿತು. ಇಷ್ಟು ಅತ್ಯಗತ್ಯದ ಅಂಶವಾದರೂ, ಉಚ್ಚಾರವನ್ನು ಕಲಿಸುವುದಾಗಲಿ, ಕಲಿಯುವುದಾಗಲಿ, ಸುಲಭದ ಕೆಲಸವಲ್ಲ; ತಿರಿಗಿ ತಿರಿಗಿ ಕಿವಿಯಿಂದ ಕೇಳಿ, ಬಾಯಿಯಿಂದ ಉಚ್ಚರಿಸಿಯೆ ಸರಿಯಾದ ಉಚ್ಚಾರವು ಬರ ಬೇಕು.

ಅಕ್ಷರಗಳು ನಮ್ಮ ಮಾತುಗಳನ್ನು ಚಿತ್ರಿಸುವ ಚಿಹ್ನೆಗಳೆಂಬುದು ನಿಜ. ಆದರೆ ಬರೆ ಅಕ್ಷರಗಳಿಂದ ನಮ್ಮ ಮುಖದಿಂದ ಹೊರಡುವ ಶಬ್ದ ಭೇದಗಳನ್ನು ರೂಪಿಸುವುದು ಕಷ್ಟ. ಇಂಗ್ಲಿಷು ಮೊದಲಾದ ಯುರೋಪಿನ ಭಾಷೆಗಳಲ್ಲಿ ಬರೆದ ಅಕ್ಷರಗಳಿಗೂ ಆಡುವ ಉಚ್ಚಾರ ಗಳಿಗೂ ಸಂಬಂಧವೇ ಇಲ್ಲವೆಂದರೆ ಅತಿಶಯೋಕ್ತಿಯಾಗದು. ಆದರೆ ಸಂಸ್ಕೃತ ಅಕ್ಷರಮಾಲೆಯನ್ನು ಅನುಕರಿಸುವ ನಮ್ಮ ದೇಶದ ಅಕ್ಷರಮಾಲೆಗಳು ಹೆಚ್ಚಿನ ಮಟ್ಟಿಗೆ ಶಬ್ದಗಳನ್ನು ಸರಿಯಾಗಿ ಚಿತ್ರಿಸುತ್ತವೆ.

ಆದರೆ ನಮ್ಮ ಅಕ್ಷರಮಾಲೆಯು ದೋಷರಹಿತವೆಂದು ಹೇಳಲು ಬರುವುದಿಲ್ಲ. ಉದಾಹರಣೆಗಾಗಿ ಅ ಮತ್ತು ಆ ಎಂಬ ಅಕ್ಷರ ಗಳನ್ನು ಪರೀಕ್ಷಿಸುನ. ವಾಡಿಕೆಯಲ್ಲಿ 'ಅ' ಎಂಬುದು ಹ್ರಸ್ವ ಆ ಎಂಬುದು ದೀರ್ಘವೆನ್ನುತ್ತಾರೆ. ಅ ಎಂಬ ಶಬ್ದವನ್ನು ಸಂಸ್ಕೃತ ಅ ಎಂಬಂತೆ ಉಚ್ಚರಿಸಿದರೆ ಅದನ್ನು ಎಷ್ಟು ದೀರ್ಘ ಮಾಡಿದರೂ ಅ... ಎಂದಾಗುತ್ತದಲ್ಲದೆ, ಆ ಎಂದು ಆಗುವುದಿಲ್ಲ. ಹಾಗಾದರೆ ಅ ಮತ್ತು ಆ ಸ್ವರಗಳು ಬೇರೆ ಬೇರೆ ಸ್ವರಗಳೆ? ಹಾಗಿದ್ದರೆ ಕಾವ್ಯ ಗಳಲ್ಲಿ ಪದಾಂತ್ಯದ ಅ ಕಾರವನ್ನು ಆ ಕಾರವಾಗಿ ಉಚ್ಚರಿಸುವ ನ್ಯಾಯವು ವೆಲ್ಲಿಯದು? "ಎಂದ ನಾ ಮುಸವಾ" ಎಂದು ಅಂತ್ಯವಾದರೆ ಓದು ವಾಗ "ಎಂದ ನಾ ಮುಸವಾ" ಎಂದು ಉಚ್ಚರಿಸುತ್ತೇವಲ್ಲವೆ? ಮಲಯಾಳಿ ಭಾಷೆಯವರು ಮಾತಾಡುವಾಗ ಕಿವಿಗೊಟ್ಟು ಕೇಳಿದರೆ ಅವರು ರಾನು ಎಂಬ ಶಬ್ದವನ್ನು ರಾನೂ ಎಂದು ಉಚ್ಚರಿಸು ತ್ತಾರೆ. ಅಂತ್ಯದ ಅ ಕಾರವು ಹ್ರಸ್ವ ಆ ಕಾರದಂತಿದೆ. ಕನ್ನಡದಲ್ಲಿ ಸಹ ಅ ಅಕ್ಷರವು 'ಅ'ಕಾರದ ಹ್ರಸ್ವವನ್ನು ಸೂಚಿಸುತ್ತದಲ್ಲದೆ 'ಆ' ಕಾರವು ಅ ಕಾರದ ದೀರ್ಘವನ್ನಲ್ಲ ಎಂದು ನಮಗೆ ತೋರುತ್ತದೆ. ಇನ್ನೊಂದು ವ್ರಶ್ನೆ, ಕೆಡು ಮತ್ತು ಕೆಳಗೆ ಎಂಬ ಪದಗಳಲ್ಲಿ ಕೆ ಅಕ್ಷರದ ಉಚ್ಚಾರಕ್ಕೆ ಒಂದೇ ಸ್ವರವಲ್ಲ; ಎಂತೂ ಮಂಗಳೂರಿನವರು ಮಾತಾಡುವಾಗ ಕೆಳಗೆ ಎಂಬ ಪದದ ಕೆ ಕೆಡು ಎಂಬ ಪದದ ಕೆ ಸ್ವರಕ್ಕಿಂತ ಅಗಲವಾಗಿದೆ ಎನ್ನ ಬಹುದು.

ಹೀಗೆ ಉದಾಹರಣೆಗಳನ್ನು ಕೊಡುತ್ತ ಹೋದರೆ ಈ ಬರೆಹವು ಅತಿ ದೀರ್ಘವಾಗಬಹುದು. ಒಟ್ಟಾರೆ ಹೇಳುವುದಾದರೆ, ಕನ್ನಡ ಉಚ್ಚಾರಕ್ಕೂ ಅಕ್ಷರಮಾಲೆಗೂ ಸಂಪೂರ್ಣ ಐಕಮತ್ಯವಿಲ್ಲ. ಬರೆದಂತೆ ಓದಿದರೆ ಕನ್ನಡವು ಕನ್ನಡಿಗರ ಕಿವಿಗೆ ಕರ್ಕಶವಾಗುತ್ತದೆ. ಬರೆದ ಕನ್ನಡಕ್ಕೂ ಓದುವ ಕನ್ನಡಕ್ಕೂ ಭೇದವಿದೆಯೆಂಬುದು ನಿರ್ವಿ ವಾದವೆಂದು ಎಲ್ಲರೂ ಒಪ್ಪುವ ಅಗತ್ಯವಿದೆ.

ಒಂದೊಂದು ಶಬ್ದವನ್ನು ಉಚ್ಚರಿಸುವುದರಲ್ಲಿ ಇರುವ ಭೇದ ಕ್ಕಿಂತ ವಾಕ್ಯಗಳನ್ನು ಉಚ್ಚರಿಸುವಾಗ ಬರುವ ಭೇದವು ಹೆಚ್ಚು. ವಾಕ್ಯಗಳನ್ನು ಉಚ್ಚರಿಸುವಾಗ ಆಗುವ ಕಂಠಭಾರದ ಏರುತಗ್ಗು ಗಳಿಂದ ಒಬ್ಬನು ಮಂಗಳೂರಿನವನು, ಕುಂದಾಪುರದವನು, ಕಾರವಾರದ ವನು, ಮೈಸೂರಿನವನು ಎಂದು ಕಂಡು ಹಿಡಿಯಲು ಸಾಧ್ಯವಿದೆ.

ಕನ್ನಡ ಭಾಷೆಯಲ್ಲಿ—ಗ್ರಾಂಥಿಕ ಭಾಷೆಯಲ್ಲಾದರೂ—ಏಕ ರೂಪತೆಯು ಹೆಚ್ಚುತ್ತ ಬಂದಿದೆ, ಆದರೆ ಉಚ್ಚಾರದಲ್ಲಿಯೂ ಏಕ ರೂಪತೆಯನ್ನು ತರಲು ಪ್ರಯತ್ನಗಳು ಆರಂಭವಾಗಲಿಲ್ಲ. ಇನ್ನಾ ದರೂ ಆ ಕೆಲಸವನ್ನು ಆರಂಭಿಸಬೇಕು. ಕನ್ನಡದಲ್ಲಿ ನುರಿತವರು ಒಂದು ಕೂಡಿ ಕನ್ನಡ ಸ್ವರ, ಪದ, ವಾಕ್ಯಗಳು ಬೇರೆ ಬೇರೆ ಕಡೆಗಳಲ್ಲಿ ಹೇಗೆ ಉಚ್ಚರಿಸುಲ್ಪಡುತ್ತವೆ, ಅಂಥ ಭೇದಗಳಲ್ಲಿ ಯಾವುದನ್ನು ಆದರ್ಶವಾಗಿ ತೆಗೆದುಕೊಳ್ಳಬೇಕು ಎಂದು ಮುಂತಾದ ಪ್ರಶ್ನೆಗಳನ್ನು ಚರ್ಚಿಸಿ ಇತ್ಯರ್ಥಿಸುವುದು ಅಗತ್ಯವಲ್ಲವೆ? ಕನ್ನಡದ ಉಚ್ಚಾರ ಭೇದಗಳನ್ನು ಸರಿಯಾಗಿ ಗುರ್ತಿಸುವಂತೆ ಲಿಪಿಯಲ್ಲಿ ಅಗತ್ಯವಿದ್ದ ನ್ಯತ್ಯಾಸಗಳನ್ನು ಮಾಡಬೇಕು. ಅಲಲ್ಲಿ ಉಪಾಧ್ಯಾಯರ ಕೂಟಗ ಳನ್ನು ಕೂಡಿಸಿ ಸರಿಯಾದ ಉಚ್ಚಾರಕ್ಕಿರುವ ಪ್ರಾಮುಖ್ಯತೆಯನ್ನು ವಿವರಿಸಬೇಕು. ಇಂಥ ಪ್ರಯತ್ನಗಳಿಂದ ಕ್ರಮೇಣ ಕನ್ನಡದ ಉಚ್ಚಾರಕ್ಕೆ ಒಂದು ನಿಘಂಟು ಬರುವುದು. ಉಚ್ಚಾರವು ಒಂದೇ ಆಗುವುದು.

ಹಳ್ಳಿಯ ಹಾಡು.

ಕಂಚಿಕ್ಕು ಕಲ್ಲೆಡೆ ಮುಂಚಿಕ್ಕು ಮುಗಿಲೆಡೆ
ವಂಚ ಬಳ್ಳಿಕ್ಕು ಪುರನೆಡೆ ಈ ಶಿಶು
ಹೊಂಚಿಕ್ಕು ತಾಯು ಹೆಗಲೆಡೆ ॥ ೧ ॥

ಗಂಗೆ ಗಿರಿಗೆ ತಂವು ಚಂದ್ರ ಲೋಕಕೆ ತಂವು
ಚಂದನ ತಂವು ನೊಸಲಿಗೆ ಹಿಂಪುಗ
ತಂದೆಗೆ ತಂವು ಬಲು ತಂವು ॥ ೨ ॥

ಮುಳ್ಳಾಟಿಕೆ ಚೆಂದ ಮತ್ತೆ ಯೌವನ ಚೆಂದ
ಮುಸ್ಸಿನಲಿ ಚೆಂದ ನರೆಗಡ್ಡ ಬಾಲಗೆ
ಎತ್ತ ನೋಡಿದರು ನಗೆ ಚಂದ ॥ ೩ ॥

ಎಲ್ಲಿಯಾದರು ಒಂದು ನೆಲ್ಲಿ ಹಣ್ಣಾದಂತೆ
ಇಲ್ಲದರಿಗೊಂದು ಶಿಶು ಹುಟ್ಟಿ ಬೆಳೆದರೆ
ಎಲ್ಲರಿಗೊನ್ಮೆ ಅತಿ ಚೆಂದ ॥ ೪ ॥

ಬಡವಗೆ ಮುಕ್ಕಳು ನಡೆವುದೆ ಅತಿ ಚೆಂದ
ಹರಿದಾಡಿ ಬಂದು ನುಡಿಲಲ್ಲಿ ಕೂಸಾಗ
ಬಡತನದ ಚಿಂತೆ ಅವಗಿಲ್ಲ ॥ ೫ ॥

ತಾಯ್ತನ್ನ ಮುಕ್ಕಳ ಏಗಳು ನೆನವಳು
ಉಂಬಾಗ ಮಡಿಯ ಉಡುವಾಗ ಹಿತ್ತಿಲ
ಹೂವ ಕ್ಕಂಡಲ್ಲಿ ನೆನೆವಳು ॥ ೬ ॥

ಮುಕ್ಕಳ ಪಾತಕ್ಕೆ ಹಕ್ಕಿ ಕಟ್ಟಿತು ಗೂಡ
ಸಿಕ್ಕಿತ್ತು ತಿವನೆ ಬಲೆಯಲ್ಲಿ, ಬಲಿಗಾರ
ಮುಕ್ಕಳ ತಾಯ ಕೊಲಬೇಡ ॥ ೭ ॥

ಹಪ್ಪನಾಳ.

"ನಮ್ಮ ಮನೆ ಅಷ್ಟಮಿ"

ಲೇಖಕಃ ಬಿ. ವೆಂಕಟೇಶ ಭಂಡಾರಿ ಬಿ. ಎ

(ಸಣ್ಣದೊಂದು ಹರಟೆ)

ಅಷ್ಟಮಿ ಎಂಬುದು ನನಗೊಂದು ವಿಚಿತ್ರ ತರದ ಸಮಸ್ಯೆಯಾಗಿ ಕಂಡುಬರುತ್ತಿತ್ತು. ನಮ್ಮ ಮನೆಯ ಶಾಲಾಹುಡುಗರು "ಅಷ್ಟಮಿ-ಗೋಕುಲಾಷ್ಟಮಿ" ಎಂದು ಹೇಳುತ್ತಿದ್ದಾಗ ನನ್ನ ಮೈ ಮುಳ್ಳುಗಳೆಲ್ಲಾ ಎದ್ದು ನಿಲ್ಲುತ್ತಿದ್ದುವು ಕಾರಣ: ನನಗೆ ಉಪನಯನ ಕಟ್ಟಿ ಏಳೆಂಟು ವರ್ಷಗಳಾದರೂ ಅಷ್ಟಮಿ ಆಚರಿಸುವ ಭಾಗ್ಯವು ನನಗೆ ಬರಲಿಲ್ಲ. ನಮ್ಮದು ದೊಡ್ಡ ಕುಟುಂಬ, ಕುಟುಂಬ ದೊಡ್ಡದಾದ ಮೇಲೆ ಜನನ ಮರ ಣದ ಸಂಖ್ಯೆಯೂ ದೊಡ್ಡದು! ಅದೃಷ್ಟದಿಂದಲೋ ದುರಾದೃಷ್ಟದಿಂದಲೋ ಏಳೆಂಟು ವರ್ಷಗಳಿಂದ ಶ್ರಾವಣ ಬಹುಳ ಅಷ್ಟಮಿಗೆ—ಕೃಷ್ಣಾಷ್ಟಮಿಗೆ ನನಗೆ ಸೂತಕ ಬರುತ್ತಿತ್ತು. ಹಬ್ಬ ತಪ್ಪಿದರೂ ಹೋಳಿಗೆ ತಪ್ಪದು ಎಂಬ ಮಾತಿನಂತೆ, ಆಚರಣೆ ತಪ್ಪಿದರೂ ಲಡ್ಡುಗಳ ನೈವೇದ್ಯ ತಪ್ಪಲಿಲ್ಲಾ ಪುರೋಹಿತ ಭಟ್ಟರೇ ಬಂದು ಎಲ್ಲವನ್ನೂ ಮಾಡಿ ನಮ್ಮ ಹೊಟ್ಟೆಗೆ ಲಡ್ಡುಗಳನ್ನೇ ತುಂಬಿಸುತ್ತಿದ್ದರು; ಅನ್ನೇ ಅಲ್ಲದೆ ನನಗೆ ಆಚರಣೆ ಮಾಡಲು ಅದೃಷ್ಟವಿಲ್ಲದಂತೆ ಕಾಲಚಕ್ರವು ತಿರುಗುತ್ತಿತ್ತೋ?

ಈ ವರ್ಷ ನೂಲುಹುಣ್ಣಿಮೆಯಾದ ನಂತರ, ಚಾತಕ ಪಕ್ಷಿಯು ಮಳೆಯ ಹನಿಗಳಾಗಿ ಹಾತೊರೆಯುವಂತೆ, ಅಷ್ಟಮಿಗಾಗಿ ಎದುರು ನೋಡುತ್ತಿದ್ದೆವು— ನಾವು. ಏನು? ಅಷ್ಟಮಿಗೆ ಸೂತಕ ಬರುವುದೋ ಎಂದು! ಮಹಾಪುಣ್ಯ! ಹಿರಿಯರ ಕಿರಿಯರ ಪುಣ್ಯ! ಸೂತಕದ ಸುಳಿವಿಲ್ಲಾ. ಎಷ್ಟು ಆತುರ? ಹೆಂಗುಸರ ಕೂಟದಲ್ಲಿ ನವಚೇತನವು ಬಂದಿತ್ತು ಈ ವರ್ಷ.

ಇಂದು ಆದಿತ್ಯವಾರ—ಅಷ್ಟಮಿ; ಒಟ್ಟು ನಮಗೆ ಹದಿನೈದು, ಹದಿನಾರು ಸಾವಿರ ತುಳಸೀ ದಳಗಳು ಬೇಕು. ಪಟ್ಟಣದಲ್ಲಾದರೆ ಹಣ ಕೊಟ್ಟರೆ ಸಿಕ್ಕುವುದು. ನಮ್ಮಲ್ಲೇನೂ ತುಳಸಿ ಮಾರಲಿಕ್ಕೆ ಬರು ತ್ತಿದ್ದಿಲ್ಲಾ. ಕೂಲಿ ಆಳುಗಳಿಂದ ತುಳಸಿ ತರಿಸಲಿಕ್ಕೆ ಮನಸ್ಸಿಲ್ಲಾ. ಆದುದರಿಂದ ಬೆಳಿಗ್ಗೆ ಎದ್ದು ನಾವು, ಐದಾರು ಜನರು—ಎಲ್ಲರೂ ಹುಡುಗರೇ—ತುಳಸಿ ಒಟ್ಟುಮಾಡಲು ಹೋದೆವು. ನಮ್ಮಲ್ಲಿ ಎರಡು ನೈಲು ದೂರಕ್ಕೆ ತುಂಬಾ ತುಳಸಿ ಇರುವುವೊಂದು ಸ್ಥಳವಿದೆ. ಊರಿನ ಎಲ್ಲಾ ಜನರು ಅಲ್ಲಿಂದ ತಂದರೆ ನಮ್ಮ ಪ್ರಯತ್ನಕ್ಕೆ ಸೊನ್ನೆ ಮಾರ್ಕು ಎಂದು ತಿಳಿದು ಸೂರ್ಯನು ಉದಯಿಸುವ ಮುಂಚೆಯೇ ಒಬ್ಬೊಬ್ಬರು ಒಂದೊಂದು ಬುಟ್ಟಿಯನ್ನು ತೆಗೆದುಕೊಂಡು ಓಡುತ್ತಾ ಬಂದೆವು: ತುಳಸೀ ವನವನ್ನು ಕಂಡೆವು. ಓಡಿಬಂದ ಆಯಾಸವನ್ನು ವಿಶ್ರಮಿಸಿ ಕೊಳ್ಳಲು ಕುಳಿತುಕೊಳ್ಳುವಷ್ಟರಲ್ಲಿ ಇನ್ನಾರೋ ತುಳಸಿ ಕೊಯ್ಯುವುದನ್ನು ಕಂಡೆವು. ಎದೆಯಲ್ಲಿ ಕಳವಳವಾಗಲಿಕ್ಕೆ ಪ್ರಾರಂಭವಾಯಿತು. ನಮಗೆ ಸಾಕಷ್ಟು ತುಳಸಿ ಸಿಕ್ಕದಿದ್ದರೆ ಎಂಟು ವರ್ಷದ ಆಚರಣೆಯನ್ನು ಇಂದು ಹೇಗೆ ಮಾಡಲಿ? ಹೊಳೆಯಿತು! ಅವರೆಲ್ಲರೂ ಬಹಳ ಜಾಗ್ರತೆಯಿಂದ ಕೊಯ್ಯುತ್ತಿದ್ದರೆ, ನಾವು ದೊಡ್ಡ ತುಳಸಿ ಗಿಡ

ಗಳ ಗೆಲ್ಲುಗಳನ್ನು ಮುರಿಯಬೇಕೆಂದೂ, ಸಣ್ಣ ಸಣ್ಣ ಗಿಡಗಳನ್ನು ಬುಡಸಹಿತ ಕೀಳಬೇಕೆಂದೂ, ಆದಷ್ಟು ಬೇಗನೆ ನಮ್ಮ ಕೆಲಸವನ್ನು ಪೂರೈಸಬೇಕೆಂದೂ ನಿರ್ಧಾರವಾಯಿತು. ಒಂದು ಘಳಿಗೆಯೊಳಗೆ ನಮ್ಮ ಬುಟ್ಟಿಗಳು ತುಂಬಿದುವು. ಕತ್ತೆ ಮೇದಲ್ಲಿ ಮತ್ತೆ ಮೇವಿಲ್ಲಾ ಎಂಬ ಮಾತು ನಮ್ಮ ಕೆಲಸದಲ್ಲಿ ಅದರ ಸತ್ಯತೆಯನ್ನು ಹೊಂದಿತೋ?

ಸೂರ್ಯನು ಅಗಲೇ ನಮ್ಮ ಕ್ರೂರಕೃತ್ಯಕ್ಕಾಗಿ ನಮ್ಮನ್ನು ದಂಡಿಸಲೆಂದೋ ಎಲ್ಲಾ ಮೋಡಗಳನ್ನು ಝಾಡಿಸಿ ತನ್ನ ಪ್ರಚಂಡ ಕಿರಣಗಳನ್ನು ನಮ್ಮ ಮೇಲೆಯೇ ಸುರಿಸಲು ಪ್ರಾರಂಭಮಾಡಿದನು. ಬೆಳಗಿನಿಂದ ಏನೂ ಬೀಳದ ಹೊಟ್ಟೆ; ಅದರಲ್ಲೂ ಆ ದಿವಸ ಉಸವಾಸ ನೂಡಬೇಕೆಂಬ ಭೀತಿ. ಅಂತೂ ಹೊಟ್ಟೆಯಲ್ಲಿ ಘಂಟಾನಾದಕ್ಕೆ ಪ್ರಾರಂಭವಾಗಿ ಹೊಟ್ಟೆ ಹೋಗಿ ಬೆನ್ನಿಗೆ ತಗಲಿತು. ಕಾಲು ಹಿಂದೆ ಎಳೆಯಲು ಪ್ರಾರಂಭಿಸಿತು. ಉಸಿರು ಭಯಂಕರವಾಯಿತು ಮುಖವು ಬೆವರಿನಿಂದ ಆವರಿಸಿದೆ. ಬರುವಾಗ ಇದ್ದ ಉಲ್ಲಾಸವು ಮಾಯವಾಯಿತು. ಬಾಯಲ್ಲಿ ಮಾತುಗಳಿಲ್ಲ! ಪಾಪ! ನಮ್ಮ ಕಷ್ಟ ಹೇಳಿ ತೀರದು "ಅಷ್ಟಮಿಯೋ ಕಷ್ಟಮಿಯೋ ಎಂದು ತೋರಿತು."—

ರಾತ್ರಿ ಒಂಭತ್ತು ತಾಸಾಗಿದೆ; ಇಷ್ಟು ದಿನ ಹಾಸಿಗೆಗೆ ಕಿವಿ ಕೊಡುವ ಸಮಯ ಭಟ್ಟರು ಸ್ನಾನಮಾಡಿರುವರು; ನಮ್ಮ ಸ್ನಾನವಾಯಿತು; ಪೂಜೆಗೆ ಪ್ರಾರಂಭವಾಯಿತು. "ಓಂ ಶ್ರೀ ವಿಶ್ವಸ್ಮೈಯ ನಮಃ"ದಿಂದ ಪ್ರಾರಂಭವಾಯಿತು. ಸಹಸ್ರನಾಮಕ್ಕೆ. ಭಟ್ಟರು ಒಂದೆಡೆಯಲ್ಲಿ ಕುಳಿತು ತಮ್ಮ ಕಸುವನ್ನು ಪ್ರದರ್ಶಿಸುವರೊ ಎಂಬಂತೆ ಮಂತ್ರೋಚ್ಚಾರಣೆ ಮಾಡುತ್ತಿದ್ದರು. ಅವರ ಮಂತ್ರೋಚ್ಚಾರಣೆಯ ವೇಗ, ರಭಸ, ಶಬ್ದ, ಕಂಡ ನನಗೆ ಎಲ್ಲಿ "ದರ್ಲೆಳುತ್ರಿ" (ಒಣ ಎಲೆಗಳ ರಾಶಿ)ಗೆ ಬೆಂಕಿಕೊಟ್ಟಿದ್ದಾರೋ, ಗುಡಾಣದಲ್ಲಿ ಎಲ್ಲಿ ನಟಾಕಿ ಹೊಡೆಯುವರೋ ಎಂದು ತೋರಿತು!

ಅವರು ಹೇಳಿದಂತೆ ನಾವು ಹೇಳುತ್ತಿದ್ದೆವು. ನಮ್ಮಲ್ಲಿ ಒಬ್ಬರಿಗೆ "ಖಾನ್ ಬಹದೂರ್" ಎಂಬ ಬಿರುದು ಅನಾಯಾಸವಾಗಿ ಸಿಕ್ಕಿತ್ತು. ಬೇರೆ ಜನರಂತೆ ಹಣದ ವೆಚ್ಚವಿಲ್ಲದೆ, ದೊಡ್ಡ ಮನುಷ್ಯರ, ಪದವೀಧರರ, ಪ್ರತಿಷ್ಠೆಹೊಂದಿದವರ, ಆಫೀಸರರ, ಕಾಲಿಗೆರಗುವ ಹೇಯ ಕೆಲಸದ ಬಲೆಗೆ ಬೀಳದೆ ಸಿಕ್ಕಿದ ಬಿರುದು! ಅವರಿಗೆ ಕಿವಿ ಕೇಳಿಸದೆ ಇದ್ದುದರಿಂದ ನಾವು ಕೊಟ್ಟದ್ದು-ಇಟ್ಟದ್ದು ಅನ್ನಿ! ಅವರು ನಮ್ಮೆಲ್ಲರ ಗುಲ್ಲಿಗೆ-ಮೇಳಕ್ಕೆ (Chorus) ಒಂದು ತೂಕ ಶಬ್ದ ಹೆಚ್ಚು ಮಾಡುತ್ತಿದ್ದರು. ಕೆಲವು ವೇಳೆ, ಮನೋವೇಗ ಪರಿಹಾರಿ ಮಾಡಲೆತ್ನಿಸುವ ಈ ಭಟ್ಟರ-(ಕೃಷ್ಣನು ಯಮುನಾವೇಗ ಸಂಹಾರ ಮಾಡಿದವ) ಮಂತ್ರಗಳು ಹಲವು ಸಾರಿ ನನಗೆ ಕೇಳದೆ ಬೆಪ್ಪನಂತೆ ಪಿಳಿಪಿಳಿ ಕಣ್ಣು ಬಿಡುತ್ತಿದ್ದ. ಹಸಿವಿನಿಂದ ಪ್ರಾಣಹೋಗುತ್ತಿರುವ ನನಗೆ ಇವರ ಒಂದೊಂದು ಮಾರುದ್ದ ಮಂತ್ರ ಹೇಗೆ ರುಚಿಸಬೇಕು?

ಅರ್ಘ್ಯ ಕೊಡಲು ಚಂದ್ರೋದಯವನ್ನು ಕಾಯುತ್ತಾ ಕುಳಿತೆವು. ಯಾರಂತೆ ಎಂದರೆ ಚಕೋರ ಪಕ್ಷಿಯಂತೆಯೇ ಅನ್ನಿ! ಎಷ್ಟು ಕಾದರೂ ಚಂದ್ರನು ತನ್ನ ಮುಖವನ್ನು ತೋರಿಸಲೊಲ್ಲನು. ಹೊಟ್ಟೆ ಹಸಿವು ಹಿಡಿದ ನನಗೆ ಬಂದಿತು ಸಿಟ್ಟು-ಚಂದ್ರನ ಮೇಲೆ! ತನಗಾಗಿ ಇಂದು ಜನರು ಕಾದು ಕುಳಿತಿದ್ದಾರೆ ಎಂಬ ಬಿಂಕದಿಂದ ನಮ್ಮ ಚಂದ್ರರಾಜನು ತಡ ಮಾಡುತ್ತಿರುವನು! ಭೂಲೋಕದಲ್ಲಿ ಜನರು ಮಾಡುವುದನ್ನು ಕಂಡವನಲ್ಲವೇ?

ಚಂದ್ರನು ಉಪಯಿಸಿದನು— ಕಟ್ಟಿಯಿಲ್ಲದ ಕರೆಯಲ್ಲಿ ತಟ್ಟೆ ತೇಲದಂತೆ! ಪೂಜಾ ವಿನಿಯೋಗಗಳು ನಡೆದುವು. ಇನ್ನು ಉಳಿದುದು ಒಂದೇ-? ಹೊಟ್ಟೆಯನ್ನು ಶಾಂತ ಪಡಿಸುವುದು. ಅಷ್ಟಮಿಯಲ್ಲಿದ್ದ ಉಲ್ಲಾಸವು ಮಾಯವಾಗಿತ್ತು ಲಡ್ಡುಗಳನ್ನು ಹಾಗೆಯೇ ಬಾಯಿಯಲ್ಲಿ ತುರುಕಿಕೊಂಡೆ ಮೊದಲೇ ಹೊಟ್ಟೇ ಬಾರ ಎಂದು ಕರೆಯುತ್ತಿದ್ದರು ನನಗೆ - ಈ ಹೆಸರಿನಿಂದ ನನಗೆ ನಾಚಿಕೆಯಾಗುತ್ತಿದ್ದರೂ ನನ್ನ ಹೊಟ್ಟೆಗೆ ನಾಚಿಕೆ ಇರಲಿಲ್ಲಾ. ಆ ಹೊಟ್ಟೆ ಈ ಸಮಯದಲ್ಲಿ ಲಡ್ಡುಗಳನ್ನು ತುಂಬಿಸುವ ಒಂದು ಕರಡಿಗೆಯೂಗಿ ಪರಿಣಮಿಸಿತು.

ಬೆಳಗ್ಗೆ ಎಷ್ಟು ಏಳಲಿಕ್ಕೆ ಪ್ರಯತ್ನ ಮಾಡಿದರೂ ನನ್ನಿಂದ ಸಾಧ್ಯವಾಗಲಿಲ್ಲ. ಹೊಟ್ಟೆಯಲ್ಲಿ ಹಿಡಿಸಲಾರದ ನೋವು! ಅಜೀರ್ಣ!!

ಡಾಕ್ಟರರಿಂದ ಮದ್ದು ತಂದು ಅದರ ಸೇವನೆಯಾಯಿತು

ಮೊದಲಿನ ಸ್ಥಿತಿಗೆ ಒರಬೇಕಾದರೆ ಎರಡು ದಿವಸಗಳು ಹಿಡಿದುವು! ಅಷ್ಟಮಿಯಲ್ಲಿ ನನಗಿದ್ದ ಸಂಪೂರ್ಣ ನಂಬಿಕೆ— ಉಲ್ಲಾಸವು ಮಾಯವಾಯಿನು

ನಂತರ ವ್ಯಾರಂಭವಾಯಿತು ಗೆಳೆಯರ ಪರಿಹಾಸಕ್ಕೆ—

"ಹೇಗೆ ನಿಮ್ಮ ಮನೆ ಅಷ್ಟಮಿ! ಅಷ್ಟಮಿಯೋ? ಕಷ್ಟಮಿಯೋ" ಎಂದರು.

ಇದಕ್ಕೆ ನಾನೇನು ಹೇಳಬೇಕೆಂದು ನನಗೆ ತೋಚಲಿಲ್ಲ.

ಕಿಚ್ಚು ಮೋರೆ ಹಾಕಿಕೊಂಡು "ಹೌದು, ನಮ್ಮ ಮನೆ ಅಷ್ಟಮಿ; ನಮ್ಮ ಮನೆ ಅಷ್ಟಮಿ" ಎಂದೆ

ಬಂಗಭಾನು.

ಬಂಗಭಾನು ಬಾನಿನಿಂದ ಬಿದ್ದನಬ್ಧಿಗೆ
ಕಂಗಳಿಂದ ಗಂಗೆಯಿಳಿದಳಿಂದು ಭೂಮಿಗೆ
ಸೆರೆಯ ಹರಿದು ಪಡೆವ ಸೇರ್ದೆ ಗುಪ್ತವಾಗಿಯೆ
ಸೆರೆಯ ದೊರೆಯ ದರ್ಪವನ್ನು ತಿಕ್ಕಿ ತೀಡಿಯೆ!
ತರಲು ಮಾತೆಗಾಗಿ ಕೀರ್ತಿ ಕಲಶ ಪೋದೆಯೊ
ಇರಲು ಕೀರ್ತಿಲತೆಯು ಬೆಳೆಯದುಗಟೆ? ಸಾರ್ದೆಯೊ!
ದೇಶಭಕ್ತ! ತೋಷ ಪೊಂದುದೆವ್ಮ ನಿನ್ನೊಳು
ಮಾಸದಂಧ ಗಾಯವಾಗಿರುವುದು ಮನದೊಳು
ನಿನ್ನನುಲಿಯು ಕಿವಿಯೊಳಿಂದು ನಲಿಯುತಿರುವುದು
ನಿನ್ನ ಮೊಗದ ಸೊಬಗು ಹೃದಯ ಬೆಳಗುತಿರುವುದು
ನಿನ್ನ ತೇಜ ಧಾರಿಣಿಯಲಿ ಮಾಯವಪ್ಪುದೆ?
ಕಣ್ಣ ತಣಿಪ ತಾರೆಯಾಗಿ ತೊಳಗಿ ಬೆಳಗದೆ?
ಮರಣ ಪಾರತಂತ್ರ್ಯ ಹರಣವೆಂಬ ನೀತಿಯ
ಅರುಹಿ ತೋರಿದ ದೇಶಬಂಧು ನಿನಗೆ ಜಯ ಜಯ!

ರಾಳ್ಳವ್ಯ, ಮಿತ್ರಮಂಡಲಿ, ಮಂಗಳೂರು.

ಶ್ರೀ. ತಾತಾಚಾರ್ಯ ಶರ್ಮ.

(ಲೇಖಕರು:—ಶ್ರೀ. ಕೊ. ಶಿ. ಕಾರಂತರು.)

ಕನ್ನಡ ಪತ್ರಿಕಾ ಪ್ರಪಂಚದಲ್ಲಿ ಶ್ರೀ ಶರ್ಮರ ಹೆಸರನ್ನು ಕೇಳದವರಿಲ್ಲ. ಅವರು ಬೆಂಗಳೂರಿನ 'ವಿಶ್ವಕರ್ಣಾಟಕ'' ಪತ್ರಿಕೆಯ ಕರ್ತರು. ವೃತ್ತ ಪತ್ರಿಕೆಗಳ ಸ್ವಾತಂತ್ರ್ಯಕ್ಕೆ ಬಹಳ ಕಠಾಪೋಪ ನಡೆಯಿಸುತ್ತಿರುವವರು. ಅವರು ತಮ್ಮ ಪತ್ರಿಕೆಯಲ್ಲಿ ಉಗ್ರ ಲೇಖನವನ್ನು ಈ 'ಕರಾಳ ಶಾಸನವು ನಿಲ್ಲುವ ತನಕ ಬರೆಯುವುದಿಲ್ಲ'. ಆದರೆ ಅವರ ಸಂಪಾದಕೀಯ ವಿಚಾರಗಳು—ಮುಗ್ಗಲು ಕಾಲಮಿನಲ್ಲಿ ಬರುವುದಕ್ಕೆ ತೊಡಕಿಲ್ಲ. ಶ್ರೀ. ಶರ್ಮರ ಪರಿಚಯ ಇರುವವರು—ಅವರ ಪತ್ರಿಕೆಯಿಂದ ಪೂರ್ಣ ತೃಪ್ತರಾಗರು. ಕಾರಣ – ಪತ್ರಿಕೆಯ ವಿಷಯಗಳು ವಿಶ್ವಕ್ಕೆ ಹರಡಿವೆ. ಇಡೀ ವಿಶ್ವವನ್ನು ಕಂಡರೆ ನಾವು ಹೇಗೆ ದಿಗಿಲು ಹಾರುವೆವೋ ಹಾಗೆ ಅವರ ಪತ್ರಿಕೆಯನ್ನು ಕಂಡರೆ ನಮಗೆ ದಿಗಿಲು ಹಾರುವುದು. ಪತ್ರಿಕೆಯು ಎಲ್ಲಿ ತೊಡಗುವುದು, ಎಲ್ಲಿ ಮುಗಿಯುವುದೆಂದು ತಿಳಿಯುವುದು ಕಷ್ಟ. ಅವರದು ರಾಜಕೀಯ ಪ್ರಪಂಚ. ಬೋರೆ ಗೌಡನ ವಕಾಲ ತನ್ನು ಅವರು ಮುಫತ್ತಾಗಿ ಮಾಡುವವರು. ಆದರೆ ಅವರ ಗನು ನವು ಬೋರೆ ಗೌಡನ ಹೆಸರಲ್ಲಿ ಸರಕಾರವನ್ನು ಬೈಯುವುದರ ಧೋರಣೆಯೇ ಅಧಿಕ. 'ಪಾರ್ಲಿಮೆಂಟರಿ—ಒಪೊಸಿಶನ್' ಇದ್ದಂತೆ ಅವರ ಧೋರಣೆ. ಸರಕಾರದವರು ಏನು ಮಾಡಿದರೂ, ಅವರ ಟೀಕೆ ಇದೆ. ಅವರ ಪತ್ರಿಕೆಯಿಂದ ಮೈಸೂರು ಸರಕಾರವನ್ನು ಅವರು ಹಡುಗಿಸಿದ್ದಾರೆನ್ನುತ್ತಾರೆ. ಆದರೆ ಒಕ್ಕಣೆ ಬರೆಯುವಾಗ ಅವರೂ ತುಸು ನಡುಗುತ್ತಾರೆ. ಪತ್ರಕರ್ತರಲ್ಲಿ ಅವರು ಮಲೆನಾಡಿನ ಹುಲಿ ಎನ್ನಬಹುದು. ಹೊಡೆದರೆ ಹೊಡೆಯುತ್ತ ಹೋದಾರು. ತಿನ್ನುವ ಪನಕ್ಕಿಂತ ಕೊಲ್ಲುವ ದನಗಳು, ಹೆಚ್ಚಾಗಲೂ ಬಹುದು.

ಹುಲಿಯೆನ್ನುವಾಗ ಇನ್ನೊಂದು ನಗುವಿನ ಮಾತು. ಶರ್ಮರು ಹಾಗೆಯೇ ಕಾಣುತ್ತಾರೆ. ಅವರು ವೇದಿಕೆಯ ಮೇಲೆ ನಿಂತರೆ, ಲೇಖನಿಗಿಂತ ಹತ್ತು ಪಾಲು ಹರಿತವಾಗಿ ಅವರ ನಾಲಿಗೆ ತಿರುಗುವುದು. ಹೊಸದಾಗಿ ಹಿಡಿದು ತಂದ ಹುಲಿಯು ಪಂಜರದಲ್ಲಿ ಚಲಿಸುವಂತೆ, ಚಲಿಸುತ್ತಾ ಮೂಗನ್ನು ಮೊನಚಾಗಿ ಮಾಡಿ, ಹುಬ್ಬುಗಳನ್ನು ಕೂಡಿಸಿ ಕಣ್ಣನ್ನು ಕೆರಳಿಸಿದರೆ—ಎದುರು ಕುಳಿತವರ ಪಾಲಿಗೆ ನರಸಿಂಹ—ಮೂರ್ತಿ. ಮಾತಿನಸರಣಿ, ಭಾಷೆಯ ಠೀವಿ, ಏಟಿನ ಬಿಗು—ಅಷ್ಟು ಜೋರಾದುವು. ಅವರ ಮಾತಿನ ಬಡಿತವೆಂದರೆ ನಾಗನ ಕಡಿತ! ಅವರ ಮತವನ್ನು ನೀವು ಒಪ್ಪದಿದ್ದರೂ, ತಮ್ಮ ವಾಕ್ಚಾತುರಿಯಿಂದ, ನಿಮ್ಮನ್ನು ಮರುಳು ಮಾಡುವ ಸಾಹಸ ಅವರ ನಾಲಿಗೆಗಿದೆ. ಇಲ್ಲಿ ನೋಟುವುದೆಂದರೆ ಅವರ ಲೇಖನಿ.

ನಡು ವಯಸ್ಸು ಅವರದು. ಮೊದಲು ಸರಕಾರಿ ನೌಕರರಾಗಿದ್ದರು. ಆರ್ಕಿಯಾಲಾಜಿಕಲ್ ಖಾತೆಯಲ್ಲಿ ಕೆಲಸ ಮಾಡುತ್ತಿದ್ದರು. ಕೆಲವು ಕಾಲದಿಂದ ಪತ್ರಿಕಾ ರಂಗಕ್ಕೆ ಇಳಿದಿದ್ದಾರೆ. ಅವರ ಅಭಿರುಚಿಯು ಪತ್ರಿಕಾ ವಿಷಯ ಒಂದೇ ಅಲ್ಲ. ಸಾಹಿತ್ಯ, ಸಂಗೀತ ರಾಜ ನೀತಿ . . . ಇತ್ಯಾದಿ ವಿಷಯಗಳಲ್ಲಿ ಅವರು ತಮ್ಮ ಅಮೋಘವಾದ ತೀರ್ಮಾನವನ್ನು ಕೊಡ ಬಲ್ಲರು. ಕೊಡಬಹುದಾದ ಯೋಗ್ಯತೆಯಿದೆ. ಆದರೆ . . . ಕೊಡುವುದು ಕಡಿಮೆ. ಅವರು ಯಾವ ವಿಷಯವನ್ನು ನೋಡುವಾಗಲೂ ಯಾರನ್ನು ತೂಗುವಾಗಲೂ ನಮ್ಮ ನಿಮ್ಮಂತೆ ನೆಲದ ಮೇಲಿದ್ದು ನೋಡುವುದಿಲ್ಲ. ಆಕಾಶ ಗಾಮಿಗಳಾಗಿ, ದೇವತಗಳಂತೆ ನೋಡುವರು. ಮೊದಲಿನ ಕಾರ್ಯ ಅದು. ಅನಂತರ ಅವರ ವಿಮರ್ಶೆ. ಈ ವಿಮರ್ಶಾ ಕ್ರಮದಲ್ಲಿ ಉಳಿದವರು ಮಾನವ ಕೀಟಗಳೆಂದು ಮರೆಯುವಾರದು. ಸಾಹಿತ್ಯ ರಂಗದ ಶರ್ಮರ ವಾಣಿಯು—ಅಶರೀರವಾಣಿ. ಮಂಗಳೂರಿನಲ್ಲಿ ಕಳೆದ ವರ್ಷ ಮಿತ್ರ ಮಂಡಳಿಯಲ್ಲಿ ಅವರು ಮಾಡಿದ ಭಾಷಣವು ಯಾರೂ ಮರೆಯುವಂಥದಲ್ಲ. ಅಧುನಿಕ ಕವಿಗಳನ್ನು ಚೆಂಡಾಡಿ—ಸಭಿಕರಲ್ಲಿ ತಮ್ಮ ಟೀಕಾ ತಾಂಡವವನ್ನೇ ತೋರಿಸಿದರು. ಶಿವನಿಗೆ ಪ್ರಪಂಚವಿರುವುದು ಸ್ಮಶಾನ ತಾಂಡವಕ್ಕೆಂದು ತೋರಿಸಿದರು.

ಸಂಗೀತ ಮೊದಲಾದ ಲಲಿತ ಕಲೆಗಳಲ್ಲಿ ಅವರು ನಿಜವಾದ ಅಭಿರುಚಿಯುಳ್ಳವರು. ಆದರೆ ಅವರ ದೃಷ್ಟಿಯು ಅವರ ಕನ್ನಡಕದ ಹರಳುಗಳಿಗಿಂತ ವಿಶಾಲವಾಗಿ ಹರಿಯುವುದಿಲ್ಲ. ಸಂಗೀತದ ವಿಷಯದಲ್ಲಿ ಅವರದು ಪೂರ್ವದ ನಿರ್ಧಾರವಿದೆ. ಇವನೆಷ್ಟು ಹಾಡಿಯಾನೆಂದು, ಹಾಡುವ ಮೊದಲೇ ಅವರು ಹೇಳಲೂ ಬಹುದು. ಸೀಸರನಂತೆ ಅವರ ಧೋರಣೆ, 'ಸೀಸರ್ಸ್'ನಂತೆ ಅವರ ನಾಲಿಗೆ.

ನಿತ್ಯ ಜೀವನದಲ್ಲಿ, ಅವರನ್ನು ಗೆಳೆಯರು ಮರೆಯುವಂತಿಲ್ಲ. ಗೆಳೆಯ ಕೂಟದಲ್ಲಿ ಅವರು ಉಲ್ಲಾಸಿಗಳು; ಹಾಸ್ಯಪ್ರಿಯರು. ತಮ್ಮನ್ನು ಗಗನಕ್ಕೇರಿಸುವವರನ್ನು, ಬೆಟ್ಟಕ್ಕಾದರೂ ಏರಿಸುವರು. ಅವರ ಗೆಳೆತನದಲ್ಲಿ ಸಮಯ ಕಳೆಯಲು ಬೇಸರವಿಲ್ಲ. ಅವರು ಬಂದು ನಿಂತರೆ ಅವರನ್ನು ಗಮನಿಸದಿರುವಂತಿಲ್ಲ. ಉಳಿದವರು ಅವರ ಸಾನ್ನಿಧ್ಯವನ್ನು ತಿಳಿಯುವರು. ಅವರ ಕರುಣೆ ಗಳಿಸಿದವರಿಗೆ ಬಾಳಲು ಆಶೀರ್ವಾದವಿದೆ. ಕೋಪ ಪಾತ್ರಾರಾದವರು ಪತ್ರಕರ್ತರಾದರೆನೇ ಉಳಿಗಾಲ.

ಕನ್ನಡ ಪತ್ರಿಕಾ ಪ್ರಪಂಚದಲ್ಲಿ—ಅವರ ವಿಶ್ವಕರ್ಣಾಟಕವು ಸ್ಥಿರವಾದ ನೆಲೆಗಟ್ಟಿನ ಮೇಲೆ ನಿಂತಿದೆ. ಸುಲ್ತಾನ ಪೇಟೆಯ ಗಣಪತಿಯ ಪರವಾಗಿ ಅವರು ಬಹಳ ಶಂಖ ಊದಿದ್ದಾರೆ. ಆಗಲೇ ಅವರ "ನೇಪಥಿನ" ರೀವಿ ಕರ್ಣಾಟಕಕ್ಕೆ ಪರಿಚಯವಾದುದು, ಪತ್ರಕರ್ತರು ಪಡಬೇಕಾದ ಶ್ರಮವನ್ನು ನಡುತ್ತಾರೆ. ಸ್ಥಳಿಕ ವಿಷಯಗಳನ್ನು ಕೂಲಂಕುಶವಾಗಿ ತಿಳಿಯುವ ಆತುರವು ಅವರಿಗಿದೆ. ಸಾಧಾರಣವಾಗಿ ವಾದಿಸಲು ಯಶ್ನಿಸುವವರು. ಬರೇ ಇಸಿಜೆಯರಿನ 'ಸಂವಾದನೆ' ಯಲ್ಲ. ಆದರೂ ಅವರದೊಂದು ಕನ್ನಡಕ ಜಗತ್ತಿಗೂ ಅವರಿಗೂ ನಡುವೆ ಅಡ್ಡ ಬರುವುದು. ಅದರ ಹರಳುಗಳೇ! ಬಲು ದಪ್ಪ ಬದಿಯಲ್ಲ, ನಡುವೆ ಬಲು ತೆಳ್ಳಗೆಂದು–ನೋಡಿದ ನೆನವು. ಕೆಲವು ಬಾರಿ ಬಣ್ಣದ ಕಾಜನ್ನು ಹಾಕುತ್ತಾರೆಂದು, ಮಸುಕು ಮಸುಕಾದ ನೆನವು. ಈ ಕನ್ನಡಕದ ಜತೆಗಳಿಲ್ಲದಿದ್ದರೆ, ಅದೂ ಬರೇ ಮೂಗಿನ ಮೇಲೆ ಕುಳಿತಿರುವ ಕನ್ನಡಕವು, ನನ್ನು ಅವರ ನಡುವೆ ಇಲ್ಲದಿದ್ದರೆ, ಅವರಿಂದ ನಮ್ಮ ನಾಡಿಗೆ ಇನ್ನಷ್ಟು ಉಪಕಾರವಾಗುತ್ತಿತ್ತು.

ಪತ್ರಕರ್ತರಲ್ಲಿ ಅವರು ತುಸು ಧೈರ್ಯಶಾಲಿಗಳು. ಸಾಹಿತ್ಯ ಪರಿಚಿತಿಯಿರುವುದರಿಂದ ಎಷ್ಟೋ ವಾರಿಭಾಷಿಕ ಶಬ್ದಗಳನ್ನು ಅವರು ನಮಗೆ ಕನ್ನಡಿಸಿ ಕೊಟ್ಟಿದ್ದಾರೆ. ಆದರೆ ವಾರಿಭಾಷಿಕ ಭಾವಗಳನ್ನು ಕನ್ನಡಿಸಿದವರ ರುಂಡವನ್ನು ಚೆಂಡಾಡಿದ್ದಾರೆ ವಾದವಿವಾದಗಳಲ್ಲಿ ಅವರನ್ನು ಉತ್ತರಿಸುವ ಧೈರ್ಯವಾಗದವರಿರಬಹುದು, 'ಉತ್ತರಿಸುವುದೇನೆಂದರೆ' ಕುಳಿತವರೂ ಇರಬಹುದು—ಆದರೆ ಮರೆತವರು ಇಲ್ಲವೆಂದು ನನ್ನ ಅಂಬೋಣ ಆಧುನಿಕ ಕನ್ನಡದಲ್ಲಿ 'ಗೀತೆ ಬರೆದವರನ್ನು 'ಗೋತಾ' ಹೊಡೆಸಿದರು ಸರಳ ರಗಳೆ ಬರೆದವರನ್ನು ತರಳರೆಂದು ತಿಳಿದರು ಆಸ್ಥಾನ ಕವಿಗಳು—ಸ್ವಸ್ಥಾನದಲ್ಲಿರ ಲೆಂದರು.

ಶ್ರೀ. ಶರ್ಮರಿಂದ ಕರ್ಣಾಟಕವು ತುಂಬಾ ಲಾಭ ಗಳಿಸಿದೆ. ಅವರು ದಕ್ಷಿಣ ಕನ್ನಡದ ಶಾಸನಗಳನ್ನು ತುಂಬಾ ಮಾತನಾಡಿಸಿದ್ದಾರೆ. ಆದರೆ ಮನುಷ್ಯರನ್ನು ಮಾತನಾಡಿಸಲೆತ್ನಿಸಿಯೇ ಮುನಿದರು.

—

ಸಾಹಿತ್ಯ ವಾರ್ತಾ ತರಂಗ.

ಮದ್ರಾಸು ನಗರದ ಕರ್ನಾಟಕ ಮಿತ್ರಮಂಡಲಿಯ ಆಶ್ರಯದಲ್ಲಿ ೧೯–೮–೩೬ನೇ ದಿನ ಶ್ರೀ. ದಾಸರಾಯರು ಪುರಂದರ ದಾಸರ ಪದಗಳನ್ನು ಹಾಡಿ ಸಭಿಕರಿಗೆ ಶ್ರವಣಾನಂದವನ್ನುಂಟುಮಾಡಿದರು.

ಬಳ್ಳಾರಿ ಜಿಲ್ಲಾ ರಾಯದುರ್ಗದ ವಿದ್ವಾನ್ ಶ್ರೀ ಕೆ ಎಂ. ಕರಿಬಸವ ಶಾಸ್ತ್ರಿಗಳು "ಆಂಧ್ರ ಕರ್ನಾಟಕ ಗ್ರಂಥಮಾಲ" ಎಂಬ ಮಾಸಪತ್ರಿಕೆಯೊಂದನ್ನು ಹೊರಡಿಸಿರುತ್ತಾರೆ.

ಮಂಗಳೂರು "ಯಕ್ಷಗಾನ ಮಂಡಲಿ"ಯವರು ಮದ್ರಾಸಿಗೆ ಹೋಗಿ ಕೆಲವು ಪ್ರದರ್ಶಗಳನ್ನು ಕೊಡುವುದಾಗಿ ವರ್ತಮಾನ.

—

ಒಂದುಚಿತ್ರ.

ಬಿಳಿ.

ಹಕ್ಕಿಗಳು ಹಾರುತಲಿ
ಅಕ್ಕರದಿ ಹಾಡುತಲಿ
ಸಿಕ್ಕ ಕಡೆ ಹೋಗುತಿವೆ ಅವುಗಳೆಲ್ಲ,
ಸಿಕ್ಕಿದುದ ಸವಿಯುತಿವೆ ಹುಡುಕುತೆಲ್ಲ ॥

ಬೇಕಾದುದನು ಸವಿದು
ಬೇಕಾದ ಕಡೆ ಸರಿದು
ವಾಡುವುವು ಒಂದಾಗಿ ದೇವನನ್ನು;
ಹಾಡುತಲಿ ನೆನೆಯುವುವು ದೇಶವನ್ನು ॥

ಕಪ್ಪು.

ಮಿರುಗಿದಕೆ ಮರುಳಾಗಿ
ಸರಿದಲ್ಲಿ ಸೆರೆಯಾಗಿ
ಮರುಗುವುವು ತಾವಿಂದು ಬಹಳ ನೊಂದು.
ನೊರೆಯುವುವು ದೇವನೊಡೆ "ಕಾವು" ಎಂದು ॥

ಬಲವಿಲ್ಲ! ಬದುಕಿಲ್ಲ!
ಗೆಲುವಿಲ್ಲ! ಸುಖವಿಲ್ಲ!
ಬಂಧನದ ಪಂಜರದಿ ಸಿಕ್ಕಿ ಹೋಯ್ತು
ಹಿಂದಿನಾ ಕಾಲವನು ನೆನೆಯಲಾಯ್ತು ॥

(ಇದು ಬಿಳಿ ಮತ್ತು ಕಪ್ಪಿನ ಜನಾಂಗದವರಿಗೆ ಅನ್ವಯಿಸುವುದು)

ಕಂದಕ ಈಶ್ವರ, ಮಂಗಳೂರು.

ಕಳೆದು ಹೋದ ಮಗಳು.

ಗ್ರೀಕರ ಪುರಾಣ ಕಥೆ.

ಪ್ರಾಚೀನ ಕಾಲದ ಗ್ರೀಕರು ಅನೇಕ ದೇವತೆಗಳನ್ನು ಪೂಜಿಸುತ್ತಿದ್ದರು. ಪ್ರತಿಯೊಂದು ಪ್ರಾಕೃತಿಕ ಸ್ವಭಾವಕ್ಕೆ ಒಬ್ಬ ಅಧಿದೇವತೆಯು ಇರುವುದೆಂದು ಅವರ ಭಾವನೆ. ಪೈರುಪಚ್ಚೆಗಳಿಗೆ ಡೆಮಿಟರಳೇ ಅಧಿದೇವತೆ. ಇವಳು ಬೀಜವನ್ನು ಬಿತ್ತುವಾಗ ಪೈರುಗಳನ್ನು ಕೊಯ್ಯುವಾಗಲೂ ಜನರಿಗೆ ಸಹಾಯ ಮಾಡುತ್ತಿರುವಳೆಂದು ಎಲ್ಲರೂ ಅವಳನ್ನು ಉತ್ಸಾಹದಿಂದ ಆರಾಧಿಸುತ್ತಿದ್ದರು. ಡೆಮಿಟರಳು ಆನಂದದಿಂದಲೂ ಸೌಖ್ಯದಲ್ಲಿಯೂ ಇದ್ದಳು; ಅವಳು ಬೇರೆ ಬೇರೆ ಪ್ರದೇಶಗಳಿಗೆ ಪ್ರಯಾಣ ಮಾಡಿ ಜನರ ಕಷ್ಟಗಳನ್ನು ನಿವಾರಿಸಲು ಪ್ರಯತ್ನ ಮಾಡುವಳು ಈ ದೇವತೆಗೆ ಪರ್ಸಫೋನೆ ಎಂಬ ಒಬ್ಬ ಚೆಲುವಾದ ಮಗಳಿದ್ದಳು. ತಾಯಿಯು ಹೊರ ಹೋದಾಗ ಪರ್ಸಫೋನೆಯು ಕೆಲವು ಸಂಗಾತಿಗಳೊಡನೆ ಮೈದಾನುಗಳಿಗೆ ಆಡಲು ಹೋಗುವಳು ಕುಣಿದಾಡಿಯೂ ಪದ್ಯಗಳನ್ನು ಹಾಡಿಯೂ ಅವರೆಲ್ಲರೂ ಸಮಯವನ್ನು ಸಂತೋಷದಿಂದ ಕಳೆಯುತ್ತಿದ್ದರು.

ಇವರ ಈ ತರದ ಸಂತೋಷವು ಬಹಳ ಕಾಲವುಳಿಯಲಿಲ್ಲ. ಒಮ್ಮೆ ತಾಯಿಯು ಹೊರಗೆ ಹೋದಾಗ, ಪರ್ಸಫೋನೆಯು ಎಂದಿನಂತೆ ಆಡಲು ಹೊರಗೆ ಹೋಗಿದ್ದಳು. ಅಲ್ಲಿ ಹೂವುಗಳನ್ನು ಒಟ್ಟು ಮಾಡುತ್ತಾ ಸಮಯವನ್ನು ಕಳೆಯುತ್ತಿದ್ದಳು ಅಕಸ್ಮತ್ತಾಗಿ ಪಾತಾಳ ಲೋಕದ ಅರಸನಾದ ಪ್ಲೂಟೊ ದೇವನು ಅವರನ್ನು ನೋಡಿದನು. ಪಾತಾಳ ಲೋಕವು ಕಗ್ಗತ್ತಲೆಯಿಂದ ಕವಿದ ಸ್ಥಳ, ಸತ್ತ ಜನರ ಆತ್ಮವು ಆ ಲೋಕಕ್ಕೆ ಹೋಗುವುದೆಂದು ಗ್ರೀಕರ ಭಾವನೆ

ಪ್ಲೂಟೊ ದೇವನು ಈ ಹುಡುಗಿಯ ಆಟವನ್ನೂ ಹಸನ್ಮುಖವನ್ನೂ ನೋಡಿ ಬೆರಗಾದನು ಅವಳನ್ನು ತನ್ನ ಲೋಕಕ್ಕೆ ಕರೆದೊಯ್ದು ತನ್ನ ರಾಣಿಯನ್ನಾಗಿ ಮಾಡಿಕೊಳ್ಳಬೇಕೆಂದು ಅವನು ಇಚ್ಛೆ ಪಟ್ಟನು. ಡೆಮಿಟರಳೊಡನೆ ಅವಳನ್ನು ತನಗೆ ಕೊಡಬೇಕೆಂದು ಕೇಳಿಕೊಂಡರೆ ಅವಳು ಒಪ್ಪಲಾರಳೆಂದು ಅವನು ತಿಳಿದಿದ್ದನು. ಆದುದರಿಂದ ಯಾರಿಗೂ ತಿಳಿಯದಂತೆ ಅವಳನ್ನು ಕದ್ದೊಯ್ಯಬೇಕೆಂದು ಅವನು ಬಗೆದನು. ಭೂಮಿಯನ್ನು ಸೀಳಿ ತನ್ನ ರಥವನ್ನೇರಿ ಅವನು ಅಲ್ಲಿಗೆ ಬಂದನು; ಅವನ ರಥವನ್ನು ಕಪ್ಪು ಕುದುರೆಗಳು ಎಳೆಯುತ್ತಿದ್ದುವು; ಕ್ಷಣದೊಳಗೆ ಪರ್ಸಫೋನೆಯನ್ನು ಹಿಡಿದು ರಥದ ಮೇಲಿರಿಸಿ ಪ್ಲೂಟ ದೇವನು ತನ್ನ ಲೋಕಕ್ಕೆ ಮಾಯವಾಗಿ ಬಿಟ್ಟನು! ಇತರ ಸಂಗಾತಿಗಳಿಗೆ ಇದಾವುದೂ ತಿಳಿಯಲಿಲ್ಲ. ಹುಡುಗಿಯು ಮಾಯವಾದಳು ಎಂದು ಅವರು ಗಾಬರಿಗೊಂಡರು ಏನು ಮಾಡುವುದೆಂದು ಅವರಿಗೆ ತೋಚಲಿಲ್ಲ. ಖಿನ್ನಮನಸ್ಕರಾಗಿ ತಮ್ಮ ಮನೆಗಳಿಗೆ ತೆರಳಿದರು.

ಡೆಮಿಟರಳು ಬಂದೊಡನೆ ಅವಳಿಗೆ ನಡೆದ ಸಂಗತಿಯನ್ನು ಅವರು ತಿಳಿಸಿದರು. ಹುಡುಗಿಯು ಎಲ್ಲಿಗೆ ಹೋಗಿರುವಳು ಎಂದು ಮಾತ್ರ ಅವರು ಅರಿತಿರಲಿಲ್ಲ. ತನ್ನ ಬಾಲಕಿಯು ಮಾಯವಾದುದನ್ನು ತಿಳಿದೊಡನೆ ಡೆಮಿಟರಳಿಗೆ ಅತಿರೇಕ ದುಃಖವಾಯಿತು; ಅವಳು ಬಿಕ್ಕಿ ಬಿಕ್ಕಿ ಅತ್ತಳು; ತನ್ನ ಒಬ್ಬಳೇ ಮಗಳು ಹೋದಳಲ್ಲಾ ಎಂದು ಗಾಬರಿಗೊಂಡಳು. ಸಮಯವನ್ನು ಕಳೆಯದೆ, ಮನೆಯನ್ನು ತೊರೆದು ತನ್ನ ಮಗಳನ್ನು ಹುಡುಕಲು ಹೊರಟಳು. ಪಟ್ಟಣಗಳನ್ನು ಸಂದರ್ಶಿಸಿದಳು; ಹಳ್ಳಿಗಳಿಗೆ ಹೋದಳು; ಒಬ್ಬಂಟಿಕಳಾಗಿಯೇ ಗುಡ್ಡಗಳನ್ನು ಹತ್ತಿದಳು; ಕಾಡುಗಳಲ್ಲಿ ಅಲೆದಳು; ನದಿಗಳನ್ನು ದಾಟಿದಳು ಆದರೆ ಅದೆಲ್ಲವೂ ನಿಶ್ಫಲವಾಯಿತು. ಬೆಳಿಗಿನಿಂದ ಸಾಯಂಕಾಲದ ವರೆಗೆ ಹುಡುಕುವುದೇ ಅವಳ ಕೆಲಸ ಕೆಲವು ಸಲ ರಾತ್ರಿಯಲ್ಲಿಯೂ ದೀವಟಿಗೆಯನ್ನು ಹಿಡಿದು ಕೊಂಡೇ ಅಲೆಯುತ್ತಿದ್ದಳು ಸಿಕ್ಕಿದವರೊಡನೆ ಎಲ್ಲಾ ತನ್ನ ಮಗಳ ವಿಷಯ ಕೇಳುವುದಕ್ಕೆ ಹೇಸುತ್ತಿರಲಿಲ್ಲ.

ಈ ರೀತಿಯಲ್ಲಿ ಆಹಾರ ನಿದ್ರೆಗಳನ್ನು ಅಲಕ್ಷಿಸಿ, ಪರ್ಸಫೋನೆಯನ್ನು ಹುಡುಕುತ್ತಲೇ ಇದ್ದಳು ಸುಖಗಳನ್ನು ತೊರೆದ ಆ ದೇವತೆಯು ದುಃಖದಿಂದ ಕೃಶಳಾಗುತ್ತಾ ಬಂದಳು ಒಂದು ಸಲ ಅವಳಿಗೆ ಒಂದು ಆಲೋಚನೆಯು ಹೊಳೆಯಿತು.

"ನಾನು ಸೂರ್ಯನ ಹತ್ತಿರ ಕೇಳುವೆನು ಅತನು ಆಕಾಶವೆಲ್ಲ ತಿರುಗುವನು, ಭೂಲೋಕವೆಲ್ಲ ನೋಡಿರುತ್ತಾನೆ" ಎಂದು ಅವಳು ನೆನಸಿ-ಅನಸೊಡನೆ ವಿಚಾರಿಸಿದಳು.

"ನಿನ್ನ ಮಗಳು ಪಾತಾಳ ಲೋಕದಲ್ಲಿರುತ್ತಾಳೆ ಪ್ಲೂಟೊ ದೇವನು ಅವಳನ್ನು ಒಯ್ದಿರುವನು" ಎಂದು ಸೂರ್ಯನೆಂದನು

"ಅಯ್ಯೋ! ಅಯ್ಯೋ ನನ್ನ ಮಗಳ ಅವಸ್ಥೆಯೇ, ಅವಳು ಕತ್ತಿರುವಳೇ? ಅವಳಿಗೆ ಕಷ್ಟ ಬಂದೊದಗಿದೆಯೆ?"

"ಅದನ್ನು ನಾನು ಹೇಳಲಾರೆನು ನನ್ನ ಕಿರಣಗಳು ಪಾತಾಳ ಲೋಕಕ್ಕೆ ಹೋಗಲಾರವು ಅವಳನ್ನು ಭೂಲೋಕಕ್ಕೆ ಬರಲಾರಳು ಎಂದು ದೇವತೆಗಳು ಮಾತಾಡುತ್ತಿರುವುದನ್ನು ಕೇಳಿರುವೆನು." ಎಂದು ಸೂರ್ಯನು ಹೇಳಿದನು

ಡೆಮಿಟರಳ ಗಾಬರಿಯು ಇನ್ನಷ್ಟು ಹೆಚ್ಚಿತು ಒಮ್ಮೆ ಮೂರ್ಛಿತಳಾಗಿ ಬಿದ್ದು ಬಿಟ್ಟಳು. "ಅಯ್ಯೋ! ನಾನೇನು ಮಾಡಲಿ? ನನ್ನ ಮಗಳನ್ನು ಬಿಟ್ಟು ನಾನು ಬದುಕಲಾರೆನು. ಪಾತಾಳ ಲೋಕಕ್ಕಾದರೂ ನಾನು ಹೋಗಿ ನನ್ನ ಮಗಳನ್ನು ಕರಕೊಂಡು ಬರುವೆನು ಇಲ್ಲದಿದ್ದರೆ ನಾನು ಅಲ್ಲಿ ಮಗಳೊಡನೆಯೇ ಇರುವೆನು."

"ಅದಾಗದು. ಪಾತಾಳಲೋಕಕ್ಕೆ ನೀನು ಹೇಗೆ ಹೋಗುವಿ? ಅಲ್ಲಿಗೆ ಹೋಗಬೇಕಾದರೆ ಅಗಲವಾದ ನದಿಗಳನ್ನು ದಾಟಬೇಕು. ಅಲ್ಲದೆ ಮುಖದ್ವಾರದ ಎದುರಿನಲ್ಲಿ ಅನೇಕ ಶಿರಸ್ಸುಗಳಿರುವ ರಾಕ್ಷಸ

ನೊಬ್ಬನಿರುವನು. ಅತನು ಯಾರಿಗೂ ಹೋಗಗೊಡುವುದಿಲ್ಲ. ಅವನನ್ನು ನೀನು ಹೇಗೆ ತಪ್ಪಿಸಿಕೊಳ್ಳುತ್ತಿ?''

''ಹಾಗಾದರೆ ನನ್ನ ಮಗಳು ಹೋದಳೆ. ಅವಳ ಮೇಲೆ ನನ್ನ ಆಶೆಯು ಮುಗಿಯಿತೆ?'' ಎನ್ನುತ್ತಾ ಹುಚ್ಚಳಂತೆ ಮಾತಾಡ ತೊಡಗಿದಳು. ಅಲ್ಲಿಂದ ಮನೆಗೆ ನಡೆದು ದುಃಖದಲ್ಲಿಯೇ ಅವಿತು ಕೊಂಡಳು.

ಡೆಮಿಟರಳು ವ್ಯವಸಾಯದ ದೇವತೆಯಲ್ಲವೆ? ಅವಳ ದುಃಖದ ಪರಿಣಾಮವೇನಾಯಿತು ಬಲ್ಲಿರಾ? ತಿಂಗಳುಗಳು ಕಳೆದಷ್ಟಕ್ಕೆ ಈ ದೇವತೆಯ ವಿಲಾಪವು ಹೆಚ್ಚಾಯಿತು. ವ್ಯವಸಾಯದ ಕಡೆಗೆ ಅವಳ ದೃಷ್ಟಿಯು ಹೋಗಲಿಲ್ಲ. ಜನರು ಭೂಮಿಯನ್ನು ಊಳಿ ಬೀಜ ವನ್ನು ಬಿತ್ತಿದರು. ಡೆಮಿಟರಳ ಆಶೀರ್ವಾದ ಸಿಗಲೆಂದು ಅವಳಿಗೆ ಪ್ರಾರ್ಥಿಸಿದರು. ಆದರೆ ಅವುಗಳು ಡೆಮಿಟರಳಿಗೆ ಕೇಳಿಸಲಿಲ್ಲ. ತನ್ನ ಕಳೆದು ಹೋದ ಮಗಳ ಚಿಂತೆಯೇ ಅವಳಿಗೆ! ಭೂಮಿಯ ಮೇಲೆ ಮಳೆಯು ಚೆನ್ನಾಗಿ ಬೀಳುತ್ತಿತ್ತು. ಆದರೆ ಪೈರು ಹುಟ್ಟ ಲೊಲ್ಲದು. ಹುಲ್ಲು ಬೆಳೆಯದೆ ನೆಲವು ಮರುಭೂಮಿಯಂತೆ ತೋರ ಹತ್ತಿತು ದನಕರುಗಳು ಆಹಾರವಿಲ್ಲದೆ ಬಳಲಿದವು. ಮನುಷ್ಯ ರಿಗೂ ಉಪವಾಸ ಬೀಳುವ ಸಮಯ ಒದಗಿತು. ಡೆಮಿಟರಳಿಗೆ ಎಷ್ಟು ಪ್ರಾರ್ಥಿಸಿಕೊಂಡರೂ ನಿರರ್ಥಕವಾಯಿತು.

ನಿರಾಶೆಯಿಂದ ಜನರೆಲ್ಲರೂ ಇತರ ದೇವತೆಗಳೊಡನೆ ಮೊರೆ ಇಟ್ಟರು ಇದನ್ನು ಕೇಳಿದೊಡನೆ ದೇವತೆಗಳಿಗೆ ವ್ಯಸನವಾಯಿತು. ಈ ರೀತಿಯಲ್ಲಿ ನಡೆಯಗೊಟ್ಟರೆ ಲೋಕವು ದುಃಖಮಯವಾದೀ ತೆಂದು ಅದರು ಬಗೆದು, ಇದನ್ನು ಹೇಗಾದರೂ ಸುಧಾರಿಸಬೇಕೆಂದು ಆಲೋಚಿಸಿದರು. ಡೆಮಿಟರಳ ದುಃಖವನ್ನು ನಿವಾರಿಸದೆ ಬಗೆ ಹರಿ ಯುವುದಿಲ್ಲ. ಅದಕ್ಕಾಗಿ ತಮ್ಮ ದೂತನಾದ ಹರ್ಮಿಸನಿಗೆ ಪಾತಾಳ ಲೋಕಕ್ಕೆ ಕಳುಹಿಸಿದರು. ಅತನು, ''ಪ್ಲೂಟೊ ದೇವನೆ, ಪರ್ಸ ಫೋನೆಯನ್ನು ಭೂಲೋಕಕ್ಕೆ ಕಳುಹಿಸು. ಇಲ್ಲದಿದ್ದರೆ ಮಾನವ ಜಾತಿಯು ಅಳಿದುಹೋಗುವುದು. ದೇವತೆಗಳೆಲ್ಲ ಇದನ್ನು ನಿನಗೆ ತಿಳಿಸಲು ನನ್ನನ್ನು ಕಳುಹಿಸಿರುವರು'' ಎಂದನು. ಪ್ಲೂಟೊ ದೇವ ನಿಗೆ ಅದನ್ನುಲ್ಲಂಘಿಸಲು ಅಸಾಧ್ಯವಾಯಿತು. ಕೂಡಲೆ ಪರ್ಸ ಫೋನೆಯನ್ನು ಕಳುಹಿಸಿ ಕೊಟ್ಟನು.

ಪರ್ಸಫೋನೆಯು ನನ್ನ ಮುಂದೆ ನಿಂತಿರುವಳು ಎಂದು ಡೆಮಿ ಟರಳು ಮೊದಲು ನಂಬಲಿಲ್ಲ. ಆದರೆ ಕ್ಷಣವೆ ಅವಳನ್ನು ನೋಡಿ ಆನಂದದಿಂದ ಅವಳು ತಬ್ಬಿಕೊಂಡು ಮುದ್ದಿಟ್ಟಳು. ''ಇನ್ನು ನಾನು ನಿನ್ನನ್ನು ಬಿಟ್ಟು ಹೋಗಲಾರೆನು'' ಎಂದು ಹೇಳುತ್ತಲೇ ಇದ್ದಳು. ತಾಯಿ ಮಗಳ ಈ ಸಂತೋಷವನ್ನು ಕಣ್ಣಾರೆ ಕಂಡು ಹರ್ಮಿಸನು ಆನಂದಭಾಷ್ಪಗಳನ್ನು ಸುರಿಸಿದನು. ''ನಿನ್ನ ಉಪ ಕಾರವನ್ನು ನಾನು ಎಂದೂ ಮರೆಯಲಾರೆನು.'' ಹರ್ಮಿಸನು ''ನಾನು ಬರೀ ದೇವತೆಗಳ ಹರಕಾರಿಯಾಗಿರುವೆನು. ಅವಳ ಇಡೀ ಕಥೆಯನ್ನು ಮೊದಲು ತಿಳಿದುಕೊ. ಆಗ ನಿನಗೆಲ್ಲ ತಿಳಿಯುವುದು. ನಿನ್ನ ಮಗಳು ವರ್ಷದಲ್ಲಿ ಆರು ತಿಂಗಳುಗಳು ಮಾತ್ರ ನಿನ್ನೊಡನೆ ಇರುವಳು. ಉಳಿದ ಸಮಯ ಅವಳು ಪಾತಾಳ ಲೋಕದಲ್ಲಿಯೇ ಇರಬೇಕಾಗುವುದು. ಕೆಲವು ವರ್ಷಗಳಲ್ಲಿ ಅವಳು ಪ್ಲೂಟೊ ದೇವನ ರಾಣಿಯಾಗುವಳು'' ಎಂದು ಹೇಳಿ ಮಾಯವಾದನು.

''ಅಯ್ಯೋ! ಇದೆಂತಹ ಹೊಸ ಮಾಟ! ಸುಖದ ನಡುವೆ ದುಃಖವೆ? ಅದೇನು? ಹಾಗಾಗಬೇಕೆ?'' ಎಂದು ವಿಲಾಪಗೊಂಡಳು.

''ತಾಯಿಯೇ ಗಾಬರಿಯಾಗಬೇಡ. ಈ ವಿಚಿತ್ರ ಘಟನೆಗೆ ಕಾರಣವನ್ನು ತಿಳಿಸುವೆನು. ನಾನೊಮ್ಮೆ ಪಾತಾಳ ಲೋಕದಲ್ಲಿ ಒಬ್ಬಂಟಿಗಳಾಗಿಯೇ ತಿರುಗುತ್ತಿದ್ದೆನು. ಬಾಯಾರಿಕೆಯಿಂದ ಗಂಟಲು ಆರಿಹೋಗಿತ್ತು. ದಾಳಿಂಬದ ಸಸಿಯೊಂದು ಅಲ್ಲಿದ್ದಿತು. ಅದಕ್ಕಾದ ದಾಳಿಂಬ ಫಲವೊಂದನ್ನು ಕಿತ್ತು ತಿಂದು ಬಿಟ್ಟೆನು. ಆರು ಬೀಜಗಳು ನನ್ನ ಹೊಟ್ಟೆಯೊಳಗೆ ಹೋದುವು. ಆಗ ಫಕ್ಕನೆ ನೆನ ಪಾಯಿತು. ಏನಾದರೂ ಮಾಟವಿರಬಹುದೆಂದು ಸಂಶಯವಾಯಿತು. ತಿನ್ನುವುದನ್ನು ನಿಲ್ಲಿಸಿ ಬಿಟ್ಟೆನು. ವಿಚಾರಿಸಿ ಕೇಳಿದಾಗ, ನಾನು ತಿಂದ ಪ್ರತಿಯೊಂದು ಬೀಜಕ್ಕಾಗಿ ಒಂದೊಂದು ತಿಂಗಳು ಪಾತಾಳ ಲೋಕದಲ್ಲಿ ನಾನು ಇರಬೇಕಾಯಿತು.

ಮಗಳು ಇಲ್ಲದಾಗ ಡೆಮಿಟರಳು ದುಃಖ ಪಡುವಳು. ಜನರ ಪ್ರಾರ್ಥನೆಗೆ ಕಿವಿಗೊಡುವುದಿಲ್ಲ. ಆಗ ವ್ಯವಸಾಯವು ನಿಲ್ಲಬೇಕಾ ಗುವುದು, ಬೆಳೆಯು ಬೆಳೆಯುವುದಿಲ್ಲ. ಭೂಮಿಯು ಗಟ್ಟಿಯಾಗು ವುದು. ಅದೇ ಚಳಿಗಾಲ ಶೀತ ಗಾಳಿಯು ಬೀಸುವುದು. ನೀರು ಹೆಪ್ಪು ಕಟ್ಟುವುದು. ಅದು ಜನರಿಗೆ ಕಷ್ಟಕಾಲವಲ್ಲವೇ?

ಪರ್ಸಫೋನೆಯು ತನ್ನ ಆರು ತಿಂಗಳನ್ನು ಪಾತಾಳ ಲೋಕ ದಲ್ಲಿ ಕಳೆದು ಭೂಲೋಕಕ್ಕೆ ಬರುವಳು. ಡೆಮಿಟರಳು ಆಗ ಸಂತೋಷ ಸಾಗರದಲ್ಲಿ ಮುಳುಗುವಳು. ಅವಳು ಪ್ರಸನ್ನತೆಯನ್ನು ಭೂಮಿಯ ಮೇಲೂ ಬೀರುವಳು. ನೆಲವು ಮೃದುವಾಗುವುದು. ಅದೇ ವಸಂತ ಕಾಲವು. ಬೀಜ ಬಿತ್ತುವ ಸಮಯ. ಜನರು ಕೆಲಸ ಮಾಡುವ ಕಾಲ. ಪಕ್ಷಿಗಳು ಹಾಡುವ ಕಾಲ. ಮೃಗಗಳು ಹೊಲಗಳಿಗೆ ಹೋಗುವ ಕಾಲ. ಚೆಲುವಾದ ಹೂವುಗಳು ಪ್ರಫುಲ್ಲ ವಾಗುವ ಕಾಲ. ವಸಂತ ಕಾಲವೇ ಅದಲ್ಲವೆ?

ಸ್ವಲ್ಪ ವರ್ಷಗಳ ಕಾಲ ಪರ್ಸಫೋನೆಗೆ ಪಾತಾಳ ಲೋಕದಲ್ಲಿ ರುವುದು ಕಷ್ಟವೆಂದು ತೋರುತ್ತಿತ್ತು. ಆದರೆ ಮೆಲ್ಲನೆ ಅವಳಿಗೆ ಅಭ್ಯಾಸವಾಯಿತು ಅಲ್ಲಿಯೂ ಅವಳು ಕರುಣೆಯನ್ನು ತೋರಿ ಸುತ್ತ ತನ್ನ ಇರುವಿಕೆಯನ್ನು ಸಾರ್ಥಕಗೊಳಿಸುತ್ತಿದ್ದಳು. ಒಮ್ಮೆ ಒಬ್ಬ ಗವಾಯಿಯು ತನ್ನ ಹೆಂಡತಿಯನ್ನು ಕಳೆದುಕೊಂಡು ದುಃಖ ದಿಂದ ಬಳಲುತ್ತಿದ್ದನು. ಹೇಗೂ ಮಾಡಿ ಅವನು ತನ್ನ ಹೆಂಡತಿ ಯನ್ನು ಹುಡುಕಲು ಪಾತಾಳ ಲೋಕಕ್ಕೆ ಬಂದು ಚೆಲುವಾದ ಹಾಡು ಗಳನ್ನು ಹಾಡುತ್ತಾ ಎಲ್ಲರ ಮನಸ್ಸನ್ನು ಒಲಿಸುತ್ತಿದ್ದನು. ಈತನ ದುಃಖವನ್ನು ಮನಸ್ಸಿಗೆ ತೆಗೆದು ಪರ್ಸಫೋನೆಯು ಪ್ಲೂಟ ದೇವನಿಗೆ

ಹತ್ತಿರ ಬೇಡ ಆ ಹೆಂಡತಿಯನ್ನೂ ಬಿಡಿಸಿದಳು. ಹೆಂಡತಿಯೊಡನೆ ಆ ಗಾಯಿಯು ಭೂಲೋಕಕ್ಕೆ ತೆರಳಿದನು. ಆಗ ಪರ್ಸಫೋನೆಗೆ ಭೂಲೋಕದ ನೆನಪು, ಪ್ರಕಾಶದ ಹೊಳಪೂ ಅವಳ ಮನಸ್ಸಿಗೆ ಬಂದಿದ್ದಿತು. ಹೀಡೆಯೇ ಅವಳು ಪಾತಾಳದಲ್ಲಿ ವಾಸಿಸುತ್ತಿದ್ದಳು.

ಈಗಲೂ ವಸಂತಋತುವು ಬರುತ್ತಲೇ ಜನರೆಲ್ಲರೂ ಪರ್ಸಫೋನೆಯ ನೆನಪನ್ನು ಮಾಡುತ್ತಾರೆ. ಅವಳು ಎಷ್ಟು ಆನಂದ ಪಡುವಳೋ ಎಂದು ಊಹಿಸುತ್ತಾರೆ. ಅವಳ ಅಗಲುವಿಕೆಯಿಂದ ದುಃಖ ಪಡುವ ಡೆಮಿಟರಳು ಆನಂದದಿಂದ ತುಂಬುವಳು. ಇತರರಿಗೆ ತನ್ನ ಆನಂದದ ಗಂಧವನ್ನು ಹಬ್ಬಿಸುವಳು. ಜನರಿಗೆ ಆಹಾರವನ್ನು ಒದಗಿಸುವಳು.

ಶೋಕ.

ಆಕಾಶದಾ ತಾರೆ, ಚಂದ್ರಬಿಂಬವ ನೋಡಿ
ಕೇಕೆ ಹಾಕುತ ನಲಿಯುತಿದ್ದೆ ನಾ ಹಾಡಿ!
ಸಾಕಿದಾ ಗಿಳಿಯೊಡನೆ ನಲಿದಾಡುವಾ ಮನವು
ಶೋಕದಲಿ ಸೀಕರಿದು ಮುಗಿದು ಬಿದ್ದಿಹುದು. ॥ ೧ ॥

ನೀರಿನಲಿ ತಣ್ಪಿಲ್ಲ! ಸೂರ್ಯನಲಿ ಪ್ರಭೆಯು
ತೋರದೆನಗೀಗ; ಜಗವೆಲ್ಲ ನಿಶೆಯು!
ಸಾರವಿಲ್ಲವು ಸಕಲ ಸಾರಸುವಿಚಾರದಲಿ!
ಆರಿಗಾರಿಲ್ಲ ಈಗೇಕೋ ಮನದಲ್ಲಿ! ॥ ೨ ॥

ಇಂಪಾದ ಪಕ್ಷಿ ರವ ಇಂಪಾಗಿ ಕೇಳಿಸದು
ತಂಪಾದ ತಂಗಾಳಿ ತಂವೆನಗೆ ಕೊಡದು
ಇಂಪು ತಂಪುಗಳೆಲ್ಲ, ಮತ್ತಿತರ ಭಾವಗಳು
ಕೆಂಪಾಗಿ ಕಾದಿರುವ ಕಬ್ಬಿಣದ ತೆರವು ॥ ೩ ॥

ಹುಣ್ಣಿಮೆಯ ಚಂದಿರನು ಬೆಳದಿಂಗಳನು ಮಿರಿ
ಬಣ್ಣಗೊಡುತಿದ್ದ ಹೊಳೆ ನೀರ ತೆರೆಯಲ್ಲ
ಉನ್ನತದಿ ಕುಳಿತಿರ್ದ ನಕ್ಷತ್ರಮಾಲೆಗಳು
ಎನ್ನ ಮನ ತಣಿಸುತಿದ್ದುವು ನಲಿದು ನಲಿದು ॥ ೪ ॥

ಕಾಣುತ್ತಲಿದ್ದೆನಾ ಹುಚ್ಚನೊಳಗೂ ಹುರುಳು
ಜಾಣತನವನು ಮತ್ತೆ ಕತ್ತೆಯೊಳಗು;
ಕಾಣಿಸದೆನಗೀಗ ಶೋಕ ಹೊಡೆತದ ಬಳಿಕ,
ಜಾಣನೊಳಗೂ ಜಾಣತನವು ದೇವಾ! ॥ ೫ ॥

ಬಿ. ನರ್ಸಪ್ಪ, ಮಂಗಳೂರು.

ಸ್ವೀಕಾರ.

ಶ್ರೀ ಯರ್ಮುಂಜ ಶಂಕರ ಜೋಯಿಸರಿಂದ ಬರೆಯಲ್ಪಟ್ಟು ಪುತ್ತೂರಿನ ಕರ್ನಾಟಕ ಸಾಹಿತ್ಯ ವಿಮರ್ಶಕ ಸಂಘದಿಂದ ಪ್ರಕಟಿಸಲ್ಪಟ್ಟ **ಗುರುಪೀಠಗಳ ಅವನತಿ** ಎಂಬ ಳಳ ಪುಟಗಳ ಪುಸ್ತಕವು ಅಭಿಪ್ರಾಯದ ಬಗ್ಗೆ ತಲಪಿರುತ್ತದೆ. ಹಿಂದೂಧರ್ಮದ ಸಾಮಾಜಿಕ ಶರೀರದೊಳಗಿನ ಗುಪ್ತ ವ್ಯಾಧಿಗೆ ಚಿಕಿತ್ಸೆಯನ್ನು ಮಾಡುವುದಕ್ಕೆ ಶಿಥಿಲವಾಗಿರುವ ಸಮಾಜದ ನಿಯಂತ್ರಣವನ್ನು ಮಾಡಲು ಯೋಗ್ಯವೂ ಬಲಿಷ್ಠವೂ ಪ್ರಕಾಶಮಾನವೂ ಆದ ಧರ್ಮಾಧಿಕಾರವು ಧರ್ಮ ಪೀಠಗಳಲ್ಲಿ ಉಂಟಾಗ ತಕ್ಕದ್ದು, ಮಠ ಸಂಸ್ಥೆಗಳು ಮುಳುಗ ಕೂಡದು ಎಂಬೀ ಸಂಕಲ್ಪದಿಂದ ಶ್ರೀ. ವಾಸುದೇವರು ಎ ಪಿ ದೇಶ ಪ್ರಭುರವರಿಂದ ಆಚಾರ್ಯ ಪೀಠಾಂಚಿ ಅವನತಿ ಎಂಬುದು ಬರೆಯಲ್ಪಟ್ಟಿತ್ತು,ಅದರ ಅನುವಾದವಿದು. ಎಲ್ಲರೂ, ಮುಖ್ಯವಾಗಿ ಮಠಾಧಿಪತಿಗಳು ಇದನ್ನು ಓದಿ ಗ್ರಹಿಸಿಕೊಳ್ಳಬಹುದು

ಮಿ। ಟಿ. ಪಿ ಮಹಮ್ಮದ ಕುಂಞಿ ಕಾಸರಗೋಡು ಇವರು ಶ್ರೀಮತಿ ಗುಲ್ವಾಡಿ ವಗೈರರಿಗೊಂದು ಪ್ರತ್ಯುತ್ತರವನ್ನು 'ಸತ್ಯಾಸತ್ಯ ವಿವೇಚನೆ' ಎಂಬ ಶಿರೋನಾಮೆಯಿಂದ ಬರೆದಿರುತ್ತಾರೆ. ಈ ಪ್ರತ್ಯುತ್ತರದ ನಕಲು ಒಂದು ನಮಗೆ ತಲಪಿರುತ್ತದೆ ಅದರದಿಂದ ಸ್ವೀಕರಿಸಿರುತ್ತೇವೆ

ಮಂಗಳೂರಿನ ಮಿತ್ರಮಂಡಲಿಯಿಂದ ಪ್ರಕಟವಾದ **'ವಿನೋದ ಚಿತ್ರ'ಗಳೆಂಬ** ಗ್ರಂಥವು ಹಸ್ತಗತವಾಗಿದೆ. ಇದು ಆಕಾಶವಾಣಿ ಸೇವಾ ಗ್ರಂಥಮಾಲೆಯ ಆರನೆಯ ಕುಸುಮ ಬೆಲೆ ಹತ್ತಾಣೆ. ೧೩ ಕತೆಗಳಿವೆ.

ಬೆಳಗಾಂವಿಯ ಒಂದಾಣೆ ಮಾಲೆಯ ೧೧–೧೨ನೇ ಪುಷ್ಪಗಳಾಗಿ ಆದರ್ಶನೊಬ್ಬನೇ **'ಕವಿಕರ್ಮ'** ಎಂಬ ಎರಡು ಕತೆ ಪುಸ್ತಕಗಳು ಬಂದಿವೆ. ಮೊದಲನೆಯದ್ದನ್ನು ಶ್ರೀ. ಕೆಂಪ್ಪಿ ವಾಸುದೇವ ಶೇಣ್ಯೆಯವರು ಬರೆದರು. ಎರಡನೇಯದ್ದನ್ನು ಶ್ರೀ. ಕೋ ಶಿವರಾಮ ಕಾರಂತರು ಬರೆದರು. ವಾಚನೀಯ ಕತೆಗಳು.

ಧಾರವಾಡ ಜಯ ಕರ್ನಾಟಕ ಪ್ರೆಸ್ಸಿನ ಹೆಸರು ಮೋಹನ ಪ್ರೆಸ್ ಎಂದು ಬದಲಾಗಿದೆ. ಮನೋಹರ ಗ್ರಂಥ ಪ್ರಕಾಶನ ಗ್ರಂಥ ಮಾಲೆಯಿಂದ ಮೊದಲನೆಯ ಕುಸುಮವಾಗಿ ಹೊರಡಿರುವ **'ಸುದರ್ಶನ'** ಎಂಬ ಕಥೆಯು ಕೈಸೇರಿರುತ್ತದೆ. ಇದನ್ನು ಆನಂದ ಕಂದರು ಬರೆದರು. ಶ್ರೀ. ವಿ. ಕೃ. ಗೋಕಾಕರು ಮುನ್ನುಡಿಯನ್ನು ಬರೆದಿರುತ್ತಾರೆ. ಭಾವಗರ್ಭಿತ ಕತೆ, ಭಾಷೆಯು ಮಧುರವಾಗಿದೆ. ಎಲ್ಲರೂ ಓದತಕ್ಕದ್ದಿದೆ. ಬೆಲೆ ೧೨ ಆಣೆಗಳು.

ಸಾಹಿತ್ಯ

ಸ್ವದೇಶಾಭಿಮಾನಿ

ಸಂಚಿಕೆ.

ಸಂಪುಟ ೨ ಒಕ್ಟೋಬರ ೬—೧೦—೧೯೩೩. ಸಂಚಿಕೆ ೮

— ಅನುಕ್ರಮಣಿಕೆ —

	ಪುಟ
ಎರಡು ಬಗೆ	೫೭
ಪೂಜೆ	೫೭
ಕಾಣದ ತಾಣಕೆ	೫೮
ಕತೆಯ ಹುಚ್ಚು	೫೮
ಪ್ರತೀಕಾರ	೫೯
ಆಸ್ಪೃಶ್ಯತೆ ಅಥವಾ ಪಶ್ಚಾತ್ತಾಪ	೬೧
ಚಳವಳಿಯೆಂದರೆ ?	೬೩
ಪತ್ರಿಕಾ ಪ್ರಪಂಚ	೬೪
ಸ್ವೀಕಾರ ಸಮೀಕ್ಷೆ	೬೪

ಒಕ್ಟೋಬರ ತಾರೀಕು ೬ನೇ ಶುಕ್ರವಾರ ೧೯೩೩.

ಎರಡು ಬಗೆ!

ವ ರುಗುವರು–ಬಡತನದ ಬಲೆಯಲ್ಲಿ ಸಿಕ್ಕಿಹರು
ಸುರಿಸುವರು ಕಣ್ಣೀರು ಹಸಿವಿಂದ ಜನರು
ಉಡಲಿಕ್ಕೆ ಉಡುಸಿಲ್ಲ. ಉಣಲಿಕ್ಕೆ ಉಣಿಸಿಲ್ಲ
"ಕೊಡಿಕೊಡಿರಿ ಎಂದೊರೆದು ಬೇಡುತಿಹರಿಲ್ಲ

ನಿಡುಸುಯ್ಲು ಬಿಡುತವರು ಬೆನರಿಳಿಸಿ ದುಡಿಯುವರು
ನಡುಗುವರು ಧನಿಗಳಿಗೆ ಬಡಹೊಟ್ಟೆ ಹೊರಲು
ಕಡುಕಷ್ಟ ಬಡುತಿಹರು—ಬದುಕು ತೊರೆಯುವರು
ದುಡಿದುಡಿದು ಬಲವಿಲ್ಲ ಸೊರಗಿಹರು ಅವರು.

೧

ಅಡಿಗಡಿಗೆ ತಿನ್ನುವರು–ಕುಡಿಯುವರು ಸಿರಿಜನರು
ಮಡದಿ ಮಕ್ಕಳನಪ್ಪಿ ಸುಖದಿ ಜೀವಿಪರು
ಬೆಂದಿರುವ–ಬಳಲಿರುವ–ಬಡಜನರ ತಣಿಸುವರು
ಕೊಂದಾದರೂ ಅವರ—ಇವರು ತಣಿಯುವರು.

ನೋವಿಂದ—ಹಸಿವಿಂದ–ಬಡಜನರು ಕೂಗುವರು
ನೋವು–ಹಸಿವುಗಳಿಲ್ಲದಿರುವ ಸಿರಿಜನರು
"ನಾವೇನ ಮಾಡಲಿದೆ ಬಡ ಜನಕೆ? ಸತ್ತಿರಲಿ'
ಆವ ಉಪಕಾರವವರಿಂದ''ಲೆನ್ನುವರು

೨

ಸಿರಿತನವು–ಬಡತನವು ನೀಡುವುದು–ಬೇಡುವುದು
ಹಿರಿ–ಕಿರಿದು, ಇವುಗಳೆಲ್ಲಕೆ ಕರ್ತರಾರು?
ಸಿರಿತನವು ಸ್ಥಿರವಲ್ಲ ಬಡತನವು ಬಹುದಲ್ಲ
ನರರಿದನು ತಿಳಿದೆಲ್ಲ ನುಂದರಿಸಿ ಮೆಲ್ಲ

ಕಂದಕ ಈಶ್ವರ, ಮಂಗಳೂರು

ಪೂಜೆ

ಪ್ರಾರ್ಥನೆ!! ಭಕ್ತಿ!!!

ಎನ್ನಯ ಭಕ್ತಿಯ ಬತ್ತಿ
ದೃಢತ ಜ್ವಲನಿಂ ಹಚ್ಚಿ;
ನಿನ್ನ ವಾದಕೆ ಆರತಿಯ ಬಳವೆ ಎತ್ತಿ
ಎಲ್ತೆಲ್ಲಿಯೂ ನುತ್ತಿ,
ದೇವ ನಿನ್ನನು ಮುತ್ತಿ,
ಬಂದಿಹೆನು ಕಾವಾಡು ಎನ್ನ ಸೀತೆತ್ತಿ
ಧರ್ಮವೀರನು ನೀನು,
ಕರ್ಮಹೀನನು ನಾನು,
ಗೈದಾಪರಾಧಗಳ ಕ್ಷಮಿಸೆಲೈ ದೇವಾ'
ಮಂತ್ರಹೀನನು ನಾನು,
ಸ್ವತಂತ್ರಯುಕ್ತನು ನೀನು;
ಮರೆ ಹೊಕ್ಕೆ ನಿನ್ನ ನೀ ಸಲಹೆಲೈ ಕಾವಾ '
ನನ್ನವರು ನನಗಿಲ್ಲ,
ವೆಂಬ ಯೆನ್ನಯ ಸೊಲ್ಲ;
ನಾಲಿಸುತ ರಕ್ಷಿಸೈ ಸರ್ವ ಬಲ್ಲ'
ಪೂಜೆ ಪ್ರಾರ್ಥನೆಗಳಿವು,
ಭೀಮ ಭಕ್ತಿಯ ಸುಳಿವು;
ಎನಗೆ ಅಕ್ಷಯ ಭಿಕ್ಷೆ ಪಡೆದೆ ಗೆಲವು!!!

ಕಾಪು ಮಂಜುನಾಥ ಶೆಣೈ.

ಕಾಣದ ತಾಣಕೆ

(೧)

ಬಾನೊಳು ಮೂಡುವ ಚಂದಿರನ
ಬಯಸದ ಜನರಿಹರೆ?
ಬಾನಿನ ಚಂದ್ರನು ಅಂಗಳ ಕೈತಕೆ
ಬಯಸುವ ಜನರಿಹರೆ?
ಚಂದ್ರನ ಚೆಲುವಿದೆ ದೂರದೊಳು ।
ಮಂದಿಯ ಬುದ್ಧಿಯ ತೀರದೊಳು ॥

(೨)

ದೂರದ ನಲ್ಲೆಯ ಸವಿವಾತು
ಸುಗ್ಗಿಯ ಸವಿ ಸೊಬಗು
ತೋರುವ ತರಳೆಯ ನುಣ್ಗೊರಲು
ಬಗ್ಗಿದ ಬರಿ ಬೆಡಗು
ನಲ್ಲೆಯ ಸೊಬಗಿದೆ ದೂರದೊಳು ।
ಮೆಲ್ಲಿದೆ ಸವಿಯಿದೆ ಓಲೆಯೊಳು ॥

(೩)

ತೋರದೆ ತೋರುವ ತಾರೆಗಳು
ಮೆಚ್ಚಿನ ಮೇರೆಗಳು
ಕಾಣದ ತಾಣವ ಸೇರಿಹರು
ನಚ್ಚಿನ ಅರಸುಗಳು
ದೂರದ ಮೇರೆಯ ಮೀರಿಹರು ।
ತೀರದ ಕೀರ್ತಿಯ ಗಳಿಸುವರು ॥

"ರಾಘವ" ಮಿತ್ರಮಂಡಲಿ, ಮಂಗಳೂರು.

ಕತೆಯ ಹುಚ್ಚು.

ಮಧ್ಯಾಹ್ನ ಹನ್ನೊಂದು ಗಂಟೆಯ ಸಮಯ. ನಾನು ಮನೆಯಲ್ಲಿ ಸುಮ್ಮನೆ ಕುಳಿತುಕೊಂಡಿರುವಾಗ ಒಂದು ಕತೆ ಬರೆಯಬೇಕೆಂದೆನಿಸಿತು. ಕೂಡಲೇ ದೊಡ್ಡ ಕತೆಗಾರನೆಂದು ನನಗೆ ಹೆಮ್ಮೆಯಾಯಿತು. ಕಾಗದಗಳನ್ನು ಹುಡುಕಲೆಂದು ಮನೆಯ ಕೋಣೆಯೊಳಗೆ ಹೋದೆ. ಒಂದು ಬದಿಯಲ್ಲಿ ಒಂದು ಕಪಾಟು ಇತ್ತು. ಬಾಗಿಲು ತೆರೆದು ನೋಡಿದೆ. ಒಂದು ಕಟ್ಟು ಕಣ್ಣಿಗೆ ಬಿತ್ತು ಬಿಡಿಸಿ ನೋಡುವಾಗ, ನಾನು ಸಣ್ಣವನಾಗಿರುವಾಗ ಉಪಯೋಗಿಸಿದ ಪುಸ್ತಕಗಳೇ ಕಣ್ಣಿಗೆ ಬಿದ್ದುವು. ಕಡೆಗೆ ಒಂದು ಪುಸ್ತಕವನ್ನು ಕೈಯಲ್ಲೆತ್ತಿಕೊಂಡು ಒಂದೊಂದೇ ಪುಟವನ್ನು ಮಗುಚಲಾರಂಭಿಸಿದೆ. ನಾನು ಎತ್ತಿಹಿಡಿದುದು ಪ್ರಬಂಧ ಪುಸ್ತಕವಾಗಿತ್ತು. ಕೆಲವು ಪ್ರಬಂಧಗಳನ್ನು ಓದಿಯೂ ಮಾರ್ಕುಗಳನ್ನು ನೋಡಿಯೂ ಆಯಿತು. "ನಾನು ಪ್ರಬಂಧ ಬರೆಯುವುದರಲ್ಲಿ ಹಿಂದುಳಿದವನಲ್ಲ. ಶೇಕಡಾ ಐವತ್ತೈದರಷ್ಟು ಮಾರ್ಕು ಸಿಕ್ಕಿರುತ್ತದೆ. ಈಗ ನಾನೊಬ್ಬ ಉಪಾಧ್ಯಾಯ. ನನ್ನ ವಿದ್ಯಾರ್ಥಿಗಳೂ ಹೀಗೆಯೇ ಪ್ರಬಂಧದಲ್ಲಿ ಹಿಂದುಳಿಯಬಾರದು. ' ಅವರು ಪರೀಕ್ಷೆಯಲ್ಲಿ ತೇರ್ಗಡೆಯಾಗುವಂತೆ ಹುಶಾರು ಮಾಡಿ ನಾನು ಒಂದು ಹೆಸರನ್ನು ಪಡೆಯಬೇಕು" ಹೀಗೆ ಯೋಚಿಸಿ ಮನಸ್ಸಿನಲ್ಲಿ ನನ್ನನ್ನೇ ಹೊಗಳಿಕೊಂಡೆನು. ಹಾ! ನೆನೆಪಾಯಿತು. ನನ್ನ ಕತೆಯು ಆತ್ಮಶ್ಲಾಘನೆಯಲ್ಲಿಯೇ ಪರ್ಯವಸಾನವಾಯಿತು. ಕೂಡಲೆ ನನ್ನ ಕೈಯಲ್ಲಿದ್ದ ಪುಸ್ತಕವನ್ನು ಕೆಳಗಿರಿಸಿ, ಏನನ್ನೋ ಬರೆದು ಸ್ವಲ್ಪ ಜಾಗವು ಖಾಲಿಯಾಗಿರುವ ಎರಡು ನೋಟ್ಸುಬೂಕುಗಳನ್ನು ತೆಗೆದು ಕೊಂಡೆ. ಒಡನೆಯೇ 'ಪೇನಿ'ಗೆ ಕೈ ಹಾಕಿ ಹೊರಟೆ.

ನಮ್ಮ ಮನೆಯನ್ನು ಮೂಡುದಿಕ್ಕಿಗೆ ಮೋರೆ ಮಾಡಿ ಕಟ್ಟಿರುತ್ತಾರೆ. ಎಡಗಡೆಯಲ್ಲಿ ಪ್ರತ್ಯೇಕವಾದ ಒಂದು ಸಣ್ಣ ಕಟ್ಟೋಣವಿತ್ತು. ಅದರ ವೇದಿಕೆಗೆ ಹೋಗುವುದೆಂದು ಹೊರಟೆ. ಆ ನೆಲವು ಚೆನ್ನಾಗಿರಲಿಲ್ಲ. "ನಾನು ನಿನ್ನೆ ತಾನೆ ಬಟ್ಟೆಯನ್ನು ಒಗದಿದ್ದೆ. ಈಗಲೂ ಕೊಳೆಯಾಗಲಿಲ್ಲ ಆ ಹಾಳು ನೆಲದಲ್ಲಿ ಕುಳಿತುಕೊಂಡರೆ ವಸ್ತ್ರಕ್ಕೆ ಮಣ್ಣು ಹಿಡಿದು ಹೋದೀತೆ"ಂದು ನೆನಸಿ, ಮುಂದುವರಿಸಿದ ನಡಕೆಯನ್ನು ನಿಲ್ಲಿಸಿದೆ. ಇನ್ನೊಂದು ಸ್ಥಳಕ್ಕೆ ಹೋಗುವುದೆಂದು ದೃಢ ಮಾಡಿ ಮನೆಯ ತೆಂಕು ದಿಕ್ಕಿನಲ್ಲಿ ಒಂದು ಹರಕು ಚಾಪೆಯನ್ನು ಹಾಸಿ ಕುಳಿತುಕೊಂಡೆ. ಒಂದೊಂದಾಗಿ ಆಲೋಚನಾತರಂಗವೇ ನನ್ನ ತಲೆಯ ಸುತ್ತಲೂ ಸುತ್ತಿಕೊಂಡಿತು.

ಕತೆಗೆ ಯಾವ ವಸ್ತುವನ್ನು ಆರಿಸಲಿ. ಚರಿತ್ರಾತ್ಮಕ ವಿಷಯ ವನ್ನೆತ್ತಿ ಬರೆಯಲೆಂದರೆ ನಾನು ಯಾವ ಚರಿತ್ರೆಯನ್ನೂ ತಿಳಿದವನಲ್ಲ. ಒಂದಿಷ್ಟು ಸಂಸ್ಕೃತವನ್ನು ಕಲಿತ ಗೊಡ್ಡುಪಂಡಿತನಿಗೆ ಚರಿತ್ರೆಯ ವಾಸನೆಯಾದರೂ ಎಲ್ಲಿಂದ ಬರಬೇಕು.

ಪತ್ತೇದಾರಿ ಕಾದಂಬರಿಯನ್ನು ಬರೆಯಲೋ ಎಂದರೆ, ಅದಕ್ಕೆ ಯೋಗ್ಯನಾದ 'ಡಿಟೆಕ್ಟಿವ'ನ್ನು ಎಲ್ಲಿಂದ ತಂದುಬಿಡಲಿ ಒಂದುವೇಳೆ ಯಾವ ಕಾದಂಬರಿಕಾರರಿಗೂ ಸಿಕ್ಕದ ಪತ್ತೇದಾರಿಯು ನನಗೆ ಸಿಕ್ಕರೆ ಅವನಿಗೆ ಯಾವ ಹೆಸರನ್ನು ಇಡುವುದು. ಹೆಸರಿನಿಂದಲೇ ಸುಪ್ರಸಿದ್ಧ ಪತ್ತೇದಾರಿಯೆಂದು ತಿಳಿಯಬೇಕು. ಹೆಸರಿನಿಂದಲೇ ಕಳ್ಳರು ಹೆದರಿ ಕೈಗೆ ಬರಬೇಕು. ಅಂಥಾ ಹೆಸರು ದೊರಕುವುದಿಲ್ಲ ಈ ಕತೆಯನ್ನು ಬರೆಯುವ ಗೊಡವೆಯೇ ಬೇಡ.

ಈಗ ಎಷ್ಟೋ ಜನರು ಕತೆ, ಕವಿತೆಗಳನ್ನು ಬರೆದು, ಪತ್ರಿಕೆಗಳಲ್ಲಿ ತಮ್ಮ ತಮ್ಮ ಹೆಸರನ್ನಾಗಲೀ ಕತೆಗಾರ, ಚಕ್ರಪಾಣಿ ಶಾಂತಿನಾಥ ಮೊದಲಾದ ಅಂಕಿತಗಳನ್ನಾಗಲೀ ಕಂಡು ಸಂತುಷ್ಟರಾಗುವರು. ನಾನು ಕವಿತೆಯನ್ನೇ ಬರೆಯುವೆನು ನಾಲ್ಕು ಪಾದಗಳಾದರೆ ಒಂದು ಪದ್ಯವಾಯಿತು. ಇಂತ ಹತ್ತಿಪ್ಪತ್ತು ಪಾದಗಳಿಂದಲೇ ಕೆಲವು ಪದ ಗಳಾಗಬಹುದು. ಕತೆಯನ್ನು ಬರೆಯುವಷ್ಟು ವೇಚಾಟವು ಕವಿತೆ ಗಳನ್ನು ಬರೆಯುವುದರಲ್ಲಿರುವುದಿಲ್ಲ. ಓಹೋ! ನಾನು ಆಲೋಚನೆ ಮಾಡಿದ್ದು ಹಳೆಯ ನಮೂನೆಯ ಕವಿತೆಗಳನ್ನು; ಈಗಿನ ರಸಿಕರು ಅಂಥವುಗಳನ್ನು ಮೆಚ್ಚುವುದೇ ಇಲ್ಲ. ನಾನು ಪ್ರಕಟಿಸಬೇಕೆಂದು ನೆನಸಿದ ಪತ್ರಿಕೆಯ ಸಂಪಾದಕರೂ ಹೊಸ ದಾರಿಯವರಾದರೆ ನನ್ನ ಕವಿತೆಯನ್ನು ಕಣ್ಣೆತ್ತಿ ಸಹಾ ನೋಡಲಿಕ್ಕಿಲ್ಲ. ಆದ್ದರಿಂದ ಹೊಸ ರೀತಿಯ ಪದ್ಯಗಳನ್ನೇ ಬರೆಯುವೆನು. ಯಾವ ತರದ್ದಕ್ಕೆ ಕೈಹಚ್ಚಿ

ಸೀಕು? ಹೊಸ ನಮೂನೆಯ ಒಂದು ಪದ್ಯವೂ ನನಗೆ ಬರುವುದಿಲ್ಲ. ಪತ್ರಿಕೆಗಳಲ್ಲಿ ಹುಡುಕಿ ನೋಡುವಾ ಎಂದರೆ ಒಂದೂ ನನ್ನಲ್ಲಿಲ್ಲ.

ಓದುಗಾರರೇ ನನ್ನ ಕತೆಯು ಎಲ್ಲಿಯೋ ಮಾಯವಾಗಿ ಕವಿತೆಯ ರೂಪವನ್ನು ತಾಳಿ, ಕೂಡಲೇ ನಶಿಸಿಹೋಗುವುದೆಂದು ನೆನಸುವಿರಾ! ನೋಡಿ. ನಿಮ್ಮನ್ನು ತೃಪ್ತಿಗೊಳಿಸುವ ಒಂದು ಕತೆಯನ್ನೇ ಬರೆದುಬಿಡುವೆನು. ನನ್ನ ಕತೆಯೆಂದು ತಿರಸ್ಕರಿಸಬೇಡಿರಿ. ನನ್ನ ಹೆಸರು ನಿಮಗೆ ತಿಳಿದರೆ ನೀವು ಈ ಕತೆಯನ್ನು ಕಣ್ಣೆತ್ತಿ ಸಹಾ ನೋಡುವವರಲ್ಲ.

ಒಂದು ಸಾಮಾಜಿಕ ಕಾದಂಬರಿಯನ್ನು ಬರೆಯುವುದೆಂದು ನಿರ್ಧರಿಸಿದ್ದೇ ತಡ. ಲೇಖನಿಯೂ 'ಮೈಲ್ ಸ್ಪೀಡಿ'ನಲ್ಲಿ ಮುಂದು ನೆರಿಯಿತು.

'ಶಾಮರಾಯರೇನೂ ತೀರಾ ಬಡವನಲ್ಲ. ಅವರು ಕಷ್ಟಪಟ್ಟರೆ ತನ್ನ ಜಮೀನನ್ನು ಸಾಗುವಳಿ ಮಾಡಿ ಕುಟುಂಬ ಪೋಷಣೆಯನ್ನು ಮಾಡಬಲ್ಲರು. ರಮಾನಾಥ, ಸುರಸೆ ಎಂಬಿಬ್ಬರೇ ಅವರ ಪ್ರೀತಿಯ ಮಕ್ಕಳಾಗಿದ್ದರು. ಸುರಸೆಯು ಚಲುವೆಯಾದ ಹುಡುಗಿ. ಮದುವೆಯಾಗುವ ಪ್ರಾಯವು ದಾಟಿ ಹೋದರೂ ಶಾರದಾ ಕಾನೂನಿಗೆ ಹೆದರಿ ಅವಳ ವಿವಾಹವು ಇನ್ನೂ ಆಗಿರುವುದಿಲ್ಲ. ತಂದೆಯು ಎಷ್ಟು ಹುಡುಕಿದರೂ ತಕ್ಕ ವರನೂ ಸಿಗಲಿಲ್ಲ.

ಅಮಾವಾಸ್ಯೆಯ ದಿನ ರಾತ್ರಿ. ಅದರಲ್ಲೂ ಮಳೆಗಾಲದ ದಿನ. ಹನ್ನೊಂದು ಗಂಟೆಯಾಗಿರಬಹುದು. ಈ ಸಮಯದಲ್ಲಿ ಎಂಥಾ ಧೀರನೂ ಮನೆ ಬಿಟ್ಟು ಹೊರಡಲಾರನು. ಹದಿಮೂರು ವರ್ಷದ ಸುರಸೆಯೊಬ್ಬಳೇ ಮನೆಯ ಮುಂದಿನ ಮೆಟ್ಟಲುಗಳನ್ನು ಇಳಿದು ರಸ್ತೆಗೆ ಕಾಲಿಟ್ಟಳು. ಅಲ್ಲಿಯೇ ಸ್ವಲ್ಪ ಹೊತ್ತು ಅರ್ಧ ಮನಸ್ಸಿನಲ್ಲಿ ಏನೇನೊ ನಿರ್ಧರಿಸಿ ಮುಂದುವರಿದು ಹೋದಳು. ತನ್ನನ್ನು ಯಾರಾದರೂ ನೋಡುವರೋ ಎಂದು ಒಮ್ಮೊಮ್ಮೆ ಅತ್ತಿತ್ತ ನೋಡಿ ಭರದಿಂದ ಸಾಗುವಳು. ಸ್ವಲ್ಪ ಹೊತ್ತು ದಾಟುವಾಗ ಸುರಸೆಯು ನಿಬಿಡವಾದ ಆ ಕಗ್ಗತ್ತಲೆಯಲ್ಲಿ ಮಾಯವಾದಳು.

ನನ್ನ ಕತೆಯು ಚಿನ್ನಾಗಿಯೇ ಇದೆ. ಲೇಖಕನೆಂದು ಬರೆಯುವಾಗ ನನಗೆ ನಾಮನಿರ್ದೇಶವು ಹೇಗಿರಬೇಕು. ಇಷ್ಟವಾದ ಹೆಸರುಗಳಲ್ಲಿ ಹತ್ತಿಪ್ಪತ್ತನ್ನು ಮನಸ್ಸಿಗೆ ತಂದುಕೊಂಡು ಇವುಗಳಲ್ಲಿ ಯಾವದನ್ನು ಆರಿಸಬೇಕು. ಒಂದು ವೇಳೆ ಈ ಹೆಸರುಗಳನ್ನು ಯಾರಾದರೂ 'ರಿಜರ್ವ್' ಮಾಡಿದ್ದರೆ ನನ್ನ ಗತಿಯೇನು?'' ಎಂದು ಚಿಂತಿಸಿ ಆ ನಾಮಗಳನ್ನೆಲ್ಲಾ ಬಿಟ್ಟು ಯಾರೂ ತಿಳಿದಿರಲಿಕ್ಕಿಲ್ಲ. ಇಂಥಾ ಅಂಕಿತವನ್ನು ಎಂದು ಒಂದನ್ನು ನನ್ನದನ್ನಾಗಿ ಮಾಡಿಕೊಂಡೆ. ಹಿಂದೆ ಆರಂಭಿಸಿದ ಕತೆಯನ್ನು ಯಾವ ರೀತಿ ಮುಂದುವರಿಸಿ ಕೊನೆಗಾಣಿಸುವುದೆಂದು ಆಲೋಚಿಸುತ್ತಿರುವಾಗ ಇಂಪಾದ ಗಾಯನವು ನಮ್ಮ ಮನೆಯ ಒಂದು ಮೂಲೆಯಿಂದ ಎದ್ದು ಬಂತು. ಇನ್ನು ಸ್ವಲ್ಪ ಹೊತ್ತು ಕಳೆದ ಮೇಲೆ ಕತೆ ಬರೆಯುವುದೆಂದು ನೆನಸಿ, ಲೇಖನಿಯನ್ನೂ ಪುಸ್ತಕವನ್ನೂ ಅಲ್ಲಿ ಬಿಸುಟು ಗಾನವು ಹೊರಟ ದಿಕ್ಕಿಗೆ ಮೋರೆ ಮಾಡಿ ಹೋದೆ.

ದೇವರು ಮನಸ್ಸು ಮಾಡಿದರೆ ಇನ್ನೊಮ್ಮೆ ಹಿಡಿದ ಕೆಲಸವನ್ನು ಮುಗಿಸಿ ಸಂತೋಷಗೊಳಿಸುವೆನು. ಆ ವರೆಗೆ ಕಾದು ಕುಳಿತುಕೊಂಡರೆ ಬಹಳ ಉಪಕಾರವಾದೀತು ಪಾಠಕ ಸುಹಾಶಯರೇ.

ಆ. ಸೋ. ದಾಸ,

ಪ್ರತೀಕಾರ.

ವೇಣುಗೋಪಾಲನು ವಿದ್ಯಾರ್ಥಿಗಳಲ್ಲಿ ಅಗ್ರಗಣ್ಯನು; ಯಾವಾಗಲೂ ಕಷ್ಟಪಟ್ಟು ಕಲಿಯುವನು. ತನ್ನ ತರಗತಿಯಲ್ಲಿ ಸ್ತ್ರೀಯರಿದ್ದರೂ, ಮನೋವಿಕಾರಗಳಿಗೊಳಗಾಗಲಿಲ್ಲ.

ವಿದ್ಯಾರ್ಥಿನಿಯರು ಮುರಳಿಯನ್ನು ತಮ್ಮ ನಾಯಕಿಯನ್ನಾಗಿ ಮಾಡಿದ್ದರು. ಈಕೆಯು ಒಮ್ಮೆಯಾದರೂ, ವೇಣು ಗೋಪಾಲನಿಂದ ಶ್ರೇಷ್ಮಳೆನಿಸಿಕೊಳ್ಳಬೇಕೆಂದು ಬಹಳವಾಗಿ ಪ್ರಯತ್ನಿಸುತ್ತಿದ್ದಳು; ವೇಣು ಗೋಪಾಲನು ಬಿಡನು.

ಅದೇಕೊ, ವೇಣು ಗೋಪಾಲನನ್ನು ಕಂಡ ಕೂಡಲೇ ಮುರಳಿಯು ನಸು ನಗುತಿದ್ದಳು. ಆದರೆ ಅವನು ಮುಖ ತಿರುಗಿಸುವನು. ಅವನು ಈ ತನಕ ಅವಳೊಡನೆ ಮಾತಾಡಲೇ ಇಲ್ಲ.

ಉಪಾಧ್ಯಾಯರು ಬರುವ ಹೊತ್ತಾಗಿದ್ದಿಲ್ಲ. ಎಲ್ಲಾ ವಿದ್ಯಾರ್ಥಿನಿಯರು ತಂತಮ್ಮ ಸ್ಥಳಗಳಲ್ಲಿ ಕುಳಿತಿದ್ದರು. ವೇಣುವು ಉಪಾಧ್ಯಾಯರ ಸ್ಥಾನಕ್ಕೆ ಬಂದು ಮೇಜಿನ ಬಳಿ ನಿಂತನು. ಬಳಿಕ, ''ನಾನು ನನಗೆ ಬರೆದ ಒಬ್ಬಳ ಪ್ರೇಮ ಪತ್ರವನ್ನು ಹರಿದು ಬೆಂಕಿ ಹಚ್ಚುವೆನು. ಇನ್ನು ಮುಂದೆ, ಇದನ್ನು ಎಲ್ಲರೂ ತಿಳಿದಿರಲಿ!'' ಎಂದು ಹೇಳಿದನು. ತನ್ನ ಕೈಯಲಿದ್ದ ಪತ್ರವೊಂದನ್ನು ಹರಿದು ಚೂರು ಮಾಡಿದನು; ಮೇಜಿನ ಮೇಲಿರಿಸಿ ಬೆಂಕಿ ಹಚ್ಚಿಸಿದನು. ವಿದ್ಯಾರ್ಥಿನಿಯರು ಏನೋ ತಮ್ಮೊಳಗೇ ಮಾತನಾಡಿಕೊಳ್ಳುತಿದ್ದರು.

ಉಪಾಧ್ಯಾಯರು ಬಂದರು. ಮೇಜಿನ ಮೇಲೆ ತುಂಬಾ ಬೂದಿ! ಇದೇನೆಂದು ಕೇಳಿದರು. ಒಬ್ಬೊಬ್ಬನಿಂದ ಒಂದೊಂದು ಶಬ್ದದಂತೆ ಇಡೀ ಕಥೆಯು ಹೊರಬಿದ್ದಿತು. ಉಪಾಧ್ಯಾಯರು ಯಾರ ಪತ್ರವೆಂದು ವೇಣುವನ್ನು ಕೇಳಿದರು. ಉತ್ತರವಾಗಿ ''ಕ್ಷಮಿಸಬೇಕೆ''ಂದು ಮಾತ್ರ ಕೇಳಿಸಿತು. ಮುರಳಿಯು ಕಣ್ಣಲ್ಲಿ ಚಿಂತೆಯನ್ನು ಕಾರ್ಮುತಿದ್ದಳು.

ಒಂದು ತಿಂಗಳೇನೊ ವೇಣು ಗೋಪಾಲನ ಹೊಗಳಿಕೆಯಲ್ಲೇ ಕಳೆಯಿತು. ಕೂಡಲೇ ವಿಷಾದವು ತಲೆದೋರಿತು. ನ್ಯಾಯಸ್ಥಾನದಲ್ಲಿ ದಾವೆಯು ಮಾಡಲ್ಪಟ್ಟಿತು.

ವಿಚಾರಣೆಯ ದಿನವು ಸಮೀಪಿಸಿತು. ಇಡೀ ಶಾಲೆಯಲ್ಲಿ ಇದೇ ಸಂಗತಿಯು ತುಂಬಿ ನಲಿದಾಡುತ್ತಿತ್ತು. ವೇಣು ಗೋಪಾಲನೊಡನೆ ಈ ಸಂಗತಿಯನ್ನು ಮಾತಾಡಿದರೆ, ಅವನು ಸಿಟ್ಟಿನಿಂದ ಬೆಂಕಿಯಾಗುತಿದ್ದನು. ಏಕೆಂಬುದು ಯಾರಿಗೂ ಗೊತ್ತಿಲ್ಲ.

ನ್ಯಾಯಸ್ಥಾನದಲ್ಲಿ ವೇಣು ಗೋಪಾಲನು ಗೂಡಿನ ಒಳಗೆ ನಿಂತಿರುವನು. ನ್ಯಾಯಾಧಿವತಿಯ ಪ್ರತಿ ಪ್ರಶ್ನೆಗೂ ಒಂದೇ ಉತ್ತರ, 'ನಾನು ಯಾವ ನಿಂದ್ಯ ಕೆಲಸವನ್ನೂ ಈ ತನಕ ಮಾಡಿಲ್ಲ''. ನ್ಯಾಯಾಧೀಶನು ಬೇಸತ್ತನು. ಕಡೆಗೆ ''ತೀರ್ಪನ್ನು ನಾಳೆ ಕೊಡಿಸುವೆನೆ''ಂದನು.

ಶನಿವಾರವಾದುದರಿಂದ ಶಾಲೆಗೆ ರಜೆ. ವಿದ್ಯಾರ್ಥಿಗಳೆಲ್ಲರೂ ನೆರೆದಿದ್ದರು. ತೀರ್ಪು ಓದಲಾಯಿತು, ಅದರಲ್ಲಿ

''ಈ ಕೈದಿಯು ನಿಜವಾಗಿಯೂ ಮುರಲಿ ಎಂಬವಳೊಡನೆ ಅಕ್ರಮವಾಗಿ ನಡೆದಿರುವಂತೆ ತೋರುತ್ತದೆ. ಎಷ್ಟೋ ಕಾರಣಗಳು ಇದನ್ನೇ ಸಮರ್ಥಿಸುತ್ತಿವೆ ಆದುದರಿಂದ ಇವನಿಗೆ ಒಂದು ತಿಂಗಳ ಸಜೆಯನ್ನು ವಿಧಿಸಿರುವೆನು (ವಿದ್ಯಾರ್ಥಿಯಾದುದರಿಂದ) ಸಜೆಯು ಬೇಡವೆಂದಿದ್ದರೆ ಒಂದು ನೂರು ರೂಪಾಯಿ ದಂಡ ತೆರಬೇಕು,'' ಎಂದಿತ್ತು.

ಗೋಪಾಲನು ಮುಂದರಿದು ಬಂದನು ಮುಖವು ಕೆಂಪಾಗಿತ್ತು. ಬಂದು ನ್ಯಾಯಾಧೀಶನ ಮುಂದೆ ನಿಂತುಕೊಂಡನು. ಬಳಿಕ ಗಂಭೀರ, ಕಠೋರ ನುಡಿಯಿಂದ ಹೇಳಿದನು.

'ನಾನು ಆಪಾದಿತನು. ನನ್ನನ್ನು ಎಲ್ಲರೂ ''ಸತ್ಯನಾದಿ ಬಂದಿ'' ಎಂದು ಮುಂದೆ ತಿಳಿಯಬಹುದು ನನ್ನ ಪವಿತ್ರ ಹೆಸರಿಗೆ. ಪವಿತ್ರ ಕುಲಕ್ಕೆ, ಪವಿತ್ರ ಹಿಂದೂಸ್ಥಾನಕ್ಕೆ, ಅಪಕೀರ್ತಿಯನ್ನು ತರುವ ಕೆಲಸವು ನನ್ನಿಂದ ಎಂದೂ ಆಗದು ಈಗ ಪ್ರಮಾಣ ಮಾಡಿ ಹೇಳುತ್ತೇನೆ; ನಾನು ಈ ಕೆಲಸವನ್ನು ಮಾಡಿಲ್ಲ ಆದರು ನ್ಯಾಯಾಧೀಶರ ಅಜ್ಞೆಯಂತೆ ಒಂದು ತಿಂಗಳುಗಳ ಕಾಲ ಕಾರಾಗೃಹದಲ್ಲಿ ಕುಳಿತು ತೊಳ್ಳುವೆನು. ಆದರೆ.. (ಸಿಟ್ಟಿನ ಭರದಲ್ಲಿ ಮಾತು ಅಸ್ಪಷ್ಟ) ಪರಮ ಪೂಜ್ಯ ಭರತ ಮಾತೆಯ ಉದರಲ್ಲಿ ಹುಟ್ಟಿದ್ದ ನಾನು ನನ್ನ ಪ್ರತಿಜ್ಞೆಯನ್ನು ಪೂರೈಸುವೆನು. ಕೇಸರಿ! ನಾನು ಕಾರಾಗೃಹದಿಂದ ಹೊರ ಬಿದ್ದ ಕೂಡಲೇ, ಪ್ರತೀಕಾರವನ್ನು ಮಾಡುವೆನು ಎಂದನು

~~ಎಲ್ಲರೂ ದಂಗು ಬಡಿದು ಕುಳಿತರು. ವೇಣು ಗೋಪಾಲನು~~ ಸೆರೆ ಮನೆಯಲ್ಲಿ ಮರಿಯಾದನು.

ಆ ರಾತ್ರೆಯಲ್ಲಿ ನ್ಯಾಯಾಧೀಶನು ತನ್ನ ಮನೆಯ ಕೋಣೆಯಲ್ಲಿ ಏನೇನೊ ಆಲೋಚಿಸುತ್ತಾ ಕುಳಿತಿದ್ದನು. ಆರೋ ಒಳಗೆ ಬಂದಂತಾಗಲು ತಿರುಗಿ ನೋಡಿದನು. ವೇಣು ಗೋಪಾಲನ ಭಯಂಕರ ಮೂರ್ತಿಯು ಕಂಡಿತು. ''ಏಕೆ.. ಬಂದೆ?'' ಎಂದು ಉಬ್ಬಿದ ಕಂಠದಿಂದ ಕೇಳಿದನು. ವೇಣು ಗೋಪಾಲನು ''ನೀನು ನ್ಯಾಯಾಧೀಶರೆಂದು ಏನಾದರೂ ಬರೆದರೆ, ದೇವರು ಸಂತೋಷಪಡನು. ನನ್ನ ತಪ್ಪು ನಿನ್ನ ಮನಸ್ಸಿಗೆ ನಿಷ್ಕಾರಣವೆಂದು ತೋರದಿರಬಹುದು. ಆದರೆ ನಾನು ಸತ್ಯ ಸಂಗತಿಯನ್ನು ಹೇಳಿಲ್ಲ; ಹೇಳುವುದೂ ಇಲ್ಲ. ಈಗ ನಾನು ನಿನಗೆ ಬುದ್ಧಿಗಲಿಸಲು ಬಂದಿರುವೆನು. ನಾನು ತಪ್ಪಿತಸ್ಥನಲ್ಲ. ಇನ್ನು ಮುಂದಾದರೂ ಅಂತಹ ದುಷ್ಟ ಕೆಲಸವು ನನ್ನಿಂದ ಎಂದೂ ಆಗಲಾರದು. ನೀನು ನ್ಯಾಯಾಧೀಶನಾಗಿ ಹೀಗೆ ಮಾಡಿದುದು ನಿನ್ನ ಮಟ್ಟಿಗೆ ಸಮರ್ಪಕವೆಂದು ತೋರಿರಬಹುದು. ನನ್ನ ಉಪಾಧ್ಯಾಯರು ಒಂದು ವೇಳೆ ಈ ವಿಚಾರಣೆಯಲ್ಲಿ ಕೈ ಹಾಕಿದ್ದರೆ,...

ನಾನು ನಿನ್ನನ್ನು ಅಂತ್ಯಗೊಳಿಸಬೇಕೆಂದು ಬಂದಿರುವೆನು. ಆದರೆ, ಬೇಡ ಈ ಸಾರಿ ನಿನ್ನನ್ನು ಸುಮ್ಮನೆ ಬಿಡುವೆನು. ಇನ್ನು ಮುಂದೆ, ಇಂತಹ ಕೆಲಸವನ್ನು ಮಾಡಿ, ಎಲ್ಲರಿಂದಲೂ ತಿರಸ್ಕೃತನಾಗಬೇಡ, ಇದೇ ನನ್ನ ಕೊನೆಯ ಮಾತು.''

ಅಲ್ಲಿಂದ ಅವನು ಮುರಲಿಯ ಮನೆಗೆ ಬಂದನು. ಆಗ ಅವಳು ಪರೀಕ್ಷೆಯ ಸಿದ್ಧತೆಯಲ್ಲಿದ್ದಳು. ವೇಣುಗೋಪಾಲನು ಅವಳಿರುವ ಕೋಣೆಗೆ ಹೋದನು. ಅವಳ ಸರ್ವಾಂಗವೂ ನಡುಗಲಾರಂಭಿಸಿತು. ಅವನ ಕೈಯಲ್ಲಿದ್ದ ಒಂದು ಚೂರಿಯನ್ನು ದಿಟ್ಟಿಸಿ ನೋಡಲಾರಂಭಿಸಿದಳು. ಬಾಯಿಯಿಂದ ಮಾತು ಹೊರಡಲಿಲ್ಲ. ವೇಣುವೂ ಸುಮ್ಮನಿದ್ದನು.

''ಇದು ನನ್ನ ಪ್ರಥಮದ ಮಾತು. ನಿನ್ನೊಡನೆ ಈ ತನಕ ಮಾತಾಡದಿದ್ದರೂ ನಾನು ನಿನ್ನಲ್ಲಿ ಅಕ್ರಮವಾಗಿ ನಡೆದೆನೆಂದು ನೀನಾವ ದುಃಖದಿಂದ ಹೇಳಿದೆ? ಸ್ತ್ರೀಯರಿಗೆ ಪವಿತ್ರವಾದ ವಾತಿವ್ರತ್ಯವು ನಿನ್ನಲ್ಲಿದ್ದರೆ, ನೀನು ಈ ರೀತಿ ಎಂದೂ ಆಚರಿಸುತಿದ್ದಿಲ್ಲ ನಿನ್ನ ಪ್ರೇಮ ಪತ್ರವನ್ನು ಕಂಡು ನಾನು ಬಹಳ ಸಂತೋಷಪಟ್ಟಿದ್ದೆನು ಆದರೆ, . '' ಮುಂದೆ ಮಾತಿಲ್ಲ.

''ಆದರೇನು?'' ಎಂದಳು ಮುರಲಿ.

''ನನ್ನ ಪ್ರತಿಜ್ಞೆಯನ್ನು ನೆರವೇರಿಸಲು ಬಂದಿರುವೆನು'

''ಇಲ್ಲ, ನೀವು ಅಷ್ಟು ಕ್ರೂರರಲ್ಲ, ನಮ್ಮಲ್ಲಿ ಅಂತಹ ಬುದ್ಧಿಯು ಹುಟ್ಟಲಿಕ್ಕಿಲ್ಲ. ನನ್ನನ್ನು ಹೆದರಿಸಲು ಹೇಳಿದಿರಲ್ಲವೆ?''

''ಮುಚ್ಚು ಬಾಯಿ. ಸ್ತ್ರೀಯರ ಕೊಂಕು ಬುದ್ಧಿಯು ನಿನ್ನನ್ನು ಎಂದು ಸೊಂಕಿತೋ ನಾನರಿಯೆ. ನಾನು ನನ್ನ ಪ್ರತಿಜ್ಞೆಯನ್ನು ತೀರಿಸದೆ, ಉಳಿಯೆನು. ನಾನು ನಿನ್ನನ್ನು ಸಂಹರಿಸಬೇಕೆಂದು ಬಂದಿರುವೆನು. ಆದರೆ ಈ ದಿನ ನಾನು ಬೇರೆ ಕೆಲಸವನ್ನು ಮಾಡಿ ಬಳಲಿರುವೆನು ಆದುದರಿಂದ ಇನ್ನೊಮ್ಮೆ ಬರುವೆನು.'' ವೇಣು ~~ಗೋಪಾಲನು~~ ಮರಿಯಾದನು.

ಮುರಲಿಗೆ ರಾತ್ರೆ ಸರಿಯಾಗಿ ನಿದ್ದೆಯಿಲ್ಲ.

ಕೆಲವು ದಿನಗಳು ಕಳೆದುವು. ಸುಮಾರು ಮಧ್ಯ ರಾತ್ರೆಯ ಸಮಯಕ್ಕೆ ವೇಣು ಗೋಪಾಲನು ಬಾಗಿಲನ್ನು ತಟ್ಟಿದನು. ಮುರಲಿಯು ಒಂದು ಬಾಗಿಲನ್ನು ತೆರೆದಳು. (ಅವಳು ನಿದ್ದೆಮಾಡಿಲ್ಲ.) ಅವಳ ಕೋಣೆಯಲ್ಲಿ ದೀಪವು ಇನ್ನೂ ಉರಿದಿತ್ತು. ಆ ಮಸಕು ಬೆಳಕಿನಲ್ಲಿ ಗೋಪಾಲನ ಚೂರಿಯು ಒಮ್ಮೆ ಹೊಳೆಯಿತು. ಮುರಲಿಯು ಚಿಕಿತಳಾದಳು.

''ಈಗ ನಾನು ಪ್ರತೀಕಾರವನ್ನು ಮಾಡಲು ಬಂದಿರುವೆನು, ಸಿದ್ಧಳಾಗು.'' ಎಂದು ನಿಶ್ಶಬ್ದ ರಾತ್ರೆಯಲ್ಲಿ ಎಲ್ಲಿಂದಲೋ ಹೊರಟು ಬಂದಂತೆ ಕೇಳಿಸಿತು! ಪುನಃ ನಿಶ್ಶಬ್ದ!

''ನನ್ನನ್ನು ನಿಷ್ಕಾರಣವಾಗಿ ಕಾರಾಗಾರದಲ್ಲಿ ಕೊಳೆಯುವಂತೆ ಮಾಡಿದೆಯಲ್ಲಾ! ನಾನೇನು ಈ ತನಕ ದೂರಿದ್ದೆನೇ? ನಿನ್ನ ಅಂದಿನ

ಪತ್ರವನ್ನು ನಾನು ಭದ್ರವಾಗಿಟ್ಟಿರುವೆನೆಂಬುದು ನಿನಗೆ ತಿಳಿಯುವುದೆಂತು? ಅಂದು ಶಾಲೆಯಲ್ಲಿ ನಾನು ಇನ್ನೊಂದು ಪತ್ರವನ್ನು ಹರಿದು, ಜನರಿಗೆ ನನ್ನಲ್ಲಿ ನಂಬಿಗೆಯನ್ನು ಹುಟ್ಟಿಸಿರುವೆನು. ಅಲ್ಲದೆ ಬೇರೇನೂ ಇಲ್ಲವೆಂಬುದನ್ನು ನಿನ್ನಂತಹ ಪ್ರಮುದೆಯರು ತಿಳಿಯುವ ಬಗೆಯಿದೆಯೇ? ನಿನ್ನನ್ನು ಪ್ರೀತಿಸಿದೆನು; ಮದುವೆಯಾಗಬೇಕೆಂದಿದ್ದೆನು. ಆದರೆ ನೀನು ನ್ಯಾಯಸ್ಥಾನಕ್ಕೆ ನನ್ನನ್ನು ಬರ ಮಾಡಿದ ಕೂಡಲೇ, ನಿನ್ನನ್ನು ಎಂದೂ ವಿವಾಹವಾಗೆನೆಂದು ದೃಢ ಪ್ರತಿಜ್ಞೆಯನ್ನು ಮಾಡಿದ್ದೆನು. ' ನನ್ನ ನಿಶ್ಚಿತಾರ್ಥದಂತೆ ನಾನೀಗ ನಿನ್ನ ರಕ್ತವನ್ನು ಹೀರಲು ಬಂದಿರುವೆನು, ಏನನ್ನುವೆ?''

ವೇಣು ಗೋವಾಲನು ಮಾತಾಡುತಿದ್ದಂತೆಯೇ ಮುರಲಿಯ ಕಣ್ಣಲ್ಲಿ ನೀರು ಸುರಿಯಲಾರಂಭವಾಯಿತು. ''ಕ್ಷಮಿಸು'' ಎಂದು ಅಗಾಧ ಗುಹೆಯಿಂದ ಹೊರಟಂತೆ ಶಬ್ದವು ಕೇಳಿಸಿತು ''ಇಲ್ಲ'' ಎಂಬುದು ಉತ್ತರ.

ಮುರಲಿಯು ವೇಣು ಗೋವಾಲನ ಮುಂದೆ ಮೊಣಕಾಲೂರಿ ಕುಳಿತಿದ್ದಳು. ಆದರೆ ಅವನು ತನ್ನ ಚೂರಿಯನ್ನು ಎತ್ತಿ ಹಿಡಿದಿದ್ದನು ಅವಳ ಕಣ್ಣಿಂದ ಕಂಬನಿಯು ಸುರಿದು ಅವಳ ಎದೆಯನ್ನು ತೊಯಿಸುತಿತ್ತು. ಆ ತರುಣನೂ, ಕಲ್ಮನನಾಗಿ ಬಂದಿದ್ದರೂ, ಒಮ್ಮೆ ಕಣ್ಣೀರನ್ನು ಸುರಿಸಿದನು. ಬಳಿಕ ''ನನ್ನ ಪ್ರತಿಜ್ಞೆಯನ್ನು ಪೂರೈಸದೆ ಬಿಡೆನು'' ಎಂದು.

ಮಾತು ಮುಗಿಯುವುದರೊಳಗೆ ಅವಳ ಅಧರವು ಗೋಪಾಲನ ಧ್ವರಲ್ಲಾಯಿತು. ಅವನ ಕತ್ತಿಯು ಕೆಳಗಿತ್ತು. ಪ್ರೇಮದ ಪ್ರತೀಕಾರ.

(ಹಿಂದೀ ಕಥೆಯೊಂದರ ಆಧಾರದಿಂದ)

'ಗೋಷ್ಠಬಾಲ.'

ಅಸ್ಪೃಶ್ಯತೆ ಅಥವಾ ಪಶ್ಚಾತ್ತಾಪ.

''ಹೊರಡು ಮನೆಯಿಂದ ಈ ಕ್ಷಣ''
''ಏನಪ್ಪಾ! ಇಷ್ಟು ಬಿರು ನುಡಿ''
''ಯಾರೊಂದಿಗೆ ನಿನ್ನೆ ತಿರುಗಾಡುತಿದ್ದೆ''
''ಜಲಗಾರನೊಂದಿಗೆ''
''ಇಳಿ ಮನೆಯಿಂದ''
''ಅವನೇನು ವಿಷಕಾರಕ ಜಂತುವೇ?''
''ನಮ್ಮ ಕುಲಕ್ಕೆ ನೀನು!!''
''ದೀನ ಕುಲಕ್ಕೆ ನೀವು!!!''

ಹಿಂದು ಬಲವಂತನು ಉತ್ತರವನ್ನೆಸೆದನು, ತಂದೆ ಗೋವಿಂದ ರಾಯನಿಗೆ.

ಗೋವಿಂದ ರಾಯನು ಶುದ್ಧ ಸನಾತನಿಯ ಬ್ರಾಹ್ಮಣನು. ಮಗ ಬಲವಂತನು ಮಾತ್ರ ದೀನರಾದ ಅಸ್ಪೃಶ್ಯರ ಪ್ರಿಯನು. ಇವನೀಗ ಹತ್ತನೆಯ ತರಗತಿಯಲ್ಲಿ ಓದುತ್ತಿರುವನು. ಇವನು ಶಾಲೆಯಲ್ಲಿ ಅಸ್ಪೃಶ್ಯರ ಮಕ್ಕಳಿಗೆ ಅಂಗಿ, ವಸ್ತ್ರ, ಪುಸ್ತಕ, ಲೇಖನಿ, ಹಣಕಾಸು ಮೊದಲಾದುವುಗಳಲ್ಲಿ ತನ್ನಿಂದಾದಷ್ಟು ಸಹಾಯವನ್ನು ಮಾಡುವನು. ಅವರೊಂದಿಗೆ ನಡೆಯುವುದು, ಅವರೊಂದಿಗೆ ಸಂಭಾಷಿಸುವುದು, ಬೇರೆಯವರನ್ನು ಅಸ್ಪೃಶ್ಯರೊಡನೆ ಸಂಪರ್ಕ ಮಾಡುವುದು, ಇವೇ ಮೊದಲಾದುವು ಇವನ ದಿನನಿತ್ಯದ ಕೆಲಸಗಳು. ಇದನ್ನು ಕಂಡು ಗೋವಿಂದ ರಾಯನಿಗೆ ಬಲವಾದ ಮುಖವಾಗ ಹತ್ತಿತು. ಎಷ್ಟೋ ರೀತಿ ಮಗನನ್ನು ತನ್ನ ದಾರಿಗೆ ತರಲು, ಪ್ರಯತ್ನ ಮಾಡಿದನು. ಆದರೆ ಅದು ಬಂಡೆಯ ಮೇಲೆ ಬಿದ್ದ ಮಳೆಯಂತಾಯಿತು. ಇಂದು ಗೋವಿಂದ ರಾಯನು ತನ್ನ ಮಗನ ಮೇಲಿನ ಕೋಪವನ್ನು ತಾನು ತಡೆಯಲಾರನು.

''ಬಲವಂತಾ! ನಿನಗೆ ಎಷ್ಟೋ ಸಲ ಹೇಳಿದ್ದಾಯಿತು. ನೀನು ವುಣ್ಯಕುಲದ ಬ್ರಾಹ್ಮಣ. ವಾಪ ವೃತ್ತಿಯ ಹೊಲೆಯರೊಡನೆ, ಸಹ ವಾಸ ಬೆಳೆಯಿಸುವುದು ನಿನ್ನ ಕರ್ತವ್ಯವಲ್ಲ. ಇದು ಧರ್ಮಕ್ಕೆ ಹಾನಿ ಎಂದರೆ ಅದನ್ನು ನೀನು ಕೇಳುವವನಲ್ಲ. ನೀನು ಬ್ರಾಹ್ಮಣಕುಲದಲ್ಲಿ ಜನಿಸಿದರೂ, ಅಸ್ಪೃಶ್ಯನಾಗಲಿರುವನು. ನನ್ನ ಹೊಟ್ಟೆಯ ಮಗನಾದರೂ, ಹೊಲೆಯರ ಕುಟುಂಬಿಕನು. ಈಗಲೇ ಅತ್ತ ಸರಿ. ಇಷ್ಟರ ವರೆಗೆ ನಿನ್ನನ್ನು ಸಾಕಿ ಸಲಹಿದೆನು. ಇನ್ನು ನನ್ನನ್ನು ಸಲಹುವುದು ನಿನ್ನ ಕೈ ಕೆಲಸ. ಈ ದಿನದಲ್ಲಿ ನಿನ್ನನ್ನು ನಾನು ಅಗಲುವುದು ಬಹು ಕಷ್ಟ, ಅಗಲದೆ ಬೇರ್ಕೆ ಉಪಾಯವಿಲ್ಲ ಧರ್ಮಕ್ಕಿಂತ ಹೆಚ್ಚಿನದು ಮಗನಲ್ಲ. ಇದು ನನ್ನ 'ಹಣೆ ಬರಹ'.''

''ಅಪ್ಪಾ! ನೀವು ಇಷ್ಟು ಶೋಕಿಸುವುದಕ್ಕೂ, ನನ್ನನ್ನು ದ್ವೇಷಿಸುವುದಕ್ಕೂ ಸ್ಪಳವಿಲ್ಲ. ಸರ್ವರಿಗೂ ದೇವರು ಒಬ್ಬನೇ ಎಂದ ಮೇಲೆ ಬಡವರಾದ ಹೊಲೆಯರನ್ನು, ಪ್ರೀತಿಸುವುದರಿಂದ ಆತನು ಸಿಟ್ಟಾಗನು. ಅಲ್ಲದೆ ನನ್ನನ್ನು ನೀವು ಅಗಲಿದರೂ ನಾನೀ ಕೆಲಸವನ್ನು ಬಿಡುವವನಲ್ಲ ಮತ್ತು . . .

''ಸಾಕುಮಾಡು ನಿನ್ನ ಧರ್ಮ ಪರನ. ಇಂದಿನಿಂದ ನೀನು ನನ್ನ ಮಗನಲ್ಲ. ಅಸ್ಪೃಶ್ಯನು. ಇಳಿ ಮನೆಯಿಂದ, ಮರು ಮಾತೆತ್ತ ಬೇಡ.''

''ಅಪ್ಪಾ! ಕ್ಷಮಿಸಿರಿ ಒಂದು . . . ''

''ಮಾತೆತ್ತ ಬೇಡ ಎನ್ನುತ್ತೇನಲ್ಲಾ! ಶುದ್ಧ ಬ್ರಾಹ್ಮಣ ಕುಲದಲ್ಲಿ ಹುಟ್ಟಿದ್ದಾನೆ, ಕಕ್ಕಸ ಬಳಿಯುವ ಮಾದಿಗರ ಸಂಗಡ ನಡೆಯುತ್ತಾನೆ. ತಂದೆ ತಾಯಿಗೆ ಅಪಕೀರ್ತಿ ತರಲಿಕ್ಕೆ ಹುಟ್ಟಿದ ನಂಜು.''

''ಸರಿ ತಾಯಿ ಮೊದಲೇ ಇಲ್ಲ! ತಂದೆ . . .''

* * * * *

ಇಂದು ಗೋವಿಂದ ರಾಯನ ಒಬ್ಬನೇ ಒಬ್ಬ ಮಗನಾದ ಬಲವಂತನು, ತನ್ನ ಮನೆಯಿಂದ ಹೊರ ಹೊರಟನು. ಹೇಗೊ ಹಲವರ ಉದಾರತ್ವಕ್ಕೆ ಕೈ ಜೋಡಿಸಿ ಬಿ. ಎ. ಪಾಸಾದನು. ಈಗ ಬಲವಂತನು ನವ ತರುಣನು. ಇಷ್ಟಾಗಲು ಕಲಿಯುವಿಕೆಗೆ ಇವನು ಇತಿ ಶ್ರೀಯನ್ನಿಟ್ಟು ಒಬ್ಬ ಬಡ ಜಲಗಾರನ ಮಗಳೊಂದಿಗೆ ವಿವಾಹ ಮಾಡಿಕೊಂಡನು. ಇಂದಿನಿಂದ ಅವನು ಅಸ್ಪೃಶ್ಯೋದ್ಧಾರಕ್ಕೆ ಕೈ ಹಚ್ಚಿದನು. 'ದೀನ ಬಂಧು' ಎಂಬ ಉಜ್ವಲ ಪತ್ರಿಕೆಯನ್ನು ತೆರೆದನು. ಇದರ

ಮೂಲಕ, ಅಸ್ಪೃಶ್ಯೋದ್ಧಾರದಿಂದ ಸರ್ವ ಜನರ, ಹಾಗೂ, ರಾಷ್ಟ್ರದ ಉನ್ನತಿಯು ಬಲಗೊಳ್ಳುತ್ತದೆಂದು ಜನರಲ್ಲಿ ದೃಢ ಪಡಿಸಿದನು. ಸಾವಿರಾರು ಹರಿಜನರನ್ನು ಉದ್ಧಾರಗೈದನು. ಸರ್ವ ಜನರ ವಿಶ್ವಾಸಕ್ಕೆ ಪಾತ್ರನಾದನು. ಸಜ್ಜನರು ದೊಡ್ಡವರು ಪಂಡಿತರು ಪಾಮರರು, ಎಲ್ಲರೂ ಬಲವಂತರಾಯನನ್ನು ಭಕ್ತಿಯಿಂದ ಪ್ರೀತಿಸ ಹತ್ತಿದರು.

ಇಂದಿಗೆ ಅಸ್ಪೃಶ್ಯತೆ ಎಂಬ ಪ್ರಬಲವಾದ ಸುಡಿಯು ಬಲಹೀನವಾಗುತ್ತಾ, ದಿನದಿಂದ ದಿನಕ್ಕೆ ಕ್ಷೀಣಿಸಹತ್ತಿತು. ಈ ಹೊಸ ಚಳವಳಿಯು ನಮ್ಮ ಗೋವಿಂದ ರಾಯನಿಗೆ ತಿಳಿಯದೇ, ಇಲ್ಲ.

"ದೀನ ದಯಾಳುವಾದ ಪರಮಾತ್ಮನೇ, ನನ್ನನ್ನು ಕ್ಷಮಿಸು. ಅಂತ್ಯಜರಲ್ಲಿ ಅತ್ಯಂತ ಅಂತ್ಯಜನು ನಾನು. ಬಡ ಪ್ರಾಣಿಗಳಾದ ಹೊಲೆಯರ ಉದ್ಧಾರಕ್ಕೆ ಹೊರಟ ನನ್ನ ಸುಪುತ್ರನನ್ನು ಕಳಕೊಂಡೆನು. ನಾನು ಹತ ಭಾಗ್ಯನು. ಆಪನು ದೀನ ದಯಾಳುವಾದ ನನ್ನ ಪ್ರೀತಿಯ ಶಿಷ್ಯನು. ಅವನ ಅನುಪಮ ಶಕ್ತಿ, ಅಸಾಯ ಶೂರತೆಯನ್ನು ಕೇಳಿದರೆ ಎಂಥಾ ಧೀರನಾದರೂ, ಅಧೀರನಾಗುವನು. ಇಲ್ಲವೇ ಹೇಡಿಯಾದರೂ, ವಿಷಮ ಪರಾಕ್ರಮಿಯಾಗುವನು. ಇದು ಅವನ ವಾಗ್ಜೈಖರಿ ಪ್ರಭಾವಷ್ಟು ಅವನ ಮನಧನವು ಬಹು ವಿಶಾಲವಾದುದು. ಧರ್ಮ! ಧರ್ಮ!!ವೆಂದು ಹೇಳುತಿದ್ದ ಶಾಸ್ತ್ರಿಯರೇ ಅವನ ಕೈದೀಪಗಳಂತಿರುವರು ಎಂದ ಮೇಲೆ ನನ್ನಂತಹವರ ಪಾಡೇನು? ಹೊಡ್ಡ ದೊಡ್ಡ ಹುದ್ದೆಗಳಿಲ್ಲವೂ, ದೂರದಲ್ಲಿ ನಿಲ್ಲುತಿದ್ದ ಅಸ್ಪೃಶ್ಯ ನೆಂದೇ, ಇವನು ದಾರಿಎರೆದನು. ಯಾರೊಡನೆ ಮಾತೆತ್ತಿದರೆ ಅಶುದ್ಧ ಪಾಗುತಿತ್ತೋ ಅಂತಹವರಿಗೀಗ ಸಾಷ್ಟಾಂಗವೆರಗುವ ಕಾಲ ಬಂತು. ದೇವಾ! ಇದು ನಿನ್ನ ವಿಚಿತ್ರಲ್ಲವೇ?" ಎಂದು ಗೋವಿಂದರಾಯ ನಿಂದು ದುಃಖಿಸ ಹತ್ತಿದನು.

ತನ್ನ ಧರ್ಮದ ಸೆರಗಿನಲ್ಲಿ, ಪಾಪದ ಗಂಟೆದೆ ಎಂದು ಗೋವಿಂದ ರಾಯನಿಗಿಂದು ತಿಳಿಯಿತು. ಈಗ ಇವನಿಗೆ ಹೊಟ್ಟೆಯಲ್ಲೂ ಕಷ್ಟವಾಗಿದೆ. ಪಿತ್ರಾರ್ಜಿತವಿದ್ದುದನ್ನೆಲ್ಲಾ ಧರ್ಮದ ದೇವತೆಗೆ ಬಲಿಯಿತ್ತನು. ತಾನಾಗಿ ಮಾಡಿದುದು ಶುದ್ಧಾಚಾರ ಮಾತ್ರವೇ! ಇಂದು 'ಅಸ್ಪೃಶ್ಯತೆ' ಎಂಬ ಹಗ್ಗವನ್ನು ಕಡಿದನು. ನಂದು ಅಗಲಿದ ಮಗನು ಬಳಿಗೆ ಇಂದು ನಡೆದನು.

"ಮಗನೇ! ನನ್ನ–ನ್ನು -ಕ್ಷೆ . . ಮಿ . . ಸು . . " ಎಂದು ಬಲವಂತ ರಾಯನ ಕಾಲಿಗೆ ಬಿದ್ದು ಗಳಗಳನೆ ದುಃಖಿಸಲಾರಂಭಿಸಿದನು. ಇದನ್ನು ಕಂಡು, ಬಲವಂತ ರಾಯನ ಹೃದಯ ಸಮುದ್ರವು ದುಃಖದ ಅಲೆಗಳನ್ನು ತಡೆಯಲಾರದೆ ಹೊರ ಸೂಸಿದುವು.

"ಅಪ್ಪಾ! ನಿಮ್ಮನ್ನು ಸಂಪೂರ್ಣವಾಗಿ ಪರಮಾತ್ಮನು ಕ್ಷಮಿಸಲಿ! ಜ್ಞಾನಶೂನ್ಯರಾದ ಪ್ರಾಣಿಗಳನ್ನು ದೂರಕ್ಕಿಟ್ಟಿದ್ದುದರಿಂದ ಮೂಡಿಬಂದ ಪಾಪವು, ನಿಮ್ಮಲ್ಲಿ ಪ್ರತ್ಯಕ್ಷವಾಗಿ, ಹೀಗೆ ಮಾಡಿತು. ಇಂದಿನಿಂದ ಅಸ್ಪೃಶ್ಯತೆಗೆ ಪವಿತ್ರತೆ ಬರುವಂತೆ ಪರಮಾತ್ಮನನ್ನು ಪ್ರಾರ್ಥಿಸಿರಿ.

ಚಳವಳವೆಂದರೆ- - -?

ಪ್ರಕೃತಿಯ ಪ್ರಗತಿ ಮೂಲಕವಾದ ಎಳೆಯುವ ಸೆಳೆತದಲ್ಲಿ ಬಳಲಿ ಬೆಂಡಾಗುವುದು ಮಾನವೀಯತೆಯ ಕಾರ್ಯರೂಪೀ ಕರ್ತವ್ಯದ ಭಾರದ ಹೊರೆಯು. ಆದರೆ ಮೇಲೆ ಹೇಳಿದ ಆ ಸೆಳೆತವು ಬಲು ಬವಣೆಯನ್ನು ಮಾತ್ರವೇ ತಂದೊಡ್ಡುವುದೆಂದು ಎಂದೂ ಅರ್ಥ ಮಾಡಬಾರದು; ಮತ್ತೇನು? ಒಮ್ಮೆ ಅದು ಸುಡುವ ಗರಳವನ್ನು ಕಾರಬಹುದು; ಮತ್ತೊಮ್ಮೆ ಸವಿಯಾದ ಅಮೃತ ರಸವನ್ನು ಸರಿಯಾಗಿ ಸುರಿಸಬಹುದು. ಅಂತೂ ಸಾಮಾನ್ಯ ಜನತೆಗೆ ಅರ್ಥವಾಗದ ಯಾವುದೋ ಒಂದು ಅನಿಶ್ಚಿತ ಧೋರಣೆಯಿಂದ ಅದು ಮುಂದುವರಿಯುತ್ತಿದೆ ಎಂಬುದು ಸತ್ಯವೇ. ಹಾಗಾದರೆ, ಕರ್ತವ್ಯದಲ್ಲಿರುವ ಸಮತೆಯ ಸಾಮರಸ್ಯದಿಂದ ಸಿಹಿಯಾದ ಸವಿಯನ್ನುತವೂ, ವಿಷಮತೆಯ ವೈರಸ್ಯದಿಂದ ವಿಷಮಯವಾದ ಫಲದ್ರೂಪವೂ—ಕೊನೆಗೆ—ಬಂದೊದಗಬಹುದಂಬುದನ್ನು ಯಾರೂ ಮರೆಯಬಾರದು.

ಇನ್ನೀಗ ನಾವು ಹೇಳಹೋಗುವುದು ಚಳವಳದ ಕುರಿತು ಮಾತುಗಳನ್ನು. ಹೀಗಿರುವಾಗ ಈ ಸಂದರ್ಭದಲ್ಲಿ ಇದಕ್ಕೆ 'ಚಳವಳತ್ವ' ಸಿದ್ಧಿಯು ಹೇಗೆ ಸಾಧ್ಯವಾಯಿತೆಂಬುದನ್ನು ವಿವೇಚಿಸುವುದು ಅಪ್ರಕೃತವಾಗಲಿ, ಅಸಂಗತವಾಗಲಿ ಆಗಲಾರದು, ಆದರೆ—ಈಗಿನ ಕಾಲದಲ್ಲಿ ಚಳವಳವೆಂದ ಕೂಡಲೇ ತಿಳಿಯುವುದು ಎಲ್ಲರಿಗೂ ಅದರರ್ಥ. ಆ ಮೂಲಮಂತ್ರದ ಪವಿತ್ರ ಹೆಸರಿನಲ್ಲಿ ಕುಂದನ್ನುಂಟುಮಾಡುವ, ಅಸತ್ಯ ವೃತ್ತಿಯ ಅನರ್ಥ ಪರಂಪರೆಯ ಕಾರ್ಯಧೋರಣವೂ ಕೂಡ ಅವರ ಮನೋರಾಜ್ಯದ ಭ್ರಾಮಕ ಕಲ್ಪನೆಗಳ ತಳಹದಿಯಲ್ಲಿ ಸ್ಥಿರವಾಗಿ ನೆಲೆಯೂರಿ ಬಿಡುವುದೀಗ, ತತ್‌ಕ್ಷಣದಲ್ಲಿ ಕುರುಡು ನಂಬಿಕೆಯ ಬರಡು ಜನರು ಭರದಿಂದ ಮುಂದೊತ್ತುತ್ತಾತ್ತಾ, ಚಳವಳವೆಂಬ ಹೆಸರಿನಲ್ಲಿರುವ ಪವಿತ್ರ ಹಾಗೂ ಪ್ರೇಮಲ ಸ್ವಭಾವದನ್ನಿಗ್ಧವಾತಾವರಣದ ನಿಶ್ಚಿತವಾದ ಜ್ಞಾನಾಂಶದ ತಿಳಿವಿಲ್ಲದಿರುವುದೇ ಇದಕ್ಕೆ ಮೂಲ ಕಾರಣವಾಗಿದೆ ಚಳವಳವೆಂದರೇನು?—ಸಾಮಾನ್ಯವಾಗಿ ಕ್ರಾಂತಿ (Revolution) ಎಂದು ಅರ್ಥ ಮಾಡಬಹುದಲ್ಲವೆ? ಆದರೆ ಕ್ರಾಂತಿಯು ಚಳವಳದ ಸಂಪೂರ್ಣಾರ್ಥವನ್ನು ಕೊಡಬಹುದೆಂದು ನಮ್ಮ ಸತ್ಸಂಕಲ್ಪವಿಲ್ಲ; ಏಕೆಂದರೆ, ಕ್ರಾಂತಿಯು—ಉತ್ಕ್ರಾಂತಿಯೊಗಿ—ಹಬ್ಬಿ ಸ್ಥೈರ್ಯದ ಭದ್ರ ಕವಚವನ್ನೊಡೆದು, ಅಶಾಂತತೆಯ ಮಾಂತ್ರಿಕ ಮಾಟವನ್ನುಂಟುಮಾಡಬಹುದಾಗಿದೆ. ಚಳವಳವಾದರೆ ಅಂತಿಲ್ಲ; ಆದರಲ್ಲಿ ಅಶಾಂತತೆಯ ಮಾತಿಲ್ಲ; ಒಮ್ಮೆ ನಮ್ಮ ಮನೋರಾಜ್ಯದಲ್ಲಿ ಅಶಾಂತತೆಯ ಮಬ್ಬು ಸ್ವಪ್ನ ಸಾಮ್ರಾಜ್ಯದಂತೆ ಕನವರಿಸಿದರೂ, ಸತ್ಯ—ಅಹಿಂಸೆಗಳಚಿತ್—ಸತ್ ಪ್ರಕಾಶಗಳು ಬೆಳಗಲು ಏಕ-ಮಾತ್ರ ಸುಗಮ ಸಾಧ್ಯ ಪವಿತ್ರ ಮಾರ್ಗದ ಮೂಲರೂಪವು ಕಾಣದಿರದು.

ಹೀಗೆಂದರೆ ಏನೆಂದು ಹೇಳಿದ ಹಾಗಾಯಿತು. ಚಳವಳವು ಕ್ರಾಂತಿಮೂಲಕವಲ್ಲವೆಂದಿಷ್ಟೆ. ಹಾಗಾದರೆ ಶಾಂತಿಮೂಲಕವೆನ್ನಲೆ? ಈ ಅಭಿಪ್ರಾಯವೂ ಚಿಂತ್ಯವಾಗಿದೆ. ಶಾಂತಿ ಮೂಲಕ ಚಳವಳವೆಂದ ಮಾತ್ರಕ್ಕೆ ನಿಶ್ಚಿತಾಭಿಪ್ರಾಯವು ದೊರಕಿದ ಹಾಗಾಗಲಿಲ್ಲ. ಏಕೆಂದರೆ ಶಾಂತಿಯು ಶಮಕ್ಕೆ ಮೂಲವು; ದಮದದಾಂತಿಯನ್ನು ಹಿಮ್ಮೆಟ್ಟಿ, ಶಮದ ಶಾಂತಿಯು ಮುನ್ನಡೆಯುವುದಾಗಿದೆ; ಶಾಂತಿಯೇ

ಸ್ಥಿರ ಪ್ರವಾಹವಾಗಿ ಪರಿಣಮಿಸಿ ವಿರಕ್ತಿಯ ವೈರಾಗ್ಯದ ಕಡೆಗೆ ಹಾದು ಹೋಗಲು ಹಾತೊರೆಯುವುದು; ಪರಿಣಾಮದಲ್ಲಿ ವಿರಕ್ತಿಯ ನಿವೃತ್ತಿಯನ್ನೇ ಹುಡುಕಿಕೊಂಡು ಅಚಲವಾಗಿ ನೆಲೆಗೊಂಡ ಮೇಲೆ ಸಾಮಾನ್ಯವಾಗಿ ವ್ಯಾವಹಾರಿಕ ಜಗತ್ತಿನ ಕಡೆಗೆ ಅದರ ದೃಷ್ಟಿಕೋನವಿರದು. ಹೀಗೆಂದ ಮಾತ್ರಕ್ಕೇನೇ ಶಾಂತಿಯು ಚಳವಳಿಯಿಂದ ಭಿನ್ನವೆಂದ ಹಾಗಾಯಿತು.

ಹೀಗೆ ನಾವು ಹೇಳಹೋಗುವುದರಿಂದ ಏನನ್ನೂ ಹೇಳಿದ ಹಾಗಾಗಲಿಲ್ಲವೆಂದು ನೀವು ತಿಳಿಯಬಹುದು; ಆದರೆ ಇದು ಅರ್ಥವಿಲ್ಲದ ಅನರ್ಥ ವಚನವಲ್ಲ; ಸತ್ಯಾರ್ಧ ಪ್ರಕಾಶವು ಸಮಾಧಿಯ ಸ್ಥಿರ ಬುದ್ಧಿಯಲ್ಲಿ ಹೊಳೆದೊಡನೆಯೇ ನಿಜವಾದ ಚಳವಳಿ ಶಬ್ದದ ಅರ್ಥವು ಕಾರ್ಯರೂಪೀ ಮಾನುಷಕತೆಯಲ್ಲಿ ಗಮುಕವಾಗುವುದು. ಹಾಗೂ ಸಂಕುಚಿತ ರೀತಿಯಲ್ಲಿ ವಿವರಿಸುವುದಿದ್ದರೆ, ಕ್ರಾಂತಿಮೂಲಕವಾಗಿ ಹುಡುಕುವ ಶಾಂತಿಯು ಚಳವಳಿವಲ್ಲ; ಶಾಂತಿ ಮೂಲಕವಾದ ಕ್ರಾಂತಿಯೇ ಚಳವಳಿದ ಧ್ಯೇಯವು. ಶಾಂತಿಯ ಲೋಕಾತೀತನೀರವಾಗಲಿ, ಕ್ರಾಂತಿಯ ಪ್ರಕ್ಷುಬ್ಧ ಮಾಂತ್ರಿಕತೆಯ ಮಾಟವಾಗಲಿ—ಚಳವಳಿನೆನ್ನಲಾಗುವುದಿಲ್ಲ; "ವಿಶಾಲವಾದ ಜಗತ್ತಿನ ವಿಶೇಷವಾದ ಮಾಹಿತಿಯ ಪರಿಸ್ಥಿತಿಯನ್ನೂ ಮನನ ಮಾಡಿ—ಅದನ್ನೂ ಶಾಂತತೆಯ ವಿಚಾರದ ತಳಹದಿಯ ಮೇಲೆ ಕಟ್ಟಲುದ್ಯೋಗಿಸುವ; ಮಾನವೀಯತೆಯ ಸಹಜವಾದ ಕ್ರಾಂತಿಯೇ ಚಳವಳಿ"ವೆಂದು ಹೇಳಿ, ಬಯಸುವೆವು.

"ದುರ್ಗಾದಾಸ"

ಪತ್ರಿಕಾ ಪ್ರಪಂಚ.

ಪ್ರಬುದ್ಧ ಕರ್ಣಾಟಕದ ಈ ಸಲದ ವಿನಾಯಕನ ಸಂಚಿಕೆಯಲ್ಲಿ ತೀ. ನಂ. ಶ್ರೀ ಕಂಠಯ್ಯನವರು 'ಕಾಳಿದಾಸನ ನಾಟಕಗಳಲ್ಲಿ ದುರಂತ ವಸ್ತುವಿನ್ಯಾಸ'ದ ಕುರಿತು ಸವಿಸ್ತಾರವಾದ ಲೇಖನವನ್ನು ಬರೆದಿರುವರು. ಇದರಲ್ಲಿ ನಮ್ಮ ದೇಶದಲ್ಲಿ ದುರಂತ ನಾಟಕದ ಈ ಅತ್ಯಂತಾಭಾವಕ್ಕೆ ಏನು ಕಾರಣವೆಂಬುದನ್ನು ಚರ್ಚಿಸಿ, ಕಾಳಿದಾಸನ ಪ್ರಥಮ ನಾಟಕವು 'ಮೂಲವಿಕಾಗ್ನಿಮಿತ್ರ'ವೆಂಬುದನ್ನು ಸಾಧಾರವಾಗಿ ಸೂಚಿಸಿರುವರು. ಕಾಳಿದಾಸನ 'ಅಭಿಜ್ಞಾನ ಶಾಕುಂತಲ'ದಲ್ಲಿ ಶೃಂಗಾರರಸವೇ ಪ್ರಧಾನರಸವೆಂದೂ, ಈ ಶಾಕುಂತಲಾ ನಾಟಕಕ್ಕೆ ಮಹಾಭಾರತದ ಶಾಕುಂತಲೋಪಾಖ್ಯಾನವೇ ಮೂಲವೆಂದು ಕೆಲವರೂ, ಪ್ರೊ. ಎಚ್ ಶರ್ಮಾ ಎಂಬವರು ಬಂಗಾಳದಲ್ಲಿ ಪ್ರಚುರವಿರುವ ಪದ್ಮ ಪುರಾಣದ ಮಾತೃಕೆಗಳಲ್ಲಿ ಶಾಕುಂತಲೋಪಾಖ್ಯಾನದ ಬೇರೊಂದು ಪಾಠವೇ ಮೂಲವಾಗಿ ಪರಿಷ್ಕರಿಸಿದ್ದಾರೆಂದೂ, ಪರಂತು ಪ್ರೊ. ಎಚ್. ಶರ್ಮರು ಸೂಚಿಸುವ ಸಾಮ್ಯವೇ ಸರಿಯಾಗಿರಬಹುದೆಂದೂ ಉಲ್ಲೇಖಿಸಿರುವರು. ಕಾಳಿದಾಸನಿಗೆ ದುರಂತ ದೃಷ್ಟಿಯೇ ಇರಲಿಲ್ಲವೆಂದು ಲೇಖಕರು ನಿಷ್ಪಕ್ಷಪಾತವಾಗಿ ಸಮಾಲೋಚಿಸಿರುವರು. ಊರ್ವಶೀ ಪುರೂರವರ ಪ್ರಣಯ ಪ್ರಸಂಗವು ಋಗ್ವೇದದಲ್ಲಿಯೂ, ಶತಪಥ ಬ್ರಾಹ್ಮಣದಲ್ಲಿಯೂ, ಪದ್ಮ ಪುರಾಣ (ಆನಂದಾಶ್ರಮದ ಪರಿಷ್ಕರಣ—ಸೃಷ್ಟಿಖಂಡ. ೧೨)ದಲ್ಲಿಯೂ, ಮತ್ಸ್ಯಪುರಾಣದಲ್ಲಿಯೂ ಬಂದಿರುತ್ತದೆಂದಿರುವರು. ಇವುಗಳಲ್ಲಿ ಋಗ್ವೇದದಿಂದ ಶತಪಥ ಬ್ರಾಹ್ಮಣಕ್ಕೆ ಕಥೆಯ ಮೂಲಸೂತ್ರವು ಕೊಂಚ ಕೊಂಚ ಬದಲಾಯಿಸುತ್ತಾ ಹೋಗಿದೆಯೆಂದೂ, ಕಾಳಿದಾಸನ ವಿಕ್ರಮೋರ್ವಶೀಯವು ಅದರ ವಸ್ತುವಿಘಟನೆಗೂ, ತತ್ಪಶೂನ್ಯತೆಗೂ ಒಳಗಾಗಿ, ಈಗ ರಚಿತವಾಗಿರುವ ರೀತಿಯಲ್ಲೇ ಅದರ ಪರ್ಯವಸಾನವು ಅಸಮಂಜಸವಾಗಿದೆಯೆಂದೂ ಪ್ರಸ್ತಾಪಿಸಿರುವರು. ಸಂಸ್ಕೃತ ನಾಟಕಗಳಲ್ಲಿ ದುರಂತ ದೃಷ್ಟಿವೈಶಾಲ್ಯವು ತಪ್ಪಿಹೋಗಿದೆಯೆಂದೂ, ಇದು ವರೆಗೆ ದೊರೆತಿರುವ ನಾಟಕಗಳಲ್ಲಿ ಭಾಸನ 'ಊರುಭಂಗ'ವೇ ದುರಂತ ನಾಟಕವೆಂಬ ಹೆಸರಿಗೆ ಅರ್ಹವೆಂಬುದನ್ನೂ ಸೂಚಿಸಿರುವರು. ಈ ಎಲ್ಲಾ ವಿಷಯಗಳಿಂದ ಕಾಳಿದಾಸನ ಗ್ರಂಥಗಳ ವಿಮರ್ಶೆಯಾಗಿದೆಯೆಂದರೂ ಎನ್ನಬಹುದು.

ಇದೇ ಸಂಚಿಕೆಯಲ್ಲಿ ಬೌದ್ಧ ಧರ್ಮ ಪ್ರಚಾರಕರಲ್ಲಿ ಹೆಸರಾದ ಬೋಧಿ ಧರ್ಮನು ಚೀನಾ ಮೊದಲಾದ ಪರದೇಶಗಳಿಗೆ ಪ್ರಯಾಣ ಮಾಡಿ ಅಲ್ಲಿಯ ರಾಜ ಮನೆತನದವರನ್ನೂ, ಇತರರನ್ನೂ ಬೌದ್ಧ ಮತಕ್ಕೆ ಸೇರಿಸಿಕೊಂಡುದನ್ನು, ಅಲ್ಲಿ ಅವನ ಕುರಿತು ಪ್ರಚಲಿತವಿದ್ದು ಮಹತ್ಪಿಕೆಯನ್ನೂ ನಾ. ಕಸ್ತೂರಿಯವರು ಅರ್ಧಪೂರ್ಣವಾಗಿಯೂ, ಭಾವಗರ್ಭಿತವಾಗಿಯೂ ಬರೆದಿರುವರು. ಬೋಧಿ ಧರ್ಮನು ದಕ್ಷಿಣ ಭಾರತದ ದಕ್ಷಿಣ ಸಮುದ್ರ ತೀರದ ಒಂದು ಬ್ರಾಹ್ಮಣ ರಾಜ ಮನೆತನದವನೆಂದು ಚೀನದ ಊಟೆ ಚಕ್ರವರ್ತಿಯು ತಿಳಿದು ಋಣಿತನಾಡಿರುವನೆಂದೂ, ಆ ಕಾಲದಲ್ಲಿ ಅಂದರೆ ಕ್ರಿ. ಶ. ೫೦೦ರ ಸುಮಾರಿನಲ್ಲಿ ದಕ್ಷಿಣಾಪಥದ ರಾಜ ವಂಶದಲ್ಲಿ ಬ್ರಾಹ್ಮಣರು ಅತಿ ವಿರಳವೆಂದೂ, ಬಹುಶಃ ಬನವಾಸಿಯ ಕದಂಬರು ಮಾತ್ರ ಬ್ರಾಹ್ಮಣರಾಗಿದ್ದರೆಂದೂ, ಆದುದರಿಂದ ಬೋಧಿ ಧರ್ಮನು ಕದಂಬವಂಶಜಾತನಾಗಿ ಕನ್ನಡಿಗನಾಗಿದ್ದಿರಬಹುದೆಂದೂ ಊಹಿಸಿರುವರು.

ಇದೇ ಸಂಚಿಕೆಯಲ್ಲಿ ಎ. ಆರ್. ಕೃ. ಮತ್ತು ಬಿ. ವೆಂ. ಎಂಬವರು ಪರಭಣಿಯ ತಾಮ್ರಶಾಸನ ಮತ್ತು ಪಂಪಭಾರತದ ಕುರಿತು ಒಂದು ವಾಚನೀಯ ಲೇಖನವನ್ನು ಬರೆದಿರುವರು ಮುಳ್ಕಿಯಿಂದ ಹೊರಡುವ ಭಾರತಿಯ ಆಗೋಸ್ತು ತಿಂಗಳ ಸಂಚಿಕೆಯಲ್ಲಿ ಪರಭಣಿಯ ತಾಮ್ರಪಟ್ಟವನ್ನು ಎತ್ತಿ ಶ್ರೀಮಾನ್ ಮಂಜೇಶ್ವರ ಗೋವಿಂದ ವೈಗಳು ಪಂಪನ ದೇಶಕಾಲಗಳ ವಿಚಾರವೆಂಬ ಸಶೇಷವಾದ ವಿಮರ್ಶಾಪೂರಿತವಾದ ಮನನೀಯ ಲೇಖನವನ್ನು ಬರೆದಿರುವರು. ಪಂಪನು ಚಾಳುಕ್ಯವಂಶೋತ್ಪನ್ನನಾದ ಎರಡನೇ ಅರಿಕೇಸರಿಯ ಕಾಲದವನೆಂದು ತೋರಿ ಬರುತ್ತದೆ. ಈ ಲೇಖನಗಳಿಂದ ಪಂಪನ ದೇಶಕಾಲ ವಿಚಾರಗಳನ್ನು ತಿಳಿಯಬಹುದಾಗುತ್ತದೆ.

ಕಾ. ಮ. ಶಿ.

ಸ್ವೀಕಾರ ವಿಮರ್ಶೆ

(ಸ್ವದೇಶಾಭಿಮಾನಿಗೆ ಕೆಲವು ಸಮಯದಿಂದ ವಿಮರ್ಶೆಗಾಗಿ ಬರುತ್ತಿರುವ ಸಾಹಿತ್ಯಗಳ ಸ್ವೀಕಾರವನ್ನೂ ಹಾಕುವಷ್ಟು ಅನಾನುಕೂಲವಾಯಿತು. ಈ ಸಾಹಿತ್ಯ ಸಂಚಿಕೆಯಲ್ಲಿ ಕೆಲವುಗಳನ್ನು ಚುಟುಕಾಗಿ ಸ್ವೀಕರಿಸಿರುವೆವು. ಮುಂದಕ್ಕೆ ಬರುವ ಗ್ರಂಥಗಳ ಸವಿವರ ವಿಮರ್ಶೆಯನ್ನು ಕೊಡಬೇಕೆಂದಿದ್ದೆ.)

ಶಾರದೆಯ ಸಂಸಾರ ಅಥವಾ ಭಾಷಾ ಶಾಸ್ತ್ರ—ಬರೆದವರು, ಶ್ರೀ. ರಂಗಾಚಾರ್ಯ. ವಾ ಜಾಗಿರದಾರ, ಎಂ. ಎ. (ಲಂಡನ್) M. R. A. S., ಆನರರಿ ಸೆಂಸ್ಕೃತ ಲೆಕ್ಚರರ್, ಕರ್ನಾಟಕ ಕೋಲೇಜ್, ಧಾರವಾಡ. ಸಂಪಾದಕರು ಶ್ರೀ। ಆಲೂರ ವೆಂಕಟರಾಯರು. ಶಾರದೆಯ ಸಂಸಾರವೆಂದೊಡನೆ ಇದು ಕಥೆಯೆಂಬ ಭಾವನೆಯಾಗುವುದು. ಆದರೆ, ಇದು ಕಥೆಯಲ್ಲ—ಭಾಷಾ ಶಾಸ್ತ್ರ ಭಾಷೆಯನ್ನು ಶಾರದೆಯೆಂದು ಕರೆದಿರುವರು. ಆದರ ಸ್ವರೂಪ, ಭಾಷಾ ಶಾಸ್ತ್ರ ಆದರ ಪರಿವರ್ತನೆ, ಭಾಷೆಯ ಹಾನಿ, ಚಳವಳಿ—ನಿಯಮ, ಕ್ರಮ, ಶೃಂಗಾರ ಮೊದಲಾದ ಕುರಿತು ಉದಾತ್ತ ಭಾವನೆಗಳನ್ನು ಕೊಟ್ಟಿರುತ್ತಾರೆ. ಭಾಷೆಯಿಂದರೇನು, ಆದರ ಮಹತ್ವವೆಷ್ಟೆಂದು ತಿಳಿಯಲಿಚ್ಛಿಸುವವರು ಈ ಗ್ರಂಥವನ್ನು ಅಗತ್ಯ ಓದಬೇಕು. ಬೆಲೆ ರೂ. ೧.

ರಾಣಾರಾಜಸಿಂಹ—(ಯಕ್ಷಗಾನ ಪ್ರಬಂಧ) ಪ್ರಥಮ ಭಾಗ, ಅಂಕ ೧–೩, ಲೇಖಕರು ಪಂಡಿತ ಕೆ. ಪಿ. ವೆಂಕಪ್ಪ ಶೆಟ್ಟಿ, ಕವಿಭೂಷಣ ಬೆಳ್ತಂಗಡಿ, ಪ್ರಕಾಶಕ ಬಿ. ಲಕ್ಷ್ಮಣದೇವ ವಿದ್ಯಾರ್ಥಿ, ೫೬ ಪುಟಗಳು, ಬೆಲೆ ೫ ಆಣೆ, ಐತಿಹಾಸಿಕ ಯಕ್ಷಗಾನ ಪ್ರಬಂಧವಿದು. ಕಂದ ಪದ್ಯಗಳೂ, ತರತರದ ಪದ್ಯಗಳೂ ಇದರಲ್ಲಿ ಅಡಕವಾಗಿವೆ. ಯಕ್ಷಗಾನವು ಕನ್ನಡ ನಾಡ್ಯಾಯಕ್ಕೆ ಬೆಂಬಲವಾಗಿ ನಿಂತಿರುವ ಈ ವೇಳೆಯಲ್ಲಿ ಶ್ರೀ। ಶೆಟ್ಟರ ಯತ್ನವು ಬಹು ಪ್ರಯೋಜನಕಾರಿಯಾಗಿದೆ.

ಮಳೆಗಾಲದ ಮಲೆನಾಡು—ರಾಜಹಂಸ ಗ್ರಂಥಮಾಲೆಯಿಂದ ಹೊಸ ತಾಗಿ ಹೊರಟಿದೆ. ಬರೆದವರು, ಶ್ರೀ। ದಿವೇಕರ ಕೃಷ್ಣರಾಯರು ಭದ್ರಾವತಿ. ಬೆಲೆ ಮೂರಾಣೆ. ಧಾರವಾಡದಲ್ಲಿ ಕನ್ನಡ ಗ್ರಂಥಮಾಲೆಗಳು ಹೆಚ್ಚುತ್ತಿದ್ದು ಕರ್ನಾಟಕ ಮಾತೆಯ ಬೆಳವಣಿಗೆಯ ಚಿಹ್ನೆಯು ತೋರುತ್ತಿದೆ. ಮಳೆಗಾಲದ ಮಲೆನಾಡು ಎಂದರೆ ಹೃದಯಂಗಮವಾದ ಪತ್ತೇದಾರಿ ಕಥೆ. ಕಥಾ ವಸ್ತುವು ಉತ್ತಮವಿದೆ ಭಾಷಾಶೈಲಿಯು ಮಧುರವೆನ್ನಬಹುದು. ಸಾಮಾಜಿಕ ವಾತಾವರಣದ ಅರಿವಿದ್ದೇ ಈ ಕಥೆಯನ್ನು ಸೈಗೂಡಿಸಿರುತ್ತಾರೆ. ಎಲ್ಲರೂ ಪ್ರೋತ್ಸಾಹಿಸುವುದು ಧರ್ಮವಿದೆ.

ಭಾವನಾತ್ರಯೆಂ—ರಾಜಯೋಗ, ಕೋಕಶೋಕ, ಜೀವತತ್ವಗಳು ಅಡಕವಾಗಿರುವ ಪದ್ಯ ಪುಸ್ತಕ. ಬರೆದವರು, ಶ್ರೀ। ಹನುಮಾನ್ ವೆಂಕಟರಾಯ ಕವಿಗಳು ಇದರಲ್ಲಿರುವ ಹಿತೋಕ್ತಿಗಳ ಮಾದರಿಯೊಂದನ್ನು ಕೊಟ್ಟಿದೆ—

ಫಲಸಿದ್ಧಿ ಕರ್ಮಂ
ಫಲಮಿನಿತುಂ ಬೇಡೆನಿಪ್ಪ ಕರ್ಮಂಧರೆಯೊಳ್
ನಲವಿಂ ಪೆರರುಪಕೃತಿಗೈದನು
ವಲಮೆಂಬಾಕರ್ಮಮವನ ಪೂಜೆಗಳೆನಿಕುಂ

ಈ ಗ್ರಂಥವು ಪಂಡಿತರ ಮನೋರಂಜನೆಗಾಗಿ ಪಾಮರರಿಂದ ತಿಳಿದುಕೊಳ್ಳಲು ಕಬ್ಬಿಣದ ಕಡಲೆ. ಬೆಲೆ ೬ ಆಣೆ.

ಜ್ಞಾನಾಮೃತ—ಬರೆದವರು ಹರಿದಾಸ ಕುಕ್ಕಜೆ ಐತಪ್ಪ ಯಾನೆ ರಾಮಯ್ಯ ನ್ಯಾಳ. ಪ್ರಥಮ ಭಾಗ ಕಾರಣ, ಕರ್ಮ, ಜನ್ಮ, ಮಾಯೆ, ನಾಶ, ಕ್ಷೀಣ, ಭಾವೀತು ಎಂಬ ತತ್ವಗಳನ್ನು ಭಾಮಿನೀಷಟ್ಪದಿಯಲ್ಲಿ ಪ್ರತಿಪಾದಿಸಿ ಬೋಧಾಮೃತವನ್ನೀವುವ ಈ ಗ್ರಂಥವು ಮಾತ್ರೆ, ಭಾಷೆ, ಶೈಲಿಗಳಲ್ಲಿ ಶ್ರೇಯಸ್ಕರವಾಗಿದೆ. ಸರಳ ಭಾಷೆಯು ಗ್ರಂಥದ ಸೊಬಗನ್ನು ಹೆಚ್ಚಿಸಿದೆ. ತ್ವಾತಿಕ ಗ್ರಂಥಗಳ ಸಾಲಿನಲ್ಲಿ ನ್ಯಾಳರ ಪ್ರಯತ್ನವು ಹಿಂದೆ ನಿಲ್ಲದು. ೧೩೫ ಪುಟಗಳಿವೆ. ಬೆಲೆ ರೂ. ೧–೧೫–೦.

ವಿನೋದ ಚಿತ್ರಗಳು—ಬೆಲೆ ಹತ್ತಾಣೆ ಮಂಗಳೂರಿನ ಮಿತ್ರಮಂಡಳಿಯವರು ಪ್ರಕಟಿಸಿದುದು. ಶ್ರೀಗಳಾದ ಪಂಜೆ ಮಂಗೇಶರಾವ್, ಕಡೆಂಗೋಡ್ಲು ಶಂಕರ ಭಟ್, ಪಿ. ರಮಾನಂದರಾವ್, ಎಂ. ಎನ್. ಕಾಮತ್ ಮೊದಲಾದ ನುರಿತ ಹಿರಿಯ ಬರೆಹಗಾರರೂ, ಪೇಜಾವರ ಸದಾಶಿವರಾವ್, ಟಿ. ನಾರಾಯಣ ಭಟ್, ಕುದ್ಪಿ ವಾಸುದೇವ ಶೆಣೈ ಮೊದಲಾದ ಕಿರಿಯರೂ ಕೂಡಿ ಚಿತ್ರಗಳನ್ನು ಚಿತ್ರಿಸಿದರು. "ಅಧ್ಯಕ್ಷ ಆ ಮೈ" ಎಂಬ ಶಿರೋನಾಮೆಯಿಂದಲೇ ವಿನೋದ ಚಿತ್ರದಲ್ಲಿನ ವಿನೋದವು ಕಂಡು ಬರುವುದು. ಭಾಷೆಯ ಮಾಧುರ್ಯವನ್ನೂ, ಸುಧಾರಣೆಯನ್ನೂ ಮಂಡಳಿಯವರ ಇನ್ನಿತರ ಗ್ರಂಥಗಳಂತೆ ಇದರಲ್ಲೂ ಕಾಣಬಹುದು ಓದುಗರನ್ನು ಬೇಸರಗೊಳಿಸದ ಗ್ರಂಥ ಪೊಂದು ಬೇಕೆಂದಾದರೆ ಇದನ್ನು ತರಿಸಿಕೊಳ್ಳಲೇಬೇಕು

ಸ್ವರಾಜ್ಯೋದಯ ಅಥವಾ ಶಿವಾಜಿ—ಬೆಲೆ ಹತ್ತಾಣೆ. ಬರೆದವರು ಶ್ರೀ। ಎಂ. ರಾಳೇಕೇಂದ್ರರಾವ್, ಶಿವಮೊಗ್ಗ ಐತಿಹಾಸಿಕ ಕಾದಂಬರಿ. ಮೊಗಲರೆದುರು ಶಿವಾಜಿಯು ಹೇಗೆ ಸ್ವಾತಂತ್ರವನ್ನು ಗಳಿಸಿದನೆಂಬುದನ್ನು ವಿವರಿಸುತ್ತದೆ. ಲೇಖಕರು ಮೊಗಲ ಸಮ್ರಾಟನಾದ ಔರಂಗಜೇಬನನ್ನು 'ಧೂರ್ತ'ನೆಂದು ಕರೆಯುತ್ತಿರುವುದು ಸರಿಯಲ್ಲ. ಭಾಷೆಯಲ್ಲಿ ತೊಡಕುಗಳಿವೆ. ಮುದ್ರಿಸುವ ಮೊದಲು ಯೋಗ್ಯರೊಬ್ಬರ ಮುನ್ನುಡಿ ಬರೆಸಿ ತಿದ್ದಿಕೊಳ್ಳುತ್ತಿದ್ದರೆ ಗ್ರಂಥದ ರೂಪಕ್ಕೆ ಪುಟಕೊಟ್ಟಂತಾಗುತ್ತಿತ್ತು. ಕಥಾ ಸಂಯೋಜನೆಯು ಹೃದಯವನ್ನುಬ್ಬಿಸುವಂತಿದೆ.

ಅದೇನೆ ಇರಲಿ—ಬರೆದವರು ರಾ. ಭಿ. ಮನ್ಸಬ್ದಾರ ಜಯಕರ್ನಾಟಕ ಗ್ರಂಥಮಾಲೆಯ ಹನ್ನೊಂದನೆಯ ಪುಷ್ಪ. ಬೆಲೆ ಎಂಟಾಣೆ ಆವಿದ್ಧ ಜಾತಿಯ ನಾಟಕವಿದು ಸ್ಥೂಲಮಾನದಿಂದ ನೋಡಲಾಗಿ ಇದರಲ್ಲಿನ ಕಥಾಭಾಗವು ವಿಷಾದಾಂತವಾಗಿದೆ. ಲೇಖಕರು ನಿಜಾಂ ಕರ್ನಾಟಕದವರು ಆದರೂ ಭಾಷೆಯು ಎಲ್ಲರಿಗೂ ಮನನೀಯವಾಗುವಂತಹದೆ. ಯತ್ನವು ಫಲಕಾರಿಯಾಗಲೆಂದು ಹಾರೈಕೆ. (ಮ ಜಾ)

ಸ್ವದೇಶಾಭಿಮಾನಿಗೆ ವಿನಿಮಯವಾಗಿ ಬರುತ್ತಿರುವ ಸಾಹಿತ್ಯ.

೧ ವಿಶ್ವಬಂಧು–ಮೈಸೂರು. ೨. ತಾಯಿನಾಡು–ಬೆಂಗಳೂರು. ೩. ಮೈಸೂರ್ ಸ್ಟಾರ್–ಮೈಸೂರು. ೪. ಅರ್ಥಸಾಧಕ ಪತ್ರಿಕೆ–ಬೆಂಗಳೂರು. ೫. ಲೋಕ ಸಮಾಚಾರ–ಬೆಂಗಳೂರು ೬. ಜೇಸು ನಾಥರ ತಿರುಹೃದಯದ ದೂತ–ಮೈಸೂರು ೭. ಸುಬೋಧ–ಬೆಂಗಳೂರು. ೮ ಕಲಾ–ಬೆಂಗಳೂರು. ೯. ರಂಗಭೂಮಿ–ಬೆಂಗಳೂರು. ೧೦. ಅಧ್ಯಾತ್ಮ ಪ್ರಕಾಶ–ಬೆಂಗಳೂರು. ೧೧. ಪ್ರಬುದ್ಧ ಕರ್ನಾಟಕ–ಮೈಸೂರು. ೧೪ ಸತ್ಯವಾದಿ–ಮೈಸೂರು. ೧೩ ಜಯಕರ್ನಾಟಕ–ಧಾರವಾಡ. ೧೪. ಕನ್ನಡಿಗ–ಧಾರವಾಡ. ೧೫. ಅರುಣೋದಯ–ಬೆಳಗಾಂವಿ. ೧೬. ಸಂಯುಕ್ತ ಕರ್ನಾಟ–ಬೆಳಗಾಂವಿ. ೧೭. ಕರ್ನಾಟಕ ವೈಭವ–ವಿಜಾಪುರ. ೧೮. ಭಾರತಿ–ಮೂಲ್ಕಿ. ೧೯. ಕಲಾಚಂದ್ರ–ಕಾರ್ಕಳ. ೨೦. ತೊದಲ್ನುಡಿ–ಮುಂಬಾಯಿ. ೨೧. ಶ್ರೀ ಕೃಷ್ಣ ಸಂದೇಶ–ಉಡುಪಿ. ೨೨. ನವಯುಗ–ಮಂಗಳೂರು. ೨೩. ರಾಷ್ಟ್ರಬಂಧು–ಮಂಗಳೂರು. ೨೪. ಕಂರೀರವ–ಮಂಗಳೂರು. ೨೫. ಬಡವರ ಬಂಧು–ಮಂಗಳೂರು. ೨೬. ಸ್ವದೇಶೀ ಪ್ರಚಾರಕ–ಮಂಗಳೂರು. ೨೭. ಇಂಡಿಯನ್ ಮೆಗಜಿನ್–ಮಂಗಳೂರು. ೨೮. ಸಂಡೆ ನ್ಯೂಸ್–ಮಂಗಳೂರು.

ಶಾರದಾ ಭಾಷಖಾನೆ, ಮಂಗಳೂರು.

ಸಾಹಿತ್ಯ

ಸ್ವದೇಶಾಭಿಮಾನಿ

ಸಂಜೀಕೆ.

ಸಂಪುಟ ೨ ನವಂಬರ ೧೦—೧೧—೧೯೩೬. ಸಂಚಿಕೆ ೯

— ಅನುಕ್ರಮಣಿಕೆ —

	ಪು
ಬಾಲಕರಿಗೆ ತಕ್ಕ ಸಾಹಿತ್ಯ	1
ಲೇಟಿನ್ ಸಾಹಿತ್ಯದ ಚರಿತ್ರೆ	2
ಕಳಂಗದ ಗಂಗರಾಜ ವಂಶ	3
ರಣಧೀರ	5
ಸತಿ	,,
ಹಳ್ಳಿಯ ಹಾಡು	7
ನಮ್ಮ ದಕ್ಷಿಣ ಹಾಡು	8
ಎದೆಯುರಿ	,,
ವರ್ತಮಾನ ಪತ್ರಿಕೆಗಳನ್ನೇಕೆ ಓದಬೇಕು?	6

ನವಂಬರ ತಾರೀಕು ೧೦ನೇ ಶುಕ್ರವಾರ ೧೯೩೬.

ಬಾಲಕರಿಗೆ ತಕ್ಕ ಸಾಹಿತ್ಯ.

ಕನ್ನಡ ಸಾಹಿತ್ಯವು ಎಷ್ಟರ ಮಟ್ಟಿಗೆ ಪ್ರಗತಿ ಹೊಂದಿದೆ ಎಂದುತಿಳಿಯ ಬೇಕಾದರೆ ಬಾಲಕರಿಗೆ ತಕ್ಕದಾದ ಸಾಹಿತ್ಯವು ಎಷ್ಟು ಹುಟ್ಟಿದೆ ಎಂದು ನೋಡಿಕೊಳ್ಳಬೇಕಾಗುವುದು. ಮನುಷ್ಯರ ಜ್ಞಾನವು ಹೇಗೆ ಬಾಲ್ಯಾವಸ್ಥೆಯಿಂದ ವೃದ್ಧಿಯಾಗುತ್ತದೊ ಅದೇ ರೀತಿಯಲ್ಲಿ ಸಾಹಿತ್ಯಕ್ಷೇತ್ರವೂ ಬೆಳೆಯುತ್ತ ಹೋಗಬೇಕು. ಜನರ ಪ್ರಾಯ ಪ್ರಾಯಕ್ಕೆ ಒಪ್ಪುವಂತಹ ಬರವಣಿಗೆಗಳು ಹೆಚ್ಚಾದಂತೆ ಸಾಹಿತ್ಯದ ಉಪಯುಕ್ತತೆಯೂ ಹೆಚ್ಚುವುದು. ಚಿಕ್ಕ ಬಾಲಕರ ಮನಸ್ಸಿಗೆ ಆಹಾರವಾಗಿ ತೋರುವ ಕವನಗಳಾಗಲಿ, ಕಥೆಗಳಾಗಲೀ ದೊಡ್ಡವರಿಗೆ ಹಾಸ್ಯಾಸ್ಪದವೆಂತಲೂ, ಅರ್ಥಗರ್ಭಿತವಾಗಿರುವುದಿಲ್ಲವೆಂದೂ ತೋರಬಹುದು; ಆದರೆ ಅಂಥವುಗಳು ಆಪ್ರಾಯದವರಿಗೆ ಅಗತ್ಯವೆಂದು ಪ್ರತಿ ದೇಶದ ಕವಿಗಳಿಗೆ ತಿಳಿದ ವಿಷಯವಾಗಿರುವುದು.

ಇಂಗ್ಲಿಷ ಭಾಷೆಯನ್ನು ದೃಷ್ಟಾಂತವಾಗಿ ತೆಗೆದುಕೊಂಡರೆ,—ತೊಟ್ಟಿಲ ಮಕ್ಕಳಿಗೆ ತಕ್ಕದಾದ ಆಹ್ಲಾದವನ್ನು ಕೊಡುವ ನರ್ಸರಿ ರ್ಯಾಮ್ಸ್ ಎಂದು ಅರ್ಥವಿಲ್ಲದ ಆದರೆ ತಾಳ ತಪ್ಪದ ಅನೇಕಾನೇಕ ರಾಗದಲ್ಲಿ ಹೇಳುವ ಚಿಕ್ಕ ಹಾಡುಗಳಿರುತ್ತವೆ. "Sleep baby sleep" "To market to market" "Ba Ba black sheep' "Naughty boy" ಎಂಬ ಹಾಡುಗಳು ಎಷ್ಟು ಮಕ್ಕಳನ್ನು ತೊಟ್ಟಿಲಿನಲ್ಲಿ ಮಲಗಿಸುತ್ತವೆ? ಮಾತಾಡಲು ಕಲಿತ ಮೇಲೆ ಬಾಲಕರು ಅವುಗಳನ್ನು ಹಾಡುತ್ತಲೇ ಕುಣಿಯುವರು. ಹೀಗಾಗಿ ತೊಟ್ಟಿಲಿಂದಲೂ ಈ ಮಕ್ಕಳೊಳಗೆ ಹಾಡುಗಳಲ್ಲಿ ಪ್ರೀತಿಯನ್ನು ಇವುಗಳು ಹುಟ್ಟಿಸುತ್ತವೆ. ಇಂತಹ ಪದ್ಯಗಳಲ್ಲಿ ಅರ್ಥವೇನೂ ಇರುವುದಿಲ್ಲ. ತಾಳ ಮಾತ್ರೆಗಳು ಮಾತ್ರ ಇರುವುವು. ಶಬ್ದಗಳ ರಾಗವೇ ಇವುಗಳ ತಿರುಳು. ಅದೇ ಅವರಿಗೆ ಬೇಕಾದುದು.

ಈ ರೀತಿಯ ಪದ್ಯಗಳು ಕನ್ನಡ ಭಾಷೆಯಲ್ಲಿ ಪ್ರಾಚೀನ ಕಾಲದಿಂದಲೂ ಕಡಿಮೆಯೆಂದೇ ಹೇಳಬೇಕು. ನಮ್ಮ ಹೆಂಗುಸರು ಮಕ್ಕಳನ್ನು ತೊಟ್ಟಿಲಲ್ಲಿ ಮಲಗಿಸುವಾಗ ಪುರಂದರದಾಸರ ಹಾಡುಗಳಾಗಲೀ ಪುರಾಣ ಕಥೆಗಳ ಹಾಡುಗಳಾಗಲೀ ಹೇಳುತ್ತಾರೆ. ಇವುಗಳು ಮಕ್ಕಳೊಳಗೆ ಭಾಷ್ಯಾಭಿರುಚಿಯನ್ನು ಎಷ್ಟರ ಮಟ್ಟಿಗೆ ಬೆಳಿಸುವುವು ಎಂದು ನಾವೇ ಊಹಿಸಿಕೊಳ್ಳಬಹುದು.

ಈಗೀಗ ಕೆಲವರು ಅಂಥಹ ಹಾಡುಗಳನ್ನು ಕಟ್ಟಲು ಪ್ರಯತ್ನಿಸಿರುತ್ತಾರೆ. ಆದರೆ ಅನೇಕವುಗಳಲ್ಲಿ ಮಕ್ಕಳಿಗೆ ಗ್ರಹಿಸಲು ಕಠಿಣವಾದ ವಿಚಾರಗಳನ್ನಾಗಲೀ ಕಥೆಗಳನ್ನಾಗಲೀ ಹಾಕಲು ಪ್ರಯತ್ನ ಪಟ್ಟಂತೆ ಕಾಣುವುದರಿಂದ ಅವುಗಳ ಸ್ವಾರಸ್ಯವು ಕೆಟ್ಟು ಹೋಗುವಂತಿದೆ. ಮಕ್ಕಳ ಪದ್ಯಗಳು ಹಾಡಲಾಗಬೇಕಲ್ಲದೆ ತಿಳಿಯುವಂತವುಗಳಾಗಬಾರದು. ಕುಣಿಯಲು ಪ್ರೇರೇಪಿಸುವಂತವುಗಳಾಗ ಬೇಕಲ್ಲದೆ ಅವರಲ್ಲಿ ಆಲೋಚನೆಗಳನ್ನು ಹುಟ್ಟಿಸುವಂತವುಗಳಾಗಬೇಕಾಗಿರುವುದಿಲ್ಲ. ಆ ಹಾಡುಗಳು ಪ್ರತಿ ಬಾಲಕನಿಗೆ ಪ್ರೇರೇಪಣೆಯನ್ನು ಹುಟ್ಟಿಸುತ್ತಿದ್ದರೆ ಅವುಗಳಿಂದ ನಮ್ಮ ಬಾಲಕರಿಗೆ ಎಷ್ಟೆ ಒಳ್ಳಿತಾಗುವುದು.

ಇನ್ನೊಂದು ರೀತಿಯ ತೊಡಕು ನಮ್ಮ ಬಾಲಕರ ಸಾಹಿತ್ಯದಲ್ಲಿ ಕಂಡು ಬರುತ್ತದೆ. ಈಗೀಗ ಪ್ರಚಾರದಲ್ಲಿರುವ ಕೆಲವು ಹಾಡುಗಳು ಒಬ್ಬೊಬ್ಬರೆ ಹೇಳುವಂತವುಗಳಾಗಿವೆ. ಆದರೆ ಅಂತಹ ಪದ್ಯಗಳಿಗಿಂತ, ಅನೇಕ ಬಾಲಕರು ಒಟ್ಟುಗೂಡಿ ಹಾಡುತ್ತ ಕುಣಿಯುತ್ತ

ಹೇಳುವ ಪದ್ಯಗಳಿದ್ದರೆ ಅವುಗಳ ಪ್ರಯೋಜನ ಹೆಚ್ಚು ಎಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಇಂಗ್ಲಿಷಿನಲ್ಲಿ "Chorus Songs" ಎಂದಿರುವಂತಹ ಕನ್ನಡ ಹಾಡುಗಳು ಎಷ್ಟು ಇರಬಾರದು?

ಬಾಲಕರಿಗೆ ಒಪ್ಪುವ ಬೇರೆ ಹಾಡುಗಳೆಂದರೆ, ಚಿಕ್ಕ ಕಥೆಗಳನ್ನು ಹೇಳುವ ಪದ್ಯಗಳು. ಇವುಗಳಲ್ಲಿ ಕತೆಯು ಬಹಳ ಸುಲಭವಾಗಿರಬೇಕು ಮತ್ತು ಬಾಲಕರ ಮನಸ್ಸಿಗೆ ನಾಟುವಂತಹ ಕಥೆಗಳಿರಬೇಕು. 'ಗೋವಿನ ಕಥೆ'ಯಂತಹ ಸುಂದರ ಕಥೆಗಳು ನಮಗೆ ಬೇಕಾಗಿರುವುವು. ಈ ರೀತಿಯ ಕಥಾ ಕವನಗಳು ಹೆಚ್ಚಿದರೆ ಬಾಲಕರಿಗೆ ಬಹಳ ಉಪಯೋಗಕ್ಕೆ ಬೀಳುವುದರಲ್ಲಿ ಏನೂ ಸಂಶಯವಿರಲಾರದು.

ಹೀಗಾಗಿ 'ನರ್ಸರಿ ರ್ಯಾಮ್ಸ್'ಗಳೆಂಬ ಮೊದಲನೆಯ ಮೆಟ್ಟಿಲನ್ನು ಹಾದು ಬಾಲಕರು ಕಥಾಕವನಗಳನ್ನು ಕಲಿತರೆ ಸಾಹಿತ್ಯದ ರುಚಿಯು ಬಾಲಕರಲ್ಲಿ ಬೇರೂರುವಂತಾಗುವುದು. ಕನ್ನಡ ನಾಡಿನ ಈಗಿನ ಸ್ಥಿತಿಯಲ್ಲಿ ಕನ್ನಡ ರುಚಿಯನ್ನು ಬಾಲಕರಲ್ಲಿ ಹುಟ್ಟಿಸಿದರೆ ಮುಂದೆ ನಮ್ಮ ಸಾಹಿತ್ಯಾಭಿಮಾನವು ಅವರಲ್ಲಿ ಅಂಟಿ ಹೋಗುವುದು ಸಹಜವಾಗಿರುತ್ತದೆ. ಹಾಗೆ ಅಭಿರುಚಿಯನ್ನು ಚಿಕ್ಕಂದಿನಿಂದಲೇ ಅವರಲ್ಲಿ ಬೆಳೆಸಬೇಕು. ಅದಕ್ಕಾಗಿಯೇ ನಾವು ಅವರ ಕ್ಷೇತ್ರದಲ್ಲಿ ಇಳಿದು, ಅವರ ಮನಸ್ಸಿನ ರೀತಿಯನ್ನು ವಿಚಾರ ಮಾಡಿ ಅದಕ್ಕೆ ತಕ್ಕಂತೆ ಬೇಕಾದ ಕವನಗಳನ್ನು ಕೊಟ್ಟರೆ ಅವುಗಳಿಂದಾಗುವ ಸಾಹಿತ್ಯ ಸೇವೆಯು ಬೇರೆ ಯಾವುದರಿಂದಲೂ ಆಗಲಾರದೆಂದು ನಮ್ಮ ಅಭಿಮತವು.

ಲೇಟಿನ್ ಸಾಹಿತ್ಯದ ಚರಿತ್ರೆ

ಲೇಖಕ:—ಬಿ. ಶಂಕರ್‌ಭಟ್ಟ, ಸೈಂಟ್ ಅಗ್ನೆಸ್ ಹೈಸ್ಕೂಲ್, ಮಂಗಳೂರು

(ಬಿ. ಉಮೇಶ್ವರ ಪ್ರಸಾದರ ಹಿಂದೀ ಲೇಖದ ಆಧಾರದಿಂದ)

ಲೇಟಿನ್ ಸಾಹಿತ್ಯವನ್ನು ನಾವು ಗ್ರೀಕ್ ಸಾಹಿತ್ಯದ ಅನುಕರಣವೆಂದೂ ಹೇಳಬಹುದು. ಲೇಟಿನ್ ಸಾಹಿತ್ಯದ ಪ್ರಾರಂಭವು ಕ್ರಿ. ಪೂ ೩೦೦ರಲ್ಲಿ ಪ್ರಾರಂಭವಾಗಿತ್ತು. ಆ ಸಮಯದಲ್ಲಿ ರೋಮನರು ಗ್ರೀಕ ಸಭ್ಯತೆಯೊಂದಿಗೆ ಸಂಬಂಧ ಬೆಳಿಸಿ ಸಾಹಿತ್ಯದ ಅಧ್ಯಯನ ಮಾಡಿ ಸಾಹಿತ್ಯ ವಿಕಾಸದ ಕಡೆಗೆ ಮುಂದುವರಿಯುತ್ತಿದ್ದರು. ಈ ಪ್ರಯತ್ನದಿಂದಾಗಿ ಲೇಟಿನ್ ಸಾಹಿತ್ಯದ ನಿರ್ಮಾಣವಾಯಿತು. ಈ ನಿರ್ಮಾಣ ಕಾಲವನ್ನು ನಾವು ಮೂರು ಕಾಲಗಳಾಗಿ ವಿಂಗಡಿಸಬಹುದು. ಪ್ರಥಮ ಲೋಹಯುಗ. ಕ್ರಿ. ಪೂ. ೨೫೦ರಿಂದ ಕ್ರಿ. ಪೂ. ೮೦ರ ವರೆಗೆ. ಈ ಸಮಯದಲ್ಲಿ ಕಲೆಯ ವಾಸ್ತವಿಕ ಉನ್ನತಿಯಾಗದಿದ್ದರೂ ಭವಿಷ್ಯದ ಸಫಲತೆಯ ಚಿಹ್ನೆಗಳು ಅಲ್ಲಲ್ಲಿ ತೋರುತ್ತಿದ್ದುವು. ದ್ವಿತೀಯ ಕಾಲವು ಸ್ವರ್ಣಯುಗವು. ಕ್ರಿ. ಪೂ. ೮೦ರಿಂದ ಕ್ರಿ. ವ. ೧೪ರ ವರೆಗೆ ಈ ಕಾಲದಲ್ಲಿ ಗದ್ಯ ಪದ್ಯಗಳೆಂಬ ಸಾಹಿತ್ಯ ಪುರುಷನ ಎರಡು ಅಂಗಗಳೂ ಆಶ್ಚರ್ಯಜನಕ ಉನ್ನತಿಯನ್ನು ಹೊಂದಿದುವು. ಕಲಾ ಕೌಶಲವು ಪರಮ ಸೀಮೆಯನ್ನು ಹೊಂದಿತ್ತು. ಮತ್ತು ಭಾಷೆ, ಭಾವಗಳಲ್ಲಿ ಒಂದು ನವೀನ ಓಜಸ್ಸಿನ ಪ್ರಾದುರ್ಭಾವವಾಯಿತು. ಈ ಸ್ವರ್ಣಯುಗದ ಸ್ವಲ್ಪ ಕಾಲಕ್ಕೆ ಹಿಂದೆ ಅಗಸ್ಟನ್ ಎಂಬ ರಾಜನಿದ್ದುದರಿಂದ ಈ ಕಾಲಕ್ಕೆ ಅಗಸ್ಟನ್ ಯುಗವೆಂದು ಕೂಡ ಹೇಳುತ್ತಾರೆ. ತೃತೀಯ ಕಾಲವಾದ ರೌಪ್ಯ ಯುಗದಲ್ಲಿ ಸ್ವೇಚ್ಛಾಚಾರಿಗಳಾದ ರಾಜರುಗಳು ಭಾವ ಪ್ರಕಾಶನದ ಸ್ವಾಧೀನತೆಯನ್ನಪಹರಿಸಿ ಸಾಹಿತ್ಯವನ್ನು ಉನ್ನತಿಯ ಶಿಖರದಿಂದ ಮಗುಚಿ ಹಾಕಿದರು. ಈ ಕೃತ್ಯವು ಕ್ರಿ. ವ. ೧೪ರಿಂದ ೧೩೦ರ ವರೆಗೂ ನಡೆಯಿತು.

ಲೋಹಯುಗ–ಸುಖಾಂತ ಮತ್ತು ದುಃಖಾಂತ–"ಪ್ಲಾಟ್ಸ್ (Plautus 254—184 B. C.) "ಟೇರೆನ್ಸ್" (Terence; 185—159 B. C.) ಇವರ ಸುಖಾಂತ ರಚನೆಗಳ ಅತಿರಿಕ್ತ (ಇವುಗಳ ಮೇಲೆ ಗ್ರೀಕ ಸಾಹಿತ್ಯದ ಪ್ರಭಾವವು ಬೇಕಾದಷ್ಟು ಬಿದ್ದಿತ್ತು) ಬೇರೆ ಮಹತ್ವಪೂರ್ಣ ಗ್ರಂಥಗಳು ಈ ಲೋಹ ಯುಗದಲ್ಲಿ ದೃಷ್ಟಿಗೋಚರವಾಗುವುದಿಲ್ಲ. ಪ್ಲಾಟ್ಸಿನ ವಕ್ತೃತ್ವ ಶಕ್ತಿಯೂ ಹಾಸ್ಯ ಪರಿಹಾಸವೃತ್ತಿಯೂ ಬಹಳ ಪ್ರಚುರವಾಗಿದೆ. ಮತ್ತು ಈತನ ಕೆಲ ನಾಟಕಗಳು ಭವಿಷ್ಯದ ನಾಟಕಕಾರರಿಗೆ ವಸ್ತು ನಿರ್ಮಾಣ ಕಾರ್ಯದಲ್ಲಿ ವಿಶೇಷ ಸಹಾಯ ಮಾಡಿವೆ. ಶೇಕ್ಸ್‌ಪಿಯರನ "ಕಾಮಿಡಿ ಆಫ್ ಎರರ್ಸ್" (Comedy of Errors) ಇವನ 'ಮೆನಾಕಿಮೀ' (Menachemi)ಯ ಮತ್ತು ಮೋಲಿಯರಿನ "ದಿ ಮೈಸರ್" (The Miser) ಇವನ "ಅಲೂಲರಿಯಾ" (Aulularia)ದ ಅನೇಕ ಅಂಶಗಳಲ್ಲಿ ಛಾಯಾ ಮಾತ್ರವಾಗಿದೆ. ಟೇರೆನ್ಸಿನ ಗ್ರಂಥಗಳಲ್ಲಿ ಸಾಹಿತ್ಯವೂ ಭಾವವೂ ಅಧಿಕವಾಗಿವೆ. ದೋಷಗಳು ಕಡಮೆ, ಆದರೆ ಈ ಯುಗದಲ್ಲಿಯ ದುಃಖಾಂತ ನಾಟಕಗಳ ದೃಷ್ಟಾಂತವು ಗ್ರಂಥ ರೂಪದಲ್ಲಿ ಇಷ್ಟರ ವರೆಗೂ ಉಪಲಬ್ಧವಾಗಲಿಲ್ಲ.

ಸ್ವರ್ಣಯುಗ—ಈ ಯುಗದ ಸರ್ವ ಶ್ರೇಷ್ಠ ಗದ್ಯಲೇಖಕ ಹಾಗೂ ಅತುಲನೀಯವಕ್ತೃವಾದ "ಸಿಸೆರೋವು" (106–43 B.C.) ಮಹಾನ್ ಪ್ರತಿಭಾಶಾಲಿ ವ್ಯಕ್ತಿಯಾಗಿದ್ದನು. ವಸ್ತುತಃ ಇವನ ರಾಜನೈತಿಕ ಭಾಷಣಗಳಲ್ಲಿ ಮಾನಸಿಕವಿಕಾಸ, ಸ್ವದೇಶ ಪ್ರೇಮ, ಸುಂದರ ಭಾವನೆಗಳು, ಮಧುರವಾದ ಶೈಲಿಗಳು ಬೇಕಾದಷ್ಟು ದೊರಕುತ್ತವೆ. ಈತನ ದಯಾಪೂರ್ಣ ಸ್ವಭಾವ, ಉದಾರ ಹೃದಯ, ಭಾವಗಾಂಭೀರ್ಯಗಳನ್ನು ಪೂರ್ಣವಾಗಿ ತಿಳಿಯಲಿಕ್ಕೆ ಇವನು ಆಟಿಕಸ್ಸನಿಗೆ ಬರೆದ ಪತ್ರವೊಂದೇ ಸಾಕು. ಈತನು ಸುಲಲಿತ ಮತ್ತು ಆಕರ್ಷಕ ಭಾಷೆಯಲ್ಲಿ ಬರೆದ ಜೂಲಿಯಸ್ ಸೀಸರನ (102–44 B. C.) ಸಮಾಲೋಚನೆಗಳು (Commentaries) ಎಂಬ ಪುಸ್ತಕಕ್ಕೆ ವಿದ್ವನ್ಮಂಡಲಿಯಲ್ಲಿ ಎಂದೆಂದಿಗೂ ಮಹತ್ವದ ಸ್ಥಾನವಿದೆ.

ಪದ್ಯ ವಿಭಾಗದಲ್ಲಿ ಕೆಟುಲಸ್ಸನ (Catullus 84–54 B. C.) ಹೆಸರೇ ಮುಂದೆ ಬರುತ್ತದೆ. ಈತನು ಅನೇಕ ಪ್ರೇಮಗೀತಗಳನ್ನೂ ಬರೆದಿದ್ದಾನೆ. ಲ್ಯೂಕ್ರೆಟಿಯಸ್ಸನ (Lucretius 96–55 B. C.) "ಡಿ ರೇರಮ್ ನೆಚೂರಾ" (De Rerum Natura) (On the nature of things) ಎಂಬ ದಾರ್ಶನಿಕ ಕಾವ್ಯಕ್ಕೆ ಸಮಾನವಾದ ಕಾವ್ಯವೇ ಉತ್ಪನ್ನವಾಗಿಲ್ಲ. ಈ ಕಾವ್ಯದ ಭಾವ, ಅನುಭವ, ಭಾಷಾ ಲಾಲಿತ್ಯ, ಮಧುರ ಧ್ವನಿ, ಸುಂದರ ಸಮನ್ವಯಗಳಿಂದ ಕವಿಯ ಅಲೌಕಿಕ ಭಾವ ಪ್ರಭಾವವು ವ್ಯಕಟವಾಗುತ್ತದೆ.

ಆದರೆ ಅಗಸ್ಟನ್ ಯುಗದ ವಿಭೂತಿಗಳಾದ "ವರ್ಜಿಲ್" (Virgil) "ಹೋರೆಸ್" (Horace) "ಲಿವೀ" (Livy) ಈ ಮೂವರು ಲೇಟಿನ್ ಸಾಹಿತ್ಯಕ್ಕೆ ಗೌರವಪ್ರಾಯರಾಗಿದ್ದಾರೆ. ಅಗಸ್ಟನ್ ಯುಗದ ಜನಜೀವನವೂ, ರಾಜನೀತಿಯೂ ಶಾಂತಿಮಯ ವಾತಾವರಣವೂ ಇವರ ಕೃತಿಗಳಲ್ಲಿ ಪ್ರತಿಬಿಂಬಿತಗಳಾಗಿವೆ. ಇವರ ಅಭಿವೃದ್ಧಿಗೂ ಅಗಸ್ಟನನೇ ಕಾರಣನಾಗಿರುತ್ತಾನೆ. ಈ ಮಹಾನ್ ವ್ಯಕ್ತಿಗಳ ಅನಂತರ "ಪ್ರೋಪರ್ಟಿಯಸ್" (Propertius) "ಓವಿಡ್" (Ovid) "ಟೀಬೂಲಸ್" (Tibullus) ಈ ಮೂವರು ವಿಶೇಷವಾಗಿ ಉಲ್ಲೇಖನೀಯರು. ಇವರೆಲ್ಲರಲ್ಲಿಯೂ ಸರ್ವ ಶ್ರೇಷ್ಠ ಮೇಧಾವಿಯೂ ಕಲೆಯ ಮೂರ್ತಿಯೂ ಆದ ವರ್ಜಿಲನು "ಏನಿಡ್" (Aeneid B. C.) ಎಂಬ ಗ್ರೀಕ್ ಕಾವ್ಯವನ್ನು ಬರೆದನು ಈ ಕಾವ್ಯವು ಇಂದಿಗೂ ಜಗತ್ತಿನ ಮುಖ್ಯ ಕಾವ್ಯಗಳಲ್ಲಿ ಗಣಿಸಲ್ಪಡುತ್ತದೆ. "ಇಕ್ಲೋಗಸ್" (Eclogues) ಮತ್ತು "ಜೋರ್ಜಿಕ್ಸ" (Georgics) ಇವರು ತಮ್ಮ ಕಾವ್ಯಗಳಲ್ಲಿ ಗ್ರಾಮಜೀವನದ ಉಜ್ವಲ ಚಿತ್ರಗಳನ್ನು ಚಿತ್ರಿಸಿದ್ದಾರೆ

"ಹೋರೆಸ್" (Horaces 68 8 B C.)ನ ಲೇಖನಗಳು ಹಾಸ್ಯ ಪ್ರಿಯ ಮೋಹಪ್ರದಗಳಾಗಿವೆ ಈತನ ಲೇಖನಗಳಲ್ಲಿ ಆ ಕಾಲದ ಸಮಾಜದ ರೀತಿ. ರಿವಾಜುಗಳು ಸುಂದರವಾಗಿ ಚಿತ್ರಿತನಾಗಿವೆ ಈ ಕೃತಿಗಳು ಈತನ ಅಮರಕೀರ್ತಿ ಸ್ತಂಭಗಳಾಗಿವೆ

'ಓವಿಡನು' ಆ ಕಾಲದ ಉತ್ತಮ ಕವಿಗಳ ಗಣನೆಗೆ ಬಾರದಿದ್ದರೂ ಈತನ ಕೃತಿಗಳ ಪ್ರಭಾವವು ಚಾಸರ್, ಮಾರ್ಲೊ, ಸ್ಪೆನ್ಸರ್, ಶೇಕ್ಸ್ ಪಿಯರ್, ಮಿಲ್ಟನ್, ಡ್ರೈಡೆನ್ ಎಡಿಸನ್ ಮೊದಲಾದವರ ಕೃತಿಗಳಲ್ಲಿ ಚೆನ್ನಾಗಿ ಕಂಡುಬರುತ್ತಿವೆ

ರೌಪ್ಯಯುಗ—ಈ ಯುಗದಲ್ಲಿ "ಸೀನೆಕಾ" (Seneca 5 B C 65 A D) "ಟಸಿಟಸ್" (Tacitus 54–120 A. D) "ಜೂವೆನಲ್" (Juvenal 60–140 A D) ಮೊದಲಾದವರ ಹೆಸರುಗಳು ಉಲ್ಲೇಖನೀಯವಾಗಿವೆ. ಈ ಯುಗದ ರಾಜನೀತಿಕ, ಸಾಮಾಜಿಕ, ಮಾನಸಿಕ, ನೀತಿಗಳು ಇವರ ಕೃತಿಗಳಲ್ಲಿ ಪ್ರತಿಬಿಂಬಿತಗಳಾಗಿವೆ ಸೀನೇಕನು ಗ್ರೀಕ್ ನಾಟಕಗಳ ಆಧಾರದಿಂದ ಹಲವು ದುಃಖಾಂತ ನಾಟಕಗಳನ್ನು ಬರೆದನು ಮಧ್ಯ ಕಾಲದಲ್ಲಿ ಈತನು ಬರೆದ ಪತ್ರಗಳು ಸದಾಚಾರ, ನೀತಿಗಳ ವಿಷಯವಾಗಿ ಬಹಳ ಪ್ರಚಲಿತವಾಗಿದ್ದುವು ಜುವನಲನು ತನ್ನ ಕವಿತೆಯಲ್ಲಿ ಆ ಕಾಲದ ರೋಮಿನ ಭೋಗವಿಲಾಸ, ಚಾರಿತ್ರ ಹೀನತೆ, ಪಾವಾಚರಣೆ, ಅನೀತಿ ಮೊದಲಾದುವುಗಳನ್ನು ನಿರ್ದಾಕ್ಷಿಣ್ಯವಾಗಿ ವಿಮರ್ಶಿಸಿದ್ದಾನೆ

ಈ ಕಾಲದ ಗದ್ಯ ಮತ್ತು ಇತಿಹಾಸ ಲೇಖಕರಲ್ಲಿ "ಟಸಿಟಸ್"ನು ಗಣ್ಯನಾದವನು. ಮಧುರ ಭಾಷೆ, ಕವಿತ್ವಪೂರ್ಣ ಕಲ್ಪನಾ ಶಕ್ತಿ, ಪ್ರಭಾವಶಾಲೀ ಚರಿತ್ರ ಚಿತ್ರಣಗಳಲ್ಲಿ ಈತನಿಗೂ 'ಕಾರ್ಲಾಯಿ'ಲನಿಗೂ ಅನೇಕ ಸಮಾನತೆಗಳಿವೆ. ಈತನ ಪ್ರಧಾನ ಗ್ರಂಥವು "ಎನ್ನಾಲಸ್" (Annals) ಇದರಲ್ಲಿ ಕ್ರಿ. ಪೂ. 14ರಿಂದ 68ರ ವರೆಗೆ ರೋಮಿನ ಇತಿಹಾಸವು ಬರೆಯಲ್ಪಟ್ಟಿದೆ. ಇದರ ಅನಂತರ ನವೀನ ಕಾಲವು ಪ್ರಾರಂಭವಾಗಿ 14ನೆಯ ಶತಮಾನದ ವರೆಗೂ ಲೇಟಿನ್ ಸಾಹಿತ್ಯವು ಜೀವಂತವಾಗಿತ್ತು. ಸಾಹಿತ್ಯ ದೃಷ್ಟಿಯಿಂದ ಮಧ್ಯಕಾಲವೇ ಮಹತ್ವ ದ್ದಾಗಿದ್ದು ಈ ಕಾಲದಲ್ಲಿ ಭಾಷೆ ಮತ್ತು ಸಾಹಿತ್ಯದಲ್ಲಿ ಸಾಕಾದಷ್ಟು ಪ್ರಗತಿಗಳಾಗಿವೆ. 10ನೆಯ ಶತಮಾನದ ವರೆಗೆ ಫ್ರಾನ್ಸ್, ಇಟಲಿ, ಕೆಸ್ಪಾಯಿಲುಗಳ ಲಿಖಿತ ಭಾಷೆಯು ಲೇಟಿನೇ ಆಗಿತ್ತು. 12ನೆಯ ಶತಮಾನಕ್ಕಾಗುವಾಗ ಈ ದೇಶಗಳು ತಂತಮ್ಮ ಭಾಷೆಗಳನ್ನು ರಚಿಸಿಕೊಂಡು ಅವುಗಳಲ್ಲೇ ಭಾವಪ್ರಕಾಶನ ಮಾಡತೊಡಗಿದುವು. 13ನೆಯ ಶತಮಾನಕ್ಕಾಗುವಾಗ ಇಂಗ್ಲಿಷ್ ಕೂಡಾ ಸಾಹಿತ್ಯ ರಚನೆಗೆ ಯೋಗ್ಯವಾಯಿತು ಈಗ ಲೇಟಿನ್ ಭಾಷೆಯು ಸಮಸ್ತ ಯುರೋಪಿನಲ್ಲಿಯೂ ಪ್ರಸಿದ್ಧವಾಗಿದ್ದು ಭಾರತೀಯರಿಗೆ ಸಂಸ್ಕೃತವು ಹೇಗೊ ಹಾಗೆಯೇ ಪಾಶ್ಚಾತ್ಯರಿಗೆ ಪವಿತ್ರ ಭಾಷೆಯಾಗಿ ನಿಂತಿದೆ.

ಕಳಿಂಗದ ಗಂಗರಾಜ ವಂಶ.

ಲೇಖಕ—ಬಿ ಶಂಕರ್‌ಭಟ್ ಸೈಂಟ್ ಆಗ್ನೆಸ್ ಹೈಸ್ಕೂಲು ಮಂಗಳೂರು

ಒಳನೇ ಶತಮಾನದ ಅಂತ್ಯದಲ್ಲಿ ದಕ್ಷಿಣ ಭಾರತದಲ್ಲಿ ಗಂಗ ವಂಶದ 31ನೇ ಯವನಾದ ನರಸಿಂಹನು ಗಂಗವಾಡಿಯ ಕೋಲಾಹಲದಲ್ಲಿ ಶಾಸಕನಾಗಿದ್ದನು ಈತನ ಮರಣ ನಂತರ ಈತನ ತಮ್ಮನು ತನ್ನ ಅಣ್ಣನ ಐವರು ಪುತ್ರರನ್ನೂ ಓಡಿಸಿ ತಾನೇ ರಾಜಗದ್ದುಗೆಯನ್ನೇರಿದನು ಕಾಮಾರ್ಣವ, ಗುಣಾರ್ಣವ ದಾನಾರ್ಣವ, ವಜ್ರಹಸ್ತ ನರಸಿಂಹರೆಂಬ ಈ ಐವರು ಅಣ್ಣತಮ್ಮಂದಿರು ಚಿಕ್ಕತಂದೆಯಿಂದ ಹೊರಡಿಸಲ್ಪಟ್ಟವರಾಗಿ ತಮ್ಮ ತಾಯಿಯ ಸಮೇತ ಹೊರಟು ತಮ್ಮದೇ ಒಂದು ಸ್ವಂತ ರಾಜ್ಯವನ್ನು ಸ್ಥಾಪಿಸುವ ಇಚ್ಛೆಯಿಂದ ಉತ್ತರ ದಿಕ್ಕಿಗೆ ಪ್ರಯಾಣ ಬೆಳೆಸಿದರು ಆ ಕಾಲದಲ್ಲಿ ಪೂರ್ವದರನಂಶದ ಅಂತಿಮ ರಾಜನಾದ ಸಬಲಾದಿತ್ಯನು ಕಳಿಂಗದೇಶದ ಶಾಸಕನಾಗಿದ್ದನು ಈ ಐವರೂ ಅಣ್ಣತಮ್ಮಂದಿರು ಸಬಲಾದಿತ್ಯನನ್ನು ಸೋಲಿಸಿ ಕಳಿಂಗದ ಮೇಲೆ ತಮ್ಮ ಪ್ರಭುತ್ವವನ್ನು ಸ್ಥಾಪಿಸಿ ಮಹೇಂದ್ರವೆಂಬ ಪರ್ವತ ಶಿಖರದಲ್ಲಿ ವಾಸಿಸ ತೊಡಗಿದರು. ಸುತ್ತುಮುತ್ತಿನ ಹಳ್ಳಿಗಾಡಿನ ಜನರು ಇವರನ್ನು ಪಂಚಪಾಂಡವರೆಂದೂ ಇವರ ತಾಯಿಯನ್ನು ಕುಂತಿ ಎಂದೂ ತಿಳಿಯ ತೊಡಗಿದರು. ಪರ್ವತ ಶಿಖರದಲ್ಲಿರುವ ಅನೇಕ ದೇವಮಂದಿರಗಳಲ್ಲಿ ಗೋಕರ್ಣೇಶ್ವರನ ಮಂದಿರವು ಮುಖ್ಯವಾದುದು. ಈ ದೇವಮಂದಿರಗಳು ಈ ಅಣ್ಣತಮ್ಮಂದಿರ ಪೂರ್ವಧಿಕಾರಿಗಳಿಂದ ನಿರ್ಮಿಸಲ್ಪಟ್ಟಿದೆಂಬ ಜನ ಶ್ರುತಿ ಇದೆ ಇದಕ್ಕನುಸಾರವಾಗಿ ಯುಧಿಷ್ಠಿರ, ಭೀಮ, ಕುಂತಿಯವರ ಹೆಸರನಲ್ಲಿ ಮಂದಿರಗಳಿದ್ದು ಅರ್ಜುನನ ಹೆಸರಿನಲ್ಲಿ ಮಂದಿರವಿಲ್ಲದಿರುವುದರಿಂದ ಮಂದಿರ ನಿರ್ಮಾಣ ಕಾಲದಲ್ಲಿ ಅರ್ಜುನನು ಎಲ್ಲಿಯೋ ಹೊರಹೋಗಿದ್ದನೆಂದೂ ಜನರ ಅಭಿಪ್ರಾಯವಿದೆ ಅಲ್ಲಿಯ ಜನರು ಯುಧಿಷ್ಠಿರನೆಂದು ತಿಳಿಯುತ್ತಿದ್ದ ಕಾಮಾರ್ಣವನಿಗೂ, ಅರ್ಜುನನೆಂದು ತಿಳಿಯುತ್ತಿದ್ದ ದಾನಾರ್ಣವನಿಗೂ ಏನೋ ಜಗಳ ಉಂಟಾಗಿ ದಾನಾರ್ಣನು ಹೊರಗೆ ಹೋಗಿದ್ದನು. ಈ ಅಣ್ಣತಮ್ಮಂದಿರೂ ಒಗ್ಗಟ್ಟಿನಲ್ಲಿರುವಾಗ ಗೋಕರ್ಣೇಶ್ವರನನ್ನೇ ಪೂಜಿಸುತ್ತಿದ್ದರು. ಜಗಳ ಬಂದ ಮೇಲೆ ಇವರು ತಮ್ಮ ತಮ್ಮ ಹೆಸರಿನಲ್ಲಿ ಪೂಜೆಗಾಗಿ ಬೇರೆ ಬೇರೆ ದೇವ ಮಂದಿರಗಳನ್ನು ನಿರ್ಮಿಸಿ

ದ್ದರು. ಕಡೆಗೆ ಈ ದೇವಮ್ಮಂದಿರಗಳೇ ಪಾಂಡವರ ಮತ್ತು ಕುಂತಿಯ ಹೆಸರಿನಿಂದ ಪ್ರಸಿದ್ಧವಾಗಿರಬೇಕು.

ಹಿರಿಯವನಾದ ಕಾಮಾರ್ಣವನು ದಂತಪುರವನ್ನು ರಾಜಧಾನಿಯನ್ನಾಗಿ ಮಾಡಿ ಕಳಿಂಗ ರಾಜ್ಯವನ್ನು ಆಳಿದನು. ದಂತಪುರವೆಂದು ಹೆಸರು ಬರಲಿಕ್ಕೆ ತತ್ಕಾಲೀನ ಕಳಿಂಗ ರಾಜನೊಬ್ಬನು ಬುದ್ಧದೇವನ ಒಂದು ದಂತವನ್ನು ಮಂಜೂಷ (ಪೆಟ್ಟಿಗೆ) ದೊಳಗಿಟ್ಟು ಒಂದು ಸ್ಥೂಪದಲ್ಲಿ ಸ್ಥಾಪಿಸಿದನು. ಈ ಕಾರಣದಿಂದ ದಂತಪುರವೆಂಬ ಹೆಸರು ಬಂತು. ಈ ದಂತಪುರವು ಈಗಿನ ಮಂದಸಾ (ಯಾ ಮಂಡಸಾ) ಆಗಿರಬೇಕು. ಏಕೆಂದರೆ ಮೊದಲಿಗೆ ಮಂಜೂಪುರವೆಂಬ ಕೂಡ ಹೆಸರಿದ್ದು ಅದರ ತದ್ಭವವೇ ಮಂದಸವಾಗಿರಬೇಕು. ಮಂದಸವು ಈಗ ಒಂದು ಸಣ್ಣ ಗ್ರಾಮವಾಗಿದ್ದರೂ ಆ ಕಾಲದಲ್ಲಿ ಮಂದಸದಿಂದ ದಕ್ಷಿಣಕ್ಕೆ ಮಹೇಂದ್ರತನಯಾ ನದಿಯ ವರೆಗೂ ಮಂದಸ ಪಟ್ಟಣವು ಹರಡಿತ್ತು ಮಹೇಂದ್ರತನಯಾ ತೀರದಲ್ಲಿರುವ ಪಟೇಶ್ವರ ಮಂದಿರದಲ್ಲಿ ಸಿಕ್ಕಿದ ಶಿಲಾ ಲೇಖದಲ್ಲಿ ಈ ಭೂಮಿಯ ವಿಸ್ತಾರವು ಮಹೇಂದ್ರ ಪರ್ವತದಿಂದ ಈಗಿನ ಮಂದಸದ ಸಮುದ್ರ ತಟದ ವರೆಗೂ ಹರಡಿದ್ದು ಇದಕ್ಕೆ ದಂತಪುರವೆಂಬ ಹೆಸರಿತ್ತೆಂದು ಗೊತ್ತಾಗುತ್ತದೆ ಬೌದ್ಧ ಇತಿಹಾಸದಲ್ಲಿ ಹೇಳಿದ ದಂತಪುರವೂ ಈ ಶಿಲಾಲೇಖದಲ್ಲಿ ಹೇಳಿದ ದಂತಪುರವೂ ಒಂದೇ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ

4447 ಕಲಿಯುಗಾಬ್ದದಲ್ಲಿ (1297 ಶಕಾಬ್ದ ಅರ್ಥಾತ್ 1375 ಇಸವಿ) ಅಥವಾ ವೀರಭಾನುವಿನ ಆಳಿಕೆಯ 29ನೇ ವರ್ಷದಲ್ಲಿ ಈ ಶಿಲಾಲೇಖವು ಕೆತ್ತಲ್ಪಟ್ಟಿದೆ. ಈ ಶಿಲಾಲೇಖದಲ್ಲಿ ದಂತದುರ್ಗದಲ್ಲಿ ಆಳುತ್ತಿದ್ದ ವೀರಭಾನುವು ದಂತಿ ಎಂಬ ಗ್ರಾಮವನ್ನು ಪಟೇಶ್ವರ ದೇವರಿಗೆ ಉಂಬಳಿ ಬಿಟ್ಟನೆಂದೂ ಉತ್ಕಲ ಭಾಷೆಯಲ್ಲಿ ಬರೆದಿದೆ. ಈ ಶಿಲಾಲೇಖದಲ್ಲಿ ಹೇಳಿದ ಸ್ಥಾನವೇ ಗಂಗರ ದಾನಾರ್ಣವನ ರಾಜಧಾನಿಯಾದ ದಂತಪುರವೆಂಬುದರಲ್ಲಿ ಸಂಶಯವಿಲ್ಲ. ಕೆಲವರ ಅಭಿಪ್ರಾಯದಲ್ಲಿ ಜಗನ್ನಾಥ ಪುರಿಯೇ ದಂತಪುರವೆಂದಿದೆ. ಆದರೆ ಹೀಗಾಗಲು ಸಂಭವವಿಲ್ಲ

ಈ ಐವರು ಅಣ್ಣ ತಮ್ಮಂದಿರು ಸಂಪೂರ್ಣ ಕಳಿಂಗನನ್ನು ಸ್ವಾಧೀನ ಮಾಡಿಕೊಂಡರು. ಹಿರಿಯವನಾದ ಕಾಮಾರ್ಣವನು ಈ ರಾಜ್ಯವನ್ನು ತನ್ನ ನಾಲ್ವರು ತಮ್ಮಂದಿರಿಗೆ ಹಂಚಿಕೊಟ್ಟನು. (1) ಕಂರಿಕಾ ವಂಧುರಾ ಕಂರವನ್ನು ದಾನಾರ್ಣವನಿಗೆ ಕೊಟ್ಟನು. ಈ ಸ್ಥಾನವು ವರ್ತಮಾನ ಸಮಯದ ಮುಖಾಲಿಂಗಮ್ಮಿನಿಂದ ವಿಶಾಖ ಪಟ್ಟಣದ ವರೆಗಿನ ಕೆಲವು ಭಾಗವಾಗಿತ್ತು. ಮುಖಾಲಿಂಗಮ್ಮಿನ ಸಮೀಪದ ನಾಗರೀ ಯಾ ನಗರಿ (Nagari, Catack)ಯ ಇವನ ರಾಜಧಾನಿಯಾಗಿತ್ತು. (2) ಗುಣಾರ್ಣವನಿಗೆ "ಬಬ್ಬದೀ" ರಾಜ್ಯವನ್ನು ಕೊಟ್ಟನು. ಇದೇ ಬಬ್ಬದೀ ಎಂಬ ಹೆಸರು ಪರಿವರ್ತನೆ ಹೊಂದಿ ಒರಿಸ್ಸಾ, ಬಿಹಾರ್ ಪ್ರಾಂತ್ಯದ ವರ್ತಮಾನ ಬಮುಂಡಾ ಯಾ ಬಮುರಾ ಎಂಬುದಾಗಿರಬೇಕು. ಇವನ ರಾಜಧಾನಿಯು ದೇವದುರ್ಗಯಾ ದೇವಗಡವಾಗಿತ್ತು. (3) ವಜ್ರಹಸ್ತನಿಗೆ "ಕಂಟಕವರ್ತಿನಿ" ಯನ್ನು ಕೊಟ್ಟನು. ಇದು ಒರಿಸಾ, ಬಿಹಾರ್ ಪ್ರಾಂತ್ಯದಲ್ಲಿರುವ ವರ್ತಮಾನ "ಕಾಲಾಹಂಡಿ"ಯೇ ಆಗಿರಬೇಕು. ಇವನ ರಾಜಧಾನಿಯು "ಭವಾನಿ ಪಟ್ಟಣ"ವಾಗಿತ್ತು. ಈ ನಾಲ್ವರ ತಮ್ಮಂದಿರ ಪಟ್ಟಣಗಳಲ್ಲಿಯೂ ಗೋಕರ್ಣೇಶ್ವರನ ಮಂದಿರಗಳಿವೆ.

ಈ ಪ್ರಕಾರವಾಗಿ ಐವರು ಅಣ್ಣತಮ್ಮಂದಿರು ಬೇರೆ ಬೇರೆ ಕಡೆ ಆಳ ತೊಡಗಿ ಕಡೆಗೆ ಒಬ್ಬರಿಗೊಬ್ಬರು ಸ್ವತಂತ್ರರಾಗಿ (1) ಕ್ಷತ್ರಪತಿ (2) ಗಜಪತಿ (3) ನರಪತಿ (4) ಅಶ್ವಪತಿ (5) ಭೂಪತಿ ಎಂಬ ಬಿರುದುಗಳನ್ನು ಧರಿಸಿಕೊಂಡರು.

ಕಾಮಾರ್ಣವನು ೩೬ ವರ್ಷಗಳ ವರೆಗೆ ಕಳಿಂಗವನ್ನಾಳಿದವಂಗತನಾದನು. ಇವನ ಸ್ಥಾನವನ್ನು ಇವನ ತಮ್ಮನಾದ ದಾನಾರ್ಣವನು ಕಳಿಂಗವನ್ನು ತೆಗೆದುಕೊಂಡು ಆಳತೊಡಗಿದನು ಕಾಮಾರ್ಣವನ ಪುತ್ರರು ಅಲ್ಪ ವಯಸ್ಕರೂ ದುರ್ಬಲರೂ ಅಯೋಗ್ಯರೂ ಆದುದರಿಂದ ದಾನಾರ್ಣವನು ಕಳಿಂಗ ರಾಜ ಗದ್ದಿಯ ಮೇಲೆ ಕುಳಿತೆನೆಂದು ಚೋಡ್ಗಂಗೆಯು "ಕರ್ಣೀ" ತಾಮ್ರ ಪತ್ರದಲ್ಲಿ ಬರೆದಿದೆ. ಇದಕ್ಕೆ ಮೊದಲು ದಾನಾರ್ಣವನೂ ತನ್ನ ಅಣ್ಣನಿಂದ ದೊರಕಿದ 'ಕಂರಿಕಾವಂಧುರಾಕಂರ'ವನ್ನು ೩೬ ವರ್ಷಗಳ ವರೆಗೆ ಅಗತ್ಯವಾಗಿ ಆಳಿಲೇಬೇಕು ದಾನಾರ್ಣವನು ನಾಲ್ಕು ವರ್ಷಗಳ ವರೆಗೆ ಕಳಿಂಗವನ್ನಾಳಿದನು ಅಂತು ದಾನಾರ್ಣವನು ೪೦ ವರ್ಷಗಳ ವರೆಗೆ ರಾಜ್ಯವಾಳಿ ಪರಲೋಕ ವಾಸಿಯಾದನು ಈತನು ೪೦ ವರ್ಷಗಳ ವರೆಗೆ ರಾಜ್ಯವಾಳಿದನೆಂದು ಅನಂತವರ್ಮನ ಚೋಡ್ಗಂಗೆಯ ಕರ್ಣೇ ತಾಮ್ರ ಪತ್ರದಲ್ಲಿ ಬರೆದಿದೆ ಇವನ ಮರಣಾನಂತರ ಇವನ ವಂಶದವರು ಕಳಿಂಗವನ್ನು ಆಳಿದರು. ಆದರೂ ಕಳಿಂಗ ನಗರದ ದಕ್ಷಿಣದ ಮಹೇಂದ್ರಗಿರಿಯ ಉತ್ತರದ ಕೆಲವು ಭಾಗವನ್ನು ಆಳುತ್ತಿದ್ದರೆಂದು ತಿಳಿದು ಬಂದಿದೆ ಕಾಮಾರ್ಣವನ ವಂಶಜರ ಪ್ರತಿಯೊಂದು ದಾನ ಪತ್ರಗಳಲ್ಲಿಯೂ ವರ್ಮನೆಂಬ ಉಪಾಧಿಯೂ ಗೋಕರ್ಣೇಶ್ವರೋಪಾಸಕ, ಗಂಗವಂಶೋದ್ಭವ, ಕಳಿಂಗ ರಾಜ ಎಂಬ ಉಪಾಧಿಗಳೂ ಉಲ್ಲೇಖಿಸಲ್ಪಟ್ಟಿವೆ. ಈ ಗಂಗ ವಂಶಜರು ೧೦೭೮ರ ವರೆಗೂ ಕಳಿಂಗ ರಾಜ್ಯವನ್ನಾಳಿದರು ಗಂಗವಂಶದ ಪ್ರತಾಪೀ ರಾಜನೊಬ್ಬನು ೯೯೯ ಶಕಾಬ್ದ ೩ ಫಾಲ್ಗುಣ ಶನಿವಾರ (೧೭ ಫೆಬ್ರವರಿ ೧೦೭೪)ದಂದು ಚೋಡ್ಗಂಗ ದೇವಕೇಸರೀ ವಂಶದ ಉತ್ಕಲವನ್ನಾಳುತ್ತಿದ್ದ ಅಂತಿಮ ರಾಜನಾದ ಸ್ವರ್ಣ ಕೇಸರೀ ಮುಕುಂದ ದೇವನನ್ನು ಸೋಲಿಸಿ ಉತ್ಕಲವನ್ನಾಳುತ್ತಿದ್ದ ಅಂತಿಮರಾಜನಾದ ಸ್ವರ್ಣ ಕೇಸರಿ ಮುಕುಂದ ದೇವನನ್ನು ಸೋಲಿಸಿ ಉತ್ಕಲ, ಕಲಿಂಗಗಳ ಅಧೀಶ್ವರನಾಗಿ ಕಟಕದಲ್ಲಿ ರಾಜಧಾನಿಯನ್ನಾಗಿ ಮಾಡಿದನು ಈತನು ಉತ್ಕಲವನ್ನು ಗೆದ್ದ ಮೇಲೆ ವೈಷ್ಣವಮತಾವಲಂಬಿಯಾಗಿ ಪುರಿಯ ಜಗನ್ನಾಥ ಸ್ವಾಮಿಯ ಭಕ್ತನಾಗಿ ರಾಜ್ಯವಾಳಿದನು.

ರಣಭೇರಿ.

(ಲೇಖಕ:—ಪಿ. ಸದಾನಂದ ನಾಯಕ್)

ಒಂದು ರವಿವಾರ ರವಿರಥವು ಭರದಿಂದ ಪಡುವಣ ಕಲತ್ತಡ ಸಾಗಿತು. ಮುಸ್ಸಂಜೆಯು ಕಳೆದು ಕತ್ತಲೆಯು ಕವಿಯಿತು. ನಾನು 'ಸಿಂಹಗಡ' ಸಿನೆಮವನ್ನು ನೋಡಿ ಮನೆಗೆ ಹಿಂದಿರುಗಿದೆನು ಉಂಡು ಕೋಣೆಯನ್ನು ಸೇರಿದೆನು. ಆರಾಮ ಕುರ್ಚಿಯಲ್ಲಿ ಒರಗಿ, ಅಲ್ಲೇ ಮೇಜಿನ ಮೇಲೆ ಬಿದ್ದಿದ್ದ ಅಂದಿನ ವಾರ್ತಾ ಪತ್ರಿಕೆಯನ್ನು ಓದ ತೊಡಗಿದೆನು. ಕಣ್ಣು ಕೂರಿತು. ಅವಸರದಿಂದ ಹಾಸಿಗೆಯನ್ನು ಹಾಸಿ, ದೀಪವನ್ನು ನಂದಿಸಿ ಮಲಗಿಕೊಂಡೆನು ಬಹಳ ದಣಿದಿದ್ದೆ ನಾದ್ದರಿಂದ ನಿದ್ರಾಂಗನೆಯು ಬೇಗನೆ ಒಲಿದಳು

ಮಧ್ಯ ರಾತ್ರಿ ಗಂಟೆ ಹನ್ನೆರಡಾಗಿರಬಹುದು ಎಲ್ಲೆಲ್ಲಿಯೂ ನೀರವ ನಟ್ಟಿರುಳ ನಿಶ್ಶಬ್ದತೆಯನ್ನು ನಶಿಸಿ ಕಗ್ಗತ್ತಲೆಯ ಕರಾಳತೆ ಯನ್ನು ಹೆಚ್ಚಿಸುವಂತೆ ರಣಭೇರಿಯು ಹೊಡೆಯಲ್ಪಟ್ಟಿತು ಎಲ್ಲರೂ ಎಚ್ಚೆತ್ತರು ನಾನೂ ಎದ್ದೆನು. ಇದೇನು ಕೋಲಾಹಲ! ಶತ್ರುಗಳು ದಾಳಿಯಿಟ್ಟರೇ? ಅಂತೆಯೇ ಇರಬೇಕು. ಇಲ್ಲದಿದ್ದಲ್ಲಿ ಅಂಥ ಕೋಲಾಹಲವಾದರೂ ಏತಕ್ಕೆ ಇದ್ದೀತು? ಮಾತೃಭೂಮಿಯ ರಕ್ಷಣೆ ಗಾಗಿ ಪ್ರಾಣವನ್ನು ಈಯಲೇ ಬೇಕು, ಇಂತೆಂದು ಭಯವನ್ನು ಬಿಟ್ಟು ಕವಚವನ್ನು ತೊಟ್ಟು, ಕುಲಾವಿಯನ್ನಿಟ್ಟು, ಸಶಸ್ತ್ರರಾಗಿ ಅಶ್ವಾರೂಢ ರಾಗಿ ನಾನೂ ನನ್ನ ಮಿತ್ರ ರಮಾನಂದನೂ ಯುದ್ಧಕ್ಕನುವಾಗಿ ತ್ವರೆಯಿಂದ ರಣರಂಗದತ್ತ ಹೋದೆವು ಸಾವಿರಾರು ಸೈನಿಕರು ಸುಸ ಜ್ಜಿತರಾಗಿ ಸೇರಿದ್ದರು. ನಾಯಕನು ಸೇನಾ ನಿರ್ಮಾಣ ಕಾರ್ಯವನ್ನು ತ್ವರಿತದಿಂದ ಮಾಡಿದನು ರಣವಾದ್ಯವು ಮೊಳಗಲು, ಕುದುರೆಗಳು ಕೆನೆಯಲು, ಉತ್ಸಾಹವು ಉಕ್ಕಿ ಎಲ್ಲೆಯನ್ನು ಮೀರಲು, ಸಾವು ಗೆಲವೆನ್ನದೆ ನಾವೆಲ್ಲರೂ ಯುದ್ಧಕ್ಕೆ ಸಿದ್ಧರಾಗಿ ನಿಂತೆವು ಸೂಚನೆಯನ್ನು ಕೊಡಲು ಯುದ್ಧಾರಂಭವಾಯಿತು.

ಅಂದಿನ ಕದನದ ಭೀಕರತೆಯನ್ನು ಮಾತುಗಳಲ್ಲಿ ಹೇಳಿ ಮುಗಿಸ ಲಾರವು ವೀರರನೇಕರು ರಣಘೋಷವನ್ನು ಮಾಡುತಿದ್ದಂತೆ ಭೂ ಸ್ಥಾಯಿಯಾದರು. ಕತ್ತಿಯ ಕಡಿತದಿಂದಾದ ಕೆನ್ನೀರ ಪ್ರವಾಹವು ಹರಿದು ಹಳ್ಳಗಳಾದವು ರಮಾನಂದನು ನಾನು ನೋಡುತಿದ್ದ ಹಾಗೆ ಅರಿಭಟನೊಬ್ಬನ ಖಡ್ಗಕ್ಕೆ ಬಲಿಯಾದನು ಮಿತ್ರನ ಮರಣದಿಂದ ನೊಂದು ಬೆಂದು ನಾನು ಅರಿವಿಗೆ ಬರುವ ಮುನ್ನ ಶತ್ರು ಸೈನಿಕನೊಬ್ಬನು ಕೂರಸಿಯನಾಂತು ನನ್ನತ್ತ ಬರುತಿದ್ದನು. ಕೈದುವನ್ನೆತ್ತೋಣವೆಂದರೆ ನನ್ನಲ್ಲಿ ಶಕ್ತಿಯಿಲ್ಲ, ಧೈರ್ಯವಿಲ್ಲ. ಆತನು ನನ್ನನ್ನು ಸಮೀಪಿಸಿ, ಖಡ್ಗವನ್ನು ನನ್ನೆದೆಗೆ ಸರಿಯಾಗಿ ಹಿಡಿದು "ಶರಣಾಗತನಾಗು, ಇಲ್ಲವೇ ಸಾಯಲು ಸಿದ್ಧನಾಗು" ಎಂದು ಕರಿಣೋಕ್ತಿಯನ್ನಾಡಿದನು. ಹಾ! ದೇವರೇ ಇದೇನು ಪ್ರಯಾದ! ಶರಣಾಗತನಾಗಲೇ? ಛೆ! ಅದೆಂದಿಗೂ ಕೂಡದು ಧೈರ್ಯವನ್ನು ಮಣ್ಣುಪಾಲು ಮಾಡಿ ಶರ ಣಾಗತನಾಗಿ, ಮರಣಕ್ಕಿಂತಲೂ ಭಯಂಕರವಾದ ದುಷ್ಕೀರ್ತಿಯ ಮಡುವಿನಲ್ಲಿ ನಿಮಿಷ ನಿಮಿಷಕ್ಕೂ ಹೆದರುತ್ತ ಮುಳುಗುವುದಕ್ಕಿಂತಲೂ ಧೈರ್ಯದಿಂದ ಯುದ್ಧ ಮಾಡಿ ವೀರ ಪುರುಷನಂತೆ ಈ ದೇಹವನ್ನು ರಣರಂಗದಲ್ಲಿ ಬಿಟ್ಟು ಶಾಶ್ವತವಾದ ಕೀರ್ತಿ ವಿಮಾನವನ್ನೇರಿ ಮುಕ್ತಿ ಯನ್ನು ಪಡೆಯುವುದು ಶ್ರೇಯಸ್ಕರವಲ್ಲವೇ? ಆದರೆ ನಾನು ಅನು ಭವಿಸುತ್ತಿರುವ ಲೌಕಿಕ ಸುಖ ಸಂಪತ್ತುಗಳನ್ನು ಬಿಟ್ಟು ಹೋಗುವು ದಾದರೂ ಏಕೆಂತು? ಇಂತೀ ವರಿಯ ಭಾವನೆಗಳಿಂದ ನಾನು ತತ್ತರಿಸು ತ್ತಿರಲು ಛಕ್ಕನೆ ಎಚ್ಚರವಾಯಿತು. ಮೈ ಬೆವರಿತ್ತು. ಕೈಕಾಲುಗಳು ತಣ್ಣಗಿದ್ದುವು, ಬೆಳಕು ಮೂಡಿತ್ತು ಇದೇನು ಏಕೊಂದು ಬರಿಯ ಕನಸು.

ವಿದ್ಯಾಲಯದ ತರ್ಕ ಸಭೆಗಳಲ್ಲಿ "ಯುದ್ಧ ಮೇಲೋ, ಶಾಂತಿ ಮೇಲೋ?" ಎಂಬ ಚರ್ಚಾಸ್ಪದ ವಿಷಯದಲ್ಲಿ ಕೂಡ ಯುದ್ಧ ಕ್ಕಿಂತ ಶಾಂತಿಯೇ ಎಂದೆಂದಿಗೂ ಮೇಲಾದಿರುವುದೆಂಬುದಾಗಿ ಉದ್ದುದ್ದ ಭಾಷಣಗಳನ್ನು ಮಾಡುತಿದ್ದ ನಾನು ಯುದ್ಧವನ್ನು ಮಾಡು ವೆನೆಂತು? ಯುದ್ಧದ ಭೀಕರತೆಗೆ ಮನಸ್ಸಿನಲ್ಲಿ ಇಂಬನ್ನೇ ಕೊಡ ದಿದ್ದ ನಾನು ರಣದ ವಿಷಯ ಕನವರಿಸುವುದಾದರೂ ಏಕೆಂತು? ಇಂತೀ ಬಗೆಯ ಭಾವನಾತರಂಗಗಳಿಂದ ಅಂತರಂಗದ ಅಂತರಾಳವು ಅಲೆದಾಡುತ್ತಿರಲು ರಮಾನಂದನು ಕೋಣೆಯನ್ನು ಪ್ರವೇಶಿಸಿದನು. ನನ್ನ ಕನಸಿನ ವಿಷಯವನ್ನೆಲ್ಲಾ ಅವನೊಡನೆ ಹೇಳಿಬಿಟ್ಟೆನು. ಅವನು ನಗುತ್ತ "ಏನು ಸದಾನಂದ! ಅಂದು ಹಂಪನಕಟ್ಟೆಯಲ್ಲಿ "ಲಾಧಿ ಜಾರ್ಜ್" ಆಗುವಾಗ ನೀನು ಹೆದರಿ ಓಡಿ ಹೋದುದನ್ನು ಮರೆ ತಂತಿದೆ. ನೀನು ಕನಸಿನಲ್ಲಾದರೂ ಯುದ್ಧ ಮಾಡಿದಿಯೆಂದರೆ ಅದು ಕೇವಲ ಅಸಂಬದ್ಧ ಪ್ರಲಾಪವು. ನಿನ್ನೆ, ಮಲಗುವ ಮುಂಚೆ ವಾಲ್ಮೀಕಿ ರಾಮಾಯಣದ ಯುದ್ಧ ಕಾಂಡನನ್ನು ಓದಿದ್ದಿಯೇ? ಹೋ! ಈಗ ನೆನಪಿಗೆ ಬಂತು. ನಿನ್ನೆ 'ಸಿಂಹಗಡ' ಸಿನೆಮಕ್ಕೆ ಹೋಗಿದ್ದಿಯಷ್ಟೆ! ನಿನ್ನೀ ಕನಸು 'ಸಿಂಹಗಡ'ದ ಫಲಿತಾಂಶವು" ಎಂದನು

"ಭಲಾ! ರಮಾನಂದ ಚೆನ್ನಾಗಿ ಊಹಿಸಿದೆ. 'ಸಿಂಹಗಡ' ದಲ್ಲಿ ಮಾಳವರು ಮೊಗಲರೊಡನೆ ಮಾಡಿದ ಯುದ್ಧದ ಭೀಕರತೆಯೂ ತಾನಾಜಿಯು ತೋರಿದ ಅಸಮಾನ ಸಾಹಸವೂ ನಾನು ತುಲಗುವ ಮೊದಲು ಮನಸ್ಸನ್ನು ಆವರಿಸಿದ್ದುವು" ಎಂದೆನು

ಇಂತು 'ಸಿಂಹಗಡ'ವೆ ನನ್ನ ಕನಸಿಗೆ ಕಾರಣವೆಂದರಿತು ಚಿತ್ತ ಸ್ವಾಸ್ಥ್ಯವನ್ನು ಪಡೆದೆನು

ಸತಿ

ತನ್ನ ಗಂಡನ ಶವದ ಕಾಲಿನ ಹತ್ತಿರ ಕಾಷ್ಠದ ಮೇಲೆ ಅವಳು ಕುಳಿತಿದ್ದಳು. ಸುಂದರವಾದ ಸೀರೆಯನ್ನು ಉಟ್ಟುಕೊಂಡಿದ್ದಳು. ಹಣೆಯ ಮೇಲೆ ದೊಡ್ಡದಾದ ತಿಲಕವನ್ನು ಇಟ್ಟಿದ್ದಳು. ಮದುವೆಯ ಚಪ್ಪರಕ್ಕೆ ಹೋಗುವಂತೆ ಅವಳು ತೋರುತ್ತಿದ್ದಳು. ಬ್ರಾಹ್ಮಣರು ಕಾಷ್ಠದ ಸುತ್ತಲೂ ನಿಂತುಕೊಂಡಿರುವರು. ಅವರಲ್ಲೊಬ್ಬನು ಅದಕ್ಕೆ ಬೆಂಕಿಯನ್ನು ಕೊಡಲು ಸಿದ್ಧನಾಗಿದ್ದನು.

ಆಗ ಸಂತ ತುಳಸಿದಾಸನು ಆ ಮಾರ್ಗವಾಗಿ ಹೋಗುತ್ತಿದ್ದನು. ಇದನ್ನು ನೋಡಿ ಅಲ್ಲಿಗೆ ಹೋದನು. ಸತಿಯು ಸಂತನನ್ನು ಕಂಡು ನಮಸ್ಕರಿಸಿದಳು.

"ತಾಯಿಯೇ! ಈ ರೀತಿಯಲ್ಲಿ ಸುಂದರವಾದ ಉಡುಪುಗಳನ್ನು ಎಷ್ಟಾ ಧರಿಸಿರುವೆ?" ಎಂದು ಕೇಳಿದನು.

"ನನ್ನ ಪ್ರೀತಿಯ ಗಂಡನೊಡನೆ ನಾನು ಪರಲೋಕವನ್ನು ಸೇರಲು ಇಚ್ಛೈವುಳ್ಳವಳಾಗಿದ್ದೇನೆ" ಎಂದು ಆಕೆಯು ಹೇಳಿದಳು.

"ತಾಯಿಯೆ! ಈ ಲೋಕವನ್ನು ಬಿಟ್ಟು ಪರಲೋಕವನ್ನು ಸೇರಲು ಇಷ್ಟು ಅತುರವೇಕೆ? ಈ ಎಲ್ಲ ಲೋಕಗಳೂ ಪರಮಾತ್ಮನಿಂದ ನಿರ್ಮಿತವಾದವುಗಳಲ್ಲವೆ?"

ಆ ಪತಿವ್ರತಾ ಸ್ತ್ರೀಗೆ ಏನೋ ಮನಸ್ಸಿನಲ್ಲಿ ಹೊಳೆಯಿತು. ಕೆಲ ಹೊತ್ತು ಆಲೋಚಿಸುತ್ತ "ಪರಲೋಕದಲ್ಲಿ ಏನಿದೆ. ಅದರಾಶೆಯು ನನಗಿಲ್ಲ. ನನ್ನ ಗಂಡನು ನನಗೆ ಬೇಕಾದ ಅವನೊಡನೆ ಇರ ಬೇಕೆಂಬುದೇ ನನಗೆ ಆಶೆ. ನನ್ನ ಗಂಡನು ನನಗೆ ಒಂದು ತಿಂಗಳೊಳಗೆ ಪುನಃ ದೊರಕುವನೊ ಎಂದು ನೋಡುವೆನು" ಎಂದು ಹೇಳಿ ಕಾಷ್ಟದಿಂದ ಇಳಿದು ಹೊರಟು ಹೋದಳು.

ತುಳಸಿ ದಾಸನು ಆ ದಿನ ರಾತ್ರಿಯಲ್ಲಿ ಆ ನದಿಯದಂಡೆಯ ಮೇಲೇ ಏನೊ ಆಲೋಚಿಸುತ್ತ ಮಲಗಿಕೊಂಡನು. ಆತಳ ಆತ್ಮಕ್ಕೆ ಅವನು ಯಾವ ರೀತಿಯ ಶಾಂತತೆಯನ್ನು ಕೊಡುತ್ತಿರುವನೆಂದು ಯಾರಿಗೂ ತಿಳಿದಿರಲಿಲ್ಲ. ಅವಳೂ ಕಠಿಣವಾದ ತಪಸ್ಸಿನಲ್ಲಿಯೇ ಇರುತಿದ್ದಳು.

ಆ ತಿಂಗಳು ಮುಗಿದ ಕೂಡಲೆ ಸುತ್ತು ಮುತ್ತಲಿನ ಜನರು ಅವಳ ಲ್ಲಿಗೆ ಬಂದು "ನಿನ್ನ ಕಳೆದು ಹೋದ ಗಂಡನು ನಿನಗೆ ಪುನಃ ದೊರಕಿ ದನೆ?" ಎಂದು ಆತುರದಿಂದ ಕೇಳಿದರು.

"ಅವನು ನನಗೆ ಸಿಕ್ಕಿರುವನು" ಎಂದಳು ಅವಳ ಮುಖವು ಸಂತೋಷದಿಂದ ಅರಳಿದ್ದಿತು.

"ಅವನೆಲ್ಲಿರುವನು?"

ಆಕೆಯು ಹೇಳಿದಳು, "ರಾತ್ರಿ ಹಗಲೂ, ಅವನು ನನ್ನ ಹೃದಯ ದಲ್ಲಿ ವಾಸಿಸಿರುತ್ತಾನೆ"

ವರ್ತಮಾನ ಪತ್ರಿಕೆಗಳನ್ನೇಕೆ ಓದಬೇಕು?

— ೧ —

ಕರ್ನಾಟಕದಲ್ಲಿ ಈಗಾಗಲೇ ಹಲಕೆಲವು ಪತ್ರಿಕೆಗಳು, ಜನಿಸಿ ಯೌವನಾವಸ್ಥೆಯನ್ನು ಹೊಂದಿರುವುವಾದರೂ, ಅವುಗಳು ತಮ್ಮ ಪ್ರಾಯಕ್ಕೆ ತಕ್ಕುದಾದ ಉತ್ತೇಜನದಿಂದಲೂ, ಚಟುವಟಿಕೆಯಿಂದಲೂ ಕೆಲಸವನ್ನು ನಿರ್ವಹಿಸುವುದಿಲ್ಲವೆಂದೇ ಹೇಳಬೇಕಾಗುತ್ತದೆ. ಮೊದ ಲೊಮ್ಮೆ ಮೇಲಿನ ವಿಷಯವು ಕರ್ನಾಟಕದ ಹಲವರ ಮನಸ್ಸನ್ನಾ ಕರ್ಷಿಸಿ ಅವರನ್ನು ಹಲಕೆಲವು ಕಾರ್ಯಗಳನ್ನು ಮಾಡುವಂತೆ ಪ್ರೇರೇಪಿಸುತ್ತಾದರೂ ಪತ್ರಿಕೆಗಳ ಪರಿಜ್ಞಾನವೆಯೆಂಬ ಆಕಾಶವು ಇನ್ನೂ ಮೋಡದಿಂದ ಮುಚ್ಚಿಕೊಂಡಿದೆ. ಅದು ಶುಭ್ರನಾಗಿ ಬೆಳಗಿ ದೇಶಬಾಂಧವರನ್ನು ಯಾವಾಗ ಉದ್ಧರಿಸುವುದೋ ಯಾರು ಬಲ್ಲ? ಎಷ್ಟೋ ಪತ್ರಿಕೆಗಳು ಜನಿಸುತ್ತಿರುವುವು. ಆದರೆ ಕರ್ನಾಟಕದ ದುರ್ದೆಶೆ ಯೆಂದೇ ಹೇಳಬೇಕು—ಕೆಲವು ತ್ವರಿತದಲ್ಲೇ ಅವಸಾನ ಹೊಂದುತ್ತಿ ರುವುವು; ನುರಿತಿರುವ ಸಂಪಾದಕ, ಚಾಲಕರ ಬೆಂಬಲವು ದೊರೆ ತರೂ ಕೂಡ ಹೆಚ್ಚಿನ ಪತ್ರಿಕಾ ಶಿಶುಗಳು ಎದ್ದು ನಿಂತುಕೊಳ್ಳುವಷ್ಟು ಚೈತನ್ಯವುಳ್ಳವುಗಳಾಗುವುದಿಲ್ಲ.

ಇದೇಕೆ ಹೀಗಾಯಿತು?—ಸಾಮಾನ್ಯ ಮನುಷ್ಯನಿಗೆ ಪತ್ರಿಕೆಯ ರುಚಿಯ ಅರಿವು ಇನ್ನೂ ಆಗಿರುವುದಿಲ್ಲ. ಅದನ್ನೋದುವುದಕ್ಕೆಂದು ವೆಚ್ಚ ಮಾಡುವ ಅವನ ಸಮಯವು ಅವನಿಗೆ ಮುಂದಕ್ಕೆ ಉತ್ತಮ ಫಲ ದಾಯಕವಾಗುವುದೆಂಬುದನ್ನು ಅವನು ಮರೆತೇ ಬಿಡುವನು. ಅಲ್ಲದೆ ಸದ್ಬೋಧನೆಯ ರೂಪದಿಂದ ಅದರ ಸತ್ಪ್ರಯೋಜನವನ್ನು ಅವನಿಗೆ ತಿಳಿಯಲಿಳಸುವವರೂ ಇಲ್ಲ. ಹೀಗಾಗಿ ನಮ್ಮ ಕರ್ನಾಟಕ ಪತ್ರಿಕಾ ಪರಿಚಲನಾ ಕಾರ್ಯವು ಮೂಲೆಗೊತ್ತಿಡಲ್ಪಟ್ಟು, ಅವನತಿಯ ಕಡೆಗೆ ಇಣಿಕಿ ನೋಡುತ್ತಾ ಇದೆ.

ವರ್ತಮಾನ ಪತ್ರಿಕೆಗಳ ಓದುವಿಕೆಯಿಂದ ದೊರೆಯುವ ಲಾಭ ಗಳನ್ನು ಆಂಗ್ಲೇಯರ ಅಬಾಲವೃದ್ಧರಿಲ್ಲರೂ ಸಂಪೂರ್ಣ ಮನಗಂಡಿ ರುವರು. ಪತ್ರಿಕಾ ವಾಚನವು ಅವರ ದಿನನಿತ್ಯದ ಅಭ್ಯಾಸಗಳಲ್ಲಿ ಒಂದಾಗಿ ಹೋಗಿರುತ್ತದೆ ಎಂದ ಮೇಲೆ ರಾಷ್ಟ್ರಾಭಿವೃದ್ಧಿಗೆ ಕುಂದೇನು?

ಆಂಗ್ಲೇಯರಲ್ಲಿ ಪ್ರಬಲವಾದ ಸ್ವಾತಂತ್ರ್ಯಾಸಕ್ತಿಯು ಬೆಳಕು ಉಜ್ವಲವಾಗಿ ಬೆಳಗುತ್ತಾ ಇತರ ದೇಶಗಳನ್ನು ಜರೆಯುತ್ತಿರಲು ಕಾರ ಣವೇನು? ಅಲ್ಪ ಜನಸಂಖ್ಯಾತರಾದ ಅವರ ಜನಾಂಗವು ಬಹು ಸಂಖ್ಯಾತರಾದ ನಮ್ಮ ಮೇಲೆ ಅಧಿಕಾರವನ್ನು ತೋರಿಸಿ, ಮೆರೆಯಲು ಕಾರಣವೇನು? ಸ್ವಾಭಿಮಾನ, ಸ್ವಜನಾಭಿಮಾನ, ಸ್ವದೇಶಾಭಿಮಾನ ಗಳಂಬ ಉಚ್ಚ, ಉಚ್ಚತರ ಮತ್ತು ಉಚ್ಚತಮವಾದ ಗುಣಗಳು ಅವರ ಸ್ತ್ರೀ, ಬಾಲ, ವೃದ್ಧರಲ್ಲಿ ನೆಲೆಗೊಂಡಿರಲು ಕಾರಣವೇನು? ವ್ಯಾಪಾರ ವ್ಯವಹಾರಗಳಲ್ಲೂ, ಬುದ್ಧಿಕುಶಲತೆಗಳಲ್ಲೂ ಅವರನ್ನು ಅಗ್ರಗಣ್ಯರನ್ನಾಗಿ ಮಾಡಿದ ಆ ಯಂತ್ರವಾವುದು? ಬರೇ ಲೋಕ ವ್ಯವಹಾರ ಜ್ಞಾನ! ಪತ್ರಿಕಾ ವಾಚನದಿಂದ ಗಳಿಸಿದ ವಿವಿಧ ತಿಳು ವಳಿಕೆಯ ಅವರ ಅದೊಂದು ವಾಸನೆ—ಅಲ್ಲದೆ ಪುಸ್ತಕದ ಬದನೆ ಕಾಯಿಗಳು ಅವರಿಗೆ ಶ್ರೇಯಸ್ಸನ್ನುಂಟು ಮಾಡಲಿಲ್ಲ. ಪತ್ರಿಕೆಗಳ ಪ್ರಚಂಡ ಪ್ರಭಾವದ ಹೆದರಿಕೆಯಿದ್ದುದರಿಂದಲೇ ಸರಕಾರವು ಒರ್ಡಿ ನೆನ್ಸುಗಳನ್ನು ಮುದ್ರಣಾಲಯಗಳ ಮೇಲೆ ಹೇರುತ್ತವೆ. ಆಂಗ್ಲೇಯರಲ್ಲಿ ಎಂತಹ ದರಿದ್ರನೇ ಇರಲಿ'— ಅವನು ವರ್ತಮಾನ ಪತ್ರಗಳನ್ನು ಓದದಿಲ್ಲ; ಕೂಲಿಯಾಳುಗಳಿಂದ ಮೊದಲುಗೊಂಡು ಅರಸನ ವರೆಗೂ ಎಲ್ಲರೂ ಪತ್ರಿಕೆಗಳ ಮಧ್ಯೆಯೇ ಬೆಳೆಯುತ್ತಿರುವರು. ಪತ್ರಿಕಾ ವಾಚನವಲ್ಲ!—ಪಠನೆಯೇ ಅವರಲ್ಲಿನ ಚಟ! ಇದಕ್ಕೆ ಅವರ ರಾಷ್ಟ್ರೀಯ ಭಾಷೆಯೂ ಧಾರಾಳವಾಗಿ ಸಹಾಯವನ್ನೀಯುತ್ತದೆ. ಆದರೆ ಕರ್ನಾಟಕದಲ್ಲೋ? ಓದು ತಿಳಿಯದವನಿಗೆ ವರ್ತಮಾನ ಪತ್ರಿಕೆಗಳೆಂದರೇನೆಂದು ತಿಳಿಯದು. ಮಾತ್ರವಲ್ಲದೆ ಅವೇನೆಂದು ತಿಳಿಯಬೇಕೆಂಬ ಲವಲವಿಕೆಯೂ ಕೂಡ ಅವನಲ್ಲಿಲ್ಲ,— ಹೋಗಲಿ! ಅಲ್ಪಸ್ವಲ್ಪ ವಿದ್ಯಾವಂತರಾದರೋ?—ಅವರು ಪತ್ರಿಕೆಗಳ ಓದುವಿಕೆಯ ಕಡೆಗೆ ಸಂಪೂರ್ಣ ಅಲಕ್ಷ್ಯರಾಗಿಯೇ ಇರುವರು. ಏಕೆ? ಜ್ಞಾನಾಭಿ ವೃದ್ಧಿಯನ್ನು ಮಾಡಲು ಎಳ್ಳಷ್ಟು ಕುತೂಹಲವಿಲ್ಲದವರಿಗೆ ಇದರ

ಗೋಜಿಯಾದರೂ ಏಕೆ? ಕಲಿತುದನ್ನು ಮರೆಯಬೇಕೆಂದು ಯತ್ನಿಸುವವರೂ ಇದ್ದಾರೆಂದರೆ ಅದೊಂದು ಅತಿಯೊಕ್ತಿಯೇ? ಇನ್ನು ಸುಶಿಕ್ಷಿತ ವರ್ಗದವರ ಪಾಡಾದರೂ ಏನು? ಆಂಗ್ಲ ಪತ್ರಿಕೆಗಳಲ್ಲದೆ ಕನ್ನಡ ಪತ್ರಿಕೆಗಳ ಚಂದಾದಾರರಾಗುವುದೆಂದರೆ ಅದು ಅವರಿಗೆ ತೀರ ಮಾನನಷ್ಟವೆಂದೇ ಭಾವಿಸುವರು. "ಕನ್ನಡವನ್ನು ಶಾಲೆಗಳಲ್ಲಿ ಕಲಿತು, ಸಿಕ್ಕಿಬಿದ್ದೆನಲ್ಲಾ" ಎಂದು ಪಶ್ಚಾತ್ತಾಪ ಪಡುವವರಾದರೂ ಏಕೆ ಇಲ್ಲ? ಹೀಗಾಗಿ ಕನ್ನಡ ವಾಙ್ಮಯ ಪಕ್ಷಿಯು ರೆಕ್ಕೆ ಬಿಡಿಸಿಕೊಂಡು ಹಾರಾಡಲೆಡೆಯಿಲ್ಲದೆ ಕಣ್ಬೆಟ್ಟು ಅಲ್ಲೇ ಮುದುಡಿಕೊಂಡು ಬೀಳುವ ಪ್ರಸಂಗವು ಬಂದು ನಿಂತಿದೆ. ಅಂದ ಮೇಲೆ ಕರ್ನಾಟಕದ ಅಡಿಗಲ್ಲು ಸ್ಥಿರವಾಗಿ ನಿಲ್ಲಲು ಅವಕಾಶವಾದರೂ ಎಲ್ಲಿ?

ಜನರೊಳಗಣ ಪ್ರಕೃತದ ಸಂಕುಚಿತ ಸ್ವಭಾವವು ಕ್ರಮೇಣ ವಿಶಾಲಹೊಂದಿ ಅವರು ಶುದ್ಧಾಶುದ್ಧವೆಂದರೇನು? ನ್ಯಾಯಾನ್ಯಾಯಗಳೆಂದರೇನು? ಲೋಕ ವ್ಯವಹಾರವು ಹೇಗಿದೆ? ತಾನು ಈ ಜೀವನ ಸಾಗರದಲ್ಲಿ ಧಾವಿಸುತ್ತಿರುವುದಾದರೂ ಎಲ್ಲಿಗೆ? ಸ್ವಜನರಿಗಾಗಿ, ಸ್ವದೇಶಕ್ಕಾಗಿ ತಾನು ಎಷ್ಟು ಕಾರ್ಯಗಳ ಭಾರವನ್ನು ಹೊತ್ತುಕೊಳ್ಳಬೇಕು? ಎಂಬಿವೇ ಮೊದಲಾದ ವಿಷಯಗಳನ್ನು ನಿವೇಚನೆಯಿಂದ ತಿಳಿಯಬೇಕಾದರೆ, ಮೊದಲಾಗಿ ನಾಡಿಗರಲ್ಲಿ ಸುಶಿಕ್ಷಿತರಾದವರಿಗೆ ಜೀವನದ ಜೀವಾಳದ ಅರಿವು ಉಂಟಾಗಬೇಕು. ಅದರಿಂದ ಸಾಹಿತ್ಯೋನ್ನತಿಯುಂಟಾಗಬೇಕು. ಸಾಹಿತ್ಯ ಪ್ರಚಾರದಿಂದ ನಾಡಿಗರಲ್ಲಿ ಎಚ್ಚರಿಕೆಯುಂಟಾಗಬೇಕು. ಸಮಾಜ ಸುಧಾರಣೆಯಿಂದ ಹೃದಯದ ಸಂಕುಚಿತ ಸ್ವಭಾವವು ನೀಗಿ, ವಿಶಾಲವಾಗಬೇಕು. ವಿಶಾಲ ಹೃದಯವು ದೃಷ್ಟಿಸಂಕೋಚನವನ್ನು ಹೋಗಲಾಡಿಸಿ, ದೂರದೃಷ್ಟಿಯನ್ನೀಯಬೇಕು. ಹೀಗಾದ ಪಕ್ಷದಲ್ಲಿ ಮತ್ತೇನುಳಿಯಿತು? ಕರ್ನಾಟಕದ ಉದ್ಧಾರವೇ ಆಯಿತು.

ಇದಕ್ಕಾಗಿ ಎಲ್ಲರೂ ಪತ್ರಿಕೆಗಳನ್ನೋದುವ ಅಭ್ಯಾಸವನ್ನು ಮಾಡಬೇಕು. ಮಕ್ಕಳು ಮರಿಗಳನ್ನು ಕೂಡಾ ಈ ವಿಷಯದಲ್ಲಿ ಎಚ್ಚರಗೊಳಿಸಿ ಎದೆಯುಬ್ಬುವ ಸಂಗತಿಗಳನ್ನೆತ್ತಿ ಹಿಡಿದು ಹೇಳಿ, ಅವರನ್ನು ಹುರಿದುಂಬಿಸಬೇಕು. ಪ್ರತಿ ಶಾಲಾ ವಿದ್ಯಾರ್ಥಿಯೂ ಪತ್ರಿಕೆಗಳನ್ನೋದಬೇಕು ಅಲ್ಪಸ್ವಲ್ಪ ವಿದ್ಯಾನಂತರವನ್ನೂ ನಿರಾಶೆಯಾಗಗೊಡದೆ ಉತ್ಸಾಹಿಸಬೇಕು. ಎಂದರೆ ಮಾತ್ರ ಕನ್ನಡ ಜನಾಂಗ ಜಾಗ್ರತಿಯು ಶೀಘ್ರವಾಗಿಯೇ ಆಗುವುದು.

ಮ. ಜಾ.

ಹಳ್ಳಿಯ ಹಾಡು.

ನಮ್ಮೂರ ಬಯಲಲ್ಲಿ ಹನ್ನೆರಡು ಕೊಡೆ ಕಂಡೆ
ನಮ್ಮಣ್ಣನವ್ವ ಬರುವದು, ಅತ್ತಿಗೆ!
ಸಣ್ಣಕ್ಕಿ ಎಸರನಿಡು ಬೇಗ

ಅಣ್ಣನಮ್ಮವನವ್ವ ಅತ್ತಿಗೆ ನಮ್ಮವಳಲ್ಲ
ಬಂದೆಯ ಕೇಳ ಮಣೆ ಕೊಡ,
ಮಣೆ ಕೊಡೆದ ಅತ್ತಿಗೆ ಅಣ್ಣ ಬಾರದೆ ಋಣಲ್ಹೇಳ

ಅತ್ತಿಗೆ ಕಾಯಲ್ಲ ಹಿತ್ತಾಳಿ ಚಿನ್ನಲ್ಲ
ಹತ್ತಿ ಬಂದಣಿಕೆ ಮರನಲ್ಲ
ಹೆಣ್ಣು ಮಕ್ಕಳಿಗೆ ಹುಟ್ಟಿದ ಮನೆಯುಸ್ಥಿರವಲ್ಲ

ಅಣ್ಣ ತಮ್ಮಗೆ ವೈರಿ, ಎಣ್ಣೆ ಕಣ್ಣಿಗೆ ವೈರಿ
ಬೆಸ್ನಿಂಗೆ ವೈರಿ ಬಿಸಿ ನೀರು, ಬಡವಂಗೆ
ತನ್ನಯ ನೆಳಲೇ ತಾ ವೈರಿ.

ಅತ್ತೆ ಒಳ್ಳೆಯವಳಾಗಿ ಪುತ್ರ ಸಣ್ಣವನಾಗಿ
ಅತ್ತೆ ಮಾವನು ಹಿತರಾಗಿ ಇದ್ದರೆ
ಪುತ್ರಿ ಸಣ್ಣವಳನು ಕೊಡಲಕ್ಕು

ಕೂಸು ಸಣ್ಣಕ್ಕನ ದೂರಿಲ್ಲು ಕೊಡಲಾಗ
ಮೂಡಣ ಕೇರಿಯ ಕುವರಂಗೆ ಕೊಟ್ಟರೆ
ಹೊಗಲಕ್ಕು ನಮಗೆ ಬರಲಕ್ಕು.

* * * * *

ಅರಸುಗಳ ಮಕ್ಕಳಿಗೆ ಕಲಿಸೇಡ ಬುದ್ಧಿಯ
ಕಲಿಸಿಕ್ಕು ದೇವ ಗರ್ಭದಲೆ

ಒಳ್ಳೆಯವರ ಸೇರಿದರೆ ಒಳ್ಳೇ ಬುದ್ಧೀಯಕ್ಕು
ಮರನ ಸ್ಕೇರಿದರೆ ನೆಳಲಕ್ಕು.

ಬಂಗಾರು ತಾ ಮುದ್ದ ಬೆಳ್ಳಿ ತಾವರೆ ಮುದ್ದು
ಹಣ್ಣುಳ್ಳ ವನಕೆ ಗಿಳಿ ಮುದ್ದು.

ಕಣ್ಣಿಲ್ಲದ ಕುರುಡಂಗೆ ಚಿನ್ನದ ಹೆಂಡತಿಯೇಕೆ
ಎಣ್ಣೆ ಮಾರುವೋಂಗೆ ಮಡಿಯೇಕೆ

ಸಂಗ್ರಾಹಕ:—"ಪದ್ಮನಾಭ"

"ತಾಯಿಯೇ! ಈ ರೀತಿಯಲ್ಲಿ ಸುಂದರವಾದ ಉಡುಪುಗಳನ್ನು ತಕ್ಕ ಧರಿಸಿರುವೆ?" ಎಂದು ಕೇಳಿದನು.

"ನನ್ನ ಪ್ರೀತಿಯ ಗಂಡನೊಡನೆ ನಾನು ಪರಲೋಕವನ್ನು ಸೇರಲು ಚಿತ್ತವಳ್ಳವಳಾಗಿದ್ದೇನೆ" ಎಂದು ಆಕೆಯು ಹೇಳಿದಳು.

"ತಾಯಿಯೆ! ಈ ಲೋಕವನ್ನು ಬಿಟ್ಟು ಪರಲೋಕವನ್ನು ಸೇರಲು ಇಷ್ಟು ಆತುರವೇಕೆ? ಈ ಎಲ್ಲ ಲೋಕಗಳೂ ಪರಮಾತ್ಮನಿಂದ ನಿರ್ಮಿತವಾದವುಗಳಲ್ಲವೆ?"

ಆ ಪತಿವ್ರತಾ ಸ್ತ್ರೀಗೆ ಏನೋ ಮನಸ್ಸಿನಲ್ಲಿ ಹೊಳೆಯಿತು. ಕೆಲ ಹೊತ್ತು ಆಲೋಚಿಸುತ್ತ "ಪರಲೋಕದಲ್ಲಿ ನಿನಿದೆ. ಅದರಾಶೆಯು ನನಗಿಲ್ಲ. ನನ್ನ ಗಂಡನು ನನಗೆ ಬೇಕ್ಕಾದ ಅವನೊಡನೆ ಇರ ಬೇಕೆಂಬುದೇ ನನಗೆ ಆಶೆ. ನನ್ನ ಗಂಡನು ನನಗೆ ಒಂದು ತಿಂಗಳೊಳಗೆ ಪುನಃ ದೊರಕುವನೊ ಎಂದು ನೋಡುವೆನು" ಎಂದು ಹೇಳಿ ಕಾಷ್ಟದಿಂದ ಇಳಿದು ಹೊರಟು ಹೋದಳು.

ತುಳಸಿ ದಾಸನು ಆ ದಿನ ರಾತ್ರಿಯಲ್ಲಿ ಆ ನದಿಯದಂಡೆಯ ಮೇಲೇ ಏನೊ ಆಲೋಚಿಸುತ್ತ ಮಲಗಿಕೊಂಡನು. ಆತಳ ಆತ್ಮಕ್ಕೆ ಅವನು ಯಾವ ರೀತಿಯ ಶಾಂತತೆಯನ್ನು ಕೊಡುತ್ತಿರುವನೆಂದು ಯಾರಿಗೂ ತಿಳಿದಿರಲಿಲ್ಲ. ಅವಳೂ ಕಠಿಣವಾದ ತಪಸ್ಸಿನಲ್ಲಿಯೇ ಇರುತಿದ್ದಳು.

ಆ ತಿಂಗಳು ಮುಗಿದ ಕೂಡಲೆ ಸುತ್ತು ಮುತ್ತಲಿನ ಜನರು ಅವಳ ಬಳ್ಳಿಗೆ ಬಂದು "ನಿನ್ನ ಕಳೆದು ಹೋದ ಗಂಡನು ನಿನಗೆ ಪುನಃ ದೊರಕಿ ದನೆ?" ಎಂದು ಆತುರದಿಂದ ಕೇಳಿದರು.

"ಅವನು ನನಗೆ ಸಿಕ್ಕಿರುವನು" ಎಂದಳು. ಅವಳ ಮುಖವು ಸಂತೋಷದಿಂದ ಅರಳಿದ್ದಿತು.

"ಅವನೆಲ್ಲಿರುವನು?"

ಆಕೆಯು ಹೇಳಿದಳು, "ರಾತ್ರಿ ಹಗಲೂ, ಅವನು ನನ್ನ ಹೃದಯದಲ್ಲಿ ವಾಸಿಸಿರುತ್ತಾನೆ"

ವರ್ತಮಾನ ಪತ್ರಿಕೆಗಳನ್ನೇಕೆ ಓದಬೇಕು?

— ೧ —

ಕರ್ನಾಟಕದಲ್ಲಿ ಈಗಾಗಲೇ ಹಲಕೆಲವು ಪತ್ರಿಕೆಗಳು, ಜನಿಸಿ ಯೌವನಾವಸ್ಥೆಯನ್ನು ಹೊಂದಿರುವುವಾದರೂ, ಅವುಗಳು ತಮ್ಮ ಪ್ರಾಯಕ್ಕೆ ತಕ್ಕುದಾದ ಉತ್ತೇಜನದಿಂದಲೂ, ಚಟುವಟಿಕೆಯಿಂದಲೂ ಕೆಲಸವನ್ನು ನಿರ್ವಹಿಸುವುದಿಲ್ಲವೆಂದೇ ಹೇಳಬೇಕಾಗುತ್ತದೆ. ಮೊದಲೊಮ್ಮೆ ಮೇಲಿನ ವಿಷಯವು ಕರ್ನಾಟಕದ ಹಲವರ ಮನಸ್ಸನ್ನಾಕರ್ಷಿಸಿ ಅವರನ್ನು ಹಲಕೆಲವು ಕಾರ್ಯಗಳನ್ನು ಮಾಡುವಂತೆ ಪ್ರೇರೇಪಿಸುತ್ತಾದರೂ ಪತ್ರಿಕೆಗಳ ಪರಿಜ್ಞಾನವೆಯೆಂಬ ಆಕಾಶವು ಇನ್ನೂ ಮೋಡದಿಂದ ಮುಚ್ಚಿಕೊಂಡಿದೆ. ಅದು ಶುಭ್ರವಾಗಿ ಬೆಳಗಿ ದೇಶಬಾಂಧವರನ್ನು ಯಾವಾಗ ಉದ್ದೀಪಿಸುವುದೋ ಯಾರು ಬಲ್ಲ? ಎಷ್ಟೋ ಪತ್ರಿಕೆಗಳು ಜನಿಸುತ್ತಿರುವುವು. ಆದರೆ ಕರ್ನಾಟಕದ ದುರ್ದಶೆಯೆಂದೇ ಹೇಳಬೇಕು—ಕೆಲವು ತ್ವರಿತದಲ್ಲೇ ಅವಸಾನ ಹೊಂದುತ್ತಿರುವುವು; ನುರಿತಿರುವ ಸಂಪಾದಕ, ಚಾಲಕರ ಬೆಂಬಲವು ದೊರೆತರೂ ಕೂಡ ಹೆಚ್ಚಿನ ಪತ್ರಿಕಾ ಶಿಶುಗಳು ಎದ್ದು ನಿಂತುಕೊಳ್ಳುವಷ್ಟು ಚೈತನ್ಯವುಳ್ಳವುಗಳಾಗುವುದಿಲ್ಲ.

ಇದೇಕೆ ಹೀಗಾಯಿತು?—ಸಾಮಾನ್ಯ ಮನುಷ್ಯನಿಗೆ ಪತ್ರಿಕೆಯ ರುಚಿಯು ಅರಿವು ಇನ್ನೂ ಆಗಿರುವುದಿಲ್ಲ. ಅದನ್ನೋದುವುದಕ್ಕೆಂದು ವೆಚ್ಚ ಮಾಡುವ ಅವನ ಸಮಯವು ಅವನಿಗೆ ಮುಂದಕ್ಕೆ ಉತ್ತಮ ಫಲ ದಾಯಕವಾಗುವುದೆಂಬುದನ್ನು ಅವನು ಮರೆತೇ ಬಿಡುವನು. ಅಲ್ಲದೆ ಸದ್ಬೋಧನೆಯ ರೂಪದಿಂದ ಅದರ ಸತ್ಪ್ರಯೋಜನವನ್ನು ಅವನಿಗೆ ತಿಳಿಯಲೆಳಸುವವರೂ ಇಲ್ಲ. ಹೀಗಾಗಿ ನಮ್ಮ ಕರ್ನಾಟಕ ಪತ್ರಿಕಾ ಪರಿಚಲನಾ ಕಾರ್ಯವು ಮೂಲೆಗೊತ್ತಿಡಲ್ಪಟ್ಟು, ಅವನತಿಯ ಕಡೆಗೆ ಇಣಿಕಿ ನೋಡುತ್ತಾ ಇದೆ.

ವರ್ತಮಾನ ಪತ್ರಿಕೆಗಳ ಓದುವಿಕೆಯಿಂದ ದೊರೆಯುವ ಲಾಭಗಳನ್ನು ಆಂಗ್ಲೇಯರ ಆಬಾಲವೃದ್ಧರೆಲ್ಲರೂ ಸಂಪೂರ್ಣ ಮನಗಂಡಿರುವರು. ಪತ್ರಿಕಾ ವಾಚನವು ಅವರ ದಿನನಿತ್ಯದ ಅಭ್ಯಾಸಗಳಲ್ಲಿ ಒಂದಾಗಿ ಹೋಗಿರುತ್ತದೆ ಎಂದ ಮೇಲೆ ರಾಷ್ಟ್ರಾಭಿವೃದ್ಧಿಗೆ ಕುಂದೇನು?

ಆಂಗ್ಲೇಯರಲ್ಲಿ ಪ್ರಬಲವಾದ ಸ್ವಾತಂತ್ರ್ಯಾಸಕ್ತಿಯ ಬೆಳಕು ಉಜ್ವಲವಾಗಿ ಬೆಳಗುತ್ತಾ. ಇತರ ದೇಶಗಳನ್ನು ಜರೆಯುತ್ತಿರಲು ಕಾರಣವೇನು? ಅಲ್ಪ ಜನಸಂಖ್ಯಾತರಾದ ಅವರ ಜನಾಂಗವು ಬಹು ಸಂಖ್ಯಾತರಾದ ನಮ್ಮ ಮೇಲೆ ಅಧಿಕಾರವನ್ನು ತೋರಿಸಿ, ಮೆರೆಯಲು ಕಾರಣವೇನು? ಸ್ವಾಭಿಮಾನ, ಸ್ವಜನಾಭಿಮಾನ, ಸ್ವದೇಶಾಭಿಮಾನಗಳಂಬ ಉಚ್ಚ, ಉಚ್ಚತರ ಮತ್ತು ಉಚ್ಚತಮವಾದ ಗುಣಗಳು ಅವರ ಸ್ತ್ರೀ, ಬಾಲ, ವೃದ್ಧರಲ್ಲಿ ನೆಲೆಗೊಂಡಿರಲು ಕಾರಣವೇನು? ವ್ಯಾವಾರ ವ್ಯವಹಾರಗಳಲ್ಲೂ, ಬುದ್ಧಿಕುಶಲತೆಗಳಲ್ಲೂ ಅವರನ್ನು ಅಗ್ರಗಣ್ಯರನ್ನಾಗಿ ಮಾಡಿದ ಆ ಯಂತ್ರವಾವುದು? ಬರೇ ಲೌಕಿಕ ವ್ಯವಹಾರ ಜ್ಞಾನ! ಪತ್ರಿಕಾ ವಾಚನದಿಂದ ಗಳಿಸಿದ ವಿವಿಧ ತಿಳುವಳಿಕೆಯ ಅವರ ಅದೊಂದು ವಾಸನೆ—ಅಲ್ಲದೆ ಪುಸ್ತಕದ ಬದನೆಕಾಯಿಗಳು ಅವರಿಗೆ ಶ್ರೇಯಸ್ಸನ್ನುಂಟು ಮಾಡಲಿಲ್ಲ. ಪತ್ರಿಕೆಗಳ ಪ್ರಚಂಡ ಪ್ರಭಾವದ ಹೆದರಿಕೆಯಿದ್ದುದರಿಂದಲೇ ಸರಕಾರವು ಒರ್ದಿನೆನ್ಸುಗಳನ್ನು ಮುದ್ರಣಾಲಯಗಳ ಮೇಲೆ ಹೇರುತ್ತವೆ. ಆಂಗ್ಲೇಯರಲ್ಲಿ ಎಂತಹ ದರಿದ್ರನೇ ಇರಲಿ!— ಅವನು ವರ್ತಮಾನ ಪತ್ರಗಳನ್ನು ಓದದಿಲ್ಲ; ಕೂಲಿಯಾಳುಗಳಿಂದ ಮೊದಲುಗೊಂಡು ಅರಸನ ವರೆಗೂ ಎಲ್ಲರೂ ಪತ್ರಿಕೆಗಳ ಮಧ್ಯೆಯೇ ಬೆಳೆಯುತ್ತಿರುವರು. ಪತ್ರಿಕಾ ವಾಚನವಲ್ಲ!—ಪರನೆಯೇ ಅವರಲ್ಲಿನ ಚಟ! ಇದಕ್ಕೆ ಅವರ ರಾಷ್ಟ್ರೀಯ ಭಾಷೆಯೂ ಧಾರಾಳವಾಗಿ ಸಹಾಯವನ್ನೀಯುತ್ತದೆ. ಆದರೆ ಕರ್ನಾಟಕದಲ್ಲೋ? ಓದು ತಿಳಿಯದವನಿಗೆ ವರ್ತಮಾನ ಪತ್ರಿಕೆಗಳೆಂದರೇನೆಂದು ತಿಳಿಯದು. ಮಾತ್ರವಲ್ಲದೆ ಅವೇನೆಂದು ತಿಳಿಯಬೇಕೆಂಬ ಲವಲವಿಕೆಯೂ ಕೂಡ ಅವನಲ್ಲಿಲ್ಲ,— ಹೋಗಲಿ! ಅಲ್ಪಸ್ವಲ್ಪ ವಿದ್ಯಾವಂತರಾದರೋ?—ಅವರು ಪತ್ರಿಕೆಗಳ ಓದುವಿಕೆಯ ಕಡೆಗೆ ಸಂಪೂರ್ಣ ಅಲಕ್ಷ್ಯರಾಗಿಯೇ ಇರುವರು. ಏಕೆ? ಜ್ಞಾನಾಭಿವೃದ್ಧಿಯನ್ನು ಮಾಡಲು ಎಳ್ಳಷ್ಟು ಕುತೂಹಲವಿಲ್ಲದವರಿಗೆ ಇದರ

ಗೋಜಿಯಾದರೂ ಏಕೆ? ಕಲಿತುದನ್ನು ಮರೆಯಬೇಕೆಂದು ಯತ್ನಿಸುವವರೂ ಇದ್ದಾರೆಂದರೆ ಅದೊಂದು ಅತಿಯೊಕ್ತಿಯೇ? ಇನ್ನು ಸುಶಿಕ್ಷಿತ ವರ್ಗದವರ ಪಾಡಾದರೂ ಏನು? ಆಂಗ್ಲ ಪತ್ರಿಕೆಗಳಲ್ಲದೆ ಕನ್ನಡ ಪತ್ರಿಕೆಗಳ ಚಂದಾದಾರರಾಗುವುದೆಂದರೆ ಅದು ಅವರಿಗೆ ತೀರ ಮಾನನಷ್ಟವೆಂದೇ ಭಾವಿಸುವರು. "ಕನ್ನಡವನ್ನು ಶಾಲೆಗಳಲ್ಲಿ ಕಲಿತು, ಸಿಕ್ಕಿಬಿದ್ದೆನಲ್ಲಾ" ಎಂದು ಪಶ್ಚಾತ್ತಾಪ ಪಡುವವರಾದರೂ ಏಕೆ ಇಲ್ಲ? ಹೀಗಾಗಿ ಕನ್ನಡ ವಾಙ್ಮಯ ಪಕ್ಷಿಯು ರೆಕ್ಕೆ ಬಿಡಿಸಿಕೊಂಡು ಹಾರಾಡಲೆಡೆಯಿಲ್ಲದೆ ಕಣ್ಬಿಟ್ಟು ಅಲ್ಲೇ ಮುದುಡಿಕೊಂಡು ಬೀಳುವ ಪ್ರಸಂಗವು ಬಂದು ನಿಂತಿದೆ. ಅಂದ ಮೇಲೆ ಕರ್ನಾಟಕದ ಅಡಿಗಲ್ಲು ಸ್ಥಿರವಾಗಿ ನಿಲ್ಲಲು ಅವಕಾಶವಾದರೂ ಎಲ್ಲಿ?

ಜನರೊಳಗಣ ಪ್ರಕೃತದ ಸಂಕುಚಿತ ಸ್ವಭಾವವು ಕ್ರಮೇಣ ವಿಶಾಶಹೊಂದಿ ಅವರು ಶುದ್ಧಾಶುದ್ಧವೆಂದರೇನು? ನ್ಯಾಯಾನ್ಯಾಯಗಳಿಂದರೇನು? ಲೋಕ ವ್ಯವಹಾರವು ಹೇಗಿದೆ? ತಾನು ಈ ಜೀವನ ಸಾಗರದಲ್ಲಿ ಧಾವಿಸುತ್ತಿರುವುದಾದರೂ ಎಲ್ಲಿಗೆ? ಸ್ವಜನರಿಗಾಗಿ, ಸ್ವದೇಶಕ್ಕಾಗಿ ತಾನು ಎಷ್ಟು ಕಾರ್ಯಗಳ ಭಾರವನ್ನು ಹೊತ್ತುಕೊಳ್ಳಬೇಕು? ಏಂಬಿವೇ ಮೊದಲಾದ ವಿಷಯಗಳನ್ನು ವಿವೇಚನೆಯಿಂದ ತಿಳಿಯಬೇಕಾದರೆ, ಮೊದಲಾಗಿ ನಾಡಿಗರಲ್ಲಿ ಸುಶಿಕ್ಷಿತರಾದವರಿಗೆ ಜೀವನದ ಜೀವಾಳದ ಅರಿವು ಉಂಟಾಗಬೇಕು. ಅದರಿಂದ ಸಾಂಹಿತ್ಯೋನ್ನತಿಯುಂಟಾಗಬೇಕು. ಸಾಹಿತ್ಯ ಪ್ರಚಾರದಿಂದ ನಾಡಿಗರಲ್ಲಿ ಎಚ್ಚರಿಕೆಯುಂಟಾಗಬೇಕು. ಸಮಾಜ ಸುಧಾರಣೆಯಿಂದ ಹೃದಯದ ಸಂಕುಚಿತ ಸ್ವಭಾವವು ನೀಗಿ, ವಿಶಾಲವಾಗಬೇಕು. ವಿಶಾಲ ಹೃದಯವು ದೃಷ್ಟಿಸಂಕೋಚನವನ್ನು ಹೋಗಲಾಡಿಸಿ, ದೂರದೃಷ್ಟಿಯನ್ನೀಯಬೇಕು. ಹೀಗಾದ ಪಕ್ಷದಲ್ಲಿ ಮತ್ತೇನುಳಿಯಿತು? ಕರ್ನಾಟಕದ ಉದ್ಧಾರವೇ ಆಯಿತು.

ಇದಕ್ಕಾಗಿ ಎಲ್ಲರೂ ಪತ್ರಿಕೆಗಳನ್ನೋದುವ ಅಭ್ಯಾಸವನ್ನು ಮಾಡಬೇಕು. ಮಕ್ಕಳು ಮರಿಗಳನ್ನು ಕೂಡಾ ಈ ವಿಷಯದಲ್ಲಿ ಎಚ್ಚರಗೊಳಿಸಿ ಎದೆಯುಬ್ಬುವ ಸಂಗತಿಗಳನ್ನೆತ್ತಿ ಹಿಡಿದು ಹೇಳಿ, ಅವರನ್ನು ಹುರಿದುಂಬಿಸಬೇಕು. ಪ್ರತಿ ಶಾಲಾ ವಿದ್ಯಾರ್ಥಿಯೂ ಪತ್ರಿಕೆಗಳನ್ನೋದಬೇಕು. ಅಲ್ಪಸ್ವಲ್ಪ ವಿದ್ಯಾವಂತರನ್ನೂ ನಿರಾಶೆಯಾಗಗೊಡದೆ ಉತ್ಸಾಹಿಸಬೇಕು. ಎಂದರೆ ಮಾತ್ರ ಕನ್ನಡ ಜನಾಂಗ ಜಾಗ್ರತಿಯು ಶೀಘ್ರವಾಗಿಯೇ ಆಗುವುದು.

ಮ. ಜಾ.

ಹಳ್ಳಿಯ ಹಾಡು.

ನಮ್ಮೂರ ಬಯಲಲ್ಲಿ ಹನ್ನೆರಡು ಕೊಡೆ ಕಂಡೆ
ನಮ್ಮಣ್ಣನಪ್ಪ ಬರುವದು, ಅತ್ತಿಗೆ!
ಸಣ್ಣಕ್ಕಿ ಎಸರಿಡು ಬೇಗ ॥ ೧ ॥

ಅಣ್ಣನಮ್ಮವನಪ್ಪ ಅತ್ತಿಗೆ ನಮ್ಮವಳಲ್ಲ
ಬಂದೆಯ ಕೇಳ ಮಣೆ ಕೊಡ,
ಮಣೆ ಕೊಡದ ಅತ್ತಿಗೆ ಅಣ್ಣ ಬಾರದೆ ಉಣಲ್ಹೇಳ ॥ ೨ ॥

ಅತ್ತಿಗೆ ಕಾಯಲ್ಲ ಹಿತ್ತಾಳಿ ಚಿನ್ನಲ್ಲ
ಹತ್ತಿ ಬಂದಣಿಕೆ ಮರನಲ್ಲ
ಹೆಣ್ಣು ಮಕ್ಕಳಿಗೆ ಹುಟ್ಟಿದ ಮನೆಯುಸ್ಥಿರವಲ್ಲ ॥ ೩ ॥

ಅಣ್ಣ ತಮ್ಮಗೆ ವೈರಿ, ಎಣ್ಣೆ ಕಣ್ಣಿಗೆ ವೈರಿ
ಬೆಸ್ನಿಂಗೆ ವೈರಿ ಬಿಸಿ ನೀರು, ಬಡನಂಗೆ
ತನ್ನಯ ನೆಳಲೇ ತಾ ವೈರಿ. ॥ ೪ ॥

ಅತ್ತೆ ಒಳ್ಳೆಯವಳಾಗಿ ಪುತ್ರ ಸಣ್ಣವನಾಗಿ
ಅತ್ತೆ ಮಾವನು ಹಿತರಾಗಿ ಇದ್ದರೆ
ಪುತ್ರಿ ಸಣ್ಣವಳನು ಕೊಡಲಕ್ಕು ॥ ೫ ॥

ಕೂಸು ಸಣ್ಣಕ್ಕನ ದೂರೆಲ್ಲು ಕೊಡಲಾಗ
ಮೂಡಣ ಕೇರಿಯ ಕುವರಂಗೆ ಕೊಟ್ಟರೆ
ಹೊಗಲಕ್ಕು ನನುಗೆ ಬರಲಕ್ಕು. ॥ ೬ ॥

* * * * * *

ಅರಸುಗಳ ಮಕ್ಕಳಿಗೆ ಕಲಿಸೇಡ ಬುದ್ಧಿಯ
ಕಲಿಸಿಕ್ಕು ದೇವ ಗರ್ಭದಲೆ ॥ ೭ ॥

ಒಳ್ಳೆಯವರ ಸೇರಿದರೆ ಒಳ್ಳೇ ಬುದ್ಧೀಯಕ್ಕು
ಮರನ ಸ್ಥೈರಿದರೆ ನೆಳಲಕ್ಕು. ॥ ೮ ॥

ಬಂಗಾರು ತಾ ಮುದ್ದು ಬೆಳ್ಳಿ ಕಾವರೆ ಮುದ್ದು
ಹಣ್ಣುಳ್ಳ ವನಕೆ ಗಿಳಿ ಮುದ್ದು. ॥ ೯ ॥

ಕಣ್ಣಿಲ್ಲದ ಕುರುಡಂಗೆ ಚಿನ್ನದ ಹೆಂಡತಿಯೇಕೆ
ಎಣ್ಣೆ ಮಾರುವೋಂಗೆ ಮಡಿಯೇಕೆ ॥ ೧೦ ॥

ಸಂಗ್ರಾಹಕ:-"ಪದ್ಮನಾಭ"

"ನಮ್ಮ ದಕ್ಷಿಣ ಕನ್ನಡ"

ಎಲ್ಲಿ ಭಾರ್ಗವ ಪೀಠ ತೊಡಲಿಯ ಕಡಲ ಒಡಲಿಂ ಬಂದುದೋ?
ಎಲ್ಲಿ ಗಿರಿಕಂದರದ ಕಾಮುಕ ದೃಶ್ಯ ಶಕ್ತಿಗೆ ಕಾಂಬುದೋ?
ಎಲ್ಲಿ ನೇತ್ರಾವತಿ ಪಯಸ್ವಿನಿ ಮುಖ್ಯ ನದಿಗಳು ಹರಿವವೋ?
ಎಲ್ಲಿ ಭೂಮಿಯು ಹಸುರು ಹಚ್ಚಡ ಹೊದ್ದ ತೆರ ಹೊಲವಿರುವುದೋ?

ಅದುವೆ ದಕ್ಷಿಣ ಕನ್ನಡ !
ಇದರ ನುಡಿಯದು ಕನ್ನಡ !!
ನಮ್ಮ ದಕ್ಷಿಣ ಕನ್ನಡ !!!

ಮೂರ್ತಿ ಶಿಲ್ಪದ ಕಾರುಕಾರ್ಯದ ಕೀರ್ತಿ ಕಾಯವ ಪಡೆದುದು.
ಬಾರಕೂರಿನ ಮೂಡಬಿದರೆಯ ಧಾರಿ ವೈಭವ ಮೆರೆದುದು.
ವೀರ ವೈಷ್ಣವ ಸುತವನರುಹಿದ 'ಮಾಧ್ವ' ಜನ್ಮವ ಪಡೆದುದು.
ದೇವ ಭಕ್ತನು ಕನಕದಾಸನು ಹುಟ್ಟಿ ಭಜನೆಯ ಗೈದುದು.

ಇದುವೆ ದಕ್ಷಿಣ ಕನ್ನಡ !
ಕಲೆಯ ದಕ್ಷಿಣ ಕನ್ನಡ !!
ನಮ್ಮ ದಕ್ಷಿಣ ಕನ್ನಡ !!!

ಸ್ಥಾಪಿಸಿದರೋ ಮಾಧ್ವಗುರುಗಳು ಮೊದಲು ಕೃಷ್ಣನ ವಿಗ್ರಹ
ಪೆಜ್ಜೆ? ಭೈರಸ, ಪಾಂಡ್ಯರಾಜರು ಗೈದರುಗ್ರಹ ನಿಗ್ರಹ,
ರಾಜ್ಯವಾಳುತ ಶೋಭಿಸಿದರೋ? ರಸದ ಬಾವಿಯ ಕೀರ್ತಿಯು,
ಭೂರಿ ಸೊಬಗಿಂ ಮೆರೆವುದೋ ಮೂಕಾಂಬಿಕಾವರ ಮೂರ್ತಿಯು.

ಇದುವೆ ದಕ್ಷಿಣ ಕನ್ನಡ !
ಹಳೆಯ ದಕ್ಷಿಣ ಕನ್ನಡ !!
ನಮ್ಮ ದಕ್ಷಿಣ ಕನ್ನಡ !!!

ಬಂದ ಯಾತ್ರಿಕ ಭಕ್ತ ಜನರಿಗೆ ಧರ್ಮ ನಡೆಯುವ ಸ್ಥಾನವು,
ಸರ್ವಮಂಗಳೆ ಮಂಗಳಾಂಬೆಯ ಕಾರಣಿಕವರ ವಾಸವು.
ಮಧ್ವ ಸರಸಿಯು ರಾಮ ಜಲಧಿಯು ಗೋಸನಾಟೀಶ್ವರ ಪ್ರತಿಮೆಯು.
ವೀರನರಹರಿ ತೋರಿ ಬರುತಿಹ ಮೂಲಿಕಾ ಒಳಲಂಕೆಯು

ಇರುವ ದಕ್ಷಿಣ ಕನ್ನಡ !
ಮೆರೆವ ದಕ್ಷಿಣ ಕನ್ನಡ !!
ನಮ್ಮ ದಕ್ಷಿಣ ಕನ್ನಡ !!!

ಕಾಪು ಮಂಜುನಾಥ ಶೇಣೈ.

ಎದೆಯುರಿ

॥ ೧ ॥

ಅರಳಿ ಹೂವಾಗದೆಯೆ,
ಪರಿಮಳವ ಬೀರದೆಯೆ,
ಧರೆಗೊರಗಿದೆ,
ದೇವಿ! ತಲೆ ಮರೆಸಿದೆ.

॥ ೨ ॥

ಕಂದಿರದ ನಿನ್ನ ಮೊಗ
ಚಂದಿರನ ಹಳಿವ ಸೊಗ–
ವಿಂದು ಎಲ್ಲಿ?
ನಿನ್ನ ಹುಡುಕಲಿಲ್ಲಿ?

॥ ೩ ॥

ಎಳೆತನದಿ ಒಂದಾಗಿ,
ಬಳೆದಿಹೆವು ಸೊಗಸಾಗಿ,
ಆದರೇನು?–
ಎನ್ನ ತೊರೆದೆಯೇನು?

॥ ೪ ॥

ಮರುಗುತಿವೆ ನೀನಿರದೆ,
ಮರವಕ್ಷಿ ಗೆಲವಿರದೆ,
ಬಾರೊ ದೇವಿ!
ದಯದಿ, ತೋರು ದೇವಿ!

॥ ೫ ॥

ಹಾದಿ ತೋರದು ಎನಗೆ,
ಸಾದರದಿ ಬಾ ಬಳಿಗೆ,
ದೇವಿ ನೀನು!
ಎನ್ನ ಜೀವ ನೀನು!!

ಕಂದಕ ಈಶ್ವರ

ಶಾರದಾ ಛಾಪಖಾನೆ, ಮಂಗಳೂರು

ಸಾಹಿತ್ಯ

ಸ್ವದೇಶಾಭಿಮಾನಿ

ಸಂಚಿಕೆ.

ಸಂಪುಟ ೨ ದಶಂಬರ ೪—೧೨—೧೯೩೩. ಸಂಚಿಕೆ ೧೦

— ಅನುಕ್ರಮಣಿಕೆ —

	ಪುಟ
ಸಣ್ಣ ಕತೆಗಳ ಸ್ಪರ್ಧೆ	1
ವರ್ತಮಾನ ಪತ್ರಿಕೆಗಳನ್ನೇಕೆ ಓದಬೇಕು?	2
ಸಮಾಧಾನ	3
ಸಾಯ್ಕಲ್ ಆರೋಹಣ	4
ಬಾಡಿದ ತಾವರೆಗೆ	5
ವಿಧಿ ವಿಲಾಸ	6
ನೇತ್ರಾವತಿ	7
ಬ್ರಹ್ಮನ ಹೊಟ್ಟಲ ಮಕ್ಕಳು	8

ದಶಂಬರ ತಾರೀಕು ೪ನೇ ಶುಕ್ರವಾರ ೧೯೩೩.

ಸಣ್ಣ ಕತೆಗಳ ಸ್ಪರ್ಧೆ.

ಕಾವ್ಯದಲ್ಲಿ ಭಾವ ಗೀತೆಗಳು ಇರುವಂತೆ ಗದ್ಯ ಸಾಹಿತ್ಯದಲ್ಲಿ ಸಣ್ಣ ಕತೆಗಳು. ಭಾವಗೀತೆಗಳಂತೆ ಸಣ್ಣ ಕತೆಗಳಲ್ಲೂ ಏಕ ಸೂತ್ರೀಕೃತಿ ಇರಬೇಕೆಂಬುದೇ ಇವು ಎರಡರ ಮುಖ್ಯ ಗುಣವಾಗಿದೆ. ರಚನೆಯು ನಿಯಮವನ್ನು ಅನುಸರಿಸಿದರೆ ಭಾವ ಗೀತೆಗಳು ಉಜ್ವಲವಾಗುವಂತೆಯೆ, ಸಣ್ಣ ಕತೆಗಳ ರಚನೆಯ ಮೇಲೆ ಅವುಗಳ ರಮಣೀಯತೆಯೂ ಅವಲಂಬಿಸಿಕೊಂಡಿರುವುದು.

ಸಣ್ಣ ಕತೆಗಳ ಉದ್ದಿಷ್ಟ ಪರಿಣಾಮವು ಒಂದೇ ಒಂದಾಗಿರಬೇಕು; ಅದನ್ನು ಪೂರ್ಣತ್ವದಿಂದಲೂ ಪರಿಪಕ್ವತೆಯಿಂದಲೂ ಸಾಧಿಸಬೇಕು. ಸಣ್ಣ ಕತೆಗಳಲ್ಲಿ ಕಥಾ ಪ್ರವಾಹವು ತಡೆಯಿಲ್ಲದ್ದಾಗಿರಬೇಕು ಹೊರತು, ಒಂದು ವಿಷಯದಿಂದ ಮತ್ತೊಂದು ವಿಷಯಕ್ಕೆ ಧಾವಿಸಬಾರದು. ಸಣ್ಣ ಕತೆಗಳೊಳಗಣ ಘಟನೆಯು, ನಿರೂಪಣ ಮಾಡುವವನ ವೃತ್ತಿ, ಕತೆಯೊಳಗಣ ರಸ ಮತ್ತು ವಾತಾವರಣ ಇವೆಲ್ಲವು ಓದುವವನ ಅಥವಾ ಕೇಳುವವನ ಮನಸ್ಸಿನ ಮೇಲೆ ಒಂದೇ ಪರಿಣಾಮವನ್ನು ಮಾತ್ರ ಉಂಟು ಮಾಡುವುದಾಗಿರ ತಕ್ಕುವಾದ ಕಾರಣ, ಉದ್ದಿಷ್ಟ ಪರಿಣಾಮವು ಅಸಂಗತವಾಗುವಂತೆ ಮಾಡುವ ಯಾವುದೊಂದೂ ಕತೆಯೊಳಗೆ ಸಿಲುಕಬಾರದಾಗಿದೆ. ಲೇಖಕನ ದೃಷ್ಟಿಯು ಈ ಕಡೆಗೆ ಚೆನ್ನಾಗಿ ಹರಿಯಬೇಕು.

ಒಬ್ಬ ಕುಶಲನಾದ ಲೇಖಕನು ಒಂದು ಕತೆಯನ್ನು ರಚಿಸುವ ನೆನ್ನುವ. ಆತನು ಪ್ರವೀಣನಾಗಿರುವಲ್ಲಿ, ತನ್ನ ವಾಚಕರ ಮೇಲೆ ಅಪೂರ್ಣವಾದ ಹಾಗೂ ಒಂದೇ ಬಗೆಯ ಪರಿಣಾಮಗಳನ್ನು ಹೇಗೆ ಉಂಟು ಮಾಡಬಹುದು ಎಂಬುದನ್ನು ಮೊದಲಾಗಿ ವಿಚಾರ ಮಾಡಿ ತಿಳಿಯದೆ, ತನ್ನ ಕತೆಯ ರಚನೆಗೆ ಕೈಹಚ್ಚುವವನಲ್ಲ. ವ್ಯಸಂಗಗಳನ್ನು ಯೋಜಿಸುವುದರಲ್ಲೂ ತನ್ನ ಉದ್ದೇಶವನ್ನು ಮರೆತು ಬರೆಯಲಾರನು. ಆತನು ಬರೆಯುವ ಒಂದೇ ಒಂದು ಶಬ್ದವೂ ತನ್ನ ಉದ್ದೇಶವನ್ನು ಕುಂದಿಸುವುದಾದರೆ, ಆತನು ಅದನ್ನು ಕಿತ್ತು ಹಾಕುವನು.

ಲಘು ಕತೆಗಳ ವಿಷಯವೂ ರಚನೆಯೂ ನಾವಿನ್ಯಪೂರ್ಣವಾದುವಾಗಬೇಕಾಗುವುದು. ಕತೆಯ ನಿವೇದನೆಯು ಸೂತ್ರಬದ್ಧವಾಗಿರಬೇಕು, ಸೂಕ್ಷ್ಮವಾಗಿದ್ದು ತೀವ್ರ ಪರಿಣಾಮವನ್ನು ಹುಟ್ಟಿಸುವುದಾಗಿರಬೇಕು. ಆರಂಭದಲ್ಲಿ ಹೇಗೋ ಕೂನೆಯಲೂ ಅದು ಚಿತ್ತವೇಧಕವಾಗಬೇಕಾಗುವುದು. ರಚನೆ ಮಾಡುತ್ತ ಬರುವಂತೆ, ರಸೋತ್ಕರ್ಷತೆಗೂ ಲೇಖಕನು ಗಮನ ಕೊಡುತ್ತ ಬರುವನು.

ಮುರಾರಿ ವೃತ್ತ ಪತ್ರಿಕೆಯೊಂದು ಇತ್ತೀಚೆಗೆ ಸಣ್ಣ ಕತೆಗಳ ಸ್ಪರ್ಧೆಯನ್ನು ಏರ್ಪಡಿಸಿ, ರೂ. 100, 50, 25ರ ಬಹುಮಾನಗಳನ್ನು ಉತ್ತಮ ಲೇಖಕರಿಗೆ ಒಪ್ಪಿಸಿತು ಬೇರೆ ಬೇರೆ ಹೂಗಳನ್ನು ಒಂದು ಕಡೆ ಕೂಡಿಸಿಟ್ಟರೆ, ಅವುಗಳಲ್ಲಿ ಅತ್ಯುತ್ತಮವಾದುದೆಂದು ಆರಿಸುವುದು ಕಷ್ಟವಾಗುವುದಕ್ಕಿಂತಲೂ, ಈ ಕತೆಗಳಲ್ಲಿ ಅತ್ಯುತ್ತಮವಾದುದನ್ನು ಆರಿಸಿ ತೆಗೆವುದು ಸಂಪಾದಕರಿಗೆ ಕಷ್ಟವಾಯಿತು ಹೂಗಳನ್ನು ಹೇಗೆ ಗಂಧ, ರೂಪ, ಕೋಮಲತೆ, ಬಣ್ಣ ಮೊದಲಾದ ಹಲವು ಬಗೆಗಳಿಂದಲೂ ವಿಮರ್ಶಿಸಿ ಉತ್ತಮವೆನುವುದನ್ನು ನಿಷ್ಕರ್ಷಿಸಬೇಕಾಗುವುದೋ ಹಾಗೆಯೆ, ಈ ಸಣ್ಣ ಕತೆಗಳನ್ನು ವಾಚಕರೇ ಓದಿ, ನಿರ್ಧರಿಸಬೇಕಾಗಿ ತಿಳಿಸಿ, ವಾಚಕರು ಯೋಗ್ಯತೆ ತಿಳಿಸುವಂತೆ ಅವರು ಏರ್ಪಡಿಸಿದರು. ವಾಚಕರು ಯಾವ ದೃಷ್ಟಿಯಿಂದ ಸಣ್ಣ ಕತೆಗಳ ಯೋಗ್ಯತೆಯನ್ನು ಗೊತ್ತು ಹಚ್ಚಬಹುದೆಂದು ಅವರು ಕೆಳಗಣ ಆರು ಗುಣಗಳನ್ನು ಪ್ರತಿಯೊಂದು ಕತೆಯಲ್ಲೂ ಶೋಧಿಸುವ ಹಾಗೆ ವಿವರಿಸಿದರು:—

೧. ಕತೆಯ ಹೆಸರು, ಅದರೊಳಗಣ ವಿಷಯದಿಂದ ಸ್ಪಷ್ಟ ಸೂಚಕವಾಗಿದೆಯೆ? ಹಾಗಿದ್ದರೂ, ಕಥಾ ಸಾರವು ಅದರಲ್ಲಿ ತಿಳಿದುಬರಬಾರದು. ಔಚಿತ್ಯವೂ, ಚಾತು

ಯಾವುದು ಕತೆಯ ಹೆಸರಿಲ್ಲಿಯೇ ಇದೆಯೋ ಇಲ್ಲವೋ ನೋಡಬೇಕು.

ಮೊದಲಾಗಿ ಕತೆಯಲ್ಲಿ ಹೆಣೆದ ಕಲ್ಪನೆಯು ಕೊನೆಯ ತನಕವಿರಬೇಕು. ಮೊದಲಿನ ವಾಕ್ಯಗಳಲ್ಲಿ ವಾಚಕರ ಮನಸ್ಸನ್ನು ಆಕರ್ಷಿಸುವ ಗುಣವಿರತಕ್ಕದ್ದು.

೩. ಒಂದೇ ವಿಷಯವನ್ನಾಧರಿಸಿರುವುದೇ ಮಾತ್ರವಲ್ಲದೆ, ಕತೆಯಲ್ಲಿ ರಸವೂ ಚಾತುರ್ಯವೂ ಇರಬೇಕು.

೪. ಕತೆಯ ವಿಷಯವು ಮುಗಿಯುತ್ತಲೆ ಕತೆಯೂ ಮುಗಿಯತಕ್ಕದ್ದು.

೫. ಭಾಷೆಯು ವಿಷಯಕ್ಕೆ ಅನುರೂಪವಾಗಿದ್ದು ಕಲಾಯುಕ್ತವಾಗಿರತಕ್ಕದ್ದು.

೬. ವಾಚನವು ಮುಗಿದೊಡನೆ, ಕತೆಯು ಮನಸ್ಸಿನ ಮೇಲೆ ಉಂಟು ಮಾಡತಕ್ಕ ಪರಿಣಾಮವು ಎಲ್ಲ ಗುಣಗಳಲ್ಲಿ ಮುಖ್ಯ ವಿಚಾರ ಯೋಗ್ಯವಾದ ಗುಣವಾಗಿರತಕ್ಕದ್ದು.

ನಿಜವಾಗಿಯೂ ಇವೇ ಷಡ್ಗುಣಗಳಿಲ್ಲದೆ ಯಾವ ಕತೆಯೂ ಉತ್ತಮವಾಗುವುದೆ? ವಾಚಕರು ಸಣ್ಣ ಕತೆಗಳನ್ನೋದುವಾಗ, ಲೇಖಕರು ಬರೆವಾಗ, ಈ ತತ್ವಗಳನ್ನು ತಿಳಿಬುಕೊಂಡರೆ, ಕನ್ನಡ ಸಣ್ಣ ಕತೆಗಳು ಉತ್ಕೃಷ್ಟವಾಗಬಹುದಲ್ಲವೆ?

ವರ್ತಮಾನ ಪತ್ರಿಕೆಗಳನ್ನೇಕೆ ಓದಬೇಕು?

೨.

ಕರ್ನಾಟಕದಲ್ಲಿ ಎಷ್ಟು ಪತ್ರಿಕೆಗಳು ಜನನ ಹೊಂದಲಿಲ್ಲ! ಎಷ್ಟು ಶೈಶವದಲ್ಲೇ ಮೃತಿಹೊಂದಲಿಲ್ಲ! ಕನ್ನಡ ವಾಙ್ಮಯ ಸೇವೆಯನ್ನು ಮಾಡಬೇಕೆಂದು ಮುಂಬರುವ ಕನ್ನಡ ಪತ್ರಿಕಾ ಸಂಪಾದಕರು ಲಾಭ ದೃಷ್ಟಿಯಿಂದಂತೂ ಪತ್ರಿಕಾ ಸಂಚಲನೆಯ ಕಾರ್ಯಕ್ಕೆ ಕೈಹಾಕಲು ಸಾಧ್ಯವೇ ಇಲ್ಲ. ಸಾಹಿತ್ಯ ಸೇವೆಯ ಭಾವನೆಯಿಂದ ಮುಂದಾಗಿ ಪತ್ರಿಕೆಗಳನ್ನು ನಡೆಸಲುದ್ಯುಕ್ತರಾದ ಎಷ್ಟು ಸಂಪಾದಕರು ಯಶಸ್ವಿಗಳಾಗಿರವರು? ಬೆರಳೆಣಿಕೆಗೂ ಸಿಗುವಷ್ಟು ಸಂಖ್ಯೆಯಿಲ್ಲ! ಇದಕ್ಕೆ ಕಾರಣವೇನು? ವಾರ್ತಾ ಪತ್ರಿಕೆಗಳಲ್ಲಿ ಕನ್ನಡಿಗರಿಗೆ ಅಭಿರುಚಿಯಿಲ್ಲದಿರುವುದೇ!

ಸಾಹಿತ್ಯ ಸೇವೆಯನ್ನು ಮಾಡಬೇಕೆಂದು ಎದುರು ನಿಂತ ಸಂಪಾದಕನ ಪತ್ರಿಕೆಯಲ್ಲಿ ಸಾಹಿತ್ಯ ವಿಚಾರಗಳು ಬಂದರೆ, ಸಾಮಾನ್ಯನು ಅಂತಹ ಪತ್ರಿಕೆಯನ್ನು ಮೂಸಿ ಕೂಡಾ ನೋಡುವುದಿಲ್ಲ. ಸಾಮಾನ್ಯನಿಗೆ ಅರ್ಥವಾಗಲೆಂದು ಹಗುರ ಲೇಖನಗಳನ್ನು ಪ್ರಕಟಿಸಿದರೆ ಆ ಸಂಪಾದಕನ ಮೇಲೆ ಸಾಹಿತಿಗಳ ಜುಗುಪ್ಸೆಯ ಬಾಣಗಳೇ ಬೀಳುವುವು, ಎಂದಾಗ ಸಂಪಾದಕನು ಮೆಚ್ಚಿಸಬೇಕಾದರೂ ಯಾರನ್ನು? ಹೀಗಾಗಿ ಕನ್ನಡ ಪತ್ರಿಕಾವಾಚನಾಭಿರುಚಿಗೆ ಕುಂದೊದಗಿದೆ. ಇದರಿಂದಾಗಿ ಕನ್ನಡದ ಬೆಳವಣಿಗೆಯು ಕಷ್ಟತರವಾಗಿದೆ.

'ಜಯಕರ್ನಾಟಕ'ವೆಂದರೆ ಸಾಹಿತಿಗಳ ನೆಲೆಯೂರೆಂದು ಕನ್ನಡ ಬಲ್ಲವರ ಬಹುಮತ. ಇಂಗ್ಲೀಷು ತಿಳಿಯದ ಕನ್ನಡಿಗರಲ್ಲಿ ಎಷ್ಟು ಜನರು ಅದಕ್ಕೆ ಚಂದಾದಾರರಿರುವರೆಂದು ನಾವೇ ಊಹಿಸಿಕೊಳ್ಳಬಹುದು. ಜನಸಾಮಾನ್ಯರನ್ನು ರಂಜಿಸುವುದಕ್ಕಾಗಿ 'ವಿಕಟವಿನೋದಿನಿ' ಇದೆ. ಅದನ್ನು ಸಾಹಿತಿಗಳು ಎಷ್ಟು ಆದರದಿಂದ ಸ್ವೀಕರಿಸುವರೆಂದೂ ಊಹಿಸಲು ಸುಲಭವಿದೆ. ಜಯಕರ್ನಾಟಕಕ್ಕೆ ಸಾಹಿತಿಗಳ ೧೮,೦೦೦ ಚಂದಾದಾರರಿದ್ದರೆ ವಿಕಟವಿನೋದಿನಿಗೆ ಸಾಹಿತಿಗಳಲ್ಲದ ೨೦,೦೦೦ ಚಂದಾದಾರರಿರುವರು. ಅಂತೂ ಕನ್ನಡ ಪತ್ರಿಕೆಗಳಿಗೆ ಬೆಂಬಲವಾಗಿ, ಚಂದಾದಾರರಾಗಿ ಇರುವುದು ತಿಳಿಯದ ಜನ ಸಾಮಾನ್ಯರೇ ಹೊರತು ಸಾಹಿತಿಗಳಲ್ಲ. ಸಾವಿರದಲ್ಲಿ ಹತ್ತು ಮಂದಿ ಸಾಹಿತಿಗಳಿದ್ದರೆ ಪತ್ರಿಕೆಗೆ ಎಲ್ಲಿ ಭಾಗ್ಯ ಬಂತು? ಚಂದಾದಾರರಾಗಿ ಪ್ರೋತ್ಸಾಹಿಸದ ಸಾಹಿತಿಗಳಿದ್ದರೂ ಕನ್ನಡ ನಾಡಿನಲ್ಲಿ ಅವರು ಇಲ್ಲದಂತೆಯೇ ಎಂದು ನನ್ನ ಮತ.

ಕನ್ನಡನಾಡಿನ ಪತ್ರಿಕೆಗಳ ಚಂದಾದಾರರ ತುಲನೆಯನ್ನು ಮಾಡುವುದಾದರೆ, ರುಚಿಯರಿತು ಪತ್ರಿಕೆಯನ್ನು ಓದುವವರು ಬಹು ವಿರಳ ನೆಂದೇ ತಿಳಿದು ಬರುವುದು. ಒಬ್ಬ ಚಂದಾದಾರನನ್ನು ಸಂಪಾದಿಸಬೇಕಾದರೆ ಕನಿಷ್ಪಪಕ್ಷ ಐದೆ ಖಾತೆಯವರಿಗೆ ಎರಡು ಕಾರ್ಡುಗಳಂತೂ ವೆಚ್ಚವಾಗುವುವು. ಹಾಗೆ ಕಾರ್ಡು ಬರೆದೂ ಚಂದಾದಾರರಾಗಿರೆಂದು, ಮೇಲಿಟ್ಟು ಪ್ರಾರ್ಥಿಸಿದರೂ ೧೦೦ರಲ್ಲಿ ೧೦ ಜನರು ಅರೆ ಮನಸ್ಸಿನಿಂದೊಪ್ಪುವರು. ಎರಡೆರಡು ಕಾರ್ಡುಗಳನ್ನು ಹಾಕಿದರೂ ಬರೆಯಲು ತಿಳಿದೋ ತಿಳಿಯದೆಯೋ ಉತ್ತರವನ್ನೇ ಕೊಡದ ಕೊನೆಗೆ ವಿ. ಪಿ. ಕಳುಹಿಸಿದರೆ ಅದನ್ನು ಆನಂದದಿಂದ ಹಿಂದೆ ಬಿಡುವವರಿಲ್ಲ! ಊರಲ್ಲಿನ ಆಟ ನೋಟ, ನಾಟಕ ಸಿನೆಮಾಗಳಿಗೆ ಸೀಟುಗಳನ್ನು ರಿಜರ್ವ್ ಮಾಡಿಸುವಷ್ಟು ಉದಾರಿಗಳು ಕನ್ನಡದಲ್ಲಿರುವರಾದರೂ, ಒಂದು ವರ್ಷಕ್ಕೆ ಬೇಕಾಗುವ ವಾರ್ತಾ ಪತ್ರಿಕೆಗಳ ವಿ. ಪಿ. ಗಳನ್ನು ಸ್ವೀಕರಿಸಲು ನಮ್ಮವರಲ್ಲಿ ಹಣವೇ ಇರುವುದಿಲ್ಲ! ಕೆಲವರಂತೂ ದಾಕ್ಷಿಣ್ಯಕ್ಕಾಗಿ ಪತ್ರಿಕೆಗಳ ವಿ. ಪಿ. ಗಳನ್ನು ಸ್ವೀಕರಿಸಿ ಬಿಡುವರು. ಒಂದೆರಡು ಸಲದ ಪತ್ರಿಕೆಗಳು ಬಂದರೆ ಅವುಗಳನ್ನು ಬಿಡಿಸುವುದು ಸ್ವಾಭಾವಿಕ. ಆ ಮೇಲೆಯೋ?—ಪೋಸ್ಟ್‌ಮೇನನು ತಂದಿತ್ತ ಪತ್ರಿಕೆಯ ಮುಚ್ಚಳವನ್ನಾದರೂ ಒಡೆದು ನೋಡುವ ಭಾಗ್ಯಶಾಲಿಗಳೂ ಕಡಿಮೆಯೇ ಎಂದು ಹೇಳಿದರೆ ಅತ್ಯುಕ್ತಿಯಲ್ಲ. ಇದೇ ರೀತಿ ಹಲವು ಚಂದಾದಾರರು ಹಲವು ರೀತಿಯ ಭಾವನೆಗಳಿಗೆ ಕಟ್ಟು ಬಿದ್ದು ಕನ್ನಡ ಪತ್ರಿಕೆಗಳನ್ನು ತಮ್ಮ ಕೈಲಾದಷ್ಟು ಪ್ರೋತ್ಸಾಹಿಸುವರು, ಅಲ್ಲದೆ ವಾಚನದ ಪ್ರಾಮುಖ್ಯತೆಯನ್ನರಿತು ಪತ್ರಿಕೆಗಳನ್ನು ಕೈಲೆತ್ತುವವರು ತೀರಾ ವಿರಳ. ಇಂತಹ ದುರವಸ್ಥೆಯಿಂದಾಗಿ ಕನ್ನಡ ವಾರಪತ್ರಿಕೆ, ಪಕ್ಷಪತ್ರಿಕೆ, ಮಾಸಪತ್ರಿಕೆಗಳ ಸಂಪಾದಕರು ತಂತಮ್ಮ ಪತ್ರಿಕೆಗಳ

ಅವಸಾನವನ್ನು ನಿರೀಕ್ಷಿಸುತ್ತಲೇ ಇರಬೇಕಾಗುತ್ತದೆ. ಈಗ ಉಳಿವಿನಲ್ಲಿರುವ ಕರ್ನಾಟಕ ಪತ್ರಿಕೆಗಳಲ್ಲಿ ಯಾವುದರ ಆರ್ಥಿಕ ಸ್ಥಿತಿಯು ನೆಟ್ಟಗಿದೆ? ಯಾವ ಪತ್ರಿಕೆಯ ವಾರ್ಷಿಕ ವರದಿ ಅಗ್ರಲೇಖಗಳನ್ನು ನೋಡಿದರೂ "ವಾಙ್ಮಯ ಸೇವೆಯನ್ನು ಮಾಡಬೇಕೆಂದು ಸಾಹಸ ಗೈಯುತ್ತಿರುವೆವು. ಆದರೆ ಚಂದಾದಾರರ ಬೆಂಬಲದ ಅಭಾವ ಬಹಳ-ದುಡ್ಡಿನ ತುಟ್ಟಿ ಸಾಕಾಗುವಷ್ಟು" ಎಂದೇ ಬರೆಯಲ್ಪಟ್ಟಿರುವುದು ಕಂಡು ಬರುವುದು. ಇಂಗ್ಲಾಂಡಿನ 'ಡೈಲಿ ಹೆರೊಲ್ಡ್' ಪತ್ರಿಕೆಗೆ ೨ ಮಿಲ್ಲಿಯ ಚಂದಾದಾರರಿರುವರೆಂದು ಮೊನ್ನೆ ಮೊನ್ನಿನ ಲೆಕ್ಕವ್ಯಕಾರ ಮಿ। ಲಿಯೊನಾರ್ಡ್ ಮೆಟರ್ಸ್‌ರವರು ತಿಳುಹಿಸಿರುವರು ಇಂಗ್ಲೆಂಡಿನ ಮಿಲಿಯ ಚಂದಾದಾರರೆಲ್ಲಿ? ಕರ್ನಾಟಕದ ಕೆಲವು ನೂರು ಚಂದಾದಾರರೆಲ್ಲಿ? ಹೀಗಿರುವಾಗ ಕನ್ನಡ ವಾಙ್ಮಯ ನೈಕ್ಷವು ಬಳೆಯುವುದು ಹೇಗೆ? ಕನ್ನಡ ಪತ್ರಿಕೆಗಳು ಬಾಳುವುದು ಎಂತು? ಕನ್ನಡ ಪತ್ರಿಕೆಗಳ ಸಂವಾದಕರು ಯಶಸ್ವಿಗಳಾಗುವುದಾದರೂ ಯಾವ ವಿಧದಿಂದ?

ಕರ್ನಾಟಕ ಏಕೀಕರಣವು ಮೊದಲಾಗ ಬೇಕೋ ಅಥವಾ ಕರ್ನಾಟ ಭಾಷೆಯು ಮೊದಲು ಬೆಳೆಯ ಬೇಕೋ ಎಂಬುದೀಗ ಪ್ರಶ್ನೆ, ಮೊದಲಿನದಿಲ್ಲದಿದ್ದರೆ ಎರಡನೆಯದಿಲ್ಲ, ಎರಡನೆಯದಿಲ್ಲವಿದ್ದರೆ ಮೊದಲನೆಯದಿಲ್ಲ, ಸ್ವರಾಜ್ಯ ಸಿಗದೆ ಬಡತನಹೋಗದು ಬಡತನ ಹೋಗದೆ ಸ್ವರಾಜ್ಯ ಸಿಗದು ಎಂಬಂತೆಯೇ ಈಸಮಸ್ಯೆಯು ಗಡಚಾಗಿದೆ. ಇದಕ್ಕೆ ಸದುಪಾಯವಾಗಿ ಎರಡೂ ಏಕ ಸಮಯದಲ್ಲಿ ಕೈಗೂಡುವಂತೆ ಮಾಡುವುದೇ ಸದ್ಬುದ್ಧಿಯು—ಹೆದ್ದಾರಿಯು. ಅಲ್ಲದೆ "ಪ್ರತ್ಯೇಕ ರಾಷ್ಟ್ರ ನಿರ್ಮಾಣವು ಮೊದಲಾಗಬೇಕು ಆನೇಲೆ ವಾಙ್ಮಯ ಪ್ರಚಾರವೆಂಬುದೂ; ಅಥವಾ ವಾಙ್ಮಯ ಪ್ರಚಾರವಾಗಲಿ, ತದನಂತರ ಪ್ರತ್ಯೇಕ ರಾಷ್ಟ್ರ ನಿರ್ಮಾಣಕ್ಕಾಗಿ ಯತ್ನಿಸೋಣ" ಎಂಬುದೂ ಸಾಧುವಾಗುವುದಿಲ್ಲ ಕರ್ನಾಟಕ ಏಕೀಕರಣವಾಗಬೇಕಾದರೆ ಅದಕ್ಕೆ ಜನಸಾಮಾನ್ಯರ ಬೆಂಬಲ ಬೇಕು. 'ಏಕೀಕರಣ' ಎಂಬ ಭಯಾನಕ ಶಬ್ದದ ಅರ್ಥವು ಅವರಿಗಾಗಬೇಕು ಆ ಅರ್ಥದಿಂದಾಗಿ ಅವರಲ್ಲಿ ಸೇವೆಯ ಸ್ಫೂರ್ತಿಯು ಹುಟ್ಟಬೇಕು ಆ ಸ್ಫೂರ್ತಿಯು ನಿಶ್ಚಲವಾಗಬೇಕು. ಆ ನಿಶ್ಚಲತೆಯ ಪರಿಣಾಮವಾಗಿ ಸರಕಾರವು ನಡುಗಬೇಕು, ಆ ನಡುಗಾಟವು ಕರ್ನಾಟಕ ಏಕೀಕರಣದಲ್ಲಿ ಕೊನೆಗಾಣಬೇಕು. ಮೊನ್ನೆ ಮುಂಬಾಯಿಯಲ್ಲಿ ಗವರ್ನರ ಸರ್ ಫ್ರೆಡರಿಕ್ ಸೈಕ್ಸರವರು ಭಾಷಣ ಮಾಡುತ್ತಾ "ಕರ್ನಾಟಕ ಏಕೀಕರಣ ಪ್ರಶ್ನೆಯು ಸರಕಾರದಿಂದ ಫಕ್ಕನೆ ಸ್ವೀಕೃತವಾಗಲಾರದು" ಎಂಬ ಸೂಚನೆಯನ್ನು ಕೇಳಿ ನಮ್ಮ ಎಷ್ಟು ಪತ್ರಿಕೆಗಳು ಚಳವಳಿಸಿರುವುವು? ತನ್ನಡಿಯು ತನಗಿಲ್ಲದ ಪತ್ರಿಕೆಯು ಚಳವಳಿಸಿದರೂ ಆಗುವುದಾದರೂ ಏನು?

ಸಂಕ್ಷೇಪವಾಗಿ ಹೇಳುವುದಾದರೆ, ಜನಸಾಮಾನ್ಯರು ಕನ್ನಡವನ್ನು ಕಲಿಯಬೇಕು. ಕನ್ನಡವು ತನ್ನ, ಬಳಗದ ಮತ್ತು ದೇಶದ ಭಾಷೆಯಾಗುವಂತೆ ಪತ್ರಿಕೆಗಳಿಗೆ ಪ್ರೋತ್ಸಾಹವನ್ನಿಯಬೇಕು. ಅಂತಹ ಪ್ರೋತ್ಸಾಹಪೂರ್ವಕ ವಾಚನದಿಂದ ಪ್ರಾಂತಿಕ ಸಮಸ್ಯೆಯನ್ನರಿಯಬೇಕು. ಪ್ರಾಂತಿಕ ವ್ಯವಹಾರ ಜ್ಞಾನದಿಂದ ದೃಷ್ಟಿವೈಶಾಲ್ಯತೆಯಾಗಿ ತಾನಾರು, ತನ್ನ ಭಾಷೆ ಯಾವುದು? ತನ್ನ ವ್ಯಾಂತ್ಯದ ಕಡೆ ತನ್ನ ಕರ್ತವ್ಯವೇನೆಂದು ಅರಿತುಕೊಳ್ಳಬೇಕು. ಎಂದರೆ ಕನ್ನಡ ನಾಡು ಹೊನ್ನಿನ ನಾಡಾಗುವುದು ತಪ್ಪಿದರೆ ಕನ್ನಡ ನಾಡು ಮಣ್ಣಿನ ನಾಡಾಗುವುದು.

ಮು. ಜಾ.

ಸಮಾಧಾನ.

ರಾಯರ ಮನೆಯಲ್ಲಿ ಸೋಮನು ಸರ್ವಾಂತರ್ಯಾಮಿ. ರಾಯರು ಪೆನ್ಶನಿನ ಬುತ್ತಿ ಕಟ್ಟಿಕೊಂಡು ಸುಖಜೀವನ ಮಾಡುತ್ತಿರುವ ತಾತಯ್ಯ. ಸೋಮು ಸಣ್ಣ ಪೋರ ರಾಯರಿಗೆ 'ಚಾ' ತಟ್ಟೆಯನ್ನು ವೇಳೆಗೆ ಸರಿಯಾಗಿ ತಂದೊಪ್ಪಿಸುವವನು ಸೋಮು; ಕಾಯಿಪಲ್ಯಗಳನ್ನು ಸಂತೆಯಿಂದ ತಂದು ಕೊಡುವವನೂ ಸೋಮನು; ರಾಯರ ಮನಯ ತೊತ್ತಿ ಎಮ್ಮೆ ಕರೆಯುವಾಗ ಬೆತ್ತ ಹಿಡಿದು (ಎಮ್ಮೆಗಾಗಿ-ತೊತ್ತಿಗಾಗಿ ಅಲ್ಲ) ನಿಲ್ಲಬೇಕಾದವನೂ ಸೋಮನೇ.

ಆದರೆ, ಪ್ರತಿ ದಿನವೂ ಅವನ ತಡವಾಗಿಯೇ ಮನೆಯಿಂದ ರಾಯರಲ್ಲಿಗೆ ಬರುವನು'

ರಾಯರು ಇಂಥ ಸಮಯಕ್ಕೆ ಬರಬೇಕೆಂದು ಹೇಳಿದರೆ, ಆ ಹೊತ್ತಿಗೇ ಸೋಮನು ಅದೇಕೋ ಬರಲಾರನು'

ಹುದ್ದೇದಾರರಾಗಿದ್ದ ನೆನಪನ್ನು ಪೆನ್ಶನು ಕಟ್ಟಿಕೊಂಡ ರಾಯರು, ಮರೆಯುವರೆ? ಸೋಮನು ನಾಳೆಯಿಂದ ಬರುವುದೇ ಬೇಡ ಎಂದು ಹಲವು ನಾಳೆಗಳ ವಾಯಿದೆ ಇಟ್ಟು ಬೆದರಿಸಿದರೂ, ಪ್ರತಿ ಸಲ,-'ಸ್ವಾಮಿ,' ಎಂದು ಅವರ ಕಾಲುಗಳನ್ನು ಒತ್ತುವ ವೇಳೆ, ಅವುಗಳ ವಾತ ರೋಗಕ್ಕೆ ಶಮನನವಾಗುವ ಹಾಗೆ ಕಣ್ಣೀರು ಸುರಿಸುತ್ತ ಎರಡೂ ಕಾಲು ಒತ್ತುವನು. ವಾತಕ್ಕೂ ಹಾಯಾಗುವುದು; ರಾಯರ ಬಾಯಿಗೆ ಬೀಗವೂ ಬೀಳುವುದು

"ಸ್ವಾಮೀ, ಸಿಟ್ಟಾಗಬೇಡಿರಿ. ನನ್ನಲ್ಲಿ ಸಿಟ್ಟೇ? ನನ್ನನ್ನು ಕೆಲಸದಿಂದ ಬಿಟ್ಟರೆ, ಮುದಿ ಅಜ್ಜಿ ಈ ಲೋಕವನ್ನೆ ಬಿಟ್ಟಾಳು ಊಟಕ್ಕಿಲ್ಲದೆ ಸತ್ತಾಳು. ಅವಳ ಹಿಂದೆ ನಾನೂ ಸತ್ತೇನು. ಹೀಗೆ ಮಾಡಲಾಗದಯ್ಯ" ಎಂದು ರಾಯರ ಕಾಲೊತ್ತುವಾಗ, ಅವೇ ಚರಣ ಕಮಲಗಳಲ್ಲಿ ಅವನ ವ್ಯಾರ್ಥನೆ.

ವ್ಯಾರ್ಥನೆ ನೆರವೇರಿತೋ ಎಂದು ತಿಳಿಸುವ ಮೊದಲು, ರಾಯರು ಗೊರಕೆ ಹೊಡೆಯುವರು. ಸೋಮನು "ಸನ್ಮುಖ ಚರಣ ಚರಣರಹೇ ಹನುಮಾನ್ ವೀರಾ" ಎಂಬ ನಿತ್ಯದ ಭಜನೆಯ ಆರತಿಯ ಪದ್ಯದ ನೆನಪು ಹುಟ್ಟಿಸುವಂತೆ ಅಲ್ಲೇ ಒರಗುವನು.

ರಾಯರು ಪೆನ್ಶನರರಾದರೂ ಮನುಷ್ಯರೇ ಆಗಿದ್ದುದರಿಂದ, ಅವರ ವೃದ್ಧಾಪ್ಯವು ವಾತ ರೋಗವೂ ಪೆನ್ಶನಿನ ಜತೆಯಲ್ಲೇ ಹುಟ್ಟಿದುದಾದುದರಿಂದ, ಮುದಿ ಅಜ್ಜಿಯು ಸತ್ತಾಳೆಂಬುದನ್ನು ಕೇಳುತ್ತಲೆ

ಕಣ್ಣು ಮುಚ್ಚಿ ಕಿವುಡರಾಗುತ್ತಿದ್ದರು. ಅಲ್ಲೇ ಅವರಿಗೆ ಯೋಗ ನಿದ್ರೆ ಹಿಡಿಯುತ್ತಿತ್ತು. ಆ ನಿದ್ರೆಯೆ ಸೋಮನಿಗೆ ಕ್ಷಯ ಎಂದರ್ಥ.

* * *

ತಡವಾಯಿತೆಂದ ಕೂಡಲೆ, ಸೋಮನ ಉತ್ತರ ಈಗ ಬೇರೆ—"ದೇವಾಲಯಕ್ಕೆ ಹೋಗಿದ್ದೆ. ಸ್ನಾನ ಮಾಡದೆ ಹೋಗುವವನಲ್ಲ. ಅದರಿಂದ ತಡವಾಯಿತು, ಸ್ವಾಮಿ."

ರಾಯರು ಸಿಟ್ಟಾಗುವರು. "ಇಷ್ಟು ಚಿಕ್ಕ ಪೋರನು ದೇವಾಲಯಕ್ಕೆ ಸ್ನಾನ ಮಾಡಿ ಹೋಗುವನಂತೆ" ಎನ್ನುವಷ್ಟರಲ್ಲಿ, ಊರಲ್ಲಿ ದೇವಾಲಯವೊಂದು ಉಂಟೋ ಇಲ್ಲವೋ ಎಂಬುದನ್ನು ಕೂಡ ಮರೆತ ರಾಯರಲ್ಲಿ ಪಕ್ಕನೆ, ವೃದ್ಯಾಪ್ಯದ ದೆಸೆಯಿಂದ ಇನ್ನಿಷ್ಟರಲ್ಲೇ ತಾನೂ ದೇವ ಸನ್ನಿಧಿಗೆ ತೆರಳಬೇಕಾಗುವುದೆಂಬುದರ ನೆನಪಾಗಿ, ಅವರು ಮಾತು ಬದಲಿಸುವರು,—"ಸೋಮಾ! ನೀನೇನು ಪುರೋಹಿತನೆ, ಹಳೆ ಅಜ್ಜಯೆ, ಅಥವಾ ಶಕ್ಕನೆ,—ಹಾಗೆ ದೇವಾಲಯಕ್ಕೆ ಹೋಗುವುದಕ್ಕೆ? ನಿನಗೆ ದೇವಾಲಯಕ್ಕೆ ಹೋಗುವಷ್ಟು ಅಗತ್ಯವಾದ ಸಂಕಟವಾದರೂ ಏನಾಗಿದೆ?"

'ಸಂಕಟ ಬಂದಾಗಲೆ ವೆಂಕಟರಮಣ' ಎಂಬಾ ಗಾದೆಯನ್ನು ಸಹ ಸೋಮನು ನಂಬುತ್ತಿರಲಿಲ್ಲ. ಪುರೋಹಿತರು ಪುರೋಹಿತರಾಗಿಯೆ ದೇವಾಲಯಕ್ಕೆ ಹೋಗುವವರೆಂದೂ ಡಂಭಾಚಾರದ ಕಪಟದಿಂದ ಶಕ್ಕರು ಮಾತ್ರ ದೇವಾಲಯಕ್ಕೆ ಹೋಗುವರೆಂದೂ ಸೋಮನು ಎಂದೂ ಜೇಳಿದುದಿಲ್ಲ.

ರಾಯರು ಸೋಮನು ಸುಳ್ಳಾಡುವವನಲ್ಲ ಎಂದು ತಿಳಿದಿದ್ದರು; ಆದರೆ ಅವನ ನೆವ ಮಾತ್ರ ಸತ್ಯವೆಂದು ಅವರು ಎಣಿಸುತ್ತಿರಲಿಲ್ಲ. ಆ ಸತ್ಯ ವಚನವೂ ಭಕ್ತಿ ರೀತಿಗಳೂ ಅವನ ಅಪರಾಧಗಳಿಗೆ ಬೆಣ್ಣೆಯ ಲೇಪ ಕೊಟ್ಟ ಕಾರಣ, ರಾಯರು ಸೋಮನ ನೆವಗಳನ್ನು ಅವಶ್ಯವಾಗಿಯೂ ಸುಲಭವಾಗಿ ನುಂಗುತ್ತಿದ್ದರು.

ಹೀಗೆಯೆ, ಕೆಲವು ದಿನಗಳು ಕಳೆದುವು.

* * *

ಭಕ್ತಿಯುಳ್ಳ ಬಾಲಕರು ಹುಚ್ಚರು ಎಂದು ಜನರು ಹೇಳುವುದುಂಟು.

ಹಾಲು ತರುವಾಗ ತಡವಾಗಿ ಚಾ ತರುವಾಗಲೂ ತಡವಾಗುವುದು; ಕಾಯಿಸಲ್ಕು ತರುವಾಗ ತಡವಾಗಿ ಊಟಕ್ಕೂ ತಡವಾಗುವುದು, ಎಂಬುದು ಈಗ ರಾಯರ ಮನೆಯಲ್ಲಿ ನಿತ್ಯ ಕ್ರಮವಾಯಿತು.

ಇನ್ನೂ ಇನ್ನೂ ಸೋಮನು ಭಕ್ತಿಮಾರ್ಗ ಹಿಡಿದನು. ಕೆಲಸ ಮಾಡುತ್ತಿರುವಾಗಲೂ ಅವನು ತುಸು ಹೊತ್ತು ಧ್ಯಾನ ಮಾಡುತ್ತ ಸುಮ್ಮನಾಗುವನು. ಆಲಸ್ಯ ಎಂದರು ರಾಯರು; ಅವನ ಸಮೀಪಕ್ಕೆ ತಿಳಿಯದಂತೆ ಬಂದು ನಿಂತರು; ನಕ್ಕರು,—'ಕಳ್ಳನನ್ನು ಹಿಡಿದೆ' ಎಂದು; ಕೂಡಲೆ ಕಣ್ಣು ಕೆಂಪಗೆ ಮಾಡಿದರು.

ರಾಯರು, ಇಂಥದನ್ನೆಲ್ಲ ಎಷ್ಟು ದಿನ ಸಹಿಸಬಹುದು? ಇನ್ನು ಸೋಮನ ಅಪರಾಧಗಳು ಪರಮಾವಧಿಗೆ ಮುಟ್ಟಿದುವು. ರಾಯರ ಕ್ರೋಧವು ಸೋಮನ ಹೊಟ್ಟೆಯವಧಿಗೆ ಬಂತು.

* * *

ವಿಶಾಲವಾದ ಈ ಜಗತ್ತಿನಲ್ಲಿ ಸೋಮನು ಅನಾಥನಾದನು. ಮುದಿ ಅಜ್ಜಯು ಇವನಿಗಾಗಿ ಶೋಕಿಸಿ ಕಣ್ಣೀರು ಸುರಿಸಿದಳು. ಅದರಿಂದ ಅವರಿಬ್ಬರ ಹೊಟ್ಟೆ ತುಂಬುವುದೆ?

ಹೊಟ್ಟೆಯಲ್ಲಿ ಅನ್ನವಿಲ್ಲ; ಹೆಸರಿಗೂ ಬಟ್ಟೆಯಿಲ್ಲ; ನಡುಹಗಲ ಸೂರ್ಯನ ತಾಪ ಬೇರೆ, ಸೋಮನು ಹೆದ್ದಾರಿಯಲ್ಲಿ ಹೆಣದಂತೆ ಕಾಣುವನು. ಅವನ ಮೈಯಿಂದ ಬೆವರು ಒಸರುತ್ತಿರುವುದರಿಂದಲೇ ಅವನಲ್ಲಿ ಇನ್ನೂ ಜೀವವಿದೆಯೆಂದು ತಿಳಿಯಬಹುದೇ ವಿನಾ, ಸೋಮನು ಪ್ರೇತವೆ.

ಈ ಜೀವಂತ ಪ್ರೇತವು ಕರುಣೇಶ್ವರ ದೇವಾಲಯದ ಹೆಬ್ಬಾಗಿಲಿಗೆ ನಡೆಯಿತು. ಎಂದಾದರೂ ಅವನು ದೇವಮಂದಿರದೊಳಗೆ ಕಾಲಿಟ್ಟಿರಲಿಲ್ಲ. ಈಗ ತಲೆಗೆಟ್ಟಿದೆ. ಆವೇಶ ಹಿಡಿದವನಂತೆ, ದೇವರ ಬಳಿಗೆ ನಡೆದು ಅಲ್ಲಿ ಮಲಗಿದನು.

ಅಂದೇ, ಆಗಲೇ, ಆ ಮಾರ್ಗವಾಗಿ ರಾಯರು ತಿಂಗಳ ಪೆನ್ಶನು ಪಡೆದು, ಮನೆಗೆ ತಿಂಗಳ ಸಾಮಾನು ಕಳುಹ ಹೇಳಲು ಅಂಗಡಿಗೆ ಹೋಗುತಿದ್ದರು. ಅವರಿಗೆ, ಅದೊಂದು ತಿಂಗಳ ಅನ್ನಬಟ್ಟೆಗೆ ಕಷ್ಟ ವಿರದೆಂಬ ಸಮಾಧಾನವು ಸಂತೋಷವನ್ನುಂಟು ಮಾಡಿದ್ದಿತು.

ದೇವಾಲಯದಲ್ಲಿ ದೇವರ ಬಳಿ, ಈ ಜನ್ಮಕ್ಕೆ ಅನ್ನಬಟ್ಟೆಗಳ ಕಷ್ಟವೇನೂ ಇಲ್ಲದೆ ಬಿದ್ದಿದ್ದ ಸೋಮನ ಸಮಾಧಾನವು ಅವನ ಮುಖದ ಮೇಲೆ ಸಂತೋಷವನ್ನು ಮೂಡಿದ್ದಿತು.

ಕರುಣೇಶ್ವರ ದೇವರ ವಿಗ್ರಹವೂ ಸಮಾಧಾನ ಸೂಚಕವಾಗಿ ನಗುತಿದ್ದಿತು!

ಸಾಯ್ಕಲ್ ಆರೋಹಣ.

ಸಾಯಿಕಲನ್ನೇರಿ ಸವಾರಿ ಮಾಡುವುದೊಂದು ನವೀನ ವಿದ್ಯೆಯೆಂದು ಹೇಳಲಾಗುವುದಿಲ್ಲ; ಏಕೆಂದರೆ ಈ ವಿದ್ಯೆಯನ್ನರಿಯದಿರುವ ಜನರು ತೀರಾ ವಿರಳ. ಮುದುಕರು, ಯುವಕರು, ಶಾಲೆಯ ಹುಡುಗರು ಆರೇಳು ವರ್ಷ ಪ್ರಾಯದ ಮಕ್ಕಳು ಕೂಡ ಈ ವಿದ್ಯೆಯಲ್ಲಿ ಬಿ. ಎ. ಪರೀಕ್ಷೆ ಇರುತ್ತಿದ್ದರೆ ಸುಲಭವಾಗಿ ಅದರಲ್ಲಿ ತೇರ್ಗಡೆ ಹೊಂದದಿರರೆಂಬುದು ಖಂಡಿತ; ಕೆಲವರು, ಎಂದರೆ, ಸಾಯ್ಕಲ್ ಫೀಟ್ಸ್ ಮಾಡುವವರು ಎಂ. ಎ. ಡಿಗ್ರಿಯನ್ನು ಸಹ ಪಡಕೊಳ್ಳಬಹುದು. ಸ್ತ್ರೀಯರು ಪುರುಷರಿಗೆ ಸರ್ವ ವಿಧದಲ್ಲಿಯೂ ಸಮಾನರು ಅಥವಾ ಅವರಿಗಿಂತ ಮಿಗಿಲು ಎಂಬುದನ್ನು ಕಾರ್ಯದಲ್ಲಿ ತೋರಿಸಬೇಕೆಂಬ ಹಾಗೆ, ಈ ಸಾಯಿಕಲ್ ಆರೋಹಣದಲ್ಲಿ ಕೆಲವು ಹೆಂಗುಸರೂ ಪ್ರವೀಣರಾಗಿರುವುದನ್ನು ಕಂಡು ಮನಸ್ಸಿನಲ್ಲಿ ಸಂತೋಷವೂ ಆಶ್ಚರ್ಯವೂ ಸಹಜವಾಗಿ ಉದ್ಭವಿಸುವುವು.

ಇಪ್ಪತ್ತನೆಯ ಶತಮಾನದ ದಿವ್ಯವಾದ ಯಂತ್ರ; ಬೆಲೆಯು ಕೂಡ ಇಪ್ಪತ್ತೇ ರೂಪಾಯಿ; ಎರಡು ತಿಂಗಳ ಕಾಫಿ ತಿಂಡಿಯ ಖರ್ಚು ವೇಗದಿಂದ ನಡೆಯುವುದು; ಬೇಗನೆ ಮುರಿಯುವುದು; ಕೆಲವು ಸಾರಿ

ಕೈಕಾಲುಗಳನ್ನು ಮುರಿಯುವುದೂ ಉಂಟು. ಸಾಯ್ಕಲ್ ಸವಾರರ ಕಾಲುಗಳನ್ನು ಸ್ವಲ್ಪ ಪರೀಕ್ಷಿಸಿದರೆ ತಿಳಿಯುವುದು; ವಸ್ತ್ರದ ಚಿಂದಿಯನ್ನು ಸುತ್ತಿಕೊಂಡಿರದ ಕಾಲುಗಳಿಲ್ಲ! ಹೇಗೆ ಬೀಳದೆ ನಡೆಯಲಿಕ್ಕೆ ಕಲಿತ ಮಕ್ಕಳಿರುವುದಿಲ್ಲವೋ, ಹಾಗೆಯೇ ಸಾಯಿಕಲ್ ಸವಾರಿಯನ್ನು, ಬಿದ್ದು ಪೆಟ್ಟು ತಿನ್ನದೆ ಕಲಿತವರಿಲ್ಲ.

ಈ ವಿದ್ಯಾಭ್ಯಾಸದಿಂದ ನಮ್ಮ ಹುಡುಗರ ಉಡುಪಿನಲ್ಲಿ ಸಹ ಕೆಲವು ಮಾರ್ಪಾಟುಗಳು ಬಂದಿರುತ್ತವೆ. ಮೊದಲನೆಯದು, ಸಾಯ್ಕಲ್ ಕಚ್ಚೆ; ಇದೇಕೆಂದರೆ ಸಾಯ್ಕಲ್ ಯಂತ್ರವು ಸವಾರರನ್ನು ಕಚ್ಚದ ಹಾಗೆ; ಸಾಯ್ಕಲ್ ಶರ್ಟ್; ಗಿಡ್ಡವಾದ ಕೈಗಳಿರುವ ಅಂಗಿ; ಸಾಯ್ಕಲಿನ ಹಿಡಿಯು ಇವರ ಕೈಗಳನ್ನು ಹಿಡಿಯದ ಹಾಗೆ; ಕೈಗಳು ಉದ್ದವಾಗಿರ ಕೂಡದು; ಕೈಗಿರುವ ರಿಸ್ಟ್‌ವಾಚ್ ಹೊರಗೆ ಕಾಣಬೇಕು; ಕಾಲುಗಳಿಗೆ ಸಾಯ್ಕಲ್ ಶೂಸ್; ಇವೆಲ್ಲಾ ಸಾಯ್ಕಲ್ ಸವಾರರ ಭೂಷಣಗಳು.

ಇಪ್ಪತ್ತನೆಯ ಶತಮಾನವು, ಸಾಯ್ಕಲ್ ಯಂತ್ರದ ಯುಗ; ಚಿಕ್ಕ ಮಕ್ಕಳಿಗೆ ಮೂರುಗಾಲಿಯ ಯಂತ್ರ; ದೊಡ್ಡವರಿಗೆಲ್ಲಾ ಎರಡು ಗಾಲಿಯ ಯಂತ್ರ. ಕ್ರಯಕ್ಕೆ ಪಡಕೊಳ್ಳಬೇಕೆಂಬ ಅವಶ್ಯವೂ ಇರುವುದಿಲ್ಲ; ಸಾವಿರಾರು ಅಂಗಡಿಗಳು ಈ ಯಂತ್ರಗಳನ್ನು ಗಂಟೆಗೆ ನಾಲ್ಕಾ ಪಾವಾಣೆ ಪ್ರಕಾರ ಬಾಡಿಗೆಗೆ ಕೊಡುವುವು. ಒಂದು ಕಪ್ ಕಾಫಿಯನ್ನು ಕುಡಿಯುವುದನ್ನು ಸಿಲ್ಲಿಸಿದರೆ,ಒಂದು ಗಂಟೆಯ ಸಮಯವಾಯುವೇಗದಿಂದ ಈ ಯಂತ್ರವನ್ನು ಬೀದಿಗಳಲ್ಲೆಲ್ಲ ಓಡಿಸಬಹುದು ಇದರಿಂದ ಸಾಯ್ಕಲ್ ವಿದ್ಯೆಯು ಎಲ್ಲಾ ನಗರಗಳಲ್ಲಿಯೂ ಹಳ್ಳಿಗಳಲಿಯೂ ವಿಸ್ತಾರವಾಗಿ ಹಬ್ಬಿರುತ್ತದೆ

ಸಾಯ್ಕಲ್ ಆರೋಹಣವೆಂಬುದು ಗುರುವಿಲ್ಲದ ವಿದ್ಯೆಯೆಂದು ತಿಳಿಯಬಾರದು; ಇದರಲ್ಲಿ ವಿಶೇಷವಾದ ಪ್ರಾಹಿತಿಯೂ, ಚಾತುರ್ಯವೂ ಇರುವ ಉಪದೇಶಿಯರು ಅಥವಾ ಉಪಾಧ್ಯಾಯರು ಇದ್ದೇ ಇರುವರು. ವಿದ್ಯಾರ್ಥಿಗಳನ್ನು ಇಕ್ಕಡೆಯಲ್ಲಿ ಎರಡು ಯಂತ್ರಗಳಿಗೆ ಕಟ್ಟಿಹಾಕಿ, ತನ್ನ ಸ್ವಂತ ಯಂತ್ರವನ್ನು ನಡುವಿನಲ್ಲಿರಿಸಿ, ಎರಡು ಕೈಗಳಿಂದ ಇಬ್ಬರು ಸವಾರರನ್ನೂ ಹಿಡಿದು, ಅವರ ಯಂತ್ರಗಳನ್ನೂ, ತನ್ನ ಯಂತ್ರದ ಬಲದಿಂದ ನಡೆಯಿಸಿ, ಈ ವಿದ್ಯೆಯ ಅಭ್ಯಾಸವನ್ನು ಮಾಡಿಸುವ ಸಾಯ್ಕಲ್ ಗುರುಗಳನ್ನು ನೀವು ನೋಡಿರುವಿರೋ ಏನೋ! ಈ ವಿದ್ಯಾಭ್ಯಾಸದ ಕೊಲೇಜ್ ಮೈದಾನಿನಲ್ಲಿ; ಪರೀಕ್ಷೆಯು ಬೀದಿಗಳಲ್ಲಿ; ಇಡೀ ಕೋರ್ಸ್ ಎರಡುವರೆ ದಿನಗಳಲ್ಲಿ.

ಮೂರನೆಯ ದಿನದಲ್ಲಿ ಬೀದಿಯಲ್ಲಿ ಬಂದೇ ಬಿಡಬೇಕು; ಮತ್ತು ಯಾರಾದರೂ ಒಬ್ಬಬ್ಬರ ಮೈಮೇಲೆ ಬೀಳಲೇ ಬೇಕು; ಅವರ ಬೈಗಳನ್ನು ತಿಂದು ಪರೀಕ್ಷೆ ಪಾಸಾಗಬೇಕು ನಾಲ್ಕನೆಯ ದಿವಸ ಫೀಟ್ಸ್ ಮಾಡುವುದು; ಎಂದರೆ ಕೈಯಿಂದ ಹಿಡಿಯದೆ, ಕಾಲಿನಿಂದ ಮುಟ್ಟದೆ ಸಾಯ್ಕಲ್ ಯಂತ್ರವನ್ನು ಓಡಿಸುವುದು. ಇಷ್ಟನ್ನು ಸಾಧಿಸದಿದ್ದರೆ ಅವನು ಮನುಷ್ಯನೆಂದೆಣಿಸಲ್ಪಡಲಾರನು-

ನೋಡುವವರಿಗೆ ಒಂದು ನೋಟ, ಸವಾರರ ಓಟ. ಮುಖ್ಯವಾಗಿ ಒಂದು ಯಂತ್ರವು ಇನ್ನೊಂದನ್ನು ಬಹು ರಭಸದಿಂದ ಎದುರ್ಗೊಂಡು, ಒಂದರ ಮೇಲೊಂದು ಹತ್ತಿ, ಸವಾರರಿಂದ ಗಾಳಿಯಲ್ಲಿ ಲಾಗ ಹೊಡಿಯುವುದನ್ನು ಪ್ರದರ್ಶಿಸುವಾಗ, ಇದೇ ಒಂದು ಸರ್ಕಸ್ ಆಗಿ ಪರಿಣಮಿಸುತ್ತದೆ. ಟಕೇಟು ತೆಗೆದುಕೊಳ್ಳದೆ ಹಾದಿಯಲ್ಲಿ ಹೋಗುವವರೆಲ್ಲಾ ನೋಡುವ ನೋಟ! ಟಿಕೇಟ್ ತೆಗೆದುಕೊಂಡವರು ಸವಾರರಲ್ಲದೆ ನೋಡುವವರಲ್ಲ. ಎಲ್ಲಿಗೆ? ಆಸ್ಪತ್ರೆಗೆ!

ಕಾಲು ನೋವು, ಸೊಂಟ ನೋವು, ಎದೆ ನೋವು, ಇವೆಲ್ಲಾ ಸಾಯ್ಕಲ್ ಆರೋಹಿಗಳಿಗೆ ಹೊಸತಲ್ಲ. ಯಾವಾಗಲೂ ಇರುವಂತಹವುಗಳು. ಇವುಗಳಿಂದ ಪ್ರಯೋಜನವು ಯಾರಿಗೆ? ವೈದ್ಯರಿಗೆ!

ಈ ಯಂತ್ರಗಳಲ್ಲಿ ಅನೇಕವುಗಳಿಗೆ ಒಂದು ತರದ ವಿಶೇಷವಾದ ಆಸೆಯು ಇತ್ತೀಚೆಗೆ ಉಂಟಾಗಿರುತ್ತದೆ. ಅದಾವುದೆಂದರೆ:—ಸವಾರಿ ಮಾಡುವ ಆಶೆ. ಜನರನ್ನು ಹೊತ್ತು ಹೊತ್ತು ಸಾಕಾಯಿತೆಂಬಂತೆ, ಈ ಯಂತ್ರಗಳು ಕೆಲವು ಸಾರಿ ಎತ್ತಿನ ಗಾಡಿಯನ್ನೇರಿ ಸುಮ್ಮನೆ ವಿಶ್ರಾಂತಿಯನ್ನು ಪಡೆಯುವುದುಂಟು. ಇವುಗಳಿಗೆ ಈ ತರದ ವಿಶ್ರಾಂತಿ ಅಥವಾ ಸವಾರಿಯು ಅವಶ್ಯವೆಂಬುದನ್ನು ಕಂಡುಹಿಡಿಯುವವರು ನಮ್ಮ ಪೋಲಿಸಿನವರು. ಹಾದಿಯಲ್ಲಿ ಬಹುವೇಗದಿಂದ ಓಡುವ ಯಂತ್ರಗಳನ್ನು ಹಿಡಿದು ಕಟ್ಟುಹಾಕಿ ಅವುಗಳಿಗೆ ಅವಶ್ಯವಾದ ವಿಶ್ರಾಂತಿಯನ್ನು ಒದಗಿಸಿ ಕೊಡುವವರು ಈ ಪೋಲಿಸ್ ಡಾಕ್ಟರರು. ಇದರಿಂದ 'ಎತ್ತಿಲ್ಲದಾ ಗಾಡಿಯನು ಒತ್ತೊತ್ತಿ ನಡೆಸುವರು' ಎಂಬ ಕವಿಯ ಮಾತು ಸುಳ್ಳಾಗಿ ಮಾಡಿದಂತಾಯಿತು. ಎತ್ತು ಇಲ್ಲದ ಯಂತ್ರವನ್ನು ಕೈಯಿಂದೆತ್ತಿ, ಎತ್ತಿನ ಗಾಡಿನ ಮೇಲೆ ಸ್ವಲ್ಪ ಸಮಯದವರೆಗೆ ಅದನ್ನಿರಿಸಿ, ಅದಕ್ಕೆ ವಿಶ್ರಾಂತಿದಾನವನ್ನು ಕೈಯೆತ್ತಿ ಕೊಡುವವರಿರುವಾಗ, ಸಾಯ್ಕಲ್ ಸವಾರರಿಗೆ ಯೋಚನೆ ಏಕೆ?

ಎಂ. ವಿ. ಪ್ರಭು. ಎಂ. ಎ ಎಲ್. ಟಿ.

ಬಾಡಿದ ತಾವರೆಗೆ—

ಉಷಃಕಾಲವು ಸನ್ನಿಹಿತವಾಗುತ್ತಲಿರಲು

ತಾವರೆ! ನೀನೇಕಿಂತು ಬಾಡಿ ಒಡವಾಗಿರುವೆ? ಬಸವಳಿದು ಬಿಸುಸುಯ್ದು ಬಳಲುವೆಯೇಕೆ? ನಿನ್ನನ್ನು ಗೌರವಿಸಿ ಮಾನಿಸುವವರಿಲ್ಲವೇ? ಸೇವಿಸಿ ಸೊಗಗೊಳಿಸುವವರಿಲ್ಲವೇ? ವೈಭವ ಶಿಖರಕ್ಕೇರಿದ ಅಂದಿನ ಅದೊಂದು ಆನಂದಮಯ ಪ್ರಶಾಂತ ದಿವಸದಲ್ಲಿ—ಸ್ವಾತಂತ್ರ್ಯ ಸೂರ್ಯನು ತನ್ನ ಪ್ರಖರವಾದ ಕಿರಣಗಳನ್ನು ಪಸರಿಸಿ ಅತ್ಯುಜ್ವಲವಾಗಿ ಕೊಳಗಿ ಬೆಳಗುತ್ತಿದ್ದ ಆ ಸುಸ್ನಿಗ್ಧ ಸಮಯದಲ್ಲಿ—ನೀನೆನಿತೊಂದು ಆನಂದದಿಂದ ಪ್ರಫುಲ್ಲಮುಖದಿಂದ ಶೋಭಿಸಿದೆ

ಆ ಸಮಯದಲ್ಲಿ ಎಷ್ಟೋ ರಾಜಹಂಸಗಳು ನಿನ್ನಸ್ಥೈರ್ಯವಿಸಿ ಸೇವಿಸುತ್ತಿರಲಿಲ್ಲವೇ? ಇಂದು, ಈ ದುಃಖ ದಗ್ಧ ದುಷ್ಕಾಲದಲ್ಲಿ ಅವೆಲ್ಲಾ ಎತ್ತ ಹೋದುವು? ಕರಾಳ ಕಾಲನ ದವಡೆಯಲ್ಲಿ ಸಿಲುಕಿ ನಷ್ಟವಾಗಿರಬೇಕು. ಇದ್ದ ಕೆಲವಾದರೂ ಎಲ್ಲೋ ಕಾಲರಾತ್ರಿಯ ತಮೋಮಯ ವಾತಾವರಣದಲ್ಲಿ ತೂಕಡಿಸಿ, ನಿದ್ರಿಸಿರಬೇಕು. ನಿನ್ನನುಪೇಕ್ಷಿಸಿ ಅಡಗಿರಬೇಕು. ಅಲ್ಲವಾದರೆ, ಇಷ್ಟೊಂದು ದುಃಖದಿಂದ ಸೊರಗಿ ಮರುಗುವೆ, ಬಳಲಿ ಬೆಂಡಾಗುವ, ನಿನ್ನನ್ನು ಕಂಡಾದರೂ ಸಂತೈಸಿ ಮಾತಾಡಿಸುವುದಿಲ್ಲವೇಕೆ? ಹತ್ತಿರವಾದರೂ ಸುಳಿಯುವುದಿಲ್ಲವೇಕೆ?

ನಿಮ್ಮಕುಳಿನಲ್ಲಿ ಕವಿದ ಗಾಢಾಂಧಕಾರದ ಮಬ್ಬು ಸ್ವಲ್ಪ ಸಾರಿದೆ. ಉಷಃಕಾಲದ ಬ್ರಾಹ್ಮೀ ಮುಹೂರ್ತವು ಸನ್ನಿಹಿತವಾಗುತ್ತಿದೆ. ಮುಂದಿನ ಅಭ್ಯುದಯದ ಆಶೋದಯವಾಗಿದೆ. ಸತ್ಯ ಪ್ರಕಾಶದ ಸುಂದರ ಸುಖ ಸೂಚನಾ ರೂಪವಾದ ಮುಂಬೆಳಗಿನ ಮುಂಜಾಗ್ರತೆಯು ತಲೆದೋರಿದೆ. ಕೋಮಲ ಕಿರಣವು ಹೊರ ಹೊಮ್ಮಲಿದೆ. ಹೊಂಬಿಸಿಲು ಬಯಲಿನಲ್ಲಿ ಬಿದ್ದು ನಲಿದಾಡಲಿದೆ.

ತಾವರೆ! ಈ ಸ್ವಾತಂತ್ರ್ಯ ಸೂರ್ಯೋದಯದ ಉಷಃಕಾಲವು ಹೇಗಿರಬಹುದಾಯಿತು? ನಿನ್ನ ಈ ಹಠಯೋಗದಿಂದಲೇ? ಪಂಚಾಗ್ನಿ ಮಧ್ಯದಲ್ಲಿ—ಅಂದರೆ, ಸುತ್ತಲೂ ತೀವ್ರಾಗ್ನಿ ಜ್ವಾಲೆಯು ಜ್ವಲಿಸಿ ಧಗ ಧಗನೆ ದಹಿಸುತ್ತಿರಲು, ಮೇಲೆ ಪ್ರಚಂಡ ಕಿರಣನು ಪ್ರಕೋಪವಾಗಿ ಪ್ರಕಾಶಿಸಿ ಸುಡುತ್ತಿರಲು, ಆ ಸ್ಥಿತಿಯಲ್ಲಿ—ತಪವನ್ನಾಚರಿಸುವ ತಾಪಸನಂತೆ, ನೀನು ಪಂಚೋದಕ ಮಧ್ಯದಲ್ಲಿ ಕುಳಿತು ತಪವೆಸಗಿದೆಯಲ್ಲವೇ? ಮೂರು ಕಡೆಯಲ್ಲಿಯೂ ಅಪಾರವಾದ ಅಗಾಧ ಜಲವು ಹರಿಯುತ್ತಿದೆ. ಮತ್ತೊಂದೆಡೆಯಲ್ಲಿ (ಉತ್ತರದಲ್ಲಿ) ನೀರಿಗಿಂತಲೂ ಅತಿ ಶೀತಲವಾದ ಹಿಮದ ಹನಿಯು ಮುತ್ತಿ ಮುತ್ತಿಡುವ ಎತ್ತರವಾದ ಗಿರಿಯು (ಪಂಡೆ) ಸಮೀಪದಲ್ಲಿದೆ. ಮೇಲೆ ನಡು ನೆತ್ತಿಯಲ್ಲಿ ಎಲ್ಲಾ ಕಡೆಯಲ್ಲಿಯೂ ಹರಡಿದ ಧಾವಳ್ಯ ಪ್ರತಾಪದಿಂದ ಲೋಕವನ್ನೆಲ್ಲಾ ತನ್ನ ವಶವಾಗಿರಿಸಿ, ನಿನ್ನನ್ನು ಮಾತ್ರ ಅತ್ಯಂತ ಕಷ್ಟಗೊಳಿಸಿ ಪಾರತಂತ್ರ್ಯ ಶೃಂಖಲೆಯಿಂದ ಬಂಧಿಸಿದವನು ಸುಡುತ್ತಾ ತನ್ನ ತುಹಿನ ಕಿರಣವನ್ನು ಬೀರಿರುವನು. ಹೀಗೆ ಪಂಚೋದಕ ಮಧ್ಯದಲ್ಲಿ ತೀವ್ರ ತಪದಿಂದ ತಪಿಸುವೆ. ಈ ಹಠಯೋಗದಿಂದಲೇ ಭಾವೀ ಸ್ವಾತಂತ್ರ್ಯ ಸೂರ್ಯನ ಅರುಣ ಕಿರಣವು ತಲೆದೋರಿತೇನು?

ಅಥವಾ—, ತಾವರೆ! ನೀನು ನೋಂತ ನೋಂಪಿಯಿಂದಲೇ ಮಾರೊಡನೆಯೂ ತನ್ನ ದುರ್ಧರ ದುಃಖದ ದುಃಸ್ಥಿತಿಯನ್ನು ದೂರದೆ, ಶಾಂತನಾದ ಸ್ವಾಂತದಿಂದಿದ್ದು,—ಮೌನಿಯಂತೆ ಮೌನದಲ್ಲಿ, ಯೋಗಿನಿಯಂತೆ ಯೋಗದಲ್ಲಿ, ಬೆರತಿದ್ದು—ಕ್ಷಮಾ ವ್ರತವನ್ನೇ ಪಾಲಿಸಿದ ಆ ಸತ್ಯದ ಸಾಮರ್ಥ್ಯದ ಪುಣ್ಯ ಫಲದಿಂದಲೇ? ಏತರಿಂದೀ ಸ್ವಾತಂತ್ರ್ಯ ಸೂರ್ಯನ ಪುಣ್ಯೋದಯ ಸೂಚನೆಯು? ವಿಧಿಯ ಅನತಿಕ್ರಮ ನಿಯೋಗದಿಂದಾಗಿರಬಹುದೇ?

ಅದೋ ನೋಡು! ತಾವರೆ! ಅಲ್ಲಿ—ಪೂರ್ವದ ದಿಗಾಂತದಲ್ಲಿ **ಮಹಾತ್ಮಾ** ಅರುಣನ ಕೋಮಲ **ಅಹಿಂಸಾ** ಕಿರಣವು ಸತ್ಯದ ಸತ್ಪಥದಲ್ಲಿ ಸುಳಿಯುತ್ತಾ ಮುನ್ನಡೆಯುತ್ತಿದೆ. ಅರುಣನ ರಾಗ ರಸ ಪೂರ್ಣವಾದ ಮೊಗವನ್ನು ನೋಡಿ ಎಷ್ಟೋ ಹಕ್ಕಿಗಳು ಅಕ್ಕ ಪಕ್ಕದ ರೆಕ್ಕೆಯನ್ನು ನಿಗುರಿಸುತ್ತಾ ಎಚ್ಚತ್ತು ಕುಳಿತಿವೆ. ಮೋಹನ ಉದಯ ಗಾನವನ್ನು ಹಾಡುತ್ತಾ ಭುವನ ಜನವನ್ನೆಲ್ಲಾ ಕರ್ಮರಂಗಕ್ಕೆಳಿಸಿವೆ. ತಾವೂ ಬಯಲಿಗಿಳಿದು ಅಪೂರ್ವ ಉತ್ಸಾಹದಿಂದ ಕರ್ಮವೆಸಗುತ್ತಿವೆ.

ಏಳು, ತಾವರೆ! ದುಃಖವನ್ನು ದೂಡು. ಸುಖವನ್ನು ಸವಿ. ಆನಂದನನ್ನು ಹೊಂದು. ತನ್ನ ಹಿಂದೊಂದೇ ಎಸಳುಗಳನ್ನು ಬಿಡಿಸಿಕೊಳ್ಳುತ್ತಾ ಹಿಂದಿನಂತೆ ವಿಕಸಿತವಾಗು. ಹಿಂದಿನ ಆ ವೈಭವ ಶಿಖರವನ್ನೇ ಏರಲಿರುವಿ. ಹೆದರುವೆ ಏಕೆ? ಸ್ವಪ್ನದಲ್ಲಿ ಮಾತ್ರ ಸವಿದ ಆ ಸತ್ಯ ಸ್ವಾತಂತ್ರ್ಯ ಸುಖಾಮೃತಾನುಭವವು ಈಗ ನಿನಗೊದಗಲಿದೆ. ಕನಸೇ ನೆನಪಾಗಲಿದೆ. ಆದ್ದರಿಂದ ತಾವರೆ! ಕಂಬನಿಯನ್ನು ತೊಡೆ! ಮುಖದಲ್ಲಿ ಕಾಂತಿಯನ್ನು ತಳೆ! ಬಾಡಿದ ಮೊಗದಲ್ಲಿ ಹರ್ಷದ ಸುಕೋಮಲ ಚಿಹ್ನೆಯ ಅಂಕುರವು ಮೊಳೆಯಲಿ. ಹೆಚ್ಚೇನು? ತಾವರೆ! ನೀನಿನ್ನು ಮುಂದೆ '**ವಿಕಾಸ**' ಹೊಂದಿ ನಗು!

ಸ್ವಾತಂತ್ರ್ಯ ಸೂರ್ಯೋದಯವಾಗಲಿ! ನಗು ಬೆಳಗಲಿ! ಸೊಗ ಸೊದಗಲಿ!!! ಒಲವೊಲಿಯಲಿ!!!

ಶಂಕರನಾರಾಯಣ.

ವಿಧಿವಿಲಾಸ.

(ಲೇಖಕರು:—ಶ್ರೀಯುತ ಪುಂಡೂರು ಲಕ್ಷ್ಮೀನಾರಾಯಣ ಪುಣೆಂಚತ್ತಾಯರು)

"ಮಾನಿನಿಯೆ! ಜನಕಾಜ್ಞೆಯಂ ಪಾಲಿಸಲ್ಕೀಗ।
ಕಾನನಕೆ ಪೊರಮಡುವೆ–ವಿಮಲೆ! ಕೋಮಲೆ! ಕಾಂತೆ!।
ನೀನಿಲ್ಲಿ ಜನನಿಯರನುವಚರಿಸುತಿಹುದೆ"ನಲು ಜನಕಜಾತೆಯು
ನುಡಿದಳು–॥

"ಪ್ರಾಣೇಶ ಪಾದಮಂ ನಂಬಿದರ್ಧಾಂಗಿಯಂ।
ಮಾನಸಿಧಿ! ತೊರೆದಡವಿಗೈದುವೆಯು? ಹೇ ಪ್ರಿಯಾ!।
ಪ್ರಾಣದಿಂದಿಹುದೆಂತು ತನಸನ್ನಿಧಿಯನುಳಿದು ಧಾರಿಣಿಯೊಳಿರ
ಲಾರೆನು–॥ ೧ ॥

ಕಾಡುತಾ ನಾಡಹುದು, ನರಕ–ಸುರಪುರವಹುದು।
ಕೂಡಿರಲು ಕಾಂತನಂ ಮರಳು ನೆಲ–ಫಲಭೂಮಿ,।
ನೋಡದಿರೆ ಪತಿಪದವನರಮನೆಯು–ಸೆರೆಮನೆಯೆ, ಸತಿಗೆ ಪತಿಯೇ
ಸಕಲವೂ–॥

ಬಾಡಿದರೆ ಪ್ರಿಯುಳ ವದನವನೊಲಿದು ವಿಕಸಿತವ।
ಮಾಡುವವ–ಮನಸಿನಲಿ–ಕನಸಿನಲಿ–ನೆನೆಸಿನಲಿ।
ಮೂಡಿರುವ ಕಮಲಬಾಂಧವನಂತೆ ಬೆಳಗುತಿರುವಾರ್ಯನನ್ನಗ
ಲಿರುವನೆ?"॥ ೨ ॥

ಎಂದು ಬಹು ದೈನ್ಯದಿಂ ನಳಿನಮುಖಿ ಬಿನ್ನೈಸು।
ತಂದು ನಿಜಸುಖಭವನಭೋಗದಲ್ಲಾಸೆಯ।
ನ್ನಿಂದುವದನೆಯು ಬಿಟ್ಟು–ನಿಷ್ಕಳಂಕಿಯು ಪತಿಯ ಪಡಿ ನೆಳಲಿ
ನಂತೆ ಸರಿದು–॥

ಹಿಂದೆ—ಗಂಡನಗೂಡಿ ಭಕ್ಷ್ಯಭೋಜ್ಯಂಗಳಂ।
ತಿಂದು ಬಳೆದವಳಿಂದು–ಕಂದಮೂಲಂಗಳಂ।
ತಿಂದು–ನುಣುಪಾದ ಹಾಸಿಗೆಯ ಬಿಡದ ಲತಾಂಗಿ–ಕಲ್ಲೆಲದ
ಮೇಲೆಸೆದಳು ॥ ೩ ॥

ಬಳಲುತಿರ್ದಳು ದಿವಾರಾತ್ರಿ ಧವನೊಡನೆ ನಿಮಿ।
ಕುಲಜಾತೆ ಸೀತೆ ವುಲಿ ಕರಡಿ ಹೆಬ್ಬಾವುಗಳು।

ಬಳಸಿದಾ ಭೀಕರಾರಣ್ಯದೊಳು—ಬಳಿಕ ದಶಕಂಠ ನಾಕೆಯ
ನೊಯ್ಯುತಾ ॥

ಒಲವಿನಿಂ ತನ್ನರಸಿಯಾಗಬೇಕೆಂದತುಲ ।
ಬಲ–ತನಗೆ ಮೇಲ್ಮೈಯಂ–ರಾಮನಿಗೆ ಕೀಳ್ಮೈಯಂ ।
ಬಲು ವಿಧದಿ ವಿವರಿಸಿದ–ಕೊಡುವೆ ಸಕಲವನೆಂದ–ಬೆದರಿಸಿದನ
ಬಲೆಯಳನು ॥ ೪ ॥

ಖಲನ್ಹೊರೆದ ಬಿರುನುಡಿಗೆ ಕಿವಿಗೊಡದೆ ನಿರ್ಧರಿಸಿ ।
ದಳು ತನ್ನ ಪತಿ ರಾಘವನೆ ತನಗೆ ಗತಿಯೆನು ।
ತ್ತಲುಗದೆಯೆ–ಧೂರ್ತ ಲಂಕಾಧಿಪನ ನೋಡದೆ–ಯಲಂಕಾರ
ಗಳ ನೊಲ್ಲದೆ–॥

ಉಳಿದು ನಿದ್ರಾಹಾರಗಳನಶೋಕಾ ವನದೊ ।
ಳಳುತ ಶೋಕದೊಳೊಮ್ಮೆ–ಧೈರ್ಯಗೊಳುತಿನ್ನೊಮ್ಮೆ ।
ಖಳವೈರಿಯಂ ಮನದೆ ನೆನೆನೆನೆದು, ಕಳವಳಿಸಿ, ಕಪ್ಪದಿಂದಿರು
ತಿರ್ದಳು ॥ ೫ ॥

''ರಾಮ ಬಾ' ರಾರಾಜಿಸುವ ರವಿಕುಲಾಂಭೋಧಿ ।
ಸೋಮ ಬಾ! ಸಕಲ ಸದ್ಗುಣ ಸತ್ಯ ಸಂಪನ್ನ ।
ಧಾಮ ಬಾ! ನೂನಿನಿಯ ಮಾನಮಂ ರಕ್ಷಿಸೈ! ರಕ್ಕಸರ ಸೊಕ್ಕ
ಮುರಿವ–॥

ಭೀಮ ಬಾ! ವೀರ್ಯಶೌರ್ಯೌದಾರ್ಯಭರಿತ ನಿ।
ಸ್ಸೀಮ ಬಾ! ದಯುದೋರು! ಮೊಗದೋರು! ನುನದಸು ।
ವ್ರೇನು ಭಾ! ಬಾರೆ''ನುತ ರಾಮನಾಗಮನಮಂ ಹಾರೈಸಿಕೊಂಡಿ
ರ್ದಳು ॥ ೬ ॥

ಇಂತು ಪೂರ್ಣೇಂದುಮುಖಿ–ಹರಿಣಾಕ್ಷಿ–ಕಳೆಗುಂದಿ ।
ಯೆಂತಿರ್ದಳೋ ರಾಕ್ಷಸೀ ಚಿರತೆಗಳ ನುಳಿಯೊ ।
ಳಿಂತು ಬಣ್ಣಿಪೆ ಕರಿಣ ಹೃದಯ ವಲ್ಮೀಕ ಭವನಂತೆ ಭೂಸುತೆಯ
ಕಥೆಯ ॥

ಮುಂತೆ ದಶರಥ ಸುತಂ ಖಳರೊಡನೆ ದಶವದನ ।
ಗಂತ್ಯಮನ್ನೆಸಗಿ, ಶರಣಗೆ ಲಂಕೆಯನ್ನಿತ್ತು ।
ಕಾಂತೆಯಂ ಲೋಕಾಪವಾದದಾ ಭಯದಿಂದ ಕರೆತರಲು ಹಿಂಜರಿ
ದನು ॥ ೭ ॥

ಕ್ಷಿತಿಯ ನಂಬಿಗೆಗಾಗಿ ಪ್ರಜ್ವಲಿಸುವಗ್ನಿಯಂ ।
ಪತಿಯಾಜ್ಞೆಯಿಂ ಸೀತೆ ಪೊಗಲು ಶೀತಲಮಾಯ್ತು! ।
ಸತಿಯ ವಾತಿವೃತ್ಯದಾ ಮಹಿಮೆಯನು ಪೊಗಳಿ ಶೇಷಗಸದಳ
ವಲ್ಲವೇ? ॥

ಅತಿ ಪತಿವ್ರತೆ ಲೋಕಮಾತೆಯವಳೆಂಬ ಸಂ ।
ಸ್ಥಿತಿಯೆನರಿತಿರ್ದೊಡುಂ–ಮೂರ್ಖ ರಜಕನದೋರ್ವ ।
ಮತಿಗೇಡಿಯಾಡಿದನು–ವಿಖ್ಯಾಪವಾದವನು! ''ಜಗದ ಬಾಯ್ಗುಟ್ಟ ॥
ಬಹುದೇ? ॥ ೮ ॥

''ದುಗ್ಗುಳ ದಶಕಂಧರನ ಬಂಧನದ ಬಲೆಯನುಂ ।
ಹರಿದು ತಂದಿರ್ದ ರಘುರಾಮನಾ ಕಾಮಿನಿಯ ।
ವರಪತಿವ್ರತೆಯೆಂದು–ಮರಳಿ ಭೋಗಿವನಿಂದು''–ಯೆಂದು
ನಿಂದಿಸಿದ ನುಡಿಯ ॥

ಚರನೋರ್ವ ಬಂದು–ರಾಜಂಗೊರೆಯೆ ಲಕ್ಷ್ಮಣನ ।
ಕರೆದು–ಗರ್ಭಿಣಿ–ರಮಣಿಯನು ಕಾಡಿಗಟ್ಟುವರೆ ।
ಪರಿಕಿಸದೆ ಕೊಚ್ಚಿರ್ದ ಕಟ್ಟಾಜ್ಞೆಯದು ಸರಿಯೆ? ಸಾಧ್ವಿಗೀ
ವಿಧಿಯೆ ವಿಧಿಯೆ! ॥ ೯ ॥

ಆರಾಮಭದ್ರ ಕಲ್ಪದ್ರುಮಾಶ್ರಿತ ಧರಣಿ ।
ಜಾರಮ್ಯಲಲಿತಲತಿಕೆಯು ಸಹಿಸಲಾರದಾ ।
ಕ್ರೂರ ರಜಕೋಕ್ತಿ ಝಂಝಾಮಾರುತಪ್ರಹರಕೀಡಾಗಿ–ದೂರ
ವಾಗಿ–॥

ಘೋರ ಕಾನನದೊಳಗೆ ಬಿದ್ದು ತಾನುದಿಸಿದಾ ।
ಧಾರಿಣಿಯೆ ಗತಿಯೆಂದು ಹೊರಳುವಂತಾಯ್ತು! ಲ ।
ಕ್ಷ್ಮೀರಮಣನಾನೆಂದು ವರ್ಣಿಸುವುದೀ ಮಹಾ ''ವಿಧಿವಿಲಾಸ''ದ
ಮಹಿಮೆಯ ॥ ೧೦ ॥

ನೇತ್ರಾವತಿ!

—

ವಶ್ಚಿಮ ಪರ್ವತ ಮಾಲೆಯೊಳಿಳಿಯುತ
'ಕುದುರೆಯ ಮುಖ'ದಿಂದ,
ಉಚ್ಚ ಮಹೀರುಹ ನಿಬಿಡಿತ ಘೋರಾ–
ರಣ್ಯದ ಎಡೆಯಿಂದ.
ನೇತ್ರಾವತಿ! ನೀ ಹರಿಯುತ, ಹಾರುತ,
ಇಳಿಯೊಳು ಸುಳಿಯುತ್ತ,
ಎತ್ತರ ಬೆಟ್ಟವ ಸುತ್ತುತ, ಮಣ್ಣನು
ಕಲ್ಲನು ಕೊರೆಯುತ್ತ,
ಸಾಗುವುದೆಲ್ಲಿಗೆ? ಮೆಲ್ನಡಿಯಿಂದತಿ
ಸಂತಸದೇಳ್ಗೆಯಲೀ
ಹೊಗುವುದಾರನು ನೋಡಲು? ಕೂಡಲು?
ಹಾಡತ ನೆಲವಿನಲೀ.
ವಿಶ್ವ ವಿಶಾಲ ಮಹೋದಧಿಯೊಂದಿಗೆ
ಬೆರಸುತ ಜೀವನವ
ವಿಶ್ವಾತ್ಮನ ಪದ ಕಮಲದಿ ಐಕ್ಯವ–
ದಾಗಿಪೆಯೊ? ತನ್ನಾತುಮವ.
ಸಾಗರ ನಾದದೊಳೇಕೀ ಭವಿಸಲು
ತನ್ನಯ ಮೆಲ್ಲುಲಿಯ.

ಸಾಗುವೆ! ನೇತ್ರಾವತಿ! ನೀ ಮೆಲ್ಲನೆ
ಹರಿಯುತ ಕಡಲೆಡೆಯ.
ಉದಯೋದಿಕ್ಕನು ಬೀರುವ ಕಿರಣವು
ನೀರಿನ ತೆರೆಯಲ್ಲಿ
ಉದಿಸಲು, 'ಪಳ ಪಳ' ಹೊಳೆಯುತ ಪೋಗುವೆ.
ನದಿ! ನೀ ಮುದದಲ್ಲಿ
ನೇಸರ ಬಿಂಬವು ನೀತ್ರದ ತೆರದಲಿ
ತೋರಲು ನೀರಿನಲಿ
ಹೆಸರನ್ವರ್ಥವದಾದುದೆ? ನಿನಗೆ ತೋರಲು ನೀರಿನಲಿ
'ನೇತ್ರಾವತಿ'ಯಿರೀತಿಯಲಿ.
ಎಂದೂ ಈ ಪರಿಯಿಂದಲಿ, ನಿಲ್ಲದೆ
ಹರಿಯುತ ನೀ ಹೊಳೆಯೆ!
ಮುಂದಿಗೆ ಕಾಲನನಂತತೆಯುಂದವ
ಕುಂದದೆ ಪೇಳುವೆಯೆ?

ಶಂಕರನಾರಾಯಣ.

ಬ್ರಹ್ಮನ ಚೊಚ್ಚಲ ಮಕ್ಕಳು.

ಸಂಜೆಗೆ ಹೊಳೆಯ ದಂಡೆಯಲ್ಲಿ ಕೂತು, ಅತುರದಿಂದ ನನ್ನಿಯ ಗೂಡಿಗೆ ಹಾರುವ ಹಕ್ಕಿಗಳನ್ನೂ, ಮಕ್ಕಳನ್ನು ನೆನೆದು ಓಡುವ ದನಗಳನ್ನೂ ಅವಲೋಕಿಸುತ್ತಿರಲು, ಅನಾಥ ಭಾರತದ ನೆನಪಾಗಿ ಎದೆ ತೊಯ್ದು ಹೊಂಟ ಹಾಡಿದು

ತಣ್ಣನ ಗಾಳಿಯ ತೀಟ
ಸುಳಿ ಸುಳಿದೋಡುವ ಓಟ
ಪಡುವಣ ಕೆಂಪಿನ ಚಂದ
ಹೂವಿನ ಗಮಗಮ ಗಂಧ
ಇರುಳ ಹೆರಳಿನ ಹೆಣೆಕೆಯು ಸಡಿಲ
ಹಗಲಿನ ಮುಖವನು ಹೊಚ್ಚುವದು
ಮುಡಿದಿಹ ಪುಲ್ಲಿಗೆ ಬಿಡಿಬಿಡಿ ಸಿಡಿದು
ರೂಪದ ರೂಹೆಯ ಕೆಚ್ಚುವದು
ಜೀವದಿ ಗಡಿಬಿಡಿ ಪ್ರವಾಹ ಹೊರಟು
ಒಡಲಿನ ಧಡವನು ಚುಚ್ಚುವದು

ಹಕ್ಕಿಗೆ ಬೆಚ್ಚನ ಗೂಡು
ಗಿಡ್ಡದೊಳು ತೊನೆವವು ನೋಡು
ಮಿಕಕೂ ಮಲಗಲು ಮನೆಯು
ಗುಡ್ಡದಿ ಕಾದಹ ಗವಿಯು
ಕತ್ತೆಗು ಹಾಳಿನ ಗೊಡಚಿಯ ಚಾಟು
ತಿನ್ನಲು ಬೀದಿಯ ಬುಡಿಚಿಹವು
ಬ್ರಹ್ಮನ ಚೊಚ್ಚಲ ಮಕ್ಕಳು ಅಕಟ
ಪಕ ಪಕ ಬಾಯನು ಬಿಡುತಿಹವು
ತೊರೆಯುವ ಚಳಿಯೊಳು ಬಯಲೊಳು ಬಿದ್ದು
ಹುಳಿದೊಲು ಪಟ ಪಟ ಮಿಡಿಯುವವು

೩

ಹೊಲೆಯರ ಒಲೆಯನ ಕಿಚ್ಚು
ಹೋಳಿಯ ಮಾಡಲು ಮೆಚ್ಚು
ಗೆದ್ದಲು ತೋದಿದ ಗುದ್ದು
ಹಾವಿನ ವಾಸಕೆ ಮುದ್ದು
ಮುವ್ವತ್ತೈದು ಕೋಟಿ ಕಾಲಕೆ ಬಗ್ಗಿದೆ
ಭಾರತ ಜೀವದ ಗೋರಿಹುದು'
ಯುಗ ಯುಗದಿಂದಲಿ ಬಿದ್ದತಿಬಿದ್ದು
ಡುಬ್ಬಕೆ ಲೋಳೆಯು ತೋರಿಹುದು
ಭಾರತ ಜೀವನ ರಸಗಿಯ ಕಳಕಿಗೆ
ವಿಶ್ವವೆ ಮೂಗನು ಹಿಡಿದಿಹುದು!

ಕನ್ನಡ ಕಂದ.

ಸಾದರ ಸ್ವೀಕಾರ.

ಕನ್ನಡ ಒಗಟುಗಳು— ಬೆಲೆ ೧ ಆಣೆ. ಪ್ರಕಾಶಕರು ಶ್ರೀ. ವೆಂಕಟೇಶ ತೊರಗಲ್ಲ, ನಾಡನರಿಗಳ ಕಛೇರಿ, ಬೆಳಗಾಂವಿ. ಇದು ಹೊಸ ರೀತಿಯ ಒಗಟು ಪುಸ್ತಕ.

ಭಯಂಕರ ಕೊಲೆ— ನವಚೇತನ ಗ್ರಂಥಮಾಲಾ, ಮಂಗಳೂರು ಕುಸುಮ ೩. ಲೇಖಕರು ಶ್ರೀ। ಕಟೀಲು ಗಣಪತಿ ಶರ್ಮ, ಬೆಲೆ ೨ ಆಣೆ. ಇತಿಹಾಸಿಕ ವಹಿ-ವಾಚನೀಯವಿದೆ.